ಗುರುವಾರ, ನವೆಂಬರ್ 2, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ವಾ ಚೌತ್
ಅಮೃತಸರದಲ್ಲಿ 'ಕರ್ವಾ ಚೌತ್' ಹಬ್ಬದ ಆಚರಣೆಯಲ್ಲಿ ಬುಧವಾರ ಪಾಲ್ಗೊಂಡಿದ್ದ ಮಹಿಳೆಯರು ಸೆಲ್ಫಿ ತೆಗೆದುಕೊಂಡರು

ಮಲ್ಟಿ-ಸೆನ್ಸ್ ಡ್ರೈವ್ ಮೋಡ್‌ಗಳು

ಮಲ್ಟಿ-ಸ್ಕಿನ್ 17.78 cm ರೀಕಾನ್ಫಿಗರೇಬಲ್ TFT ಕ್ಲಸ್ಟರ್

20.32 cm ಡಿಸ್ಪ್ಲೇ ಲಿಂಕ್ ಫ್ಲೋಟಿಂಗ್ ಟಚ್‌ಸ್ಕ್ರೀನ್, ವೈರ್‌ಲೆಸ್ ಸ್ಮಾರ್ಟ್‌ಫೋನ್ ರೆಪ್ಲಿಕೇಶನ್‌ನೊಂದಿಗೆ



ಇಲೆಕ್ಟ್ರಾನಿಕ್ ಸ್ಟೆಬಿಲಿಟಿ ಪ್ರೋಗ್ರಾಮ್ (ESP)

for a test drive, call on 1800 315 4444. select variants available in CSD. special offers for defence personnel, government, PSU and corporate employees. for bulk enquiries, contact corpsales@renault.com

for further details, connect on renault.co.in

terms and conditions apply. *₹7 999 EMI based on a loan amount of ₹4.74 lakh for a tenure of 84 months. EMI may vary based on actual loan amount and tenure. not valid for any added loan amount and tenure. finance at the sole discretion of Renault Finance. #benefits up to ₹65 000/- for Kiger includes cash benefits up to ₹25 000/- on select variants, exchange benefits up to ₹20 000/- on select variants & loyalty cash benefits up to ₹20 000/- on select versions. *Kiger has scored 4-star safety rating for adult occupant and 2-star safety rating for child occupant in crash test conducted by Global NCAP. the same has been published by NCAP on their website: https://www.globalncap.org/safercarsforindia. corporate/PSU/defense personnel/government employee/professionals benefits applicable on each model is basis eligibility of the customer and based on submission of required proof by the customer. price valid on the date of purchase. for detailed offers, visit www.renault.co.in/offers. Renault India Pvt. Ltd. reserves the right at its absolute discretion to terminate this scheme or vary, delete or add to any of these terms and conditions from time to time without notice including without limitation. offers may vary across variants and cities. model/accessories shown may not be a part of the standard fitment. the color in the image may vary slightly from the actual color of the product. the above mentioned offers & benefits are valid till 15th November 2023 and are through Renault dealership. Renault India Pvt. Ltd. shall not be liable for any loss or damage arising from your failure to comply or understand the offer details. in the event of any dispute, all matters shall be governed by all applicable laws of India and court at Gurugram shall have the exclusive jurisdiction. for detailed terms and conditions, please visit www.renault.co.in

SHOWROOMS: KARNATAKA: BENGALURU: RENAULT Bannerghatta Road Mob: +91 85468 20204, RENAULT Mysore Road Mob: +91 8527240549 & +91 7026666922, RENAULT Palace Orchards Mob: +91 8527240717, RENAULT Silk Board Mob: +91 8527240654, RENAULT Whitefield Mob: +91 8527240685, RENAULT JP Nagar Mob: +91 8527240626 & +91 7353760555, RENAULT Kalyan Nagar Mob: +91 8527236137 & +91 8722866664, RENAULT Sarjapura Mob: +91 8448481374, +91 8746811000 & +91 8496915111, RENAULT Yelahanka Mob: +91 8527234592, +91 9071767600 & +91 8884498993, RENAULT Yeswanthpur Mob: +91 9311832962 & +91 9311832968. **TUMKUR:** RENAULT Tumkur Mob: +91 7353764337.

ಪ್ರಶಸ್ತಿ ಪ್ರದಾನ ಬೆಂಗಳೂರಿನಲ್ಲಿ ಬುಧವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಧಕರೊಂದಿಗೆ ಇಲಾಖೆ ಕಾರ್ಯದರ್ಶಿ ಎನ್. ಮಂಜುಳಾ, ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್, ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ (ಇಬ್ಬರೂ ಪ್ರಶಸ್ತಿ ಪುರಸ್ಕೃತರು), ಸಚಿವ ಶಿವರಾಜ ಎಸ್. ತಂಗಡಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಜಿ.ಪರಮೇಶ್ವರ, ಬೈರತಿ ಸುರೇಶ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಗಳಾದ ಕೆ.ಗೋವಿಂದರಾಜ್ ಮತ್ತು ನಜೀರ್ ಅಹಮದ್ ಇದ್ದರು -ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ಕರ್ನಾಟಕ ರಾಜ್ಯೋತ್ಸವ: ಅಪಾರ ಸಂಖ್ಯೆಯಲ್ಲಿ ಸೇರಿದ ಕನ್ನಡ ಮನಸ್ಸುಗಳು, ಮುಗಿಲುಮುಟ್ಟಿದ ಜೈಕಾರ, ಹಾಡು

ಮೈನವಿರೇಳಿಸಿದ ಗಡಿ ಕನ್ನಡಿಗರ ಸಂಭ್ರಮ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಗಡಿನಾಡು ಬೆಳಗಾವಿಯಲ್ಲಿ ಬುಧವಾರ ಕರ್ನಾಟಕ ರಾಜ್ಯೋತ್ಸವದ ಸಡಗರ ಹೊಳೆಯಾಗಿ ಹರಿಯಿತು. ನಗರದ ಮೂಲೆಮೂಲೆಯಿಂದ, ಹಳ್ಳಿ- ಪಟ್ಟಣಗಳಿಂದ ಅಪಾರ ಸಂಖ್ಯೆಯ ಗಡಿ ಭಾಗದ ಕನ್ನಡಿಗರು ಬಂದು ಸೇರಿದರು. ಎತ್ತ ನೋಡಿದರೂ ಜನವೋ ಜನ. ಹಳದಿ- ಕೆಂಪು ಬಾವುಟಗಳ ಹಾರಾಟ, ಶಲ್ಯಗಳ ತೂರಾಟ, ಎದೆ ನಡುಗಿಸುವಂಥ ಸಂಗೀತಕ್ಕೆ ಯುವಪಡೆಗಳ ನಿರಂತರ ನರ್ತನ...

ಇಲ್ಲಿನ ರಾಣಿ ಚನ್ನಮ್ಮ ವೃತ್ತದಲ್ಲಿ ಸಾಕ್ಷಾತ್ ಕನ್ನಡ ಕುಲದೇವಿ ಭುವನೇಶ್ವರಿಯೇ ಅವತರಿಸಿದಳು ಎಂಬಷ್ಟು ಸಂಭ್ರಮ ಮೂಡಿತು. ನಗರದ ಎಲ್ಲ ದಿಕ್ಕುಗಳಿಂದಲೂ ಬಂದ ಮೆರವಣಿಗೆ ತಂಡಗಳು ಇಲ್ಲೇ ಸಮಾವೇಶಗೊಂಡವು. ಪುಟಾಣಿ ಮಕ್ಕಳಿಂದ ಹಿಡಿದು, ಯುವತಿಯರು, ಯುವಕರು, ಮಹಿಳೆಯರು, ಹಿರಿಯರು ಕೂಡ ಕನ್ನಡಮ್ಮನ ತೇರು ಎಳೆದರು. ನಾಡಗೀತೆ, ರಂಗಗೀತೆ, ಜನಪದ ಹಾಡು, ಸಿನಿಗೀತೆಗಳು ಮೊಳಗಿದವು.

ಒಂದೆಡೆ ಸ್ತಬ್ಧಚಿತ್ರಗಳ ಮೆರವಣಿಗೆ, ಮತ್ತೊಂದೆಡೆ ಯುವಜನರ ಹಾಡು- ಕುಣಿತ. ನಗರದ ಪ್ರತಿ ಮನೆಯ ಮುಂದೆ, ಬೀದಿಬೀದಿಗಳಲ್ಲಿ ಕನ್ನಡ ಬಾವುಟಗಳ ಸಾಲು, ರಂಗೋಲಿಗಳ ಸಿಂಗಾರ ಕಂಡುಬಂತು.

ಜಿಲ್ಲಾಡಳಿತದಿಂದ ಏರ್ಪಡಿಸಿದ್ದ ಮೆರವಣಿಗೆಯಲ್ಲಿ ಎತ್ತಿನಬಂಡಿಯಲ್ಲಿ ಭುವನೇಶ್ವರಿಯ ಪ್ರತಿಮೆ ಮೆರವಣಿಗೆ ಮಾಡಲಾಯಿತು. ಪಂಪ, ರನ್ನ, ಪೊನ್ನ, ಚಂಪ, ಇಮ್ಮಡಿ ಪುಲಿಕೇಶಿ, ಮಹರ್ಷಿ ವಾಲ್ಮೀಕಿ, ಅಕ್ಕ ಮಹಾದೇವಿ, ಶ್ರೀಕೃಷ್ಣದೇವರಾಯ, ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಪುನೀತ್ ರಾಜ್‌ಕುಮಾರ್, ಚಿನ್ನದ ಅಂಬಾರಿ, ನಾಲ್ವಡಿ ಕೃಷ್ಣರಾಜ ಒಡೆಯರ, ಯಕ್ಷಗಾನ, ದೈವದ ಕೋಲದ ರೂಪಕಗಳು ಕಣ್ಮನ ಸೆಳೆದವು.

ಬೆಳಗಾವಿಯಲ್ಲಿ ಕರ್ನಾಟಕ ರಾಜ್ಯೋತ್ಸವ ಮೆರವಣಿಗೆ ವೇಳೆ ಬುಧವಾರ ಕಿತ್ತೂರು ರಾಣಿ ಚನ್ನಮ್ಮನ ಪ್ರತಿಮೆ ಕಂಗೊಳಿಸಿದ್ದು ಹೀಗೆ —ಪ್ರಜಾವಾಣಿ ಚಿತ್ರ

ಸಂಘಟನೆಗಳ ಯುವಕರು ಲಾರಿ, ಟ್ರ್ಯಾಕ್ಟರ್, ಟೆಂಪೊಗಳನ್ನು ಅಲಂಕಾರ ಮಾಡಿ, ಡಾಲ್ಬಿಗಳನ್ನು ಕಟ್ಟಿಕೊಂಡು, ಕಣ್ಣುಕೋರೈಸುವ ವಿದ್ಯುದ್ದೀಪಾಲಂಕಾರ ಮಾಡಿ, ಹಾಡಿ- ಕುಣಿದು ಸಂಭ್ರಮಿಸಿದರು. ಸೈಕಲ್, ಬೈಕು, ಆಟೊಗಳ ಮಾಲೀಕರು ಕನ್ನಡಮ್ಮನ ಭಾವಚಿತ್ರ ಮೆರವಣಿಗೆ ಮಾಡಿದರು.

ಪೌರಾಣಿಕ ಪಾತ್ರಗಳು, ಇತಿಹಾಸ ಪುರುಷರ ವೇಷ ಧರಿಸಿದ ಯುವಜನರು, ಮಕ್ಕಳು ಆಕರ್ಷಣೆಯ ಕೇಂದ್ರವಾದರು. ನಗರದ ಎಲ್ಲ ದ್ವಿಮುಖ ರಸ್ತೆಗಳಲ್ಲೂ ಕಿಕ್ಕಿರಿದು ಸೇರಿದ್ದ ಜನ ಫೋಟೊ, ಸೆಲ್ಫಿ ಸೆರೆಹಿಡಿದುಕೊಂಡರು. ಮಾರ್ಗದಲ್ಲಿ ಹಲವು ಜನ ಕುಡಿಯುವ ನೀರು, ಮಜ್ಜಿಗೆ, ಪಲಾವ್, ವಡಾಪಾವ್, ಭಡಂಗ್ ಮುಂತಾದ ತಿಂಡಿಗಳನ್ನು ಕರೆದುಕೊಟ್ಟರು.

ತಡರಾತ್ರಿಯೇ ಸಂಭ್ರಮ: ಮಂಗಳವಾರ ರಾತ್ರಿಯೇ ರಾಣಿ ಚನ್ನಮ್ಮ ವೃತ್ತದಲ್ಲಿ ಸಾವಿರಾರು ಜನ ಸೇರಿದ್ದರು. ವೃತ್ತಕ್ಕೆ ವಿಶೇಷ ವಿದ್ಯುದ್ದೀಪಾಲಂಕಾರ ಮಾಡಿದ್ದನ್ನು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಉದ್ಘಾಟಿಸಿದರು. ಕಣ್ಮನ ಸೆಳೆಯುವ ದೀಪಾಲಂಕಾರದೊಂದಿಗೆ ಚಿತ್ರ ತೆಗೆಸಿಕೊಳ್ಳಲು ತಡರಾತ್ರಿ 2ರ ಸುಮಾರಿಗೂ ಹಲವು ಜನ ಮುಗಿಬಿದ್ದರು.

3,000ಕ್ಕೂ ಹೆಚ್ಚು ಪೊಲೀಸರು ಬಿಗಿ ಭದ್ರತೆ ಕೈಗೊಂಡರು. 300 ಸಿಸಿಟಿವಿ ಕ್ಯಾಮೆರಾ ಹಾಗೂ ಹಲವು ಡ್ರೋನ್‌ಗಳನ್ನು ಅಳವಡಿಸಿ ಹದ್ದಿನ ಕಣ್ಣಿಟ್ಟು ಕಾದರು. ಬೆಳಿಗ್ಗೆ 11ಕ್ಕೆ ಆರಂಭವಾದ ಮೆರವಣಿಗೆ ತಡರಾತ್ರಿಯವರೆಗೆ ಮುಂದುವರಿಯಿತು. ಈ ಬಾರಿಯ ಮೆರವಣಿಗೆಗೆ 4 ಲಕ್ಷಕ್ಕೂ ಹೆಚ್ಚು ಜನ ಸೇರಿದ್ದಾರೆ ಎಂದು ಜಿಲ್ಲಾಡಳಿತ ಮೂಲಗಳು ತಿಳಿಸಿವೆ.

ಕಳೆಗುಂದಿದ ಎಂಇಎಸ್ ಕರಾಳ ದಿನಾಚರಣೆ

ಬೆಳಗಾವಿ: ರಾಜ್ಯೋತ್ಸವಕ್ಕೆ ವಿರುದ್ಧವಾಗಿ ನಗರದಲ್ಲಿ ಬುಧವಾರ, ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕೆಲ ಸದಸ್ಯರು ಕರಾಳ ದಿನಾಚರಣೆ ಮಾಡಿದರು. ಜಿಲ್ಲಾಡಳಿತ ಅನುಮತಿ ನೀಡದಿದ್ದರೂ ಪ್ರತಿಭಟನಾ ಮೆರವಣಿಗೆ ನಡೆಸಿದರು. ಮಹಾರಾಷ್ಟ್ರದ ಯಾವೊಬ್ಬ ನಾಯಕ ಕೂಡ ಪಾಲ್ಗೊಳ್ಳಲಿಲ್ಲ. ಇದರಿಂದ ಎಂಇಎಸ್ ಮುಖಂಡರು ಮುಖಭಂಗ ಅನುಭವಿಸಿದರು.

ಕರಾಳ ದಿನದ ಮೆರವಣಿಗೆ ಆರಂಭವಾಗಬೇಕಿದ್ದ ಇಲ್ಲಿನ ಧರ್ಮವೀರ ಸಂಭಾಜಿ ಮಹಾರಾಜ ವೃತ್ತದಲ್ಲಿ ಅಪಾರ ಸಂಖ್ಯೆಯಲ್ಲಿ ಕನ್ನಡಿಗರೂ ಸೇರಿದರು. ಹೀಗಾಗಿ, ನಿಗದಿತ ಸಮಯಕ್ಕೂ ಮುಂಚೆಯೇ ಎಂಇಎಸ್ ಮೆರವಣಿಗೆ ಆರಂಭಿಸಿತು. ಕನ್ನಡಿಗರ ಮೆರವಣಿಗೆಯ ಆರ್ಭಟದ ಮಧ್ಯೆ ಎಂಇಎಸ್ ಕಳೆಗುಂದಿತು.

ಕಪ್ಪುಬಟ್ಟೆ ಧರಿಸಿ ಸೈಕಲ್‌ಗಳನ್ನು ಏರಿದ ಕೆಲವು ಸದಸ್ಯರು 'ಬೆಳಗಾವಿ, ಬೀದರ್, ಭಾಲ್ಕಿ, ನಿಪ್ಪಾಣಿ, ಕಾರವಾರ ಸಗಳ ಸಂಯುಕ್ತ ಮಹಾರಾಷ್ಟ್ರ ಝಾಲಾಚ್ ಪಾಹಿಜೆ' (ಸಂಯುಕ್ತ ಮಹಾರಾಷ್ಟ್ರ ಆಗಲೇಬೇಕು)', 'ಬೆಳಗಾಂವ ಹಮ್ಮಾ ಹಕ್ಕಾಚಾ' (ಬೆಳಗಾವಿ ನಮ್ಮ ಹಕ್ಕು) ಮುಂತಾದ ಘೋಷಣೆಗಳನ್ನು ಕೂಗಿದರು. ಪುಟಾಣಿ ಮಕ್ಕಳಿಗೂ ಕಪ್ಪು ಬಟ್ಟೆ ಹಾಕಿ ಮೆರವಣಿಗೆಯಲ್ಲಿ ಕರೆತಂದರು. ನಂತರ ಮರಾಠ ಮಂದಿರದಲ್ಲಿ ಸಮಾವೇಶ ನಡೆಸಿದರು.

ಗಡಿಯಲ್ಲೇ ತಡೆ: ಕರಾಳ ದಿನಾಚರಣೆಯಲ್ಲಿ ಭಾಗವಹಿಸಲು ಬರುತ್ತಿದ್ದ, ಮಹಾರಾಷ್ಟ್ರದ ಶಿವಸೇನೆ ಕಾರ್ಯಕರ್ತರನ್ನು ನಿಪ್ಪಾಣಿ ತಾಲ್ಲೂಕಿನ ಕೊಗನೊಳ್ಳಿ ಬಳಿ ಕರ್ನಾಟಕ- ಮಹಾರಾಷ್ಟ್ರ ಗಡಿಯಲ್ಲಿ, 90 ಕಿ.ಮೀ ದೂರದ ಗಡಿಯಲ್ಲಿಯೇ ಪೊಲೀಸರು ತಡೆದರು.

'ವಿಶ್ವ ಕನ್ನಡ ಸಮ್ಮೇಳನ ಸಾಧ್ಯತೆ ವಿರಳ'

ದಾವಣಗೆರೆ: ರಾಜ್ಯದಲ್ಲಿ ತೀವ್ರ ಬರ ಆವರಿಸಿರುವುದರಿಂದ ಈ ವರ್ಷ ವಿಶ್ವ ಕನ್ನಡ ಸಮ್ಮೇಳನ ನಡೆಸುವ ಸಾಧ್ಯತೆ ವಿರಳವಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದರು. ಮುಂಬರುವ ಬಜೆಟ್‌ನಲ್ಲಿ ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸಲು ಅನುದಾನ ಮೀಸಲಿಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಲಾಗುವುದು ಎಂದು ಅವರು ಬುಧವಾರ ತಿಳಿಸಿದರು.

ಸುದ್ದಿ 2 ನಿಮಿಷ

ಕಳಚಿ ಬಿದ್ದ ಕನ್ನಡ ಧ್ವಜ!

ಕೋಲಾರ: ಕೋಲಾರದ ಎಂ.ಜಿ. ರಸ್ತೆ ಗಾಂಧಿವನದಲ್ಲಿ ಬುಧವಾರ ಕರ್ನಾಟಕ ರಾಜ್ಯೋತ್ಸವದಲ್ಲಿ ಕನ್ನಡ ಧ್ವಜಾರೋಹಣ ಮಾಡುವಾಗ ಕಂಬದಿಂದ ಧ್ವಜ ಕಳಚಿ ಬಿತ್ತು. ಸಂಸದ ಎಸ್.ಮುನಿಸ್ವಾಮಿ, ಶಾಸಕ ಕೊತ್ತೂರು ಮಂಜುನಾಥ್, ವಿಧಾನ ಪರಿಷತ್ ಸದಸ್ಯರಾದ ಎಂ.ಎಲ್.ಅನಿಲ್ ಕುಮಾರ್, ಇಂಚರ ಗೋವಿಂದರಾಜು ಹಾಗೂ ಜಿಲ್ಲಾಧಿಕಾರಿ ಅಕ್ರಂ ಪಾಷ ಸಮ್ಮುಖದಲ್ಲಿ ಈ ಘಟನೆ ನಡೆಯಿತು. ಬಳಿಕ ಯುವಕನೊಬ್ಬ ಸರಸರನೇ ಕಂಬವೇರಿ ಧ್ವಜ ಕಟ್ಟಿದ ಬಳಿಕ ಮತ್ತೆ ಧ್ವಜಾರೋಹಣ ನೆರವೇರಿಸಲಾಯಿತು.

ರಾಮನಗರ ವರದಿ: ಕನ್ನಡ ರಾಜ್ಯೋತ್ಸವಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಅವರು ಕನ್ನಡ ಬಾವುಟ ಬದಲು ರಾಷ್ಟ್ರಧ್ವಜಾರೋಹಣ ಮಾಡಿದ ಘಟನೆಗೆ ಜಿಲ್ಲಾಡಳಿತದ ಕಾರ್ಯಕ್ರಮ ಸಾಕ್ಷಿಯಾಯಿತು.

ನಾಡಧ್ವಜ ಹಾರಿಸಲು ಜಿಲ್ಲಾಡಳಿತ ವ್ಯವಸ್ಥೆ ಮಾಡದಿರುವುದು ಕನ್ನಡಪರ ಸಂಘಟನೆಗಳ ಕಾರ್ಯಕರ್ತರನ್ನು ಕೆರಳಿಸಿತು. ಇದನ್ನು ಪ್ರಶ್ನಿಸಲು ಕೆಲ ಮುಖಂಡರು ವೇದಿಕೆ ಏರಲು ಯತ್ನಿಸಿದಾಗ ಪೊಲೀಸರು ತಡೆದರು. ಆಗ ಮಾತಿನ ಚಕಮಕಿ ನಡೆಯಿತು.

'ಕರ್ನಾಟಕ ಸಂಭ್ರಮ–50' ಜ್ಯೋತಿ ರಥಯಾತ್ರೆಗೆ ಚಾಲನೆ ಇಂದು

ಹೊಸಪೇಟೆ (ವಿಜಯನಗರ): 'ಕರ್ನಾಟಕ ಸಂಭ್ರಮ–50'ರ ಕಾರ್ಯಕ್ರಮ ಗುರುವಾರ ಸಂಜೆ ಹಂಪಿಯಲ್ಲಿ ಆರಂಭವಾಗಲಿದ್ದು, ವಿರೂಪಾಕ್ಷನಿಗೆ ಹಾಗೂ ನಾಡ ದೇವತೆ ಭುವನೇಶ್ವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಶೇಷ ಪೂಜೆ ಸಲ್ಲಿಸಲಿದ್ದಾರೆ.

ದೇವರಾಜ ಅರಸು ಅವರು 50 ವರ್ಷಗಳ ಹಿಂದೆ ಬೆಳಗಿದ್ದರೆನ್ನಲಾದ ದೀಪದಲ್ಲೇ ಸಿದ್ದರಾಮಯ್ಯ ಅವರೂ ಜ್ಯೋತಿ ಬೆಳಗಲಿದ್ದಾರೆ ಹಾಗೂ ರಾಜ್ಯಕ್ಕೆ ಸಂದೇಶ ನೀಡಲಿದ್ದಾರೆ. 'ಜ್ಯೋತಿ ರಥಯಾತ್ರೆ'ಗೆ ಸಂಜೆ 7 ಗಂಟೆಗೆ ಚಾಲನೆ ನೀಡಲಿದ್ದಾರೆ. ಸಾಧು ಕೋಕಿಲ ತಂಡದಿಂದ ಕನ್ನಡ ಗೀತೆಗಳ ಗಾಯನ ಹಾಗೂ ರಸಮಂಜರಿ ನಡೆಯಲಿದೆ.

ಜ್ಯೋತಿ ರಥಯಾತ್ರೆ ಇಲ್ಲಿಂದ ಆರಂಭವಾಗಿ ಗದಗ ಜಿಲ್ಲೆಗೆ ತೆರಳಿ ಬಳಿಕ ರಾಜ್ಯದೆಲ್ಲೆಡೆ ಸಂಚರಿಸಲಿದೆ.

ಕಳೆದ ವರ್ಷ ಪ್ರಶಸ್ತಿ ಪಡೆದವರ ಹೆಸರು ಓದಿದ ಸಚಿವ ತಂಗಡಗಿ

ಕೊಪ್ಪಳ: ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಬುಧವಾರ ಧ್ವಜಾರೋಹಣ ನೆರವೇರಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಕಳೆದ ವರ್ಷ ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದವರ ಹೆಸರು ಓದಿ ಪೇಚಿಗೆ ಸಿಲುಕಿದರು.

ಈ ಬಾರಿ ಜಿಲ್ಲೆಯ ಮೂವರಿಗೆ ಪ್ರಶಸ್ತಿ ಲಭಿಸಿದೆ ಎಂದಷ್ಟೇ ಹೇಳಿದರೂ ಯಾರ ಹೆಸರನ್ನೂ ಪ್ರಸ್ತಾಪಿಸಲಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಲೇ ಪ್ರಶಸ್ತಿ ನೀಡಿದರೂ ಈ ವರ್ಷ ಪ್ರಶಸ್ತಿ ಪಡೆದವರ ಹೆಸರು ಸಚಿವರ ಭಾಷಣದಲ್ಲಿ ಸೇರಿಸದೇ ಅಧಿಕಾರಿಗಳು ಯಡವಟ್ಟು ಮಾಡಿದ್ದರು. ಬದಲಿಗೆ ಕಳೆದ ವರ್ಷ ಪ್ರಶಸ್ತಿ ಪಡೆದ ಶಂಕ್ರಪ್ಪ ಹೊರಪೇಟಿ ಹಾಗೂ ಸಣ್ಣ ರಂಗಪ್ಪ ಚಿತ್ರಗಾರ ಹೆಸರು ಹಾಕಿದ್ದಾರೆ. ಅವರ ಹೆಸರುಗಳನ್ನೇ ಸಚಿವರು ಓದಿದರು. ತಕ್ಷಣ ಎಚ್ಚೆತ್ತುಕೊಂಡ ಅವರು ಈ ವರ್ಷ ಮೂವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗಿದೆ ಎಂದು ತಪ್ಪು ಸರಿಪಡಿಸಿ ಭಾಷಣ ಮುಗಿಸಿದರು.

'ಈ ವರ್ಷ ಪ್ರಶಸ್ತಿ ಪಡೆದವರ ಹೆಸರು ಮುಂದಿನ ವರ್ಷ ಓದಲಾಗುವುದು. ಪ್ರತಿವರ್ಷ ಹೀಗೆಯೇ ಮಾಡಲಾಗುತ್ತಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ತಮ್ಮ ನಡೆಯನ್ನು ಸಚಿವರು ಸಮರ್ಥಿಸಿಕೊಂಡರು.

ರಮೇಶ ಜಾರಕಿಹೊಳಿ ದಾಖಲೆ ಕೊಟ್ಟರೆ ತನಿಖೆ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ತುಮಕೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಗತ್ಯ ದಾಖಲೆ ಕೊಟ್ಟರೆ ಸಮಗ್ರವಾಗಿ ತನಿಖೆ ನಡೆಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹನಿಟ್ರ್ಯಾಪ್ ಮೂಲಕ ನನ್ನ ಸಿ.ಡಿ ಮಾಡಿಸಿದ್ದಾರೆ. ಈ ಬಗ್ಗೆ ಸಿಬಿಐ ತನಿಖೆ ಮಾಡಿದರೆ ಸತ್ಯಾಂಶ ಹೊರ ಬರಲಿದೆ' ಎಂದು ರಮೇಶ್ ಹೇಳಿಗೆ ಪ್ರತಿಕ್ರಿಯಿಸಿದ ಅವರು, 'ಶಾಸಕರ ಬಳಿ ಇರುವ ದಾಖಲೆ ಕೊಟ್ಟರೆ, ಅದರ ಆಧಾರದ ಮೇಲೆ ಪೊಲೀಸರಿಂದ ತನಿಖೆ ಮಾಡಿಸಲಾಗುವುದು. ಅನ್ಯಾಯವಾಗಿದ್ದರೆ ನ್ಯಾಯ ಒದಗಿಸಲಾಗುವುದು' ಎಂದು ಭರವಸೆ ನೀಡಿದರು.

'ಐದು ವರ್ಷ ಸಿದ್ದರಾಮಯ್ಯ ಸಿ.ಎಂ'

ಹಾಸನ: 'ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಐದು ವರ್ಷ ಮುಂದುವರಿಯಲಿದ್ದಾರೆ. ರಾಜ್ಯದ ಜನರ ಬಯಕೆಯೂ ಇದೇ ಆಗಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಪ್ರತಿಪಾದಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಕಾಂಗ್ರೆಸ್ ಶಾಸಕರೂ ಇದನ್ನೇ ಬಯಸಿದ್ದು, ವಿಚಾರವನ್ನು ಹೈಕಮಾಂಡ್ ಗಮನಕ್ಕೂ ತರಲಾಗಿದೆ' ಎಂದರು.

'ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಬೇಕೆಂದು ಕಾಂಗ್ರೆಸ್‌ನ ಕೆಲವು ಶಾಸಕರು ಹೇಳುತ್ತಿರುವುದರಲ್ಲಿ ತಪ್ಪೇನೂ ಇಲ್ಲ. ಪಕ್ಷದಲ್ಲಿ ಅವರು ನಿಷ್ಠಾವಂತರಾಗಿ ಕೆಲಸ ಮಾಡಿದ್ದು, ಅವರು ಮುಖ್ಯಮಂತ್ರಿಯಾಗುತ್ತಾರೆಂದರೆ ಸಂತೋಷ ಪಡುವವರಲ್ಲಿ ನಾನೂ ಒಬ್ಬ. ಆದರೆ, ಅವರಂತೆ ಪಕ್ಷದಲ್ಲಿ ಎರಡು ಡಜನ್ ಶಾಸಕರು ಮುಖ್ಯಮಂತ್ರಿಯಾಗುವ ಅರ್ಹತೆ ಹೊಂದಿದ್ದಾರೆ' ಎಂದರು.

ಗಡಿಯಲ್ಲಿ ಕಟ್ಟೆಚ್ಚರ: ಮಹಾರಾಷ್ಟ್ರದಲ್ಲಿ ಮರಾಠರ ಮೀಸಲಾತಿ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿದೆ. ರಾಜ್ಯದ ಗಡಿಯಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ರಾಜ್ಯದ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿ, ಬೆಂಕಿ ಹಚ್ಚಲಾಗಿದೆ. ಈ ಬಗ್ಗೆ ನಿಗಾ ವಹಿಸಲಾಗಿದೆ ಎಂದರು.

ಕೇಂದ್ರ ವಿರುದ್ಧ ಆಕ್ರೋಶ: 'ಕೇಂದ್ರದಿಂದ ಬಂದಿದ್ದ ಬರ ಅಧ್ಯಯನ ತಂಡದ ಅಧಿಕಾರಿಗಳಿಗೆ ಇಲ್ಲಿನ ಬರ ಕಾಣಿಸಿಲ್ಲ. 'ಹಸಿರು ಚೆನ್ನಾಗಿದೆ' ಎಂದು ವರದಿ ನೀಡಿದ್ದಾರೆ. ಇವರಿಗೆ ಕಣ್ಣು ಕಾಣಿಸುವುದಿಲ್ಲವೇ' ಎಂದು ಪ್ರಶ್ನಿಸಿದರು.

ಹಾಸನಾಂಬೆ ದರ್ಶನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಹಾಸನ: ಹಾಸನಾಂಬ ದೇವಿ ಮತ್ತು ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನವೆಂಬರ್ 2ರಿಂದ 15ವರೆಗೆ ನಡೆಯಲಿದ್ದು, ಹಾಸನಾಂಬ ದೇವಿ ಗರ್ಭಗುಡಿಯ ಬಾಗಿಲನ್ನು ನವೆಂಬರ್ 2ರಂದು ಮಧ್ಯಾಹ್ನ 12 ಗಂಟೆಗೆ ತೆರೆಯಲಾಗುವುದು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ದರ್ಶನೋತ್ಸವಕ್ಕೆ ಚಾಲನೆ ನೀಡುವರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಭಾಗವಹಿಸುವರು.

ನ. 2ರಂದು ಸಾರ್ವಜನಿಕರ ದರ್ಶನಕ್ಕೆ ಅವಕಾಶ ಇರುವುದಿಲ್ಲ. ನ. 3ರಂದು ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ರವರೆಗೆ ಮಾತ್ರ ದರ್ಶನ ವ್ಯವಸ್ಥೆ ಕಲ್ಪಿಸಲಾಗಿದೆ. ನ. 4ರಿಂದ ನ. 13ರವರೆಗೆ ಬೆಳಿಗ್ಗೆ 4 ಗಂಟೆಯಿಂದ ಮಧ್ಯಾಹ್ನ 1.30ರವರೆಗೆ ಹಾಗೂ ಮಧ್ಯಾಹ್ನ 3 ರಿಂದ ಮಧ್ಯರಾತ್ರಿ 2 ಗಂಟೆಯವರೆಗೆ ದರ್ಶನಕ್ಕೆ ಅವಕಾಶವಿದೆ. ನ. 14ರಂದು ಬೆಳಿಗ್ಗೆ 4 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಹಾಗೂ ರಾತ್ರಿ 11 ರಿಂದ ಮರುದಿನ ಬೆಳಿಗ್ಗೆ 7 ಗಂಟೆಯವರೆಗೆ ಅವಕಾಶವಿದೆ. ನ. 15ರಂದು ಮಧ್ಯಾಹ್ನ 12 ಗಂಟೆಗೆ ಗರ್ಭಗುಡಿಯ ಬಾಗಿಲನ್ನು ಮುಚ್ಚಲಾಗುವುದು. ಅಂದು ಸಾರ್ವಜನಿಕರಿಗೆ ಅವಕಾಶವಿರುವುದಿಲ್ಲ. ನ.14ರಂದು ರಾತ್ರಿ 10.30 ಕ್ಕೆ ಸಿದ್ದೇಶ್ವರ ಸ್ವಾಮಿಯ ಚಂದ್ರಮಂಡಲ ರಥೋತ್ಸವ ಜರುಗಲಿದೆ.

ಇದೇ ಮೊದಲ ಬಾರಿಗೆ ತುಲಾಭಾರ ಸೇವೆ, ಇ–ಹುಂಡಿ ವ್ಯವಸ್ಥೆಯನ್ನು ಅಳವಡಿಸಲಾಗಿದೆ. 10 ಲಕ್ಷ ಭಕ್ತರು ಭೇಟಿ ನೀಡುವ ನಿರೀಕ್ಷೆ ಇದ್ದು, ಹೆಚ್ಚಿನ ಬಂದೋಬಸ್ತ್ ಮಾಡಲಾಗಿದೆ. ₹1 ಸಾವಿರ ಹಾಗೂ ₹300 ಮುಖಬೆಲೆಯ ವಿಶೇಷ ದರ್ಶನ ಟಿಕೆಟ್‌ಗಳ ವ್ಯವಸ್ಥೆ ಮಾಡಲಾಗಿದೆ. ಕೆಎಸ್‌ಆರ್‌ಟಿಸಿ ಸಹಯೋಗದಲ್ಲಿ ನಾಲ್ಕು ಪ್ಯಾಕೇಜ್‌ಗಳಲ್ಲಿ ವಿಶೇಷ ಪ್ರವಾಸ ಹಾಗೂ ಹೆಲಿ ಟೂರಿಸಂ, ಪ್ಯಾರಾಸೈಲಿಂಗ್, ಪ್ಯಾರಾ ಮೋಟರಿಂಗ್ ವ್ಯವಸ್ಥೆ ಮಾಡಲಾಗಿದೆ.

ಗುಂಡು ಹಾರಿಸಿ ಚಿರತೆ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರವಲಯದ ಜನರಿಗೆ ನಾಲ್ಕು ದಿನಗಳಿಂದ ಆತಂಕ ಹುಟ್ಟಿಸಿ, ವೈದ್ಯರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಮೇಲೆ ದಾಳಿ ನಡೆಸಿದ್ದ ಚಿರತೆಯನ್ನು ಅರಣ್ಯ ಸಿಬ್ಬಂದಿ ಬುಧವಾರ ಗುಂಡು ಹಾರಿಸಿ ಕೊಂದಿದ್ದಾರೆ.

ಹೊಸೂರು ರಸ್ತೆ ಕೂಡ್ಲುಗೇಟ್ ಬಳಿ ಕಾಣಿಸಿಕೊಂಡಿದ್ದ ಚಿರತೆಯನ್ನು ಪತ್ತೆಹಚ್ಚಲು ಅರಣ್ಯ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದರು. ಕೃಷ್ಣಾರೆಡ್ಡಿ ಕೈಗಾರಿಕಾ ಪ್ರದೇಶದಲ್ಲಿ ಬುಧವಾರ ಬೆಳಿಗ್ಗೆ ಮತ್ತೆ ಕಾಣಿಸಿಕೊಂಡಿತ್ತು. ಜೀವಂತವಾಗಿ ಸೆರೆಹಿಡಿಯಲು ನಡೆಸಿದ ಕಾರ್ಯಾಚರಣೆಯಲ್ಲಿ ಅರಣ್ಯ ಸಿಬ್ಬಂದಿ ಹಾಗೂ ವೈದ್ಯರ ಮೇಲೆ ದಾಳಿ ನಡೆಸಿತ್ತು. ಮಧ್ಯಾಹ್ನ 2.30ರಿಂದ 2.45ರ ಅವಧಿಯಲ್ಲಿ ಸೆರೆಗೆ ಸಿಲುಕದೆ ದಾಳಿ ಮಾಡಲು ಮುಂದಾದಾಗ ಸಿಬ್ಬಂದಿ ಗುಂಡು ಹಾರಿಸಿದ್ದಾರೆ.

'ವ್ಯಕ್ತಿಯ ಸ್ವಯಂ ರಕ್ಷಣೆಗಾಗಿ ವನ್ಯಪ್ರಾಣಿಯನ್ನು ಗಾಯಗೊಳಿಸುವುದು ಅಥವಾ ಕೊಲ್ಲುವುದು ವನ್ಯಜೀವಿ ಸಂರಕ್ಷಣೆ ಕಾಯ್ದೆ ಸೆಕ್ಷನ್ 11ರಂತೆ ಅಪರಾಧವಲ್ಲ. ಚಿರತೆಯನ್ನು ಕೊಲ್ಲಲು ಬುಧವಾರ ಮಧ್ಯಾಹ್ನ ಮೌಖಿಕ ಆದೇಶವನ್ನು ನೀಡಲಾಗಿತ್ತು' ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಸುಭಾಷ್ ಕೆ. ಮಳಖೇಡ ತಿಳಿಸಿದರು.

'ಜನನಿಬಿಡ ಪ್ರದೇಶದಲ್ಲಿ ಚಿರತೆ ಇತ್ತು. ಅದನ್ನು ಶಾಂತಗೊಳಿಸಿ, ಹಿಡಿಯುವುದು ಸಾಧ್ಯವಾಗಿರಲಿಲ್ಲ. ಅದು ಓಡಿಹೋಗುವಾಗ ಗಾಯಗೊಳ್ಳುವ ಜೊತೆಗೆ ಜನರನ್ನೂ ಗಾಯಗೊಳಿಸುವ ಸಾಧ್ಯತೆ ಇದ್ದುದ್ದರಿಂದ, ಜನರ ಹಿತಾಸಕ್ತಿಯಿಂದ ಗುಂಡು ಹಾರಿಸುವ ಆದೇಶವನ್ನು ನೀಡಲಾಯಿತು. ನಾಲ್ಕು ದಿನಗಳಿಂದ ಚಿರತೆಯನ್ನು ರಕ್ಷಿಸಲು ನಾವು ನಡೆಸಿದ ಪ್ರಯತ್ನಗಳೆಲ್ಲ ವಿಫಲವಾಗಿದ್ದಕ್ಕೆ ಬೇಸರವಿದೆ' ಎಂದರು.



ಗುಂಡು ತಗುಲಿ ಮೃತಪಟ್ಟಿರುವ ಚಿರತೆ —ಪ್ರಜಾವಾಣಿ ಚಿತ್ರ

'ಚಿರತೆ ಮಂಗಳವಾರ ಕಟ್ಟಡದ ಒಳಗೆ ಇತ್ತು. ಬುಧವಾರ ಬೆಳಿಗ್ಗೆ ಅದನ್ನು ಹಿಡಿಯಲು ಪ್ರಯತ್ನಿಸಿದಾಗ ನಮ್ಮ ಅರಣ್ಯ ಸಿಬ್ಬಂದಿ ಮೇಲೆ ದಾಳಿ ನಡೆಸಿತು. ಅದು ತನ್ನ ಜೀವವನ್ನು ಉಳಿಸಿಕೊಳ್ಳಲು ಅತ್ಯಂತ ಆಕ್ರಮಣಕಾರಿ ಸ್ಥಿತಿಯನ್ನು ತಲುಪಿತ್ತು' ಎಂದು ಮಾಹಿತಿ ನೀಡಿದರು.

ನನ್ನ ರೇಟ್ ಬೇರೆಯೇ ಇದೆ: ಕೊತ್ತೂರು

ಪ್ರಜಾವಾಣಿ ವಾರ್ತೆ

ಕೊತ್ತೂರು ಮಂಜುನಾಥ್

ಕೋಲಾರ: 'ನನ್ನ ಖರೀದಿಸುವ ಶಕ್ತಿ ಕರ್ನಾಟಕದಲ್ಲಿ ಯಾರಿಗೂ ಇಲ್ಲ. ನನ್ನ ರೇಟ್ ಬೇರೆಯೇ ಇದೆ. ಕರ್ನಾಟಕ ರಾಜ್ಯವನ್ನು ನನ್ನ ಹೆಸರಿಗೆ ಬರೆದು ಕೊಟ್ಟರೆ ಹೋಗುತ್ತೇನೆ. ಆದರೆ, ನನ್ನನ್ನು ಯಾರೂ ಸಂಪರ್ಕಿಸಿಲ್ಲ. ಸರ್ಕಾರ ಬೀಳಿಸುವ ಕನಸು ಯಾರೂ ಕಾಣಬೇಡಿ' ಎಂದು ಕೋಲಾರ ಶಾಸಕ ಕಾಂಗ್ರೆಸ್‌ನ ಕೊತ್ತೂರು ಮಂಜುನಾಥ್, ಬಿಜೆಪಿ ಮುಖಂಡರಿಗೆ ತಿರುಗೇಟು ನೀಡಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಕಾಂಗ್ರೆಸ್‌ನಲ್ಲಿ 135 ಶಾಸಕರು ಇದ್ದೇವೆ. ಸರ್ಕಾರ ಬೀಳಿಸಲು ಸಾಧ್ಯವಿಲ್ಲ' ಎಂದರು.

'ಕಾಂಗ್ರೆಸ್ ಶಾಸಕ ರವಿ ಗಣಿಗ ಅವರಿಗೆ ಯಾರಾದರೂ ಹಣ ನೀಡಲು ಮುಂದೆ ಬಂದಿದ್ದಾರೋ ಏನೋ ನನಗೆ ಗೊತ್ತಿಲ್ಲ. ಅವರ ಹೇಳಿಕೆಯನ್ನು ನಾನೂ ಗಮನಿಸಿದ್ದೇನೆ' ಎಂದರು. 'ಎರಡೂವರೆ ವರ್ಷದ ಬಳಿಕ ಮುಖ್ಯಮಂತ್ರಿ ಬದಲಾಗುತ್ತಾರೆ ಎಂಬುದು ಸುಳ್ಳು. ಬದಲಾವಣೆ ಪ್ರಶ್ನೆಯೇ ಇಲ್ಲ. ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ' ಎಂದು ತಿಳಿಸಿದರು.

'ಕೋಲಾರ ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ಧವಾಗಿದ್ದಾರೆ. ಅವರು ಸ್ಥಳೀಯರೇ ಆಗಿದ್ದು, ಈಗಲೇ ಹೆಸರು ಬಹಿರಂಗಪಡಿಸುವುದಿಲ್ಲ' ಎಂದು ಹೇಳಿದರು.

'ಸರ್ಕಾರವೇ ಪತನವಾಗುವಾಗ ವಿಪಕ್ಷ ನಾಯಕ ಏಕೆ?'

ವಿಜಯಪುರ: 'ರಾಜ್ಯದಲ್ಲಿ ಪ್ರತಿಪಕ್ಷ ನಾಯಕನನ್ನು ಆಯ್ಕೆ ಮಾಡುವುದರೊಳಗಾಗಿ ಕಾಂಗ್ರೆಸ್ ಸರ್ಕಾರವೇ ಇಲ್ಲದಂತಾಗಬಹುದು. ಹೀಗಾಗಿ ಪ್ರತಿಪಕ್ಷ ನಾಯಕನನ್ನು ಏಕೆ ಮಾಡಬೇಕು?' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ₹1.05 ಲಕ್ಷ ಕೋಟಿ ಹಣ ಬೇಕು. ಅಷ್ಟು ಹಣ ಬಿಡುಗಡೆ ಆಗುವುದರೊಳಗಾಗಿ ಸರ್ಕಾರವೇ ಪತನವಾಗಲಿದೆ' ಎಂದರು.

'ರಾಜ್ಯದ ಸ್ಥಿತಿ: ಗಮನಿಸದ ಕೇಂದ್ರ'



ಬಚ್ಚೇಗೌಡ

ಚಿಕ್ಕಬಳ್ಳಾಪುರ: ಐದು ರಾಜ್ಯಗಳ ಚುನಾವಣೆಯತ್ತ ಕೇಂದ್ರ ಸರ್ಕಾರ ಗಮನ ನೀಡಿದೆ. ಯಾವ ರಾಜ್ಯದಲ್ಲಿ ಯಾವ ಪರಿಸ್ಥಿತಿ ಇದೆ ಎನ್ನುವ ಬಗ್ಗೆ ಗಂಭೀರವಾಗಿ ಗಮನಿಸುತ್ತಿಲ್ಲ ಎಂದು ಬಿಜೆಪಿ ಸಂಸದ ಬಿ.ಎನ್. ಬಚ್ಚೇಗೌಡ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬರ ಪರಿಸ್ಥಿತಿ ಅಧ್ಯಯನಕ್ಕೆ ಕೇಂದ್ರ ಸರ್ಕಾರ ತಂಡ ಕಳುಹಿಸಿತ್ತು. ಬರದಿಂದ ರಾಜ್ಯದಲ್ಲಿ ₹33 ಸಾವಿರ ಕೋಟಿಯಷ್ಟು ಬೆಳೆ ಹಾನಿಯಾಗಿದೆ. ₹17 ಸಾವಿರ ಕೋಟಿ ಬರ ಪರಿಹಾರಕ್ಕೆ ನೀಡುವಂತೆ ರಾಜ್ಯ ಸರ್ಕಾರ ಕೇಂದ್ರವನ್ನು ಕೋರಿದೆ. ಅಲ್ಲದೆ, ಪ್ರತಿವರ್ಷ ನೀಡಬೇಕಾದ ರಾಜ್ಯದ ಪಾಲಿನ ಜಿಎಸ್‌ಟಿ ಹಣವನ್ನೂ ಕೇಂದ್ರ ಹಣಕಾಸು ಸಚಿವರು ಬಿಡುಗಡೆ ಮಾಡಿಲ್ಲ ಎಂದರು.

ಆಪರೇಷನ್ ಕಮಲದ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದೇನೆ. ಪಕ್ಷದ ವಿಷಯದಲ್ಲಿ ದಿನವೂ ಯಾರಾದರೂ ಒಬ್ಬರು ಮಾತನಾಡಬೇಕಾಗಿರುತ್ತದೆ. ಆದ ಕಾರಣ ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ, ಸಿ.ಟಿ.ರವಿ ಹೀಗೆ ದಿನ ಒಬ್ಬೊಬ್ಬರು ಮಾತನಾಡುವರು ಎಂದರು.

ಕನ್ನಡ ಭಾಷೆಯ ಸಂಶೋಧನೆಗೆಂದೇ ಸ್ಥಾಪನೆಗೊಂಡಿರುವ ಏಕೈಕ ವಿ.ವಿಗೆ ಬೇಕು ₹25 ಕೋಟಿ

ಕನ್ನಡದ ಹೆಮ್ಮೆಗೇಕೆ ಈ ಅನಾದರ?

• ಎಂ.ಜಿ.ಬಾಲಕೃಷ್ಣ

ಪ್ರಜಾವಾಣಿ ವಿಶೇಷ

ಹೊಸಪೇಟೆ (ವಿಜಯನಗರ): ನಾಡು 'ಕರ್ನಾಟಕ ಸಂಭ್ರಮ–50' ಆಚರಿಸುತ್ತಿದ್ದು, ಕನ್ನಡ ಭಾಷೆಯ ಸಂಶೋಧನೆಗೆಂದೇ ಸ್ಥಾಪನೆಗೊಂಡಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯ ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ತಕ್ಷಣ ಅನುದಾನ ರೂಪದಲ್ಲಿ ಇದಕ್ಕೆ ₹25.32 ಕೋಟಿಯ ಅಗತ್ಯ ಇದೆ.

ಇತರ ವಿಶ್ವವಿದ್ಯಾಲಯಗಳಂತೆ ಹಣಕಾಸಿನ ಮೂಲ ಇಲ್ಲದಿರುವ ಕನ್ನಡ ವಿಶ್ವವಿದ್ಯಾಲಯ ಸಂಪೂರ್ಣವಾಗಿ ಸರ್ಕಾರ ನೀಡುವ ಅನುದಾನವನ್ನೇ ಅವಲಂಬಿಸಿದೆ. ವಿದ್ಯಾರ್ಥಿಗಳಿಂದ ಬರುವ ಶುಲ್ಕದ ರೂಪದಲ್ಲಿ ಇದುವರೆಗೆ ವಾರ್ಷಿಕ ₹20 ಲಕ್ಷ ಮಾತ್ರ ಸಂಗ್ರಹವಾಗುತ್ತಿತ್ತು. ಈ ವರ್ಷ ಶುಲ್ಕವನ್ನು ಸ್ವಲ್ಪ ಹೆಚ್ಚಿಸಲಾಗಿದ್ದು, ₹ 32 ಲಕ್ಷ ಸಂಗ್ರಹವಾಗುವ ನಿರೀಕ್ಷೆ ಇದೆ. ಆದರೆ ಈ ಶುಲ್ಕ ಪರೀಕ್ಷೆ, ಮೌಲ್ಯಮಾಪನ ಸಹಿತ ಬೋಧನೆಗೆ ಸಂಬಂಧಿಸಿದ ಖರ್ಚುಗಳಿಗೆ ವಿನಿಯೋಗವಾಗುತ್ತಿದ್ದು, ಇತರ ಎಲ್ಲಾ ವೆಚ್ಚಗಳಿಗೂ ಸರ್ಕಾರ ನೀಡುವ ಅನುದಾನಕ್ಕೆ ಕೈಯೊಡ್ಡಬೇಕಾದ ಸ್ಥಿತಿ ಇದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ

700 ಎಕರೆಯಷ್ಟು ವಿಸ್ತಾರವಾದ 'ವಿದ್ಯಾರಣ್ಯ' ಕ್ಯಾಂಪಸ್‌ನಲ್ಲಿ 18 ಅಧ್ಯಯನ ವಿಭಾಗಗಳಿದ್ದು, ಬೋಧಕ, ಬೋಧಕೇತರ ಸಿಬ್ಬಂದಿಗೆ ವಸತಿನಿಲಯ ಹಾಗೂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳು ನಿರ್ಮಾಣವಾಗಿವೆ. ಇಲ್ಲಿ ವಾರ್ಷಿಕವಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ 250ರಿಂದ 300ರಷ್ಟು ಮಾತ್ರ.

ಇತರ ವಿಶ್ವವಿದ್ಯಾಲಯಗಳಂತೆ ಇಲ್ಲಿ ಕೂಡ ಬೋಧಕ, ಬೋಧಕೇತರ ಸಿಬ್ಬಂದಿಯ ಕೊರತೆ ಹೆಚ್ಚಿದೆ. 70 ಬೋಧಕೇತರ ಸಿಬ್ಬಂದಿ ಮತ್ತು 29 ಬೋಧಕ ಸಿಬ್ಬಂದಿಯ ಕೊರತೆ ಇದ್ದು, ಎರಡು ವರ್ಷದೊಳಗೆ ಆರೇಳು ಮಂದಿ ನಿವೃತ್ತರಾಗಲಿದ್ದಾರೆ. ಅತಿಥಿ ಉಪನ್ಯಾಸಕರಿಗೆ ನೀಡುವ ಗೌರವಧನ ಗರಿಷ್ಠ ₹22 ಸಾವಿರ. ಇದರಿಂದ ಸಹಜವಾಗಿಯೇ ಬೋಧನೆಯ ಗುಣಮಟ್ಟದ ಮೇಲೆ ದುಷ್ಪರಿಣಾಮ ಬಿದ್ದಿದೆ. ಸಂಶೋಧನೆಗಳಿಗೆ ಸಹ ಅಡ್ಡಿ ಉಂಟಾಗಿದೆ.

ಕನ್ನಡಿಗರ ಬಗ್ಗೆ ಅಭಿಮಾನ ಹೊಂದಿರುವ ಈಗಿನ ರಾಜ್ಯ ಸರ್ಕಾರ ಕನ್ನಡ ವಿಶ್ವವಿದ್ಯಾಲಯಕ್ಕೆ ಹೆಚ್ಚು ಅನುದಾನ ನೀಡಿ ಕನ್ನಡದ ಕೆಲಸ ಮಾಡುವುದಕ್ಕೆ ಪ್ರೋತ್ಸಾಹ ನೀಡಬೇಕು

ಪ್ರೊ. ಡಿ.ವಿ.ಪರಮಶಿವಮೂರ್ತಿ
ಕುಲಪತಿ, ಕನ್ನಡ ವಿಶ್ವವಿದ್ಯಾಲಯ

ನಾವು ಬಹಳ ಕಷ್ಟದಲ್ಲಿದ್ದೇವೆ: 'ನಮ್ಮದು ಸಂಶೋಧನೆಗೆಂದೇ ಸ್ಥಾಪನೆಗೊಂಡ ವಿಶ್ವವಿದ್ಯಾಲಯ. ಎಸ್‌ಸಿ/ ಎಸ್‌ಟಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ರೂಪದಲ್ಲಿ 18 ತಿಂಗಳ ಬಾಕಿ ₹ 4.50 ಕೋಟಿ ನೀಡಬೇಕಿದೆ. ನಾವು ಬಹಳ ಕಷ್ಟದಲ್ಲಿದ್ದೇವೆ, ಮಂಜೂರು ಮಾಡಿಸಿ ಎಂದು ಕೇಳುತ್ತಿದ್ದಾರೆ. ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ದಿನ ದೂಡುತ್ತಿದ್ದೇನೆ. ಸರ್ಕಾರ ಈಗಲಾದರೂ ಅವರ ಕಷ್ಟ ಅರಿಯುತ್ತದೆ ಎಂಬ ಆಶಾಭಾವನೆ ಹೊಂದಿದ್ದೇನೆ' ಎಂದು ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಸದ್ಯ ವಾರ್ಷಿಕ ₹1.50 ಕೋಟಿ ಅನುದಾನ ಮೂರು ಕಂತುಗಳಲ್ಲಿ ಬಿಡುಗಡೆಯಾಗುತ್ತದೆ. ವಿದ್ಯಾರ್ಥಿಗಳ ಹಾಸ್ಟೆಲ್‌ನಂತಹ ಖರ್ಚಿಗೆ ನೀಡಿದ ಹಣವನ್ನು ಬೇರೆ ಯಾವ ಉದ್ದೇಶಕ್ಕೂ ಬಳಸುವಂತಿಲ್ಲ. ವಾರ್ಷಿಕ ₹6 ಕೋಟಿ ಅನುದಾನ ದೊರೆತರೆ ಮಾತ್ರ ವಿಶ್ವವಿದ್ಯಾಲಯವನ್ನು ಕ್ರಮಬದ್ಧವಾಗಿ ಮುನ್ನಡೆಸಲು ಸಾಧ್ಯ, ಈಗಾಗಲೇ ಕೈಗೆತ್ತಿಕೊಂಡಿರುವ ಕಾಮಗಾರಿಗಳು, ತೆರಿಗೆ, ವಿದ್ಯುತ್ ಬಿಲ್, ವೇತನ, ಶಿಷ್ಯವೇತನಕ್ಕಾಗಿ ₹25 ಕೋಟಿಯ ಅಗತ್ಯ ಇದೆ' ಎಂದು ಅವರು ಹೇಳಿದರು.

ಅಲ್ಲದೇ, ಅನುದಾನ ಇಲ್ಲದೆ ಪ್ರಸಾರಾಂಗದ ಕಟ್ಟಡ, ರಸ್ತೆ ವಿಸ್ತೀರ್ಣ ಮಾಡುವುದು, ನೆಲ ಹಾಗೂ ಮೇಲ್ಮಟ್ಟದ ನೀರು ಸಂಗ್ರಹ/ವಿತರಣಾ ಕೇಂದ್ರದ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ.

ಕನ್ನಡ ವಿಶ್ವವಿದ್ಯಾಲಯಕ್ಕೆ ತಕ್ಷಣಕ್ಕೆ ಬೇಕಾದ ಅನುದಾನ

ವಿವರ	ಅನುದಾನ (₹ ಲಕ್ಷಗಳಲ್ಲಿ)
ತಾತ್ಕಾಲಿಕ ಬೋಧಕ ನೌಕರರ ವೇತನ (10 ತಿಂಗಳ ಬಾಕಿ)	120
ಬೋಧಕೇತರ ತಾತ್ಕಾಲಿಕ ನೌಕರರ ವೇತನ (10 ತಿಂಗಳ ಬಾಕಿ)	180
ಹೊರಗುತ್ತಿಗೆ ನೌಕರರ (ಭದ್ರತೆ, ಶುಚಿತ್ವ) ವೇತನ (10 ತಿಂಗಳ ಬಾಕಿ)	120
ಕಮಲಾಪುರ ಪುರಸಭೆಗೆ ಪಾವತಿಸಬೇಕಾದ ತೆರಿಗೆ	27.71
ಬೆಳ್ಳಿಭವನ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಬಾಕಿ ಹಣ	342
ಜೆಸ್ಕಾಂಗೆ ಪಾವತಿಸಬೇಕಿರುವ ವಿದ್ಯುತ್ ಬಿಲ್ ಬಾಕಿ	89
ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ಮಾಸಿಕ ಆರ್ಥಿಕ ನೆರವು (18 ತಿಂಗಳ ಬಾಕಿ)	450
ಕೆಕೆಆರ್‌ಡಿಬಿ ಅಪೂರ್ಣ ಕಾಮಗಾರಿ ಪೂರ್ಣಗೊಳಿಸಲು ಬಿಡುಗಡೆಯಾಗಬೇಕಿರುವ ಮೊತ್ತ	1,203
ಒಟ್ಟು ಮೊತ್ತ	2,532

ಗುರುವಾರ, ನವೆಂಬರ್ 2, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 303 | ಪುಟ 16
● www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಓಜೋನ್ ಪದರ ಸವೆಯುವುದನ್ನು ತಡೆಗಟ್ಟಲು, ಜಾಗತಿಕ ಪರಿಸರ ರಕ್ಷಣೆಗಾಗಿ ಕಿಗಾಲಿ ಒಪ್ಪಂದ ಮಾಡಲಾಯಿತು. ಈ ಒಪ್ಪಂದದ ಪರಿಣಾಮಗಳೇನು? ಸಮಗ್ರ ವಿವರ



'ಕೈ' ಪಡೆಗೆ ಭರವಸೆ ತಂದ ಹೊಸಬರು 7

ಆಳ-ಅಗಲ ಕದ್ದಾಲಿಕೆಯ ಹೊಸರೂಪ
ಬರ ಅಧ್ಯಯನದಿಂದ 'ಕಮಲ'ಕ್ಕೆ ಶಕ್ತಿ? 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63,591	18,989	₹62,720 (ಬೆಂಗಳೂರು)	₹72,800 (ಬೆಂಗಳೂರು)	83.28

ಎಚ್ಚರಿಕೆ ಕೊಟ್ಟ ವೇಣುಗೋಪಾಲ್ • ವಿವಾದಗಳ ಸದ್ದಿಗೆ ಬೆಚ್ಚಿದ 'ಕೈ' ಹೈಕಮಾಂಡ್

ಬಾಯ್ತೆರೆದರೆ ಮಂತ್ರಿಗಿರಿಗೆ ಕುತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಮತ್ತು ಸರ್ಕಾರದೊಳಗೆ ನಡೆಯುತ್ತಿರುವ ಆಂತರಿಕ ತುಮುಲ, ಬಹಿರಂಗ ಹೇಳಿಕೆಗಳಿಂದ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗುತ್ತಿರುವುದನ್ನು ಗಮನಿಸಿದ 'ಕೈ' ಹೈಕಮಾಂಡ್, ಸಚಿವರು, ಶಾಸಕರಿಗೆ ಕಠಿಣ ಎಚ್ಚರಿಕೆ ರವಾನಿಸಿದೆ.

ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಜನಪರ ಯೋಜನೆಗಳಿಗೆ ಪ್ರಚಾರ ಸಿಗುವ ಬದಲು, ಕಳೆದ ಒಂದು ವಾರದಿಂದ ಪಕ್ಷದೊಳಗಿನ ವಿವಾದಗಳೇ ಹೆಚ್ಚು ಸದ್ದು ಮಾಡುತ್ತಿರುವುದರಿಂದ ಆತಂಕಗೊಂಡ ಹೈಕಮಾಂಡ್ ದಿಢೀರ್ ಮಧ್ಯಪ್ರವೇಶ ಮಾಡಿದೆ.

ತೆಲಂಗಾಣ ಪ್ರವಾಸದಲ್ಲಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಕ್ಷದ ರಾಜ್ಯ ಘಟಕದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮಂಗಳವಾರ ತಡರಾತ್ರಿ ಬೆಂಗಳೂರಿಗೆ ದೌಡಾಯಿಸಿದರು. ಬುಧವಾರ ಬೆಳಿಗ್ಗೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಹೋಟೆಲ್‌ಗೆ ಕರೆಯಿಸಿಕೊಂಡ ಇವರಿಬ್ಬರೂ ಕೆಲ ತಾಸು ರಹಸ್ಯ ಸಮಾಲೋಚನೆ ನಡೆಸಿದರು. ಬಳಿಕ, ಅವರಿಬ್ಬರೊಂದಿಗೆ ಕೆಪಿಸಿಸಿ ಕಚೇರಿಗೆ ಬಂದು ಅಲ್ಲಿಯೂ ಸಭೆ ನಡೆಸಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡಿದ್ದರು

'ಮುಖ್ಯಮಂತ್ರಿ ಬದಲಾವಣೆ, ಎರಡು ವರ್ಷಗಳ ಬಳಿಕ ಸಚಿವ ಸಂಪುಟ ಪುನಾರಚನೆ, ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿ ಇಂತಹ ವಿಷಯಗಳ ಬಗ್ಗೆ ಯಾರೊಬ್ಬರೂ ಮಾತನಾಡದಂತೆ ನೀವಿಬ್ಬರೇ ನಿಗಾ ವಹಿಸಬೇಕು. ನೀವು ನಿಯಂತ್ರಿಸದೇ ಇದ್ದರೆ ಹೈಕಮಾಂಡ್ ಮಧ್ಯಪ್ರವೇಶಿಸುವುದು ಅನಿವಾರ್ಯವಾಗಲಿದೆ. ಸಚಿವ ಸ್ಥಾನದಿಂದ ಕೈಬಿಡುವುದೂ ಸೇರಿದಂತೆ ಎಲ್ಲ ರೀತಿಯ ಕ್ರಮಗಳನ್ನು ನಿರ್ದಾಕ್ಷಿಣ್ಯವಾಗಿ ಕೈಗೊಳ್ಳಲಾಗುವುದೆಂಬ ಎಚ್ಚರಿಕೆ ನೀಡಬೇಕು' ಎಂದು ಸಭೆಯ ವೇಳೆ ವೇಣುಗೋಪಾಲ್ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವರಿಕೆ ಮಾಡಿದರು' ಎಂದು ಮೂಲಗಳು ಹೇಳಿವೆ.

5ನೇ ಪುಟ ನೋಡಿ

ನ. 17 ಬಳಿಕ ನಿಗಮ-ಮಂಡಳಿಗೆ ನೇಮಕ

ಶಾಸಕರು, ಪಕ್ಷದ ಕಾರ್ಯಕರ್ತರಿಗೆ ಆದ್ಯತೆಯ ಮೇಲೆ ನಿಗಮ-ಮಂಡಳಿಗೆ ನೇಮಕ ಮಾಡಲಾಗುವುದು. ಅರ್ಹರಿಗೆ ಸ್ಥಾನಮಾನ ಕಲ್ಪಿಸುವ ಕುರಿತು ಇನ್ನಷ್ಟು ಚರ್ಚೆ ನಡೆಸಲಾಗುವುದು. ಇದೇ ತಿಂಗಳು 17ರಂದು ಮಧ್ಯ ಪ್ರದೇಶದ ಚುನಾವಣೆ ಮುಗಿಯಲಿದ್ದು, ಬಳಿಕ ನೇಮಕ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ಸುರ್ಜೇವಾಲಾ ಹೇಳಿದರು.

ಕೆಪಿಸಿಸಿ ಆಮೂಲಾಗ್ರ ಬದಲಾವಣೆ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಆಮೂಲಾಗ್ರ ಬದಲಾವಣೆ ಮಾಡಲಾಗುತ್ತಿದೆ. ಸರ್ಕಾರ ಹಾಗೂ ಪಕ್ಷದಲ್ಲೂ ಜವಾಬ್ದಾರಿ ಹೊಂದಿರುವ ಹಲವರನ್ನು ಕೈಬಿಟ್ಟು, ಪಕ್ಷ ಸಂಘಟನೆ ಬಲಪಡಿಸುವ ಸಾಮರ್ಥ್ಯ ಇರುವವರನ್ನು ನೇಮಿಸುವ ಕುರಿತು ಬುಧವಾರ ನಡೆದ ಸಭೆಯಲ್ಲಿ ಚರ್ಚಿಸಲಾಗಿದೆ.

ಈಶ್ವರ ಖಂಡ್ರೆ ಸೇರಿದಂತೆ ಮೂವರು ಕಾರ್ಯಾಧ್ಯಕ್ಷರನ್ನು ಬದಲಿಸಲಾಗುತ್ತದೆ. ಅದರ ಜತೆಗೆ 10 ಉಪಾಧ್ಯಕ್ಷರು, 55 ಪ್ರಧಾನ ಕಾರ್ಯದರ್ಶಿಗಳನ್ನು ಬದಲಿಸುವುದು, 125 ಮಂದಿಗೆ ಹೊಸದಾಗಿ ಕಾರ್ಯದರ್ಶಿ ಸ್ಥಾನ ನೀಡುವ ಕುರಿತು ಸಮ್ಮತಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಕನ್ನಡ ಡಿಂಡಿಮ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಬೆಳಗಾವಿಯ ರಾಣಿ ಚನ್ನಮ್ಮ ವೃತ್ತದಲ್ಲಿ ಬುಧವಾರ ಜನರು ಕುಣಿದು ಕುಪ್ಪಳಿಸಿದರು -ಪ್ರಜಾವಾಣಿ ಚಿತ್ರ/ ಏಕನಾಥ ಅಗಸಿಮನಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

'ಚುನಾವಣಾ ಬಾಂಡ್: ಮಾಹಿತಿ ಸಾರ್ವಜನಿಕರಿಗೆ ಗೋಪ್ಯವೇಕೆ?'

ಪ್ರಜಾವಾಣಿ ವಾರ್ತೆ

ನವದೆಹಲಿ: ಚುನಾವಣಾ ಬಾಂಡ್ ಯೋಜನೆಯ ಮೂಲಕ ನೀಡುವ ಹಣದ ಮೂಲವು ಕೆಲವು ಆಯಾಮಗಳಲ್ಲಿ ಮಾತ್ರ ಗೋಪ್ಯ ಎಂಬ ವಿಚಾರವಾಗಿ ಸುಪ್ರೀಂ ಕೋರ್ಟ್ ಕೆಲವು ಪ್ರಶ್ನೆಗಳನ್ನು ಎತ್ತಿದೆ. ಹಣದ ಮೂಲವನ್ನು ತಿಳಿದುಕೊಳ್ಳಲು ಸಾರ್ವಜನಿಕರಿಗೆ ಅವಕಾಶವಿಲ್ಲದಿರುವುದು, ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಹಾಗೂ ತನಿಖಾ ಸಂಸ್ಥೆಗಳಿಗೆ ಅವಕಾಶ ಇರುವುದು ಸಮಸ್ಯೆಗೆ ಕಾರಣ ಎಂದು ಹೇಳಿದೆ.

ಚುನಾವಣಾ ಬಾಂಡ್ ಯೋಜನೆಯ ಸಿಂಧುತ್ವವನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠ ಪರಿಶೀಲಿಸುತ್ತಿದೆ. ಈ ಯೋಜನೆಯು ಸಂಬಂಧಪಟ್ಟ ವ್ಯಕ್ತಿಗೆ ಹಣ ಕೊಡುವುದರ ಬದಲು, ರಾಜಕೀಯ ಪಕ್ಷಕ್ಕೆ ಹಣ ಕೊಟ್ಟು, ಲಂಚ ನೀಡುವುದನ್ನು ಕಾನೂನುಬದ್ಧಗೊಳಿಸುವಂತೆ ಇದೆ ಎಂದು ಪೀಠ ಹೇಳಿದೆ.

5ನೇ ಪುಟ ನೋಡಿ

₹1.72 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ಅಕ್ಟೋಬರ್‌ನಲ್ಲಿ ₹1.72 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಜಿಎಸ್‌ಟಿ ವ್ಯವಸ್ಥೆಯು ಜಾರಿಗೆ ಬಂದ ಬಳಿಕ ಆಗಿರುವ ಎರಡನೇ ಅತಿಹೆಚ್ಚಿನ ಮಾಸಿಕ ವರಮಾನ ಸಂಗ್ರಹ ಇದಾಗಿದೆ.

ಈ ಹಿಂದೆ ಏಪ್ರಿಲ್ ತಿಂಗಳಿನಲ್ಲಿ ₹1.87 ಲಕ್ಷ ಕೋಟಿಯಷ್ಟು ದಾಖಲೆ ಮಟ್ಟದ ಜಿಎಸ್‌ಟಿ ವರಮಾನ ಸಂಗ್ರಹ ಆಗಿತ್ತು. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಸಂಗ್ರಹ ಆಗಿದ್ದ ಮೊತ್ತಕ್ಕೆ ಹೋಲಿಸಿದರೆ ಶೇ 13ರಷ್ಟು ಹೆಚ್ಚು ವರಮಾನ ಸಂಗ್ರಹ ಆಗಿದೆ. ತೆರಿಗೆ ವಂಚನೆ ತಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು ಮತ್ತು ಹಬ್ಬದ ಬೇಡಿಕೆಯಿಂದಾಗಿ ತೆರಿಗೆ ಸಂಗ್ರಹದಲ್ಲಿ ಈ ಪ್ರಮಾಣದ ಹೆಚ್ಚಳ ಕಂಡುಬಂದಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

11ನೇ ಪುಟ ನೋಡಿ

ಕನ್ನಡದಲ್ಲೇ ಸ್ಪರ್ಧಾತ್ಮಕ ಪರೀಕ್ಷೆ: ಪ್ರಧಾನಿಗೆ ಪತ್ರ– ಸಿ.ಎಂ

'ಸರ್ಕಾರಿ ಶಾಲೆಗಳಿಗೆ ವಿದ್ಯುತ್, ನೀರು ಉಚಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳಿಗೆ ಉಚಿತವಾಗಿ ವಿದ್ಯುತ್ ಹಾಗೂ ಕುಡಿಯುವ ನೀರು ಪೂರೈಕೆ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ಆಯೋಜಿಸಿದ್ದ 68ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಇಂದಿನಿಂದಲೇ(ನ.1) ಈ ಸೌಲಭ್ಯವನ್ನು ಜಾರಿಗೊಳಿಸುವುದಾಗಿ ತಿಳಿಸಿದರು.

'ಕನ್ನಡಿಗರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿಶಾಲಿಗಳನ್ನಾಗಿ ಮಾಡುವ ಜತೆಗೆ ಶಿಕ್ಷಣದ ಗುಣಮಟ್ಟ ವೃದ್ಧಿಸಲು ಹಾಗೂ ಕನ್ನಡ ಶಾಲೆಗಳ ಮೂಲಸೌಕರ್ಯಗಳನ್ನು ಹೆಚ್ಚಿಸಲು ನಮ್ಮ ಸರ್ಕಾರ ನಿರಂತರವಾಗಿ ಶ್ರಮಿಸುತ್ತಿದೆ' ಎಂದರು.

5ನೇ ಪುಟ ನೋಡಿ

'ಮಾತೃಭಾಷೆಯಲ್ಲಿ ಶಿಕ್ಷಣಕ್ಕೆ 'ಸುಪ್ರೀಂ' ಅಡ್ಡಿ'

'ಮಾತೃಭಾಷೆಯಲ್ಲಿ ಶಿಕ್ಷಣ ನೀಡುವ ನಮ್ಮ ಪ್ರಯತ್ನಕ್ಕೆ ಸುಪ್ರೀಂಕೋರ್ಟ್ ಆದೇಶ ಪೂರಕವಾಗಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ತಮ್ಮ ಮಕ್ಕಳನ್ನು ಅವರ ಇಷ್ಟದ ಭಾಷೆಯಲ್ಲಿ ಕಲಿಸುವುದು ಪೋಷಕರ ಹಕ್ಕು ಎಂದು ಸುಪ್ರೀಂಕೋರ್ಟ್ ಆದೇಶ ನೀಡಿದೆ. ಆದರೆ, ಎಸ್ಸೆಸ್ಸೆಲ್ಸಿವರೆಗೆ ಮಾತೃ ಭಾಷೆಯಲ್ಲಿ ಕಲಿಯುವುದು ಉತ್ತಮ. ಕನ್ನಡ ಮಾಧ್ಯಮದಲ್ಲಿ ಕಲಿತವರೇ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ' ಎಂದರು.



ಪುಸ್ತಕಗಳಿಗೆ ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಕರ್ನಾಟಕ ಸಾಹಿತ್ಯ ಅಕಾಡೆಮಿಯು ನವೆಂಬರ್ ತಿಂಗಳು ಪೂರ್ತಿ ಪುಸ್ತಕಗಳ ಖರೀದಿ ಮೇಲೆ ಶೇ 50 ರಷ್ಟು ರಿಯಾಯಿತಿ ಘೋಷಿಸಿದೆ.

ಅಕಾಡೆಮಿ ಕಚೇರಿಗೆ ಬರಲು ಸಾಧ್ಯವಾಗದವರು ತಮಗೆ ಬೇಕಾದ ಪುಸ್ತಕಗಳನ್ನು ಇ ಮೇಲ್ ಮೂಲಕ ತಿಳಿಸಿದಲ್ಲಿ ಕೋರಿಯರ್ ಮಾಡಲಾಗುತ್ತದೆ. ಆ ವೆಚ್ಚವನ್ನೂ ಮುಂಚಿತವಾಗಿ ತಿಳಿಸಲಾಗುತ್ತದೆ. ಪುಸ್ತಗಳನ್ನು sahithyaacademy.karnataka.gov.in ಮೂಲಕ ಆಯ್ಕೆ ಮಾಡಿಕೊಳ್ಳಬಹುದು. ವಿವರಕ್ಕೆ ಇ ಮೇಲ್ ವಿಳಾಸ sahithya.academy@gmail.com ಅಥವಾ 080 22211730ಕ್ಕೆ ಸಂಪರ್ಕಿಸಬಹುದು ಎಂದು ಅಕಾಡೆಮಿ ತಿಳಿಸಿದೆ.

ಐಐಎಸ್‌ಸಿ: ಪಿಎಚ್‌.ಡಿ, ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿಗೂ ಅವಕಾಶ

ಕಂಪ್ಯುಟೇಷನಲ್ ಆಂಕಾಲಜಿ ಕೇಂದ್ರ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಕೀರ್ಣ ಸ್ವರೂಪದ ಕ್ಯಾನ್ಸರ್‌ಗಳ ಪೈಕಿ ಕೆಲ ಬಗೆಯ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ಲಭ್ಯವಿದೆ. ಆದರೆ, ಈ ಚಿಕಿತ್ಸೆಗಳ ವೆಚ್ಚ ದುಬಾರಿ. ಬಡ ಮತ್ತು ಮಧ್ಯಮ ವರ್ಗದ ರೋಗಿಗಳಿಗೆ ಕೈಗೆಟುಕುವ ದರದಲ್ಲಿ ಚಿಕಿತ್ಸೆಯ ಲಭ್ಯತೆ ಇಂದಿನ ಅಗತ್ಯತೆ. ಇದಕ್ಕಾಗಿ ಜಗತ್ತಿನಾದ್ಯಂತ ವಿಜ್ಞಾನಿಗಳು ಹಗಲಿರುಳೆನ್ನದೇ ಶ್ರಮಿಸುತ್ತಿದ್ದಾರೆ. 'ಕಂಪ್ಯುಟೇಷನಲ್ ಆಂಕಾಲಜಿ' ತಂತ್ರಜ್ಞಾನ ಇಂತಹ ವಿಜ್ಞಾನಿಗಳ ಪಾಲಿಗೆ 'ವರ'ವೆನಿಸಿದೆ.

ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಸದ್ಯದಲ್ಲೇ 'ಪರಮಹಂಸ ಫಿಲಾಂತ್ರಪಿ' ಎಂಬ ಸಂಸ್ಥೆಯ ಸಹಯೋಗದಲ್ಲಿ 'ಕಂಪ್ಯುಟೇಷನಲ್ ಆಂಕಾಲಜಿ' ಕೇಂದ್ರವೊಂದು ಸ್ಥಾಪನೆಗೊಳ್ಳಲಿದ್ದು, ಗುರುವಾರ ಎರಡೂ ಸಂಸ್ಥೆಗಳ ಜತೆ ಒಪ್ಪಂದ ಆಗಲಿದೆ.

ಕಂಪ್ಯುಟೇಷನಲ್ ಆಂಕಾಲಜಿಯು ವೈದ್ಯಕೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಸಂಯೋಜನೆಯನ್ನು ಒಳಗೊಂಡ ಒಂದು ಶಿಸ್ತು. ಕ್ಯಾನ್ಸರ್‌ಗೆ ಸಂಬಂಧಿಸಿದಂತೆ ಲಭ್ಯವಿರುವ ವೈಜ್ಞಾನಿಕ ಮಾಹಿತಿಯನ್ನು ಆಧರಿಸಿ, ಗಣಿತ ಮತ್ತು ಲೆಕ್ಕಾಚಾರ (ಕಂಪ್ಯುಟೇಷನಲ್) ಮಾದರಿಗಳನ್ನು ಅನುಸರಿಸಿ ಕ್ಯಾನ್ಸರ್ ಗಡ್ಡೆ ಬೆಳೆಯುವ ಕ್ರಮ, ಗಡ್ಡೆಯ ಜೀವಶಾಸ್ತ್ರೀಯ ಬೆಳವಣಿಗೆಯನ್ನು ನಿಖರವಾಗಿ ಗುರುತಿಸಿ ಅದರ ಆಧಾರದಲ್ಲಿ ರೋಗಿಗೆ ಚಿಕಿತ್ಸೆಯನ್ನು ನಿರ್ಧರಿಸುವುದೇ ಈ ಸಂಶೋಧನಾ ಶಿಸ್ತಿನ ವಿಶೇಷತೆ.

ಭಾರತೀಯ ವಿಜ್ಞಾನ ಸಂಸ್ಥೆ

ಮಹತ್ವದ ಅಂಶವೆಂದರೆ ಕ್ಯಾನ್ಸರ್ ಕೋಶಗಳ ಲಭ್ಯ ಮಾಹಿತಿಯನ್ನು ಆಧರಿಸಿ ಕ್ಯಾನ್ಸರ್‌ನ ಮುಂದಿನ ಹಂತಗಳನ್ನು ಮೊದಲೇ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಅದಕ್ಕೆ ತಕ್ಕಂತೆ ಚಿಕಿತ್ಸೆಯನ್ನೂ ಮಾರ್ಪಾಡು ಮಾಡಿಕೊಳ್ಳಬಹುದು. ಕ್ಯಾನ್ಸರ್ ಕುರಿತ ಸಂಶೋಧನೆಯಲ್ಲಿ ಮತ್ತಷ್ಟು ದಾರಿಗಳು ಮತ್ತು ವಿಧಾನಗಳನ್ನು ಕಂಡುಕೊಳ್ಳುವಲ್ಲಿ ಈ ತಂತ್ರಜ್ಞಾನವು ನೆರವಿಗೆ ಬರಲಿದೆ. ಭಾರತೀಯ ಪ್ರತಿಭೆಗಳ ಸಂಶೋಧನಾ ಸೃಜನಾತ್ಮಕತೆಗೆ ಈ ಕೇಂದ್ರ ಸೂಕ್ತ ವೇದಿಕೆ ಕಲ್ಪಿಸಲಿದೆ ಎನ್ನುತ್ತಾರೆ ಸಂಸ್ಥೆಯ ಮುಖ್ಯಸ್ಥ ಧೀರಜ್ ಪಾಂಡೆ.

ಮುಖ್ಯಾಂಶಗಳು

- 'ಪರಮಹಂಸ ಫಿಲಾಂತ್ರಪಿ' ಸಂಸ್ಥೆಯ ಸಹಯೋಗ
- ಎರಡೂ ಸಂಸ್ಥೆಗಳ ನಡುವೆ ಇಂದು ಒಪ್ಪಂದ

ಸ್ತನ, ಶ್ವಾಸಕೋಶ ಮತ್ತು ಬಾಯಿ ಕ್ಯಾನ್ಸರ್‌ಗಳಿಗೆ ಸಂಬಂಧಿಸಿದಂತೆ ಸಂಶೋಧನೆಗಳಲ್ಲಿ ತೊಡಗಿಕೊಳ್ಳಲು ಬಯಸುವ ವಿಜ್ಞಾನಿಗಳು, ಸ್ನಾತಕೋತ್ತರ ಪದವೀಧರರು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಅಗತ್ಯ ಶಿಕ್ಷಣ ಮತ್ತು ತರಬೇತಿ ನೆರವು ನೀಡಲಾಗುವುದು ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ನಮ್ಮ ಸಂಸ್ಥೆಯು ಕಳೆದ ಕೆಲವು ವರ್ಷಗಳಿಂದ ಜೀವ ವಿಜ್ಞಾನ ಸಂಶೋಧನೆಗೆ ಹೆಚ್ಚಿನ ಒತ್ತು ನೀಡಿದೆ. ಮಾನವ ಜೀವನದ ಗುಣಮಟ್ಟವನ್ನು ಹೆಚ್ಚಿಸುವ ಹೊಸ ಸಾಧ್ಯತೆಗಳ ಅನ್ವೇಷಣೆಯಲ್ಲಿ ತೊಡಗಿದೆ. ಸಾರ್ವಜನಿಕ ಆರೋಗ್ಯದಲ್ಲಿ ಮಹತ್ವದ ಬದಲಾವಣೆ ತರುವುದು ನಮ್ಮ ಆದ್ಯತೆ' ಎಂದು ಪಾಂಡೆ ವಿವರಿಸಿದರು.

'ಸಂಶೋಧನೆಗಳಲ್ಲಿ ಗಂಭೀರವಾಗಿ ತೊಡಗಿಸಿಕೊಳ್ಳುವ ಪಿಎಚ್‌ಡಿ ಮತ್ತು ಸಂಶೋಧನೋತ್ತರ ತರಬೇತಿಗೆ (ಪೋಸ್ಟ್‌ಡಾಕ್) ಗ್ರಾಜ್ಯುಯೇಟ್ ಫೆಲೋಶಿಪ್ ನೀಡುವ ಮೂಲಕ ಹೊಸ ತಲೆಮಾರಿನ ವಿಜ್ಞಾನಿಗಳು ಮತ್ತು ಸಂಶೋಧಕರನ್ನು ಬೆಳೆಸಲು ಉದ್ದೇಶಿಸಿದ್ದೇವೆ. ಕಂಪ್ಯುಟೇಷನಲ್ ಆಂಕಾಲಜಿಯಲ್ಲಿ ತೊಡಗಿಸಿಕೊಳ್ಳಬಯಸುವ ಇತರೆ ಪ್ರತಿಷ್ಠಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಪ್ರತಿಭಾವಂತರಿಗೆ ಬೇಸಿಗೆ ಇಂಟರ್ನ್‌ಶಿಪ್ ಕಾರ್ಯಕ್ರಮ ಪರಿಚಯಿಸಲಾಗುತ್ತದೆ. ಅಲ್ಲದೇ, ಭಾರತದ ವಿವಿಧ ಭಾಗಗಳಲ್ಲಿರುವ ಶೈಕ್ಷಣಿಕ ಸಂಸ್ಥೆಗಳ ಸಹಯೋಗದಲ್ಲಿ ವಿಜ್ಞಾನಿಗಳು ಮತ್ತು ಸಂಶೋಧಕರಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ' ಎಂದರು.

ಸುದ್ದಿ 2 ನಿಮಿಷ

ಮಲೆನಾಡು: ವಿಶೇಷ ಕೃಷಿ ವಲಯಕ್ಕೆ ಒತ್ತಾಯ

ಬೆಂಗಳೂರು: ಮಲೆನಾಡನ್ನು ವಿಶೇಷ ಕೃಷಿ ವಲಯವನ್ನಾಗಿ ಘೋಷಿಸಬೇಕು ಎಂದು ಮಲೆನಾಡು–ಕರಾವಳಿ ಜನಪರ ಒಕ್ಕೂಟ ಒತ್ತಾಯಿಸಿದೆ.

ಒಕ್ಕೂಟ ಹಮ್ಮಿಕೊಂಡಿದ್ದ ಸಮಾಲೋಚನಾ ಸಭೆಯಲ್ಲಿ, ಮಲೆನಾಡು ಹಾಗೂ ಕರಾವಳಿ ಭಾಗದ ಜನರ ಸಮಸ್ಯೆಗಳನ್ನು ಚರ್ಚಿಸಿ, ಪರಿಹಾರದ ಮಾರ್ಗೋಪಾಯಗಳನ್ನು ಪ್ರಸ್ತಾಪಿಸಲಾಯಿತು.

ಅರಣ್ಯ ಕಾಯ್ದೆ ಬಗ್ಗೆ ಪುನರ್ ಮನನ, ಮಲೆನಾಡು-ಕರಾವಳಿ ಭಾಗಕ್ಕೆ ಹೈಕೋರ್ಟ್ ಪೀಠ ಮಂಜೂರು ಮಾಡಬೇಕು ಎಂದು ಹಕ್ಕೊತ್ತಾಯ ಮಾಡಲಾಯಿತು.

ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಪ್ರಾಧ್ಯಾಪಕ ನರೇಂದ್ರ ರೈ ದೇರ್ಲ, ದೇವರಾಜು, ಲೋಹಿತ್ ನಾಯ್ಕರ್, ಜ್ಯೋತಿ ಪಾಟೀಲ್, ಮಲೆನಾಡು-ಕರಾವಳಿ ಜನಪರ ಒಕ್ಕೂಟದ ಸಂಚಾಲಕ ಸುಧೀರ್‌ಕುಮಾರ್ ಮುರೊಳ್ಳಿ ಮಾತನಾಡಿದರು.

ಕಂದಾಯ, ಅರಣ್ಯ ಭೂಮಿ ಸಾಗುವಳಿದಾರರಿಗೆ ಹಕ್ಕುಪತ್ರ ನೀಡುವ ತೊಡಕುಗಳನ್ನು ನಿವಾರಿಸಬೇಕು. ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಮೆಡಿಕಲ್, ಐಐಟಿ ಕಾಲೇಜು ಸ್ಥಾಪಿಸಬೇಕು. ಮೀನುಗಾರಿಕೆಗೆ ಆಧುನಿಕ ಸ್ಪರ್ಶ ನೀಡಬೇಕು. ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಬೇಕು. ಗೋರಖ್‌ಸಿಂಗ್ ವರದಿ ಜಾರಿ ಮಾಡಬೇಕು ಎಂಬುದು ಸೇರಿದಂತೆ ಹಲವು ಹಕ್ಕೊತ್ತಾಯ ಮಂಡಿಸಲಾಯಿತು.

ಪುನೀತ್ ರಾಜಕುಮಾರ್ ಪುತ್ಥಳಿ ಅನಾವರಣ



ಯಲಹಂಕ: ಹೆಬ್ಬಾಳದ ನೀರುಬಾವಿ ಕೆಂಪಣ್ಣ ಬಡಾವಣೆಯ ರಸ್ತೆಯೊಂದಕ್ಕೆ 'ಪುನೀತ್ ರಾಜ್‌ಕುಮಾರ್ ರಸ್ತೆ' ಎಂದು ನಾಮಕರಣ ಮಾಡಲಾಯಿತು. ಇದೇ ವೇಳೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಪುನೀತ್ ಪುತ್ಥಳಿಯನ್ನು ಅನಾವರಣಗೊಳಿಸಿದರು.

ನಂತರ ಮಾತನಾಡಿದ ಅವರು, ಪುನೀತ್ ರಾಜಕುಮಾರ್ ಈ ನಾಡು ಕಂಡ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದು, ಯಾವುದೇ ಪ್ರಚಾರ ಬಯಸದೆ ಸಾವಿರಾರು ಮಂದಿಗೆ ನೆರವು ನೀಡಿದ್ದರು. ಕಡಿಮೆ ಅವಧಿಯಲ್ಲಿ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿದ್ದ ಅವರು, ನಾಡಿನ ಯುವಜನತೆಗೆ ಅವರು ಕೆಲಸಗಳು ಆದರ್ಶ ಎಂದು ಹೇಳಿದರು.

ಪಾಲಿಕೆ ಮಾಜಿ ಸದಸ್ಯ ಎಂ.ಆನಂದಕುಮಾರ್, ಹೆಬ್ಬಾಳ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎ.ರುದ್ರಪ್ಪ, ಸ್ಥಳೀಯ ಮುಖಂಡರಾದ ಎನ್. ನಾರಾಯಣ್, ಎಂ.ಪ್ರಸನ್ನಕುಮಾರ್, ಸಿ.ವೇಣು, ಕೃಷ್ಣಪ್ಪ, ರಮೇಶ್, ಎನ್. ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

'ಕನ್ನಡ ಪುಸ್ತಕ ಹಬ್ಬ'ಕ್ಕೆ ಚಾಲನೆ

ಬೆಂಗಳೂರು: 'ಕರ್ನಾಟಕ ರಾಜ್ಯವಾಗಿ ಸುವರ್ಣ ಮಹೋತ್ಸವ ಆಚರಿಸುತ್ತಿದ್ದೇವೆ. ಆದರೆ, ಕರ್ನಾಟಕ ರಾಜ್ಯೋತ್ಸವ ಎಂದು ಹೇಳಿಕೊಳ್ಳಲು ಹಲವರು ಹಿಂಜರಿಯುತ್ತಿರುವುದು ನೆಲಕ್ಕೆ ಮಾಡುತ್ತಿರುವ ದ್ರೋಹ' ಎಂದು ಸಂಸ್ಕಾರ ಭಾರತಿ ಪ್ರಾಂತ ಅಧ್ಯಕ್ಷ ಸುಚೇಂದ್ರ ಪ್ರಸಾದ್ ಹೇಳಿದರು.

'ರಾಷ್ಟ್ರೋತ್ಥಾನ ಸಾಹಿತ್ಯ' ವತಿಯಿಂದ ಆಯೋಜಿಸಿರುವ ಒಂದು ತಿಂಗಳ 'ಕನ್ನಡ ಪುಸ್ತಕ ಹಬ್ಬ'ಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಕರ್ನಾಟಕವಾಗಿ 50 ವರ್ಷವಾದರೂ ಕನ್ನಡ ರಾಜ್ಯೋತ್ಸವ ಎಂದೇ ಹೇಳುತ್ತಿರುವುದು ಸರಿಯಲ್ಲ. ಪುಸ್ತಕ ಓದುವವರು, ಪ್ರಕಾಶಕರ ಸಂಖ್ಯೆ ಇಂದು ಕಡಿಮೆ ಆಗುತ್ತಿದೆ. ನಾಲ್ಕು ಕಿರು ಪುಸ್ತಕ ಓದಿ ನಾನೇನೋ ಅಧ್ಯಯನ ಮಾಡುತ್ತೇನೆ ಎನ್ನುತ್ತಾರೆ. ಅಧ್ಯಯನಶೀಲರಾಗಿ ಅನ್ವೇಷಣೆಗಾರರಾಗಬೇಕು' ಎಂದರು

'ವಿಜಯ ಕರ್ನಾಟಕ' ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ, 'ಪ್ರಜ್ಞಾ ಪ್ರವಾಹ' ರಾಷ್ಟ್ರೀಯ ಸಹ– ಸಂಚಾಲಕ ರಘುನಂದನ್, ದಿನೇಶ್ ಹೆಗಡೆ ಇದ್ದರು.

ಸಂಜೆ ನಡೆದ ಕಾರ್ಯಕ್ರಮದಲ್ಲಿ 'ಸಂಸ್ಕೃತಿ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಶಿಕ್ಷಣ ತಜ್ಞ ಗುರುರಾಜ ಕರಜಗಿ, 'ಮತ್ತೊಬ್ಬರ ನೋವನ್ನು ತನ್ನದು ಎಂದು ಭಾವಿಸಿ, ಪರಿಹಾರ ನೀಡುವುದು ಸಂಸ್ಕೃತಿಯ ಮೂಲ ಲಕ್ಷಣ' ಎಂದರು.

'ಪ್ರೀತಿ, ಕರುಣೆ, ಅಂತಃಕರಣ ತೋರಿಸುವುದು. ಮತ್ತೊಬ್ಬರಿಗೆ ನೋವು ಉಂಟಾಗದಂತೆ ಮಾತನಾಡುವುದು. ನೋವನ್ನು ಹಂಚಿಕೊಳ್ಳುವುದೆಲ್ಲನ್ನೂ ಸೇರಿಸಿದರೆ ಅದೇ ಸಂಸ್ಕೃತಿ. ತುಂಬಾ ಕಲಿತವರಲ್ಲಿ ಸಂಸ್ಕೃತಿ ಇರುತ್ತದೆ ಎನ್ನಲು ಸಾಧ್ಯವಿಲ್ಲ. ಕಲಿಯದವರೂ ಸಂಸ್ಕೃತಿಯಲ್ಲಿ ಶ್ರೀಮಂತರಾಗಿರುತ್ತಾರೆ' ಎಂದರು.

ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣನ್ಯೂಸ್‌ನ ಪ್ರಧಾನ ಸಂಪಾದಕ ರವಿ ಹೆಗಡೆ ಇದ್ದರು.

'ಸಂಸ್ಕೃತಿ' ಪುಸಕ್ತದಲ್ಲಿ ಸಾಹಿತಿಗಳಾದ ದೇವುಡು ನರಸಿಂಹಶಾಸ್ತ್ರಿ, ಕೆ.ಪಿ.ರಾಮನಾಥಯ್ಯ, ಬಿ.ಶಿವಮೂರ್ತಿ ಶಾಸ್ತ್ರಿ, ಎ.ಎನ್. ಮೂರ್ತಿರಾವ್, ಅ.ನ.ಕೃಷ್ಣರಾವ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ, ಸಿ.ಕೆ.ವೆಂಕಟರಾಮಯ್ಯ ಅವರ ಲೇಖನಗಳಿವೆ.

ಕವನ ವಾಚನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

'ಸಮಾಜಕ್ಕೆ ಕಿವಿಯಾಗದವ ಕವಿಯಾಗಲಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕವಿತೆ ಸಮಾಜಕ್ಕೆ ಹಿಡಿದ ಕೈದೀವಿಗೆ. ಸಮಕಾಲೀನ ಸಮಾಜದ ಸದ್ದುಗಳಿಗೆ ಕಿವಿಯಾಗದವನು ಕವಿಯಾಗಲಾರ' ಎಂದು ಕವಿ ಎಚ್.ಎಸ್. ಶಿವಪ್ರಕಾಶ್ ತಿಳಿಸಿದರು.

ಸರ್ಕಾರಿ ಕಲಾ ಕಾಲೇಜಿನ ಕರ್ಣಾಟಕ ಸಂಘ ಮತ್ತು ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಪದವಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಕಾವ್ಯಾನಂದ ಸ್ಮರಣಾರ್ಥ ರಾಜ್ಯಮಟ್ಟದ ಅಂತರ್ ಕಾಲೇಜು ಸ್ವರಚಿತ ಕವನ ವಾಚನ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

'ಸಮಾಜದ ಆಗುಹೋಗುಗಳನ್ನು ಸೂಕ್ಷ್ಮವಾಗಿ ಗ್ರಹಿಸಿ, ಕಾವ್ಯ ಬರೆಯುವ ಕವಿಯು ತನ್ನೊಳ ಉಕ್ತಿಯನ್ನು ಪ್ರಕಟಿಸಬೇಕು. ಒಬ್ಬ ಉತ್ತಮ ಕವಿಯಾಗುವವ ಹೆಚ್ಚೆಚ್ಚು ಕಾವ್ಯಗಳನ್ನು ಓದುವ ಜತೆಗೆ ಸಮಾಜಕ್ಕೆ ಕಿವಿಯಾಗಬೇಕು. ಕವಿಗೆ ಪ್ರತಿಭೆಯೊಂದಿದ್ದರೆ ಸಾಲದು, ವ್ಯುತ್ಪತ್ತಿಯೂ ಇರಬೇಕು' ಎಂದು ಯುವ ಕವಿಗಳಿಗೆ ಕಿವಿಮಾತು ಹೇಳಿದರು.

ಕವನ ವಾಚನ ಸ್ಪರ್ಧೆಯ ವಿಜೇತರಾದ ಭೀಮರಾಯ ಜಿ., ದೀಪಿಕಾ ಕೆ.ಜಿ. ಹಾಗೂ ತರುಣ್ ಪಿ.ಆರ್. ಅವರಿಗೆ ಬಹುಮಾನ ವಿತರಿಸಲಾಯಿತು. ಕರ್ಣಾಟಕ ಸಂಘದ ರುದ್ರೇಶ್ ಅದರಂಗಿ, ಕವಿ ಮತ್ತು ನಾಟಕಕಾರ ಬೇಲೂರು ರಘುನಂದನ್, ಸಿದ್ಧಯ್ಯ ಪುರಾಣಿಕ ಅವರ ಪುತ್ರ ಪ್ರಸನ್ನಕುಮಾರ ಪುರಾಣಿಕ, ಕೆ.ವೈ. ನಾರಾಯಣಸ್ವಾಮಿ, ಪ್ರಾಂಶುಪಾಲ ಪಿ.ಟಿ.ಶ್ರೀನಿವಾಸ ನಾಯಕ, ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ಅಧ್ಯಕ್ಷೆ ವಿಜಯಾ ನಂದೀಶ್ವರ, ರೇಣುಕಾಚಾರ್ಯ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಪ್ರೇಮ ಸಿದ್ಧರಾಜು ಇದ್ದಾರೆ

ಕವಿ ಕೆ.ವೈ. ನಾರಾಯಣಸ್ವಾಮಿ, 'ಕವಿಯಾಗುವುದೆಂದರೆ ಮನುಷ್ಯನಾಗುವತ್ತ ಸಾಗುವ ಮೊದಲ ಹೆಜ್ಜೆಯಾಗಿದೆ. ಪ್ರಪಂಚದಲ್ಲಿ ಮನುಷ್ಯರನ್ನು ನೈಜ ಮನುಷ್ಯರನ್ನಾಗಿ ಮಾಡುವಲ್ಲಿ ಸಾಹಿತ್ಯದ ಕಾರ್ಯ ಅನನ್ಯವಾದುದ್ದಾಗಿದೆ. ಮನುಷ್ಯನನ್ನು ತಯಾರಿಸಲು ಬೇಕಾದ ಕೈಪಿಡಿ ಸಾಹಿತ್ಯವಾಗಿದ್ದು, ಕವಿತೆ ಬರೆಯುವುದೆಂದರೆ ಇನ್ನೊಬ್ಬರನ್ನು ಮನುಷ್ಯರನ್ನಾಗಿ ಮಾಡುವುದಾಗಿದೆ' ಎಂದರು.

ಸ್ಪರ್ಧೆಗೆ ರಾಜ್ಯದ ವಿವಿಧ ಕಾಲೇಜುಗಳ 97ಯುವ ಕವಿಗಳು ಭಾಗವಹಿಸಿದ್ದರು. ಚಿಕ್ಕನಾಯಕನಹಳ್ಳಿ ನವೋದಯ ಕಾಲೇಜಿನ ದೀಪಿಕಾ ಕೆ.ಜಿ. ಪ್ರಥಮ ಬಹುಮಾನ (₹ 10 ಸಾವಿರ ನಗದು), ಸರ್ಕಾರಿ ಕಲಾ ಕಾಲೇಜಿನ ಭೀಮರಾಯ ಜಿ. ದ್ವಿತೀಯ ಬಹುಮಾನ (₹ 8 ಸಾವಿರ), ಎಂ.ಇ.ಎಸ್. ಕಾಲೇಜಿನ ತರುಣ್ ಪಿ.ಆರ್. ತೃತೀಯ ಬಹುಮಾನ (₹ 5 ಸಾವಿರ ನಗದು), ಎನ್.ಆರ್. ಪುರ ಕಾಲೇಜಿನ ಸಂದೀಪ್ ಎನ್. ಮತ್ತು ಇಳಕಲ್ ಕಾಲೇಜಿನ ಹನುಮಂತ ಸುಂಕದ್ ಸಮಾಧಾನಕರ ಬಹುಮಾನ (ತಲಾ ₹ 2 ಸಾವಿರ ನಗದು) ಪಡೆದರು.

ದಟ್ಟಣೆಯಲ್ಲಿ ಸಿಲುಕಿ ಸವಾರರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬುಧವಾರ ವಿಪರೀತ ದಟ್ಟಣೆಯಲ್ಲಿ ಸಿಲುಕಿ ವಾಹನ ಸವಾರರು ಹಾಗೂ ಸಾರ್ವಜನಿಕರು ಹೈರಾಣಾದರು.

ವಿವಿಧ ಬಡಾವಣೆ ಹಾಗೂ ಮೈದಾನಗಳಲ್ಲಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಏಕಕಾಲದಲ್ಲಿ ಸಂಘ– ಸಂಸ್ಥೆಗಳು ರಾಜ್ಯೋತ್ಸವದ ಮೆರವಣಿಗೆ ಆಯೋಜಿಸಿದ್ದವು. ರಜೆಯಿದ್ದ ಕಾರಣಕ್ಕೆ ಜನರು ತಮ್ಮ ಖಾಸಗಿ ವಾಹನಗಳಲ್ಲಿ ನಗರಕ್ಕೆ ಬಂದಿದ್ದರು. ಇದರಿಂದ ಪ್ರಮುಖ ರಸ್ತೆಗಳಲ್ಲಿ ದಟ್ಟಣೆ ಕಂಡುಬಂತು.

ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ರಾಜ್ಯೋತ್ಸವ ಸಮಾರಂಭವನ್ನು ಬೆಳಿಗ್ಗೆಯೇ ಆಯೋಜಿಸಿತ್ತು. ಅಲ್ಲಿಗೆ ಶಾಲಾ ವಾಹನಗಳು ಮಕ್ಕಳನ್ನು ಕರೆತಂದಿದ್ದವು. ಇದರಿಂದ ಕ್ರೀಡಾಂಗಣದ ಸುತ್ತಮುತ್ತಲೂ ಮಧ್ಯಾಹ್ನದವರೆಗೂ ದಟ್ಟಣೆ ಇತ್ತು.

ರಿಚ್ಮಂಡ್ ವೃತ್ತ, ಕಾರ್ಪೊರೇಷನ್ ವೃತ್ತ, ರೆಸಿಡೆನ್ಸಿ ರಸ್ತೆ, ಮೆಜೆಸ್ಟಿಕ್, ಕೆ.ಆರ್.ವೃತ್ತ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ದಟ್ಟಣೆ ಕಂಡುಬಂತು. ವಾಹನಗಳು ಸಾಲುಗಟ್ಟಿ ನಿಂತಿದ್ದವು. ದಟ್ಟಣೆಯಲ್ಲಿ ಸಿಲುಕಿ ಜನರು ಸುಸ್ತಾದರು. ಇನ್ನು ರಜೆಯ ಕಾರಣಕ್ಕೆ ಕೆಲವರು ಒಂದು ದಿನ ಪ್ರವಾಸಕ್ಕೆ ನಗರದಿಂದ ಹೊರ ಜಿಲ್ಲೆಗಳಿಗೆ ತೆರಳಿದರು. ಮೈಸೂರು ರಸ್ತೆ, ತುಮಕೂರು ರಸ್ತೆ, ಬನ್ನೇರುಘಟ್ಟ ಮಾರ್ಗದಲ್ಲಿ ಸಮಸ್ಯೆ ಕಂಡುಬಂತು.

ಚಿಕ್ಕಪೇಟೆಯಲ್ಲಿ ಖರೀದಿಗೆ ಅಪಾರ ಸಂಖ್ಯೆಯಲ್ಲಿ ಗ್ರಾಹಕರು ಬಂದಿದ್ದರು. ಹೆಬ್ಬಾಳ, ನಾಗಾವರ, ಹೆಣ್ಣೂರು ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ನಗರದಲ್ಲಿ ಇಂದು

'ಸ್ಪರ್ಧಾವಾಣಿ' ಸ್ಪರ್ಧಾತ್ಮಕ ಪರೀಕ್ಷೆಯ ಆಕಾಂಕ್ಷಿಗಳಿಗಾಗಿ ಮಾಸಿಕ ಪತ್ರಿಕೆ ಲೋಕಾರ್ಪಣೆ: ಡಾ.ಎಂ.ಸಿ. ಸುಧಾಕರ್, ಮಧು ಬಂಗಾರಪ್ಪ, ಅತಿಥಿಗಳು: ಪಿ. ಮಣಿವಣ್ಣನ್, ವೂಡೇ ಪಿ. ಕೃಷ್ಣ, ಶಂಕರ ಬಿದರಿ, ಆಯೋಜನೆ: 'ಪ್ರಜಾವಾಣಿ', ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನ, ವಿಧಾನಸೌಧ ಮೆಟ್ರೊ ನಿಲ್ದಾಣದ ಹತ್ತಿರ, ಸಂಜೆ 4.30ರಿಂದ

ಪ್ರಥಮ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಮುಖ್ಯಭಾಷಣ: ಪಿ. ಬಲರಾಂ, ಉಪಸ್ಥಿತಿ: ಡಾ.ಎಂ.ಸಿ. ಸುಧಾಕರ್, ಎಲ್. ಗೋಮತಿ ದೇವಿ, ಆಯೋಜನೆ: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 11

'ಚಂದ್ರಯಾನ–3' ಪೂರ್ಣ ಪ್ರಮಾಣದ ಪ್ರತಿಕೃತಿಯ ಉದ್ಘಾಟನೆ: ಪಿ. ವೀರಮುತ್ತುವೇಲ್, ಉಪಸ್ಥಿತಿ: ಎಂ. ವನಿತಾ, ನಿಗರ್ ಶಾಜಿ, ಆಯೋಜನೆ ಮತ್ತು ಸ್ಥಳ: ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಕಸ್ತೂರಿ ಬಾ ರಸ್ತೆ, ಬೆಳಿಗ್ಗೆ 11

ಬಿ.ಎ. ಅನ್ನದಾನೇಶ ಅವರ 'ನಾಟಕ ಚರಿತ್ರೆ' ಪುಸ್ತಕ ಬಿಡುಗಡೆ: ಎಸ್. ಆರ್. ವಿಜಯಶಂಕರ್, ಎಚ್.ಎಸ್. ಸತ್ಯನಾರಾಯಣ, ಚಂದ್ರು, ಆಯೋಜನೆ: ಮಹಾರಾಣಿ ಲಕ್ಷ್ಮಿ ಅಮ್ಮಣಿ ಮಹಿಳಾ ವಿದ್ಯಾಲಯ, ಮಲ್ಲೇಶ್ವರ, ಬೆಳಿಗ್ಗೆ 11

ಭಾರತೀಯ ಉತ್ಪಾದನಾ ಪ್ರದರ್ಶನದ (ಐಎಂಎಸ್) ಉದ್ಘಾಟನೆ: ರಾಜನಾಥ್ ಸಿಂಗ್, ಅತಿಥಿಗಳು: ಪ್ರಲ್ಹಾದ್ ಜೋಶಿ, ವಿ. ಮುರಳೀಧರನ್, ಸುಧಾಂಶು ತ್ರಿವೇದಿ, ಬಾಬಾ ಕಲ್ಯಾಣಿ, ಅರುಣ್ ಟಿ. ರಾಮಚಂದನಿ ಆಯೋಜನೆ: ಇಂಡಿಯನ್ ಮ್ಯಾನುಫೆಕ್ಚರಿಂಗ್ ಶೊ, ಏರೋಸ್ಪೇಸ್ ಆ್ಯಡ್ ಡಿಫೆನ್ಸ್ ಎಂಜಿನಿಯರಿಂಗ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ (ಬಿಐಇಸಿ), ಮಧ್ಯಾಹ್ನ 1

ದಸರಾ ಉಪನ್ಯಾಸ ಮಾಲಿಕೆ: 'ಡಿಸ್ಟೆನ್ಸ್ ಲ್ಯಾಡರ್ ಇನ್ ದಿ ಯೂನಿವರ್ಸ್' ಕುರಿತು ಉಪನ್ಯಾಸ: ಶಿವ ಕೆ. ಸೇಥಿ, ಆಯೋಜನೆ: ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್, ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಸಂಜೆ 4ರಿಂದ

ಜ್ಞಾನಪೀಠ ಪುರಸ್ಕೃತ ಚಂದ್ರಶೇಖರ ಕಂಬಾರ ಕುರಿತು ಉಪನ್ಯಾಸ: ಸುಜಾತ ಲಕ್ಷ್ಮೀಪುರ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಹಂ.ಪ. ನಾಗರಾಜಯ್ಯ ಅವರ 'ಚಾರುವಸಂತ' ನಾಟಕ ಪ್ರದರ್ಶನ: ರಂಗರೂಪ: ನಾ.ದಾ. ಶೆಟ್ಟಿ, ನಿರ್ದೇಶನ: ಜೀವನ್ ರಾಂ ಸುಳ್ಯ, ಸಹನಿರ್ದೇಶನ: ಪ್ರಶಾಂತ್ ಶೆಟ್ಟಿಕೋಟ, ಆಯೋಜನೆ: ಆಳ್ವಾಸ್ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

'ಪ್ಯಾಲೆಸ್ಟೀನ್ ಸಮಸ್ಯೆ'ಯ ಒಂದು ಅವಲೋಕನ: ಭಾಷಣಕಾರರು: ಶಿವಸುಂದರ್, ಮೊಹಮ್ಮದ ಸಾದ್ ಬೆಳಗಾಮಿ, ಬಿ.ಟಿ. ವೆಂಕಟೇಶ್, ಲಬೀದ್ ಶಾಫಿ, ಆಯೋಜನೆ: ಸಾಲಿಡಾರಿಟಿ ಯೂಥ್ ಮೂವ್‌ಮೆಂಟ್, ಸ್ಥಳ: ಬಿಫ್ಟ್ ಸಭಾಂಗಣ, ಕ್ವೀನ್ಸ್ ರಸ್ತೆ, ಸಂಜೆ 6.30

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

CONNECT ಕ್ಲಾಸಿಫೈಡ್ಸ್

PUBLIC NOTICE

PUBLIC NOTICE

My client has negotiated to purchase the Schedule Property from its owners **(1) Mrs. Rugmani, (2) Mr. Subramani Veeraraghavan, (3) Mrs. Rama Shankar (4) Mrs. Uma Veeraraghavan, (5) Mr. P.S. Hariharan, (6) Mrs. P.S. Lakshmi (7) Mrs. P.S. Parvathi (8) Mr. P S. Swaminathan (9) Mr. P.S. Rajan** No. 1 to 4 are Wife & children of late P.S. Veeraraghavan & No. 5 to 9 are children of late P.V, Subramanya Iyer. The owners represent that they are the absolute owners of the Schedule Property having inherited from the estate of Late P.V, Subramanya Iyer and they are the only surviving legal heirs of P.V, Subramanya Iyer.

It is represented that P.V, Subramanya Iyer has purchased the Schedule Property under sale deed Dtd. 25/4/1939 Doct. No. 2557/1938-1939.

It is further represented that the owners have lost / Misplaced original sale deed Dtd: 25/4/1939 Doct No. 2557/1938-1939 and all the previous title deeds in respect of the schedule property Any person or persons possessing the original documents or any person/s asserting any right, title, interest or claim in the Schedule Property or any part thereof or objecting the sale transaction may put forth their claim / objections to the undersigned within **10 days** hereof with all documentary proof on which they are basing and asserting their rights with regard to Schedule Property, if no claims or objections being received, my client will complete the Sale Transaction presuming that there are no objections or claims.

SCHEDULE

Immovable Property bearing **Old No. 21, than No.19, New No. 17,** PID No.47-47-17 **Armugam Mudaliar Street, Kalasipalyam Bengaluru- 02** BBMP. Measuring: East to West 48 feet and North to south 25 Feet Bounded on the : **East by : Chinnappas Garden (Private Property), West by : Draupathramma Coil Street Now known as Armugam Mudaliar Street/ A.M Lane, North by : Dr. Armugam Mudaliar House's (Private Property), South by : Bhajana Hall.**

ABDUL AZEEM H.B.,
Advocate
No.10, Serpentine St.,
Richmond Town,
Bangalore – 560025

PUBLIC NOTICE

This is to inform the general public that my clients (1) Sri K.P.Prakash s/o late K.G. Puttaram, aged 82 years, (2) Sri K.P.Madhusudhan, s/o K.P. Prakash, have entered into the Memorandum of Understanding with the original owner Sri Om Prakash Nema s/o S.R.Nema, aged about 68 years. r/a Qtr.No.C-5, NDDB Campus, 80 Feet road. 8th Block, Koramangala, Bengaluru-560 095 in respect of the vacant site bearing No.36.Kattigenahalli Panchayath Khatha No.101 (14,15/1&15/2), present BBMP Khatha No.101/14/15/1/15/2/36, measuring East to West: 60' and North to South: 40' situated at Kattigenahalli village, Jala Hobli, Bangalore North Taluk now Yelahanka Taluk, now comes under the BBMP limits of Yelahanka and in this regard anybody having any objections may raise their objections within 7 days from the date of this public notice and the same may kindly be sent to the undersigned-advocate in writing and failing which, my clients would go ahead with the transaction with said Sri Om Prakash Nema in respect of the above said property by treating that there are no objections from any angle in purchasing the said property.

ADDRESS FOR SERVICE:
Sri Y. N. Sathyanarayana Rao
Advocate
No.13, First Floor,
Sampoorna Chambers
Vasavi Temple Street, V.V. Puram
BENGALURU-560004
Mobile: 9341247316
email:ynsrao1@gmail.com

BUSINESS

Business to Business

Business

OPPORTUNITY TO Earn 1.5 lakh above Per Month. Trade mark, Fssai, MSME and GST registered Branded Dry Fruits Company Wishes to appoint Franchise outlets throughout Bangalore and all districts of Karnataka. Reasonable Investment: 8095059460/ 6360940295

STUCKUP? ANY Central Government work, we assist you with high level contacts. Vamshadhara Project Services: 9342247637

Business Offers

Finance

NRI'S INVESTMENT& Finance Available On Low Interest Against Properties, Land& Building,Sites,Flats,Converted& Agriculture Lands Call:7204995189

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

JOB OPPORTUNITIES

Wanted

WANTED ARCHITECTS with 6 to 7 years of experience for an architect's office. Please contact 9449009325

PERSONAL

Change of Name

I, Shivakumar S S/o.Late. Srikantappa R/a#122, Kurubara Street, Chamundi Hills Mysuru-570010 have Changed my Name from S SHIVAKUMAR to SHIVAKUMAR S Henceforth, I will be`Known as SHIVAKUMAR S vide`affidavit dated`30.10.2023 sworn`before Notary Anuradha.V Mysore

I, VIMAL KARTHIK VENKATRAJ, R/at #310, Royal Park Residency, Opp. Nandi Garden, Avalahalli, J.P Nagar, 9th Phase, Anjanapura, Bengaluru-62 have changed my name to VIMAL KARTHIK L.V, vide affidavit dated 01/11/2023 before notary Veena J., Bangalore.

RENTAL PROPERTIES

Accommodation Available

Paying Guest

INDIRANAGAR/ CAMBRIDGE/ Terrace/ Room/ Furnished attached both. Single or Double occupancy. 15,000/- Owner 9886346216, 9620901776

REAL ESTATE SELLING

Commerical

Marathahalli

SALE: 5700 Sqft, Commercial Site FOR SALE, Near Varthur, WEST Facing, 'B' Khatha in BBMP limit. Contact- 9353532040

Sites

Chikkaballapura

CHIKKABALLAPUR SITES 30x40 with 1800 sft constructed villas, 40' Roads Approved by Chikkaballapur Town Planning Authority, 70 Lakhs. Vamshadhara Projects- 9342247637.

DH DECCAN HERALD Classifieds | ಪ್ರಜಾವಾಣಿ

More value, more impact

NAME CHANGE

Tell us your New Name!

Book your AD WITH US NOW!

www.dhclassifieds.com

BOOK NOW

For more details contact:

+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

‘ಕಾವೇರಿ ನೀರು ಬಳಕೆಗೆ ನೀಲ ನಕ್ಷೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಮುಂಗಾರು ಕೈಕೊಟ್ಟಿರುವುದರಿಂದ ಕಾವೇರಿ ಜಲಾನಯನ ವ್ಯಾಪ್ತಿಯಲ್ಲಿರುವ ಜಲಾಶಯಗಳಲ್ಲಿ ನೀರಿನ ಮಟ್ಟ ಶೇ 50 ಕ್ಕಿಂತಲೂ ಕಡಿಮೆ ಇದ್ದು, ಮುಂದಿನ ಮಳೆಗಾಲದವರೆಗೆ ಈಗ ಲಭ್ಯವಿರುವ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ನೀಲ ನಕ್ಷೆ ತಯಾರಿಸಬೇಕು’ ಎಂದು ಬಿಜೆಪಿ ಶಾಸಕ ಎಸ್.ಸುರೇಶ್‌ಕುಮಾರ್ ಅವರು ಒತ್ತಾಯಿಸಿದ್ದಾರೆ.

ಈ ಸಂಬಂಧ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರವೊಂದನ್ನು ಬರೆದಿದ್ದಾರೆ.

ಮುಂದಿನ 15 ದಿನಗಳ ಕಾಲ ತಮಿಳುನಾಡಿಗೆ ಪ್ರತಿ ದಿನ 2,600 ಕ್ಯೂಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ರಾಜ್ಯಕ್ಕೆ ಸೂಚನೆ ನೀಡಿ ದೊಡ್ಡ ಶಾಕ್ ನೀಡಿದೆ. ಸಮಿತಿಯ ಆದೇಶ ಕುಡಿಯುವ ನೀರಿನ ಸರಬರಾಜಿಗೆ, ವಿಶೇಷವಾಗಿ ಬೆಂಗಳೂರು ನಗರದ ನಾಗರಿಕರಿಗೆ ದೊಡ್ಡ ಆತಂಕವನ್ನು ತಂದೊಡ್ಡಿದೆ ಎಂದು ಹೇಳಿದ್ದಾರೆ.

ಪತ್ರದ ಪ್ರಮುಖ ಅಂಶಗಳು:

- ಕೂಡಲೇ ಬೆಂಗಳೂರು ನಗರದ ಶಾಸಕರಿಗೆ ಕುಡಿಯುವ ನೀರಿನ ಸರಬರಾಜಿನ ಪರಿಸ್ಥಿತಿ ಕುರಿತು ಸ್ಪಷ್ಟೀಕರಣ ನೀಡಬೇಕು. ಮುಂದಿನ ಜೂನ್‌ವರೆಗೆ ನಗರಕ್ಕೆ ಬೇಕಾಗುವ ಕುಡಿಯುವ ನೀರಿನ ಪ್ರಮಾಣ ಮತ್ತು ಲಭ್ಯತೆ ಇರುವ ನೀರಿನ ಪ್ರಮಾಣದ ಸ್ಪಷ್ಟೀಕರಣ ಅಗತ್ಯವಿದೆ.
- ಮುಂದಿನ ಜೂನ್‌ವರೆಗೂ ಕುಡಿಯುವ ನೀರು ಸರಬರಾಜು ಮಾಡಲು ಬೆಂಗಳೂರು ಜಲಮಂಡಳಿ ಹಾಕಿಕೊಂಡಿರುವ ಯೋಜನೆಗಳ ಕುರಿತು ವಿವರಣೆ ನೀಡಬೇಕು.
- ಹಿಂದೆಲ್ಲ ಮಾಡಿದಂತೆ, ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಎಲ್ಲಾ ಖಾಸಗಿ ಟ್ಯಾಂಕರ್‌ಗಳನ್ನು ಸರ್ಕಾರವೇ ತೆಗೆದುಕೊಂಡು ಆರ್‌ಟಿಒ ಮೂಲಕ ವಿವಿಧ ಕ್ಷೇತ್ರಗಳಿಗೆ ಹಂಚುವುದು ಅಗತ್ಯವಿದೆ.
- ವಾಣಿಜ್ಯ ಉದ್ದೇಶಗಳಿಗಾಗಿ ಉಪಯೋಗಿಸುತ್ತಿರುವ ಖಾಸಗಿ ಕೊಳವೆ ಬಾವಿಗಳನ್ನು ಬೆಂಗಳೂರು ನಾಗರಿಕರ ಉಪಯೋಗಕ್ಕಾಗಿ ಸರ್ಕಾರ ಮುಂದಿನ 9 ತಿಂಗಳ ಮಟ್ಟಿಗೆ ವಶಕ್ಕೆ ತೆಗೆದುಕೊಳ್ಳಬೇಕು. ಕೆಟ್ಟು ನಿಂತಿರುವ ಎಲ್ಲ ಕೊಳವೆ ಬಾವಿಗಳ ತುರ್ತು ದುರಸ್ತಿ ಮಾಡಬೇಕಿದೆ.

ಈಶ್ವರಪ್ಪ ಸೇರಿ ಮೂವರಿಗೆ ವರಿಷ್ಠರ ಬುಲಾವ್

ಬೆಂಗಳೂರು: ಬಿಜೆಪಿಯ ಹಿರಿಯ ನಾಯಕ ಕೆ.ಎಸ್.ಈಶ್ವರಪ್ಪ, ವಿಧಾನ ಪರಿಷತ್ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಮತ್ತು ಸಂಸದ ಪಿ.ಸಿ. ಮೋಹನ್ ಅವರನ್ನು ದೆಹಲಿಗೆ ಬರುವಂತೆ ವರಿಷ್ಠರು ಸೂಚಿಸಿದ್ದಾರೆ.

ವರಿಷ್ಠರನ್ನು ಭೇಟಿಯಾಗಲು ಗುರುವಾರವೇ ಮೂವರು ದೆಹಲಿಗೆ ತೆರಳಲಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಈಶ್ವರಪ್ಪ, ‘ಪಕ್ಷದಿಂದ ಕರೆ ಬಂದಿರುವುದು ನಿಜ. ಆದರೆ, ಕಾರಣ ತಿಳಿಸಿಲ್ಲ’ ಎಂದರು.

ಅಂತರ ಕಾಲೇಜು ಕ್ರೀಡಾಕೂಟ ನ.4 ರಿಂದ

ಹಾಸನ: ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವ್ಯಾಪ್ತಿಯ 17ನೇ ಅಂತರ ಮಹಾವಿದ್ಯಾಲಯಗಳ ಕ್ರೀಡಾಕೂಟವನ್ನು ನ.4 ರಿಂದ 8 ರ ವರೆಗೆ ಇಲ್ಲಿನ ಪಶು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಅಯೋಜಿಸಲಾಗಿದೆ.

ಬೀದರ್, ಬೆಂಗಳೂರು, ಶಿವಮೊಗ್ಗ, ಹಾಸನ, ಗದಗ ಪಶುವೈದ್ಯಕೀಯ ಕಾಲೇಜುಗಳು, ಮಂಗಳೂರಿನ ಮೀನುಗಾರಿಕಾ ಮಹಾವಿದ್ಯಾಲಯ, ಬೆಂಗಳೂರು ಮತ್ತು ಕಲಬುರಗಿಯ ಹೈನುಗಾರಿಕೆ ಮಹಾವಿದ್ಯಾಲಗಳ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.



Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9844478636; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

1. ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಹೆಸರಘಟ್ಟದ ಲಿಲ್ಲಿರೋಸ್ ಪ್ರೌಢಶಾಲೆಯ ವಿದ್ಯಾರ್ಥಿಗಳು ನಾಡದೇವಿ ಹಾಡಿಗೆ ನೃತ್ಯ ಪ್ರದರ್ಶನ ಮಾಡಿದರು. 2. ಸಮಾರಂಭದಲ್ಲಿ ಎನ್‌ಸಿಸಿ ಕೆಡೆಟ್‌ಗಳು ಪಥಸಂಚಲನ ಮಾಡಿದರು. 3. ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಲಾವಿದರು ಪ್ರದರ್ಶಿಸಿದ ಡೊಳ್ಳು ಕುಣಿತವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ವೀಕ್ಷಿಸಿದರು —ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ

ರಾಜ್ಯೋತ್ಸವ ಸಂಭ್ರಮ • ಎತ್ತ ನೋಡಿದರೂ ಹಳದಿ–ಕೆಂಪು ಬಾವುಟಗಳ ಹಾರಾಟ

ಎಲ್ಲೆಡೆ ಮೊಳಗಿದ ಕನ್ನಡ ಡಿಂಡಿಮ

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಕಲಾವಿದೆ ದಿವ್ಯಾ ಕನ್ನಡ ಧ್ವಜ ಪ್ರದರ್ಶಿಸಿದರು

ಗಂಗಾನಗರ ಬಡಾವಣೆಯ ಗೆಳೆಯರ ಬಳಗ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ವೈ.ಎ. ನಾರಾಯಣಸ್ವಾಮಿ ಧ್ವಜಾರೋಹಣ ನೆರವೇರಿಸಿದರು.

ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ಸಂಸ್ಥೆಯ ಅಧ್ಯಕ್ಷ ಸುಕುಮಾರ್ ಕೆ., ಉಪಾಧ್ಯಕ್ಷ ಎಸ್‌ಸಿ. ಚಂದ್ರಶೇಖರ್, ಗೌರವ ಕಾರ್ಯದರ್ಶಿ ಲಕ್ಷ್ಮೀಶ ಚಂದ್ರ, ಗೌರವ ಖಜಾಂಚಿ ವಿರೂಪಾಕ್ಷಪ್ಪ ಬಿ.ಪಿ. ಇದ್ದರು.

ಮಾರತ್‌ಹಳ್ಳಿಯ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು.

ರಸ್ತೆ ಸಾರಿಗೆ ನಿಗಮದ ಕಚೇರಿಯಲ್ಲಿ ನಡೆದ ರಾಜ್ಯೋತ್ಸವ ಕಾರ್ಯಕ್ರಮವನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಚಾಲನೆ ನೀಡಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಣ್ಣು ಹಾಯಿಸಿದೆಲ್ಲಡೆ ಕನ್ನಡದ ಅನುರಣನ... ರಾರಾಜಿಸಿದ ಕನ್ನಡ ಬಾವುಟಗಳು.. ನಾಡು-ನುಡಿಯ ಹಿರಿಮೆ ಸಾರುವ ಗೀತೆಗಳು... !

ಬುಧವಾರ ನಗರದಲ್ಲಿ 68ನೇ ಕರ್ನಾಟಕ ರಾಜ್ಯೋತ್ಸವವನ್ನು ಕನ್ನಡಾಭಿಮಾನಿಗಳು ಆಚರಿಸಿದ ಪರಿ ಇದು.

ಎತ್ತ ನೋಡಿದರೂ ಹಳದಿ-ಕೆಂಪು ಬಾವುಟಗಳ ಹಾರಾಟ, ಶಲ್ಯಗಳ ತೂರಾಟ, ಆಟೊ, ದ್ವಿಚಕ್ರ ವಾಹನಗಳ ಮೇಲೆ ರಾರಾಜಿಸಿದ ಕನ್ನಡ ಧ್ವಜ, ಕೆಂಪೇಗೌಡ ರಸ್ತೆ, ಜೆ.ಸಿ. ರಸ್ತೆ, ಮೈಸೂರು ಬ್ಯಾಂಕ್ ವೃತ್ತಗಳಲ್ಲಿ ತಾಯಿ ಭುವನೇಶ್ವರಿ ದೇವಿಯ ಭಾವಚಿತ್ರ ಹೊತ್ತ ಮೆರವಣಿಗೆಗಳು, ಮೆಟ್ರೊ ರೈಲುಗಳಲ್ಲಿ ವಿಧಾನಸೌಧದತ್ತ ಧಾವಿಸುತ್ತಿದ್ದ ಅಭಿಮಾನಿಗಳಿಂದ ನಾಡದೇವಿಗೆ ಗೌರವ, ಸಿಂಗಾರಗೊಂಡ ನಗರದ ಬಸ್‌ಗಳು, ಕಾರುಗಳು, ರಿಕ್ಷಾಗಳು, ದ್ವಿಚಕ್ರ ವಾಹನಗಳು, ಹೋಟೆಲು, ಕಚೇರಿಗಳಲ್ಲಿ ಎಲ್ಲೆಲ್ಲೂ ನಾಡು-ನುಡಿಯ ಅಭಿಮಾನದ ಸಂಭ್ರಮ ಮನೆ ಮಾಡಿತ್ತು.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಗರದ ವಿವಿಧ ಶಾಲೆಗಳ ಸಾವಿರಾರೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕ್ರೀಡಾಂಗಣದ ತುಂಬೆಲ್ಲ ಹಳದಿ-ಕೆಂಪು ಬಣ್ಣದ ಬಾವುಟಗಳು ರಾರಾಜಿಸುತ್ತಿದ್ದವು.

ವಿದ್ಯಾರ್ಥಿಗಳಿಂದ ಆಕರ್ಷಕ ಪಥಸಂಚಲನ: ನಗರದ 12 ಶಾಲೆಗಳ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಆಕರ್ಷಕ ಪಥಸಂಚಲನ ಮಾಡಿದರು. ಕೆ.ಪಿ.ಎಸ್. ಉತ್ತರಹಳ್ಳಿ ಶಾಲೆ, ಕಾರ್ಮೆಲ್ ಕಾನ್ವೆಂಟ್, ಲಿಟಲ್ ಏಂಜೆಲ್ಸ್ ಶಾಲೆ, ಅಚೀವ್ ಶಾಲೆ, ಅನೇಕಲ್‌ನ ಎಸ್.ಎಸ್.ಆರ್. ಎಸ್. ಕಾರ್ಮೆಲ್ ಶಾಲೆ, ಲಿಟಲ್ ಬ್ಲೂಮ್ ಶಾಲೆ ವಿದ್ಯಾರ್ಥಿಗಳು ಬ್ಯಾಂಡ್ ತುಕಡಿಗಳು ಎಲ್ಲರ ಕಣ್ಮನ ಸೆಳೆದವು.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಪಿಎಸ್ ಕಗ್ಗಲಿಪುರ ಶಾಲೆಯ 500 ವಿದ್ಯಾರ್ಥಿಗಳು ಸಿರಿಗನ್ನಡಂ ಗೆಲ್ಗೆ ಹಾಡಿಗೆ ನೃತ್ಯ ಪ್ರಸ್ತುಪಡಿಸಿದರು. ಹೆಸರಘಟ್ಟದ ಲಿಲ್ಲಿರೋಸ್ ಪ್ರೌಢಶಾಲೆಯ 500 ವಿದ್ಯಾರ್ಥಿಗಳು ನಾಡದೇವಿ ಹಾಡಿಗೆ ನೃತ್ಯ ಪ್ರದರ್ಶಿಸಿದರು. ಬಸವಾದಿ ಶರಣರು, ಕಿತ್ತೂರು ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಸಾಹಿತಿಗಳು, ನಟರಾದ ರಾಜ್‌ಕುಮಾರ್, ಶಂಕರ್‌ನಾಗ್, ಸಾಲುಮರದ ತಿಮ್ಮಕ್ಕ ಅವರ ಭಾವಚಿತ್ರಗಳು ಅಲ್ಲಲ್ಲಿ ರಾರಾಜಿಸುತ್ತಿದ್ದವು.

ಕನ್ನಡ ಗೆಳೆಯರ ಬಳಗ: ನೀರು, ನೆಲ, ಗಡಿಗಳ ವಿಷಯದಲ್ಲಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯಕ್ಕೆ ಇದುವರೆಗೂ ತೆರೆ ಎಳೆಯಲು ಆಗಿಲ್ಲ' ಎಂದು ಶಿಕ್ಷಣ ಇಲಾಖೆ ನಿವೃತ ಜಂಟಿ ನಿರ್ದೇಶಕ ಆರ್. ಲಕ್ಷ್ಮೀನಾರಾಯಣ ಹೇಳಿದರು. 'ಕನ್ನಡ ಗೆಳೆಯರ ಬಳಗ' ಆಯೋಜಿಸಿದ್ದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಾವೇರಿ, ಮಹದಾಯಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುಮತಿ ನೀಡುತ್ತಿಲ್ಲ. ಗಡಿ ವಿವಾದಕ್ಕೆ ಸಂಬಂಧಿಸಿ ದಂತೆ ಮಹಾಜನ್ ವರದಿಯೇ ಅಂತಿಮ ಎಂದು ಘೋಷಿಸುತ್ತಿಲ್ಲ' ಎಂದರು. ಆರ್. ಶೇಷಶಾಸ್ತ್ರಿ, ರಾ.ನಂ. ಚಂದ್ರಶೇಖರ ಇದ್ದರು.

ಹಳೆಯ ವಿದ್ಯಾರ್ಥಿಗಳು: ಸೆಂಟ್ರಲ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ಕಚೇರಿ ಆವರಣದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವದಲ್ಲಿ ನಿವೃತ್ತ ಪ್ರಾಧ್ಯಾಪಕಿ ಶ್ಯಾಮಲಾ ರತ್ನಕುಮಾರಿ ಅವರು ಧ್ವಜಾರೋಹಣ ನೆರವೇರಿಸಿದರು.

ಸಂಘದ ಅಧ್ಯಕ್ಷ ಕೆ. ಶ್ರೀನಿವಾಸನ್, ಕಾರ್ಯದರ್ಶಿ ಎಂ.ವಿ. ಮುನಿರತ್ನಪ್ಪ, ಖಜಾಂಚಿ ಡಿ.ನಂ. ವೆಂಕಟರಮಣಯ್ಯ, ವಸಂತ ಕವಿತಾ ಇದ್ದರು.

ಬೆಂಗಳೂರು ವಿವಿ: ಬೆಂಗಳೂರು ವಿಶ್ವವಿದ್ಯಾಲದಲ್ಲಿ ರಾಜ್ಯೋತ್ಸವ ಆಚರಿಸಲಾಯಿತು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ. ಜಯಕರ ಕಾರ್ಯಕ್ರಮ ಉದ್ಘಾಟಿಸಿದರು. ಕುಲಸಚಿವರಾದ ಶೇಖ ಲತೀಫ್, ಮೌಲ್ಯಮಾಪನ ಕುಲಸಚಿವ ಶ್ರೀನಿವಾಸ್ ಇದ್ದರು.

ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ: ಮಾರತ್‌ಹಳ್ಳಿಯಲ್ಲಿರುವ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ ರಾಜ್ಯೋತ್ಸವವನ್ನು ಆಚರಿಸಲಾಯಿತು. ಕಾಲೇಜಿನ ಉಪಪ್ರಾಂಶುಪಾಲರಾದ ಬಿ.ನರಸಿಂಹ ಧ್ವಜಾರೋಹಣ ನೆರವೇರಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕೇಂದ್ರ ಕಚೇರಿ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕೇಂದ್ರ ಕಚೇರಿಯಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಚಾಲನೆ ನೀಡಿದರು. ನಿರ್ದೇಶಕಿ ನಂದಿನಿ ದೇವಿ, ಹಾಗೂ ಸಿಬ್ಬಂದಿಗಳು ಇದ್ದರು.

'ಕಸಾಪ ಕನ್ನಡಿಗರ ಆಶಯಗಳನ್ನು ಪ್ರತಿನಿಧಿಸಲಿದೆ'

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಆಯೋಜಿಸಿದ್ದ 'ಹೆಸರಾಯಿತು ಕರ್ನಾಟಕ-50' ಕಾರ್ಯಕ್ರಮವನ್ನು ಮುಖ್ಯ ಮಾಹಿತಿ ಆಯುಕ್ತ ಎನ್.ಸಿ. ಶ್ರೀನಿವಾಸ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಕನ್ನಡ ಭಾಷೆಯ ಮೇಲೆ ಅನ್ಯರ ದಬ್ಬಾಳಿಕೆಯನ್ನು ಖಂಡಿಸಬೇಕು' ಎಂದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, 'ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಆಶಯಗಳನ್ನು ಪ್ರತಿನಿಧಿಸಲಿದೆ. ಕರ್ನಾಟಕ ಎಂಬ ಹೆಸರಿನ ಸಂಭ್ರಮದ ನಿಮಿತ್ಯ ಐದು ಪ್ರಶಸ್ತಿ ನೀಡುವ ಬಗ್ಗೆ ತಾತ್ವಿಕವಾಗಿ ನಿರ್ಧರಿಸಲಾಗಿದೆ. ಉನ್ನತಮಟ್ಟದ ಸಮಿತಿ ರಚಿಸಿ ಯಾವುದೇ ಅರ್ಜಿ–ಮರ್ಜಿಗಳ ಶಿಫಾರಸ್ಸಿಗೆ ಅವಕಾಶವಿಲ್ಲದೇ ಪಾರದರ್ಶಕವಾಗಿ ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು. ಟಿ.ವಿ. ವೆಂಕಟಾಚಲ ಶಾಸ್ತ್ರಿ ಅವರ 'ನಮ್ಮ ಕರ್ನಾಟಕ' ಎಂಬ ಪುಸ್ತಕ, ಹೆಸರಾಯಿತು ಕರ್ನಾಟಕ–50ರ ವಿಶೇಷ ಸಂಚಿಕೆ ಮತ್ತು ಕನ್ನಡ ನುಡಿ ಆ್ಯಪ್ ಅನ್ನು ಬಿಡುಗಡೆಗೊಳಿಸಲಾಯಿತು.

ಕರ್ನಾಟಕ ಏಕೀಕರಣದ ಹೋರಾಟದಲ್ಲಿ ವೀರ ಮರಣ ಹೊಂದಿದ ಬಳ್ಳಾರಿಯ ರಂಜಾನ್ ಸಾಬ್ ಅವರ ಮೊಮ್ಮಗ ಶರ್ಮಾಸ್ ವಲಿ ಅವರನ್ನು ಸನ್ಮಾನಿಸಲಾಯಿತು.

ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರು 'ಒಂದೇ ಒಂದೇ ಕರ್ನಾಟಕ ಒಂದೇ' ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಟಿ.ವಿ. ವೆಂಕಟಾಚಲ ಶಾಸ್ತ್ರಿ ಅವರ 'ನಮ್ಮ ಕರ್ನಾಟಕ' ಎಂಬ ಪುಸ್ತಕ, ಹೆಸರಾಯಿತು ಕರ್ನಾಟಕ–50ರ ವಿಶೇಷ ಸಂಚಿಕೆ ಬಿಡುಗಡೆಗೊಳಿಸಲಾಯಿತು. ಮಹೇಶ ಜೋಶಿ, ಎನ್‌ಸಿ. ಶ್ರೀನಿವಾಸ ಇದ್ದಾರೆ.

68 ಸಾಧಕರಿಗೆ ಪ್ರಶಸ್ತಿ ಪ್ರದಾನ

'ಭುವನೇಶ್ವರಿ ಹೆಸರಿನಲ್ಲಿ ಕನ್ನಡ ಭವನ'

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: 'ಈಗ ಇರುವ ಕನ್ನಡ ಭವನ ಚಿಕ್ಕದಾಗಿದೆ. ಕರ್ನಾಟಕ ನಾಮಕರಣದ 50 ನೇ ವರ್ಷದ ಸ್ಮರಣಾರ್ಥ ಭುವನೇಶ್ವರಿ ಹೆಸರಿನಲ್ಲಿ ಕನ್ನಡ ಭವನ ನಿರ್ಮಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ತಿಳಿಸಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಬುಧವಾರ ಸಂಜೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಮ್ಮಿಕೊಂಡ 2023ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ 68 ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಪ್ರಶಸ್ತಿ ಆಯ್ಕೆ ಸಲಹಾ ಸಮಿತಿ ಪಾರದರ್ಶಕವಾಗಿ ಕಾರ್ಯನಿರ್ವಹಿಸಿತು. ಇದರಿಂದ ವಿವಿಧ ಕ್ಷೇತ್ರಗಳಲ್ಲಿ ಅರ್ಹ ಸಾಧಕರನ್ನು ಆಯ್ಕೆ ಮಾಡಲು ಸಾಧ್ಯವಾಯಿತು

ಶಿವರಾಜ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಸಚಿವ

ಕನ್ನಡ ಇಡೀ ವಿಶ್ವಕ್ಕೆ ಪರಿಚಯ ಆಗಿದೆ. ಮುಂದಿನ ದಿನಗಳಲ್ಲಿ ಕರ್ನಾಟಕದ ನೆಲ, ಜಲ ರಕ್ಷಿಸಲು ಪಣ ತೊಟ್ಟಿದ್ದೇವೆ.

ಜಿ. ಪರಮೇಶ್ವರ, ಗೃಹ ಸಚಿವ

'ಇಡೀ ರಾಜ್ಯದಲ್ಲಿ ಕನ್ನಡದ ವಾತಾವರಣ ಇರಬೇಕು. ಕನ್ನಡದ ಅನಿವಾರ್ಯತೆ ಸೃಷ್ಟಿ ಮಾಡುವುದು ಕನ್ನಡಿಗರ ಜವಾಬ್ದಾರಿ. ರಾಜ್ಯದಲ್ಲಿ ಬಹಳಷ್ಟು ಮಂದಿ ಪ್ರಶಸ್ತಿಗೆ ಅರ್ಹರು ಇದ್ದಾರೆ. ಸಲಹಾ ಸಮಿತಿ ಶಿಫಾರಸು ಮಾಡಿದ ಹೆಸರಲ್ಲೇ ಶೇ 95 ರಷ್ಟು ಮಂದಿಯನ್ನು ಆಯ್ಕೆ ಮಾಡಲಾಗಿದೆ' ಎಂದರು.

'ಸಾಮಾಜಿಕ ನ್ಯಾಯ ನಮ್ಮ ಆದ್ಯತೆ. ಮಹಿಳಾ ಸಬಲೀಕರಣಕ್ಕಾಗಿ ಪ್ರಾರಂಭಿಸಿದ ಶಕ್ತಿ ಯೋಜನೆಯಡಿ ಈವರೆಗೆ 86 ಕೋಟಿ ಮಹಿಳೆಯರು ಓಡಾಡಿದ್ದಾರೆ' ಎಂದು ಹೇಳಿದರು.

ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್, ಕವಿ ಸುಬ್ಬು ಹೊಲೆಯಾರ್, ರಂಗನಿರ್ದೇಶಕ ಚಿದಂಬರರಾವ್ ಜಂಬೆ, ಯಕ್ಷಗಾನ ಭಾಗವತರಾದ ಲೀಲಾವತಿ ಬೈಪಡಿತ್ತಾಯ, ಚಲನಚಿತ್ರ ನಟ ಡಿಂಗ್ರಿ ನಾಗರಾಜ್ ಸೇರಿ 68 ಮಂದಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹5 ಲಕ್ಷ ನಗದು ಮತ್ತು 25 ಗ್ರಾಂ ಚಿನ್ನದ ಪದಕವನ್ನು ಒಳಗೊಂಡಿದೆ.

ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಈ ಸಮಾರಂಭದಲ್ಲಿ ಜನರು ಕಿಕ್ಕಿರಿದು ಸೇರಿದ್ದರಿಂದ, ಹಲವರು ನಿಂತುಕೊಂಡೇ ಕಾರ್ಯಕ್ರಮ ವೀಕ್ಷಿಸಬೇಕಾಯಿತು. 7.30ಕ್ಕೆ ನಿಗದಿಯಾಗಿದ್ದ ಪ್ರಶಸ್ತಿ ಪ್ರದಾನ ಕಾರ್ಯಕ್ರಮ, 7 ಗಂಟೆಗೆ ಪ್ರಾರಂಭವಾದದ್ದು ವಿಶೇಷ. ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದ್ದರು.

ಕನ್ನಡದಲ್ಲಿ ಮಾತನಾಡಿದ ಸೋಮನಾಥ್

ಇಸ್ರೊ ಅಧ್ಯಕ್ಷ ಸೋಮನಾಥ್ ಅವರು ಕನ್ನಡದಲ್ಲಿಯೇ ಮಾತನಾಡಿ ಗಮನ ಸೆಳೆದರು. 'ಈ ಪ್ರಶಸ್ತಿ ಇಸ್ರೊದ ಎಲ್ಲ ಉದ್ಯೋಗಿಗಳಿಗೆ ಸಲ್ಲುತ್ತದೆ. ಅವರ ಪರವಾಗಿ ಸ್ವೀಕರಿಸಿದ್ದೇನೆ. ಚಂದ್ರಯಾನ–3 ದೇಶದ ಮಹತ್ವದ ಯೋಜನೆ. ಅದನ್ನು ಯಶಸ್ವಿಗೊಳಿಸಲು ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳು' ಎಂದು ಹೇಳಿದರು

ಪರಭಾಷಿಕರಿಗೆ ಕನ್ನಡ ಕಲಿಸಿ: ಚಟ್ನಳ್ಳಿ ಮಹೇಶ

ಪೀಣ್ಯ ದಾಸರಹಳ್ಳಿ: ಎಲ್ಲ ಭಾಷೆಗಳನ್ನು ಕಲಿಯಬೇಕು. ಕನ್ನಡವನ್ನು ಪ್ರೀತಿಸಬೇಕು, ಗೌರವಿಸಬೇಕು ಎಂದು ಸಾಹಿತಿ ಚಟ್ನಳ್ಳಿ ಮಹೇಶ ಹೇಳಿದರು.

ಕರ್ನಾಟಕ ಆಂಟಿ ಬಯೋಟಿಕ್ಸ್ ಮತ್ತು ಫಾರ್ಮಾಸೆಟಿಕಲ್ಸ್‌ನ ಕಪಿಲ ಕನ್ನಡ ಸಂಘ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಯಾವುದೇ ವಸ್ತುಗಳನ್ನು ಖರೀದಿಸಿದರೂ ಅವು ಸವೆದು ಹೋಗುತ್ತವೆ. ಆದರೆ ಭಾಷೆ ಕಲಿತಷ್ಟು, ಕಲಿಸಿದಷ್ಟು ಖ್ಯಾತಿ ಪಡೆಯುತ್ತದೆ' ಎಂದರು.

ಕಪಿಲ ಕನ್ನಡ ಸಂಘ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಚಟ್ನಳ್ಳಿ ಮಹೇಶ್ ಚಾಲನೆ ನೀಡಿದರು. ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ ಇದ್ದಾರೆ.

ಸುಗಮ ಸಂಗೀತ ಸಾಧಕರ ಕಡೆಗಣನೆ: ಮುದ್ದುಕೃಷ್ಣ

ಬೆಂಗಳೂರು: 'ಈ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯಲ್ಲಿ ಸುಗಮ ಸಂಗೀತ ಕ್ಷೇತ್ರದ ಸಾಧಕರನ್ನು ಕಡೆಗಣಿಸಲಾಗಿದೆ' ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕನ್ನಡ ಕಾವ್ಯ ಕಣಜವನ್ನು ಜಗತ್ತಿಗೆ ಪರಿಚಯಿಸುವ ಕೆಲಸವನ್ನು ಸುಗಮಸಂಗೀತ ಕ್ಷೇತ್ರ ಮಾಡುತ್ತಾ ಬಂದಿದೆ. ಈ ಕ್ಷೇತ್ರದವರು ನಾಡಿಗೆ ಕೀರ್ತಿ ತಂದುಕೊಟ್ಟಿದ್ದು, ಹಲವು ಸಾಧಕರು ನಮ್ಮ ಮುಂದೆ ಇದ್ದಾರೆ. ಆದರೆ, ಈ ಬಾರಿ ಪ್ರಶಸ್ತಿ ಆಯ್ಕೆಯಲ್ಲಿ ಈ ಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸಿರುವುದು ಖಂಡನೀಯ' ಎಂದು ಹೇಳಿದ್ದಾರೆ.

ವೈ.ಕೆ. ಮುದ್ದುಕೃಷ್ಣ

'ಸಾಹಿತ್ಯ ಓದಿ, ಸಂಸ್ಕೃತಿ ಆಚರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಓದಿ, ಸಂಸ್ಕೃತಿ ಆಚರಿಸಬೇಕು. ಭಾಷೆ ಮೇಲೆ ಅಭಿಮಾನವಿರಬೇಕು, ನಮ್ಮ ಕಲೆಗಳನ್ನು ಪ್ರೋತ್ಸಾಹಿಸಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

'ನಮ್ಮ ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಭಾಷೆಯ ಪರಂಪರೆ ಮುಂದುವರಿಸಬೇಕಾದರೆ ನಾವು ಅದನ್ನು ಆಚರಿಸಬೇಕು' ಎಂದರು.

ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಧ್ವಜಾರೋಹಣ ನೆರವೇರಿಸಿ, ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಕಚೇರಿಯ ಮುಂಭಾಗದಲ್ಲಿ ಕೆಂಪು ಮತ್ತು ಹಳದಿ ಬಣ್ಣದಲ್ಲಿ ಕರ್ನಾಟಕದ ನಕ್ಷೆಯ ರಂಗೋಲಿಗಳನ್ನು ಬಿಡಿಸಿ, 'ಕರ್ನಾಟಕ ಸಂಭ್ರಮ-50 ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಎಂಬ ಘೋಷವಾಕ್ಯ ಬರೆಯಲಾಗಿತ್ತು.

ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್, ಶಿವಾನಂದ ಕಲ್ಕೆರಿ, ಡಾ. ಕೆ. ಹರೀಶ್ ಕುಮಾರ್, ರೆಡ್ಡಿ ಶಂಕರ ಬಾಬು, ಪ್ರೀತಿ ಗೆಹ್ಲೋಟ್, ಪೂರ್ವ ವಲಯ ಆಯುಕ್ತರಾದ ಸ್ನೇಹಲ್, ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ಜಂಟಿ ಆಯುಕ್ತರಾದ ಪ್ರತಿಭಾ, ಪಲ್ಲವಿ, ಉಪ ಆಯುಕ್ತ ಮಂಜುನಾಥ ಸ್ವಾಮಿ ಇದ್ದರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಧ್ವಜಾರೋಹಣ ನೆರವೇರಿಸಿ, ಗೀತಗಾಯನದಲ್ಲಿ ಭಾಗವಹಿಸಿದ್ದರು

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಟಿ.ಎಸ್ ನಾಗಾಭರಣ

'ಸರ್ಕಾರಗಳಿಗಿಲ್ಲ ಕನ್ನಡ ಪರ ಕಾಳಜಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ನಾಮಕರಣದ ಸುವರ್ಣ ಮಹೋತ್ಸವ ಆಚರಿಸಲಾಗುತ್ತಿದೆ. ಈ 50 ವರ್ಷಗಳಲ್ಲಿ ಯಾವ ಸರ್ಕಾರವೂ ಕನ್ನಡದ ಬಗ್ಗೆ ನಿಜವಾದ ಕಾಳಜಿ ತೋರಿಸಿಲ್ಲ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಟಿ.ಎಸ್. ನಾಗಾಭರಣ ಬೇಸರ ವ್ಯಕ್ತಪಡಿಸಿದರು.

ವೀರಲೋಕ ಪ್ರಕಾಶನ ನಗರದಲ್ಲಿ ಬುಧವಾರ ಹಮ್ಮಿಕೊಂಡ 'ಹೊತ್ತಿಗೆ ದಿಬ್ಬಣ' ಕಾರ್ಯಕ್ರಮದಲ್ಲಿ ವಿವಿಧ ಲೇಖಕರ ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'ಸಂವಿಧಾನದ ಅಡಿ 18 ರಾಷ್ಟ್ರ ಭಾಷೆಗಳು ಗುರುತಿಸಲ್ಪಟ್ಟಿದ್ದರೂ ಸಮಾನ ಸವಲತ್ತುಗಳು ಎಲ್ಲ ಭಾಷೆಗೆ ದೊರೆತಿಲ್ಲ. ಇಲ್ಲಿನ ಸರ್ಕಾರಗಳೂ ಕನ್ನಡದ ಕೆಲಸಗಳನ್ನು ಮಾಡಿಲ್ಲ. ಜನರೇ ಸಾಹಿತ್ಯ, ಸಂಸ್ಕೃತಿ ಹಾಗೂ ಕನ್ನಡವನ್ನು ಕಟ್ಟಿದರು' ಎಂದು ಹೇಳಿದರು.

'ಇವತ್ತು ಕನ್ನಡಿಗರು ಹಾಗೂ ಇಲ್ಲಿನ ಸಂಸ್ಕೃತಿ ಬೇರೆಯದೆ ಆದ ಸಮಸ್ಯೆಗಳನ್ನು ಎದುರಿಸುತ್ತಿವೆ. ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನದಿಂದ ಭಾಷೆ, ಸಂಸ್ಕೃತಿ ಹಾಗೂ ಬದುಕು ಸವೆದು ಹೋಗುತ್ತದೆ. ಇದರಿಂದ ಇನ್ನೊಂದು ರೀತಿಯ ಜೀತಕ್ಕೆ ಒಳಗಾಗಬೇಕಾಗುತ್ತದೆ. ಹೀಗಾಗಿ, ಭವಿಷ್ಯದ ದೃಷ್ಟಿಯಿಂದ ತಂತ್ರಾಂಶದಲ್ಲಿ ಕನ್ನಡ ಬಳಕೆ ಸೇರಿ ವಿವಿಧ ಕನ್ನಡ ಪರ ಕೆಲಸಗಳಿಗೆ ಆದ್ಯತೆ ನೀಡಬೇಕು' ಎಂದು ಅಭಿಪ್ರಾಯಪಟ್ಟರು.

ಸಾಹಿತಿ ಮೊಗಳ್ಳಿ ಗಣೇಶ್, 'ಕನ್ನಡ ಭಾಷೆಯ ಸ್ಥಿತಿಗತಿಯ ಬಗ್ಗೆ ಭಯಪಡಬೇಕಾಗಿಲ್ಲ. ಭಾಷೆ ಒಂದು ಹೊಳೆಯಾಗಿದ್ದು, ನಿರಂತರ ಬದಲಾಗುತ್ತ ಇರುತ್ತದೆ' ಎಂದರು.

ಪ್ಯಾಲೆಸ್ಟೀನ್ ಮತ್ತು ಇಸ್ರೇಲ್ ನಡುವಿನ ಯುದ್ಧದ ಬಗ್ಗೆ ಪ್ರಸ್ತಾಪಿಸಿ, ಪ್ಯಾಲೆಸ್ಟೀನಿಯರ ಹತ್ಯೆಯ ಬಗ್ಗೆ ಬೇಸರ ವ್ಯಕ್ತಪಡಿ ಸಿದ ಸಾಹಿತಿ ಬೊಳುವಾರು ಮಹಮದ್ ಕುಂಞಿ, 'ಇಸ್ರೇಲ್ ಸೈನಿಕರೇ ನೀವು ವೀರಾಧಿವೀರರು. ಯುದ್ಧದಲ್ಲಿ ನೀವು ಸಾವಿರಾರು ಮಕ್ಕಳನ್ನು ಕೊಲ್ಲದಿದ್ದರೆ ಅವರು 15–20 ವರ್ಷಗಳಲ್ಲಿ ಭಯೋತ್ಪಾದಕರಾಗುತ್ತಿದ್ದರು. ಏಕೆಂದರೆ ನಿಮ್ಮ ಪ್ರಕಾರ ಮುಸ್ಲಿಮರೆಲ್ಲ ಭಯೋತ್ಪಾದಕರು. ಆದ್ದರಿಂದ ಅವರು ಎಲ್ಲೆಲ್ಲಿ ಕಾಣುತ್ತಾರೊ ಅಲ್ಲಲ್ಲಿ ಕೊಂದು ಹಾಕಿ. ಮುಸ್ಲಿಮರು ಇಲ್ಲದೆ ಹೋದಾಗ ನಿಮಗೆ ಜಗತ್ತಿನಲ್ಲಿ ಶಾಂತಿ ಸಿಗುತ್ತದೆಯಲ್ಲವೇ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಪ್ಯಾಲೆಸ್ಟೀನ್ ಪರವಾಗಿ ಒಂದು ಸಭಾಂಗಣದಲ್ಲಿ ನಾಲ್ಕು ಮಾತನಾಡಲು ನಾವೇ ಆಯ್ಕೆ ಮಾಡಿದ ರಾಜ್ಯ ಸರ್ಕಾರ ಅವಕಾಶ ನೀಡಲಿಲ್ಲ' ಎಂದು ಅಸಮಾಧಾನ ಹೊರಹಾಕಿದರು.

ವೀರಲೋಕ ಪ್ರಕಾಶನ ಆಯೋಜಿಸಿದ್ದ 'ಹೊತ್ತಿಗೆ ದಿಬ್ಬಣ' ಕಾರ್ಯಕ್ರಮದಲ್ಲಿ ಲೇಖಕಿ ವಿಜಯಾ, ಮೊಗಳ್ಳಿ ಗಣೇಶ್, ಟಿ.ಎಸ್. ನಾಗಾಭರಣ, ಬೊಳುವಾರು ಮಹಮದ್ ಕುಂಞ, ನಿವೃತ್ತ ಪ್ರಾಧ್ಯಾಪಕಿ ಚ. ಸರ್ವಮಂಗಳ ಮತ್ತು ಕೃಷಿ ವಿಜ್ಞಾನಿ ಕೆ.ಎನ್. ಗಣೇಶಯ್ಯ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

11 ಪುಸ್ತಕಗಳು ಬಿಡುಗಡೆ

ಡಿ.ಎಸ್. ಚೌಗಲೆ ಅವರ 'ಜನಮಿತ್ರ ಅರಸು', ಕೌಂಡಿನ್ಯ ನಾಗೇಶ್ ಅವರ 'ವೀರ ಸಿಂಧೂರ ಲಕ್ಷ್ಮಣ', ಅಬ್ದುಲ್ ರಶೀದ್ ಅವರ 'ಹೂವಿನಕೊಲ್ಲಿ', ಡಿ.ಎಸ್. ಶ್ರೀನಿವಾಸ್ ಪ್ರಸಾದ್ ಅವರ 'ಸಹಭಾಷಿಕರ ಕನ್ನಡ ಪ್ರೇಮ', ವಿಕ್ರಮ ಹತ್ವಾರ್ ಅವರ 'ಕಾಗೆ ಮೇಷ್ಟ್ರು', ಸುಧಾ ಆಡುಕಳ ಅವರ 'ನೀಲಿ ಮತ್ತು ಸೇಬು', ರವೀಂದ್ರ ವೆಂಶಿ ಅವರ 'ಚಿತ್ರ ವಿಚಿತ್ರ', ಲಕ್ಷ್ಮಣ ಕೌಂಟೆ ಅವರ 'ಅಮೋಘವರ್ಷ', ಗೀತಾ ಸುನೀಲ್ ಕಶ್ಯಪ್ ಅವರ 'ಕನಸುಗಳ ಶ್ರಾದ್ಧ', ಜಯರಾಮಾಚಾರಿ ಅವರ 'ಹಂಸಾಕ್ಷರ' ಹಾಗೂ ಸಂತೆಬೆನ್ನೂರು ಫೈಜ್ನಟ್ರಾಜ್ ಅವರ 'ನದಿಯೊಂದು ಕಡಲ ಹುಡುಕುತ್ತಾ' ಪುಸ್ತಕ ಬಿಡುಗಡೆಯಾಯಿತು.

ಕಹಳೆಬಂಡೆಯಲ್ಲಿ ಡಿವಿಜಿಗೆ ನುಡಿನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿವಿಜಿ ಕನ್ನಡ ಗೆಳೆಯರ ಬಳಗ ಬಸವನಗುಡಿಯ ಕಹಳೆಬಂಡೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಿವಿಜಿ ಪುತ್ಥಳಿಗೆ ಮಾಲಾರ್ಪಣೆ ಮತ್ತು ನುಡಿನಮನ ಸಲ್ಲಿಸಲಾಯಿತು.

'ಜ್ಞಾಪಕ ಚಿತ್ರಶಾಲೆಯ ಮೂಲಕ ಕನ್ನಡಿಗರು ಮತ್ತು ಹಳೆಯ ಮೈಸೂರನ್ನು ಕಟ್ಟಿಕೊಟ್ಟ ಡಿವಿಜಿ, ಮಂಕುತಿಮ್ಮನ ಕಗ್ಗದ ಮೂಲಕ ಹಂಚಿಕೊಂಡಿರುವ ಅನುಭಾವವು ವಚನಗಳನ್ನು ನೆನಪಿಸುತ್ತದೆ' ಎಂದು ವಚನಜ್ಯೋತಿ ಬಳಗ ಅಧ್ಯಕ್ಷ ಪಿನಾಕಪಾಣಿ ಹೇಳಿದರು.

'ಕನ್ನಡ ಪತ್ರಿಕೋದ್ಯಮಕ್ಕೆ ಅನುಪಮ ಸೇವೆ ಸಲ್ಲಿಸಿರುವ ಡಿವಿಜಿ, ಪ್ರಜಾಪ್ರಭುತ್ವದ ಪ್ರತಿಪಾದಕರಾಗಿದ್ದರು. ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಕನ್ನಡದ ರಥ ಎಳೆದರು. ಅವರು ಕಟ್ಟಿದ ಗೋಖಲೆ ಇನ್‌ಸ್ಟಿಟ್ಯೂಟ್ ಒಂದು ಅನುಭವ ಮಂಟಪ ಎಂದರು.

ಸಾಮಾಜಿಕ ಹೋರಾಟಗಾರ್ತಿ ಕೆ.ಆರ್. ಸೌಮ್ಯಾ, ಕನ್ನಡ ಶ್ರೀಸಾಮಾನ್ಯರ ಕೂಟದ ಶ್ರ.ದೇ. ಪಾರ್ಶ್ವನಾಥ್ , ಮಹಮದೀಯರ ಕನ್ನಡ ವೇದಿಕೆಯ ಸಮೀವುಲ್ಲಾಖಾನ್, ಕಾಂಗ್ರೆಸ್ ಮುಖಂಡ ಬಲರಾಮ್, ಬಿಜೆಪಿ ನಾಯಕ ಲಕ್ಷ್ಮೀಕಾಂತ ಭಟ್, ಬಸವನಗುಡಿ ವರ್ತಕರ ಸಂಘದ ವೆಂಕಟೇಶ್, ವೈದ್ಯ ಡಾ. ಭಾನುಪ್ರಕಾಶ್, ಉಮಾ ಬಸವರಾಜು, ಕೆಂಪರಾಜು ಇದ್ದರು.

ಡಿವಿಜಿ ಕನ್ನಡ ಗೆಳೆಯರ ಬಳಗವು ಕಹಳೆಬಂಡೆಯಲ್ಲಿ ಆಯೋಜಿಸಿದ್ದ ಡಿವಿಜಿಗೆ ನುಡಿನಮನದಲ್ಲಿ ವಚನಜ್ಯೋತಿ ಬಳಗ ಅಧ್ಯಕ್ಷ ಎಸ್. ಪಿನಾಕಪಾಣಿ, ಕನ್ನಡ ಶ್ರೀಸಾಮಾನ್ಯರ ಕೂಟದ ಅಧ್ಯಕ್ಷ ಶ್ರ.ದೇ. ಪಾರ್ಶ್ವನಾಥ್, ಕವಯತ್ರಿ ಕೆ.ಆರ್. ಸೌಮ್ಯಾ, ಡಿವಿಜಿ ಕನ್ನಡ ಗೆಳೆಯರ ಬಳಗದ ಅಧ್ಯಕ್ಷ ಜಗದೀಶ ಮುಳಬಾಗಿಲು ಇದ್ದರು

ಬರ ಅಧ್ಯಯನದಿಂದ 'ಕಮಲ'ಕ್ಕೆ ಶಕ್ತಿ?

ವಿಧಾನಸಭೆ ಚುನಾವಣೆ ಬಳಿಕ ಬಿಜೆಪಿ ನಾಯಕರಿಂದ ಮೊದಲ ಬಾರಿಗೆ ದೊಡ್ಡ ಮಟ್ಟದ ಪ್ರವಾಸ

• ಎಸ್.ರವಿಪ್ರಕಾಶ್

ಬೆಂಗಳೂರು: ಕಳೆದ ವಿಧಾನಸಭಾ ಚುನಾವಣೆಯ ಬಳಿಕ ಮಂಕು ಬಡಿದಂತಿರುವ ಬಿಜೆಪಿಯಲ್ಲಿ ಚೇತರಿಕೆಯ ಲಕ್ಷಣಗಳು ಗೋಚರಿಸಿವೆ. ಬರ ಅಧ್ಯಯನಕ್ಕಾಗಿ ಪಕ್ಷದ ಎಲ್ಲ ನಾಯಕರನ್ನು ಒಳಗೊಂಡ ದೊಡ್ಡ ಮಟ್ಟದ ಪ್ರವಾಸವನ್ನು ಇದೇ ಮೊದಲ ಬಾರಿಗೆ ಹಮ್ಮಿಕೊಂಡಿರುವುದು ಪಕ್ಷಕ್ಕೆ ಹುರುಪು ತರುವ ಲೆಕ್ಕಾಚಾರವನ್ನು ಮುನ್ನೆಲೆಗೆ ತಂದಿದೆ.

ಶುಕ್ರವಾರದಿಂದ (ನ.3) ಬಿಜೆಪಿ ನಾಯಕರ ಬರ ಅಧ್ಯಯನ ಆರಂಭವಾಗಲಿದ್ದು, ಪಕ್ಷದ ಎಲ್ಲ ಪ್ರಮುಖ ನಾಯಕರು ಇದರಲ್ಲಿ ಭಾಗವಹಿಸಲಿದ್ದಾರೆ. ಶಾಸಕರು, ಸಂಸದರು ಮತ್ತು ಕೇಂದ್ರ ಸಚಿವರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ಒಟ್ಟು 16 ತಂಡಗಳಲ್ಲಿ 100 ಕ್ಕೂ ಹೆಚ್ಚು ಮುಖಂಡರೂ ಇದರಲ್ಲಿ ಪಾಲ್ಗೊಳ್ಳಲಿದ್ದಾರೆ.

ಬರ ಅಧ್ಯಯನದ ಜತೆಗೆ ಪಕ್ಷದ ಸಂಘಟನೆಗೆ ಬಲತುಂಬುವ ಮತ್ತು ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿಸುವ ಕಸರತ್ತೂ ನಡೆಯಲಿದೆ. ಚುನಾವಣೆ ಬಳಿಕ ವಿರೋಧಪಕ್ಷ ನಾಯಕರ ಆಯ್ಕೆ ಪ್ರಕ್ರಿಯೆ ನಡೆಸಿಲ್ಲ. ಪಕ್ಷದ ಅಧ್ಯಕ್ಷ ಸ್ಥಾನದ ಬದಲಾವಣೆ ಮಾಡದೇ ಇರುವ ಹಿನ್ನೆಲೆಯಲ್ಲಿ ಪಕ್ಷದ ನಾಯಕರು ಮತ್ತು ಕಾರ್ಯಕರ್ತರಲ್ಲಿ ನಿರಾಶೆಯ ವಾತಾವರಣ ಮೂಡಿಸಿತ್ತು. ಈ ಪ್ರವಾಸ ನಿರಾಶೆಯ ವಾತಾವರಣವನ್ನು ತಿಳಿ ಮಾಡಲಿದೆ ಎಂದು ಪಕ್ಷದ ಮೂಲಗಳು ವಿಶ್ವಾಸ ವ್ಯಕ್ತಪಡಿಸಿವೆ.

ಬಿ.ಎಸ್.ಯಡಿಯೂರಪ್ಪ ಅವರು ಸರ್ಕಾರದ ಭ್ರಷ್ಟಾಚಾರದ ವಿರುದ್ಧ ರಾಜ್ಯ ಪ್ರವಾಸ ಮಾಡುವುದಾಗಿ ಎರಡು–ಮೂರು ಬಾರಿ ಪ್ರಸ್ತಾಪವನ್ನು ಮಾಡಿದ್ದರು. ಕೋಲಾರದ ಜಿಲ್ಲೆಯ ಕುರುಡುಮಲೆ ದೇವಸ್ಥಾನದ ಬಳಿ ಸಮಾವೇಶ ನಡೆಸಿ ಪ್ರವಾಸಕ್ಕೆ ಚಾಲನೆ ನೀಡಿದ್ದರು. ಆದರೆ, ಬಳಿಕ ಪ್ರವಾಸದತ್ತ ಅವರು ಹೆಜ್ಜೆ ಇಡಲೇ ಇಲ್ಲ. ಉಳಿದಂತೆ ಸಣ್ಣ ಮಟ್ಟದ ಪ್ರತಿಭಟನೆಗಳನ್ನು ನಡೆಸಿತ್ತು. ಆದರೆ, ರಾಜ್ಯದಲ್ಲಿ ಬರದ ಭೀಕರತೆ ಹೆಚ್ಚಾಗಿರುವುದರಿಂದ ಅದರ ಅಧ್ಯಯನಕ್ಕಾಗಿ 16 ತಂಡಗಳನ್ನು ರಚಿಸಿ, ಪ್ರತಿ ತಂಡ ತಲಾ ಎರಡು ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿವೆ.

'ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರದ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುವುದರಲ್ಲಿ ನಿರತರಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ಬೆಳೆ ನಷ್ಟ, ಜಾನುವಾರುಗಳ ಸ್ಥಿತಿ ಗತಿ, ಕೆಲಸ ಹುಡುಕಿಕೊಂಡು ಜನರು ಗುಳೇ ಹೋಗುತ್ತಿರುವುದು, ಕೆರೆ–ಕಟ್ಟೆಗಳು, ಜಲಾಶಯಗಳ ಸ್ಥಿತಿಗತಿ, ರಾಜ್ಯ ಸರ್ಕಾರ ಈವರೆಗೆ ಕೈಗೊಂಡಿರುವ ಪರಿಹಾರ ಕಾರ್ಯಗಳ ಬಗ್ಗೆ ಅಂಕಿ–ಅಂಶಗಳನ್ನು ಕಲೆ ಹಾಕುತ್ತೇವೆ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನಕಾರ್ಯದರ್ಶಿ ಎನ್.ರವಿಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಚುನಾವಣೆ ಬಳಿಕ ಪಕ್ಷದಿಂದ ನಡೆಯುತ್ತಿರುವ ದೊಡ್ಡ ಮಟ್ಟದ ಕಾರ್ಯಕ್ರಮ. ಕೇವಲ ರಾಜಕೀಯಕ್ಕಾಗಿ ಇದನ್ನು ಹಮ್ಮಿಕೊಂಡಿಲ್ಲ. ಬೊಕ್ಕಸ ಖಾಲಿ ಮಾಡಿಕೊಂಡಿರುವ ರಾಜ್ಯ ಸರ್ಕಾರ ಜನರ ಕೈಬಿಟ್ಟಿದೆ. ಈ ಹಂತದಲ್ಲಿ ನಾವು ಜನರ ಪರ ನಿಲ್ಲುತ್ತೇವೆ. ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಜನರ ಸಂಕಷ್ಟ ಸಮಯದಲ್ಲಿ ಕೇಂದ್ರದ ಹಣಕ್ಕಾಗಿ ಕಾಯದೇ, ರಾಜ್ಯದ ಹಣದಿಂದಲೇ ಪರಿಹಾರ ಕಾರ್ಯಕೈಗೊಂಡಿತ್ತು. ಭೀಕರ ಪ್ರವಾಹದ ಸಂದರ್ಭದಲ್ಲಿ ಯಡಿಯೂರಪ್ಪ ಏಕಾಂಗಿಯಾಗಿ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಹಾರ ಕಾರ್ಯಕ್ಕೆ ಚಾಲನೆ ನೀಡಿದ್ದರು' ಎಂದು ಅವರು ಹೇಳಿದರು.

ಬಿ.ಎಸ್.ಯಡಿಯೂರಪ್ಪ 2 ತಂಡಗಳನ್ನು ಮುನ್ನಡೆಸಲಿದ್ದಾರೆ. ನಳಿನ್‌ಕುಮಾರ್ ಕಟೀಲ್, ಸಿ.ಟಿ. ರವಿ, ಅರವಿಂದ ಬೆಲ್ಲದ, ಬಿ.ವೈ. ವಿಜಯೇಂದ್ರ, ಕೆ.ಎಸ್.ಈಶ್ವರಪ್ಪ, ಶ್ರೀರಾಮುಲು, ಅರವಿಂದ ಲಿಂಬಾವಳಿ, ಆರಗ ಜ್ಞಾನೇಂದ್ರ, ವಿಶ್ವೇಶ್ವರ ಹೆಗಡೆ ಕಾಗೇರಿ, ಕೋಟ ಶ್ರೀನಿವಾಸ ಪೂಜಾರಿ, ಗೋವಿಂದ ಕಾರಜೋಳ ತಂಡಗಳ ನೇತೃತ್ವ ವಹಿಸಿದ್ದಾರೆ.

ಬೆಂಗಳೂರು ನಗರಕ್ಕೂ ತಂಡ

ಬೆಂಗಳೂರು ನಗರದ ಬಗ್ಗೆ ಅಧ್ಯಯನ ನಡೆಸುವುದಲ್ಲದೇ ಜನರ ಸಮಸ್ಯೆಗಳನ್ನು ಆಲಿಸಲು ಬಿ.ಎಸ್.ಯಡಿಯೂರಪ್ಪ ನೇತೃತ್ವದ ತಂಡ ನಗರದಲ್ಲಿ ಎರಡು ದಿನ ಪ್ರವಾಸ ಮಾಡಲಿದೆ. ಬೆಂಗಳೂರು ನಗರದ ಶಾಸಕರ ಸಭೆಯನ್ನು ಕರೆದಿದ್ದ ಯಡಿಯೂರಪ್ಪ ಅವರು ಪ್ರವಾಸದ ರೂಪುರೇಷೆಯನ್ನು ಚರ್ಚಿಸಿದ್ದಾರೆ. ಕುಡಿಯುವ ನೀರು, ರಸ್ತೆ, ರಸ್ತೆಗುಂಡಿ, ಒಳಚರಂಡಿ, ಹೆಚ್ಚುತ್ತಿರುವ ಅಪರಾಧ ಪ್ರಕರಣಗಳು ಮುಂತಾದ ವಿಷಯಗಳ ಬಗ್ಗೆಅಧ್ಯಯನ ನಡೆಸಲಿದ್ದಾರೆ ಎಂದು ರವಿಕುಮಾರ್ ತಿಳಿಸಿದರು.

ವಾದ್ಯಮೇಳ

68ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಬೆಂಗಳೂರಿನ ವಿಧಾನಸೌಧದ ಮುಂದೆ ಬುಧವಾರ ಪೊಲೀಸ್ ಬ್ಯಾಂಡ್‌ನ ಸಿಬ್ಬಂದಿ ನಡೆಸಿಕೊಟ್ಟ ಸಮೂಹ ವಾದ್ಯಮೇಳ – ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

'ಚುನಾವಣಾ ಬಾಂಡ್: ಮಾಹಿತಿ ಸಾರ್ವಜನಿಕರಿಗೆ ಗೋಪ್ಯವೇಕೆ?'

ಒಂದನೇ ಪುಟದಿಂದ...

ಎಲ್ಲ ರಾಜಕೀಯ ಪಕ್ಷಗಳಿಗೂ ಸಮಾನ ಅವಕಾಶಗಳು ಸಿಗುವ ವ್ಯವಸ್ಥೆಯನ್ನು ರೂಪಿಸುವ ಉದ್ದೇಶ ಸರ್ಕಾರಕ್ಕೆ ಇದೆ ಎಂದಾದಲ್ಲಿ, ದೇಣಿಗೆ ಮೊತ್ತವು ಚುನಾವಣಾ ಆಯೋಗಕ್ಕೆ ಹೋಗುವಂತೆ ಮಾಡಬೇಕು, ಆಯೋಗವು ಆ ಹಣವನ್ನು ಸಮಾನವಾಗಿ ಹಂಚಿಕೆ ಮಾಡಬೇಕು ಎಂದು ಪೀಠ ಹೇಳಿತು.

ಚುನಾವಣಾ ಬಾಂಡ್ ಯೋಜನೆಯನ್ನು ರದ್ದುಮಾಡಿದಲ್ಲಿ, ಇನ್ನೂ ಹೆಚ್ಚು ಪಾರದರ್ಶಕವಾಗಿರುವ, ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡುವ ಹೊಸ ವ್ಯವಸ್ಥೆಯೊಂದನ್ನು ರೂಪಿಸಲು ಸರ್ಕಾರಕ್ಕೆ ನಿರ್ಬಂಧಗಳೇನೂ ಇರುವುದಿಲ್ಲ ಎಂದು ನ್ಯಾಯಪೀಠ ಹೇಳಿದೆ.

ನ್ಯಾಯಪೀಠವು ಈ ಯೋಜನೆಯ ವಿಚಾರವಾಗಿ 'ಅನಾಮಧೇಯ', 'ರಹಸ್ಯ' ಎಂಬ ಪದಗಳನ್ನು ಬಳಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕೇಂದ್ರ ಸರ್ಕಾರದ ಪರ ವಕೀಲ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಈ ಯೋಜನೆಯು ಗೋಪ್ಯತೆಯನ್ನು ಕಾಯ್ದುಕೊಳ್ಳುತ್ತದೆ ಎಂಬ ವಿವರಣೆ ನೀಡಿದರು. ರಾಜಕೀಯ ಪಕ್ಷಗಳಿಗೆ ಸಿಗುವ ದೇಣಿಗೆಯಲ್ಲಿ ಆಡಳಿತ ಪಕ್ಷಕ್ಕೆ ಹೆಚ್ಚಿನ ಪಾಲು ಸಿಗುವುದು ಮೊದಲಿನಿಂದಲೂ ಇರುವಂಥದ್ದು ಎಂದು ವಿವರಿಸಿದರು.

ರಾಜಕೀಯ ಪಕ್ಷಗಳಿಗೆ ನ್ಯಾಯಬದ್ಧ ಹಣವು ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕವೇ ಸಿಗುವಂತೆ ಮಾಡುವ ಪ್ರಯತ್ನ ಈ ಯೋಜನೆಯಲ್ಲಿದೆ ಎಂದರು. ದೇಣಿಗೆ ನೀಡಿದವರಿಗೆ ಸಮಸ್ಯೆ ಎದುರಾಗಬಾರದು ಎಂಬ ಕಾರಣಕ್ಕೆ, ದೇಣಿಗೆಗಳಲ್ಲಿ ಗೋಪ್ಯತೆಯನ್ನು ಕಾಯ್ದುಕೊಳ್ಳಬೇಕಾಗುತ್ತದೆ ಎಂದರು.

ಈ ನ್ಯಾಯಪೀಠದಲ್ಲಿ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್. ಗವಾಯಿ, ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಇದ್ದಾರೆ. ಕೆಲವು ಆಯಾಮಗಳಲ್ಲಿ ಮಾತ್ರ ಈ ಯೋಜನೆಯು ಗೋಪ್ಯತೆಯನ್ನು ಕಾಯ್ದುಕೊಳ್ಳುತ್ತದೆ ಎಂಬುದೇ ಯೋಜನೆಯಲ್ಲಿನ ಸಮಸ್ಯೆ ಎಂದು ಪೀಠ ಹೇಳಿತು.

'ಎಸ್‌ಬಿಐ ವಿಚಾರದಲ್ಲಿ ಈ ಯೋಜನೆಯು ಗೋಪ್ಯವಲ್ಲ, ಕಾನೂನು ಜಾರಿ ಸಂಸ್ಥೆಗಳ ವಿಚಾರವಾಗಿ ಇದು ಗೋಪ್ಯವಲ್ಲ. ಭಾರಿ ಪ್ರಮಾಣದಲ್ಲಿ ದೇಣಿಗೆ ನೀಡಲು ಉದ್ದೇಶಿಸಿರುವ ವ್ಯಕ್ತಿಯು ಆ ಮೊತ್ತವನ್ನು ಬಾಂಡ್ ಮೂಲಕ ನೀಡುವುದೇ ಇಲ್ಲ. ಆತ ಮೊತ್ತವನ್ನು ಒಡೆದು, ಅದನ್ನು ಕೆಲವರಿಗೆ ನೀಡಿ, ಅವರು ಸಣ್ಣ ಮೊತ್ತಗಳಲ್ಲಿ ಬಾಂಡ್ ಖರೀದಿಸುವಂತೆ ಮಾಡುತ್ತಾನೆ. ಬೃಹತ್ ಪ್ರಮಾಣದಲ್ಲಿ ದೇಣಿಗೆ ನೀಡುವವನು, ಎಸ್‌ಬಿಐನ ದಾಖಲೆಗಳಲ್ಲಿ ತನ್ನ ಹೆಸರು ನಮೂದಾಗಲು ಅವಕಾಶ ನೀಡುವುದೇ ಇಲ್ಲ. ಈ ಯೋಜನೆಯಲ್ಲಿ ಕೆಲವಷ್ಟು ಅಂಶಗಳಿಗೆ ಮಾತ್ರ ಅನಾಮಕತೆ ಹಾಗೂ ಕೆಲವಷ್ಟು ಅಂಶಗಳಿಗೆ ಮಾತ್ರ ಗೋಪ್ಯತೆಯನ್ನು ಕಾಯ್ದುಕೊಳ್ಳಲು ಅವಕಾಶ ಇದೆ' ಎಂದು ಪೀಠ ಹೇಳಿತು.

ಚುನಾವಣಾ ಬಾಂಡ್ ಯೋಜನೆಯು ರಾಜಕೀಯ ಪಕ್ಷಗಳ ನಡುವೆ ಸಮಾನತೆಯನ್ನು ಖಾತರಿಪಡಿಸುವುದಿಲ್ಲ. ಅರ್ಜಿದಾರರು ವಾದಿಸಿರುವಂತೆ ಈ ಯೋಜನೆಯಲ್ಲಿ ಪಾರದರ್ಶಕತೆ ಇಲ್ಲ ಎಂದು ನ್ಯಾಯಪೀಠ ಹೇಳಿತು. ಕಂಪನಿಗಳ ಕಾಯ್ದೆಗೆ ತಂದಿರುವ ತಿದ್ದುಪಡಿಯ ಪ್ರಕಾರ ಯಾವ ರಾಜಕೀಯ ಪಕ್ಷಕ್ಕೆ ತಮ್ಮಿಂದ ದೇಣಿಗೆ ನೀಡಲಾಗಿದೆ ಎಂಬುದನ್ನು ಕಂಪನಿಗಳು ಹೇಳಬೇಕಾಗಿಲ್ಲ. ಆದರೆ ಒಟ್ಟು ಎಷ್ಟು ಮೊತ್ತವನ್ನು ದೇಣಿಗೆಯಾಗಿ ಕೊಡಲಾಗಿದೆ ಎಂಬುದನ್ನು ಕಂಪನಿಗಳು ಹೇಳಬೇಕು. ಈ ಯೋಜನೆಯು ಕಂಪನಿಗಳ ಪಾಲಿಗೆ ಪ್ರತೀಕಾರ ಕ್ರಮದ ಭೀತಿಯನ್ನು ತಗ್ಗಿಸುವುದಿಲ್ಲ ಎಂದು ಪೀಠ ಹೇಳಿತು.

ಲಕ್ಷ್ಮಣಗೆ ಮುದ್ದಣ ಕಾವ್ಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಕಾಂತಾವರ ಕನ್ನಡ ಸಂಘದ ಪಟೇಲ್ ಪುನರೂರು ವಾಸುದೇವ ರಾವ್ ಟ್ರಸ್ಟ್ ಪ್ರಾಯೋಜಕತ್ವದ 2023ನೇ ಸಾಲಿನ ಮುದ್ದಣ ಕಾವ್ಯ ಪ್ರಶಸ್ತಿಗೆ ಬೆಂಗಳೂರಿನ ವೈದ್ಯ ಲಕ್ಷ್ಮಣ ವಿ.ಎ. ಅವರ 'ಕಾಯಿನ್ ಬೂತ್' ಕವನ ಸಂಕಲನದ ಹಸ್ತಪ್ರತಿ ಆಯ್ಕೆಯಾಗಿದೆ.

ಲಕ್ಷ್ಮಣ ವಿ.ಎ.

1979ರಲ್ಲಿ ನಂದಳಿಕೆಯ ವರಕವಿ ಮುದ್ದಣನ ಹೆಸರಿನಲ್ಲಿ ಸ್ಥಾಪಿಸಲಾದ ಈ ಪ್ರಶಸ್ತಿಯು ₹10 ಸಾವಿರ ಗೌರವ ಸಂಭಾವನೆ, ತಾಮ್ರಪತ್ರ ಮತ್ತು ಸನ್ಮಾನವನ್ನು ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವು 2024ರ ಫೆಬ್ರುವರಿಯಲ್ಲಿ ಕಾಂತಾವರದ ಕನ್ನಡ ಭವನದಲ್ಲಿ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸದಾನಂದ ನಾರಾವಿ ತಿಳಿಸಿದ್ದಾರೆ.

'ಪ್ರಶಸ್ತಿಗಾಗಿ 59 ಹಸ್ತಪ್ರತಿಗಳು ಬಂದಿದ್ದು ವಿಮರ್ಶಕರಾದ ರಾಜಶೇಖರ ಹಳೆಮನೆ, ಬೆಳಗೋಡು ರಮೇಶ ಭಟ್ ಮತ್ತು ಚಿದಾನಂದ ಸಾಲಿ ಅವರು ನೀಡಿದ ಅಂಕಗಳ ಆಧಾರದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು' ಎಂದು ಸಂಘದ ಸ್ಥಾಪಕ ಅಧ್ಯಕ್ಷ ನಾ. ಮೊಗಸಾಲೆ ತಿಳಿಸಿದ್ದಾರೆ.

ಬಾಯ್ತೆರೆದರೆ ಮಂತ್ರಿಗಿರಿಗೆ ಕುತ್ತು

ಒಂದನೇ ಪುಟದಿಂದ...

ಬಳಿಕ, ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಸುದ್ದಿಗೋಷ್ಠಿ ನಡೆಸಿದ ಸುರ್ಜೇವಾಲಾ, ಬಹಿರಂಗವಾಗಿ ಮಾತನಾಡುವವರಿಗೆ ಶಿಸ್ತಿನ ಕ್ರಮದ ಎಚ್ಚರಿಕೆಯನ್ನೂ ನೀಡಿದರು.

ಮುಖ್ಯಮಂತ್ರಿ ಬದಲಾವಣೆ, ಸಚಿವ ಸಂಪುಟ ಪುನರ್‌ರಚನೆ, ಮೂರು ಅಥವಾ ಐದು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಯ ಬೇಡಿಕೆಗಳು ಒಂದೂವರೆ ತಿಂಗಳ ಹಿಂದೆ ಮುನ್ನೆಲೆಗೆ ಬಂದಿದ್ದವು. ಕಾಂಗ್ರೆಸ್ ಒಳಮನೆಯಲ್ಲಿ ಬೇಗುದಿ ಹೆಚ್ಚುತ್ತಿರುವುದನ್ನು ಬಹಿರಂಗಗೊಳಿಸಿತ್ತು. ಆಗ ಮಧ್ಯ ಪ್ರವೇಶಿಸಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, 'ಯಾರೊಬ್ಬರೂ ಬಹಿರಂಗವಾಗಿ ಮಾತನಾಡಬಾರದು. ಪಕ್ಷದ ವೇದಿಕೆಯಲ್ಲಿಯೇ ಚರ್ಚಿಸಬೇಕು' ಎಂದು ದೆಹಲಿಯಲ್ಲಿ ಕುಳಿತೇ 'ಕಠಿಣ ಆಜ್ಞೆ' ಹೊರಡಿಸಿದ್ದರು. ಕೆಲ ದಿನ ಮೌನಕ್ಕೆ ಶರಣಾಗಿದ್ದ ಸಚಿವರು, ಶಾಸಕರು ಅದೇ ಮಾದರಿಯ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದರು.

ಇದರ ಜತೆಗೆ, ಬೆಳಗಾವಿ ರಾಜಕಾರಣ ಮತ್ತು ಆಡಳಿತದಲ್ಲಿ ಡಿ.ಕೆ.ಶಿವಕುಮಾರ್ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಅಸಮಾಧಾನಗೊಂಡಿದ್ದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಬಂಡೆದ್ದಿದ್ದರು. ಇದು ಪಕ್ಷದೊಳಗೆ ಕಿಡಿ ಎಬ್ಬಿಸಿತ್ತು. ಈ ಬೆನ್ನಲ್ಲೇ, ಮಾತನಾಡಿದ್ದ ಶಾಸಕರು, 'ಇನ್ನು ಎರಡು ವರ್ಷದ ಬಳಿಕ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುವುದು ಗ್ಯಾರಂಟಿ' ಎಂದು ಹೇಳಿಕೆ ನೀಡಿದ್ದರು. ಅದೇ ದಿನ ರಾತ್ರಿ, ಗೃಹ ಸಚಿವ ಜಿ. ಪರಮೇಶ್ವರ ಅವರ ಮನೆಯಲ್ಲಿ ನಡೆದ ಭೋಜನಕೂಟದಲ್ಲಿ ಸಿದ್ದರಾಮಯ್ಯ, ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ ಪಾಲ್ಗೊಂಡಿದ್ದರು. ಈ 'ರಹಸ್ಯ ಭೋಜನ ಕೂಟ'ವು ಪಕ್ಷ–ಸರ್ಕಾರದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ನಿರೂಪಿಸುವಂತಿತ್ತು.

ಈ ಬೆಳವಣಿಗೆಗಳ ಮಧ್ಯೆಯೇ, ವೇಣುಗೋಪಾಲ್, ಸುರ್ಜೇವಾಲಾ ಅವರು ನಾಯಕರಿಬ್ಬರ ಜತೆ ನಡೆಸಿದ ಸಭೆ ಹೆಚ್ಚು ಮಹತ್ವ ಪಡೆದಿದೆ.

'ನಾಯಕರು ಹೀಗೆ ಬಹಿರಂಗ ಹೇಳಿಕೆ ನೀಡುತ್ತಾ ಹೋದರೆ ವರ್ಚಸ್ಸಿಗೆ ಧಕ್ಕೆ ತರುತ್ತದೆ. 30 ತಿಂಗಳಲ್ಲಿ ಅಧಿಕಾರ ಹಸ್ತಾಂತರ, ಸಚಿವ ಸಂಪುಟ ಪುನಾರಚನೆ ಈ ಎಲ್ಲ ವಿಷಯಗಳಲ್ಲಿ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಈ ಬಗ್ಗೆ ಸಚಿವರು, ಶಾಸಕರು ಬಹಿರಂಗವಾಗಿ ಮಾತನಾಡದಂತೆ ಸೂಚಿಸಿ. ಎಲ್ಲರೂ ಒಗ್ಗೂಡಿ ಲೋಕಸಭೆ ಚುನಾವಣೆಯಲ್ಲಿ ಕನಿಷ್ಠ 20 ರಿಂದ 25 ಸ್ಥಾನ ಗೆಲ್ಲಿಸಿಕೊಂಡು ಬರುವುದು ಮೊದಲ ಆದ್ಯತೆ. ಈ ಬಗ್ಗೆ ಗಮನ ನೀಡಬೇಕು ಎಂದು ಶಾಸಕರಿಗೆ, ನಾಯಕರಿಗೆ ಮನವರಿಕೆ ಮಾಡಿಕೊಡಬೇಕು ಎಂದು ಸಿದ್ದರಾಮಯ್ಯ ಮತ್ತು ಶಿವಕುಮಾರ್‌ಗೆ ವೇಣುಗೋಪಾಲ್ ಹೇಳಿದರು' ಎಂದು ಗೊತ್ತಾಗಿದೆ.

'ಸರ್ಕಾರ ಜಾರಿ ಮಾಡಿದ ಗ್ಯಾರಂಟಿಗಳು ಜನರಿಗೆ ತಲುಪುತ್ತಿವೆ. ಗ್ಯಾರಂಟಿಗಳ ಜಾರಿಗಾಗಿ ಸರ್ಕಾರ ಎಷ್ಟೆಲ್ಲ ಯತ್ನ ಹಾಕಿದೆ ಎಂದು ಜನರಿಗೆ ಅರ್ಥ ಮಾಡಿಸಿಕೊಡಬೇಕು. ಇದರ ಫಲ ಲೋಕಸಭೆ ಚುನಾವಣೆಯಲ್ಲಿ ಸಿಗಬೇಕು. ನಾಯಕರು ಹಾದಿಬೀದಿಯಲ್ಲಿ ಮಾತನಾಡುತ್ತಿರುವುದರಿಂದ ಗ್ಯಾರಂಟಿಗಳಿಗಿಂತ ವಿವಾದಗಳೇ ಹೆಚ್ಚು ಸದ್ದು ಮಾಡುತ್ತಿವೆ. ನಾಲ್ಕು ಗ್ಯಾರಂಟಿಗಳ ಬಗ್ಗೆ ಜಾಗೃತಿ ಮೂಡಿಸಲು ಇಬ್ಬರೂ ಸೇರಿ ವಿಶೇಷ ಕಾರ್ಯಕ್ರಮ ರೂಪಿಸಿ ಎಂದು ಸಲಹೆ ನೀಡಿದರು' ಎಂದು ತಿಳಿದುಬಂದಿದೆ.

'ಬಿಜೆಪಿ-ಜೆಡಿಎಸ್ ರಾಜ್ಯದಲ್ಲಿ ದುರ್ಬಲವಾಗಿವೆ ಎಂದು ಕೆಲ ನಾಯಕರು ಭಾವಿಸಿದಂತಿದೆ. ಅದರ ಲಾಭ ಪಕ್ಷಕ್ಕೆ ಆಗಬೇಕು. ಕೆಲವರು ಅನಗತ್ಯವಾಗಿ ಮಾತನಾಡುತ್ತಿರುವುದರಿಂದ ನಮ್ಮ ದೌರ್ಬಲ್ಯಗಳು ಎದುರಾಳಿಗೆ ಅಸ್ತ್ರವಾಗುತ್ತವೆ. ಈ ಬಗ್ಗೆ ಜಾಗೃತರಾಗಿರುವಂತೆ ಎಲ್ಲರಿಗೂ ಸೂಚಿಸಬೇಕಿದೆ' ಎಂದು ಹೇಳಿದ್ದಾಗಿ ಗೊತ್ತಾಗಿದೆ.

'ಶಿಸ್ತು ಮೀರಿದರೆ ಕಠಿಣ ಕ್ರಮ'

'ಸರ್ಕಾರ, ಅಧಿಕಾರ ಹಂಚಿಕೆ ಹಾಗೂ ಪಕ್ಷದ ಸಂಘಟನೆ ವಿಷಯವಾಗಿ ಯಾವುದೇ ನಾಯಕರು ಸಾರ್ವಜನಿಕವಾಗಿ ಮಾತನಾಡಿದರೆ, ಅವರು ಎಷ್ಟೇ ದೊಡ್ಡವರಾದರೂ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ರಣದೀಪ್ ಸಿಂಗ್ ಸುರ್ಜೇವಾಲಾ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಚಿವರು ತಮ್ಮ ಇಲಾಖೆ ಹಾಗೂ ಉಸ್ತುವಾರಿ ಜಿಲ್ಲೆಗಳ ಪ್ರಗತಿಯ ಕುರಿತು ಗಮನಹರಿಸಬೇಕು. ಶಾಸಕರು ತಮ್ಮ ಕ್ಷೇತ್ರ ಹಾಗೂ ಜಿಲ್ಲೆಗೆ ಸಂಬಂಧಿಸಿದ ಅಭಿವೃದ್ಧಿ ಯೋಜನೆಗಳು, ಜನರಿಗೆ ಅನುಕೂಲವಾಗುವಂತಹ ನೀತಿಗಳ ಬಗ್ಗೆ ಸಲಹೆ ನೀಡುವ ಬಗ್ಗೆ ಆದ್ಯತೆ ನೀಡಬೇಕು. ಅದನ್ನು ಬಿಟ್ಟು, ಅಧಿಕಾರ ಹಂಚಿಕೆ, ಸರ್ಕಾರದ ಬಗ್ಗೆ ಮಾತನಾಡ ಕೂಡದು' ಎಂದರು.

'ಎಲ್ಲರ ಧ್ವನಿಗೆ ಪಕ್ಷದಲ್ಲಿ ಅವಕಾಶವಿದೆ. ದೂರು, ಅಭಿಪ್ರಾಯಗಳನ್ನು ಮುಖ್ಯಮಂತ್ರಿ, ಪಕ್ಷದ ಅಧ್ಯಕ್ಷರು ಅಥವಾ ನನ್ನ ಬಳಿ ಹೇಳಬೇಕೇ ವಿನಃ ಸಾರ್ವಜನಿಕವಾಗಿ ಹೇಳುವಂತಿಲ್ಲ' ಎಂದು ಹೇಳಿದರು.

ಡಿ.ಎಸ್.ಕರ್ಕಿ ಕಾವ್ಯ ಪ್ರಶಸ್ತಿಗೆ ಕವನ ಸಂಕಲನ ಆಹ್ವಾನ

ಬೆಳಗಾವಿ: ಕವಿ ಡಿ.ಎಸ್.ಕರ್ಕಿ ಅವರ 116ನೇ ಜನ್ಮದಿನೋತ್ಸವದ ಪ್ರಯುಕ್ತ ಬೆಳಗಾವಿಯ ಡಿ.ಎಸ್.ಕರ್ಕಿ ಪ್ರತಿಷ್ಠಾನ ಟ್ರಸ್ಟ್ 2022-23ನೇ ಸಾಲಿನ 'ಡಿ.ಎಸ್.ಕರ್ಕಿ ಕಾವ್ಯ ಪ್ರಶಸ್ತಿ'ಗೆ ಕವನ ಸಂಕಲನ ಆಹ್ವಾನಿಸಿದೆ.

2022ರಲ್ಲಿ ಪ್ರಕಟಗೊಂಡ ಕವನ ಸಂಕಲನದ ಎರಡು ಪ್ರತಿಗಳನ್ನು ನವೆಂಬರ್ 25ರೊಳಗೆ ಕಳುಹಿಸಬೇಕು. ಪ್ರಶಸ್ತಿ ಪ್ರದಾನ ಸಮಾರಂಭ ಧಾರವಾಡದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕವನ ಸಂಕಲನ ಕಳುಹಿಸಬೇಕಾದ ವಿಳಾಸ: ಸತೀಶ ಮು. ಕರ್ಕಿ, ಪ್ಲಾಟ್ ನಂ.354, ಗಂಗೋತ್ರಿ, ರಾಮತೀರ್ಥನಗರ, ಬೆಳಗಾವಿ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9449650174 ಅಥವಾ 7975376501.

'ಹಣ ನಿಗದಿ ಮಾಡಲು ಬಂದಿದ್ದಾರೆಯೇ?'

ಬೆಂಗಳೂರು: ಕಾಂಗ್ರೆಸ್ ನಾಯಕರಾದ ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಪಂಚ ರಾಜ್ಯ ಚುನಾವಣೆಗೆ ಹಣ ಸಂಗ್ರಹಕ್ಕೆ ಗುರಿ ನಿಗದಿ ಮಾಡಲು ಬಂದಿದ್ದಾರೆಯೇ ಎಂದು ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ಅವರು ಪ್ರಶ್ನಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಈ ಹಿಂದೆಯೂ ಇವರಿಬ್ಬರು ಬಂದು ಹೋದ ಕೆಲವೇ ದಿನಗಳ ಬಳಿಕ ಗುತ್ತಿಗೆದಾರರ ಮನೆಗಳಲ್ಲಿ ₹102 ಕೋಟಿ ಸಿಕ್ಕಿತ್ತು. ಅದು ಕಾಂಗ್ರೆಸ್ ಪಕ್ಷವೇ ಸಂಗ್ರಹಿಸಿದ ಹಣ ಆಗಿತ್ತು. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರ ಪಾತ್ರ ಅದರಲ್ಲಿದೆ ಎಂದು ಆರೋಪಿಸಿದರು.

ಹಣ ಇಟ್ಟುಕೊಂಡ ಆರೋಪಿಗಳು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರಿಗೆ ಹತ್ತಿರದವರು. ಪಂಚ ರಾಜ್ಯಗಳ ಚುನಾವಣೆಗೆ ಬಳಸಿಕೊಳ್ಳಲು ಹಣ ಸಂಗ್ರಹಿಸಿಡಲಾಗಿತ್ತು ಎಂಬುದು ಬಹಿರಂಗವಾಗಿದೆ. ಆದ ಕಾರಣ ಇಬ್ಬರೂ ರಾಜೀನಾಮೆ ನೀಡಬೇಕು ಎಂದು ಅವರು ಒತ್ತಾಯಿಸಿದರು. ಸಚಿವ ಸ್ಥಾನ ಸಿಗದೇ ಬೇಸರ ವ್ಯಕ್ತಪಡಿಸುವವರನ್ನು ಸಮಾಧಾನಪಡಿಸಲು ನಿಗಮ–ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಲು ಬಂದಿದ್ದಾರೆ. ಬಹುಶಃ ನಿಗಮ ಮಂಡಳಿಗಳ ಅಧ್ಯಕ್ಷರಿಗೂ ಗುರಿ ನಿಗದಿ ಮಾಡುವುದು ಇವರ ಭೇಟಿ ಉದ್ದೇಶ ಆಗಿರಬಹುದು ಎಂದರು.

'ಸರ್ಕಾರಿ ಶಾಲೆಗಳಿಗೆ ವಿದ್ಯುತ್, ನೀರು ಉಚಿತ'

ಒಂದನೇ ಪುಟದಿಂದ...

'ಕೇಂದ್ರ ಸರ್ಕಾರದ ಉದ್ಯೋಗಗಳಿಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಇದರಿಂದ ಕನ್ನಡಿಗರು ಕೇಂದ್ರದ ಉದ್ಯೋಗಗಳಿಂದ ವಂಚಿತರಾಗುತ್ತಿದ್ದಾರೆ. ಈ ಪರೀಕ್ಷೆಗಳನ್ನು ಕನ್ನಡದಲ್ಲೇ ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಒತ್ತಾಯಿಸುತ್ತೇನೆ' ಎಂದು ತಿಳಿಸಿದರು.

'ಎಲ್ಲ ಭಾಷೆಗಳನ್ನು ನಾವು ಗೌರವಿಸಬೇಕು. ಆದರೆ ನಮ್ಮ ನಾಡಿನಲ್ಲಿ ಆಡಳಿತ ಹಾಗೂ ವ್ಯವಹಾರದ ಭಾಷೆಯಾಗಿ ಕನ್ನಡವನ್ನೇ ಬಳಸಬೇಕು. ಇದನ್ನು ಪ್ರತಿಯೊಬ್ಬ ಅಧಿಕಾರಿ ಹಾಗೂ ಜನಪ್ರತಿನಿಧಿ ಕಡ್ಡಾಯವಾಗಿ ಪಾಲಿಸಬೇಕು' ಎಂದು ಹೇಳಿದರು.

'ದೇವರಾಜ ಅರಸು ಅವರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ 50 ವರ್ಷಗಳು ತುಂಬಿವೆ. ಈ ಹಿನ್ನೆಲೆಯಲ್ಲಿ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂಬ ಘೋಷವಾಕ್ಯದಡಿ ವರ್ಷವಿಡೀ ಸ್ವಾಭಿಮಾನಿ ಕನ್ನಡ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮಗಳನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗುವುದು. ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರವೇ 50ನೇ ವರ್ಷಾಚರಣೆ ಮಾಡಬೇಕಿತ್ತು. ಅವರು ಆಚರಿಸಲಿಲ್ಲ, ಹೀಗಾಗಿ ನಾವು ಆಚರಿಸುತ್ತಿದ್ದೇವೆ' ಎಂದು ಹೇಳಿದರು.

ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಬೆಂಡೋಣಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲ್ಲೂಕಿನ ನಿಂಬಳಗೆರೆಯ ಬಿ.ಕೆ.ವಿ. ಸರ್ಕಾರಿ ಪ್ರೌಢಶಾಲೆಗೆ, ಮಲೆನಾಡ ಗಾಂಧಿ ಎಚ್.ಜಿ. ಗೋವಿಂದೇಗೌಡರ ಸ್ಮರಣಾರ್ಥ ನೀಡುವ 2023-24ನೇ ಸಾಲಿನ 'ಅತ್ಯುತ್ತಮ ಶಾಲಾ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶಾಸಕರಾದ ಆರ್.ವಿ. ದೇಶಪಾಂಡೆ, ರಿಜ್ವಾನ್ ಅರ್ಷದ್, ಎನ್.ಎ. ಹ್ಯಾರಿಸ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಅವರು ಈ ವೇಳೆ ಇದ್ದರು.

ತೀರ್ಥಹಳ್ಳಿಯ ಬಸವನಗದ್ದೆ ಗ್ರಾಮದಲ್ಲಿ ವಶಪಡಿಸಿಕೊಂಡ ಅರಣ್ಯ ಉತ್ಪನ್ನಗಳು

ಕಾಡುಕೋಣ, ಜಿಂಕೆ ಕೊಂಬು, ಶ್ರೀಗಂಧ ವಶ

ಪ್ರಜಾವಾಣಿ ವಾರ್ತೆ

ತೀರ್ಥಹಳ್ಳಿ: ಬಸವನಗದ್ದೆ ಗ್ರಾಮದ ಪ್ರಸನ್ನಕುಮಾರ್ ಅವರ ಮನೆಯ ಮೇಲೆ ಅರಣ್ಯ ಇಲಾಖೆ ಅಧಿಕಾರಿಗಳು ಬುಧವಾರ ಶೋಧ ನಡೆಸಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 18 ಜಿಂಕೆ ಮತ್ತು ಕಡವೆ ಕೊಂಬು, 9 ಕಾಡುಕೋಣ ಕೊಂಬು, 10 ಕೆ.ಜಿ. ಶ್ರೀಗಂಧ ಹಾಗೂ ಒಂದು ಬಂದೂಕು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ತನಿಖಾಧಿಕಾರಿ ಶಿವಮೊಗ್ಗ ವನ್ಯಜೀವಿ ವಿಭಾಗದ ಎಸಿಎಫ್ ಬಿ.ಸುರೇಶ್, ಹಣಗೆರೆ ಆರ್‌ಎಫ್‌ಒ ಪವನ್ ಕುಮಾರ್ ನೇತೃತ್ವದಲ್ಲಿ ಸುಮಾರು 20ಕ್ಕೂ ಹೆಚ್ಚು ಅರಣ್ಯಾಧಿಕಾರಿಗಳು ಶೋಧ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಪ್ರಸನ್ನ ಕುಮಾರ್ ಅವರ ಆರೋಗ್ಯದಲ್ಲಿ ತೀವ್ರ ಏರುಪೇರಾದ ಕಾರಣ ಬಂಧನವನ್ನು ಮುಂದೂಡಲಾಗಿದೆ ಎಂದು ಎಸಿಎಫ್ ತಿಳಿಸಿದ್ದಾರೆ.

ಶಾಸಕ ಆರಗ ಕೆಂಡಮಂಡಲ: ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಬಂದ ಶಾಸಕ ಆರಗ ಜ್ಞಾನೇಂದ್ರ, 'ಯಾವುದೇ ಕಾರಣಕ್ಕೂ ಪ್ರಸನ್ನಕುಮಾರ್ ಅವರನ್ನು ಬಂಧಿಸಲು ಬಿಡುವುದಿಲ್ಲ. ಅವು ಪೂರ್ವಿಕರು ಸಂಗ್ರಹಿಸಿದ ನೂರೈವತ್ತು ವರ್ಷಗಳ ಕೊಂಬುಗಳು. ಹಣಗೆರೆ ಸೌಹಾರ್ದ ಧಾರ್ಮಿಕ ಕೇಂದ್ರದಲ್ಲಿ ನಡೆಯುವ ವಾರ್ಷಿಕ ಉರುಸ್ ಕಾರ್ಯಕ್ರಮಕ್ಕೆ ಗಂಧಪ್ರಸಾದ ಪ್ರಸನ್ನ ಅವರ ಮನೆಯಿಂದಲೇ ಹೋಗುತ್ತದೆ. ಧಾರ್ಮಿಕ ಉದ್ದೇಶಕ್ಕಾಗಿ ಶ್ರೀಗಂಧ ಸಂಗ್ರಹಿಸಲಾಗಿದೆ. ವ್ಯಾಪಾರಕ್ಕಾಗಿ ಅಲ್ಲ. ಒಂದು ವೇಳೆ ಕಾನೂನು ಜಾರಿ ಮಾಡುವುದಾದರೆ ನಮ್ಮ ಹೆಣದ ಮೇಲೆ ಆಗಲಿ. ಇದು ಪ್ರಕೃತಿ ಮತ್ತು ದೇಶದ ಸಂಪತ್ತಾಗಿದ್ದು ಅರಣ್ಯ ಇಲಾಖೆ ನೇತೃತ್ವದಲ್ಲಿ ರಕ್ಷಣೆಯ ಕಾರ್ಯಕ್ರಮ ಜಾರಿಯಾಗಲಿ' ಎಂದರು.

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕೆ.ಜಿ.ರಸ್ತೆ, ಬೆಂಗಳೂರು – 560 009

ಸಂಖ್ಯೆ : GPTR-2022/WA NO: 305/2023. ಶಿ.ಅ–2023–24 ದಿನಾಂಕ : 01.11.2023

2022ರ ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8ನೇ ತರಗತಿ) ನೇಮಕಾತಿಗೆ ಸಂಬಂಧಪಟ್ಟಂತೆ ಬಾಕಿ ಇದ್ದ ಕಲ್ಯಾಣ ಕರ್ನಾಟಕ ಜಿಲ್ಲೆಗಳು ಮತ್ತು ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆಗಳ ಕೌನ್ಸಿಲಿಂಗ್ ಪ್ರಕ್ರಿಯೆಯ ಪ್ರಕಟಣೆ

"**ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8ನೇ ತರಗತಿ) ನೇಮಕಾತಿ–2022**"ಕ್ಕೆ ಸಂಬಂಧಿಸಿದಂತೆ ಕಲ್ಯಾಣ ಕರ್ನಾಟಕ ಜಿಲ್ಲೆಗಳು ಮತ್ತು ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆಗಳ 371 ಜೆ ಹುದ್ದೆಗಳ ಬಗ್ಗೆ ಮಾನ್ಯ ನ್ಯಾಯಾಲಯಗಳಲ್ಲಿ ಪ್ರಕರಣಗಳಿದ್ದ ಕಾರಣದಿಂದ ತಡೆ ಹಿಡಿಯಲಾಗಿದ್ದ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ 23162/2023, 23450/2023ರಲ್ಲಿನ ದಿನಾಂಕ: 30.10.2023ರ ಆದೇಶ ಮತ್ತು ಇಡೀ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಈಗಾಗಲೇ ರಿಟ್ ಅಪೀಲು ಸಂಖ್ಯೆ: 305/2023ರಲ್ಲಿನ ದಿನಾಂಕ: 12.10.2023ರ ಆದೇಶದ ತೀರ್ಪಿನ ಹಿನ್ನೆಲೆಯಲ್ಲಿ ನ್ಯಾಯಾಲಯಗಳ ಆದೇಶದಿಂದ ಪ್ರಭಾವಿತವಾಗಬಹುದಾದ ಹುದ್ದೆಗಳನ್ನು ಕಾಯ್ದಿರಿಸಿ ಉಳಿದ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್‌ನ್ನು ಮುಂದುವರೆಸಲಾಗಿದೆ.

ಈ ಬಗ್ಗೆ ಸದರಿ 371ಜೆ ಹುದ್ದೆಗಳಿರುವ (ಶೇಕಡ 80ರ ಸ್ಥಳೀಯ ವೃಂದ, ಶೇಕಡ 20ರ ಮಿಕ್ಕುಳಿದ ವೃಂದ ಮತ್ತು ಶೇಕಡ 8ರ ರಾಜ್ಯ ಮಟ್ಟದ ಸ್ಥಳೀಯ ವೃಂದದ ಹುದ್ದೆಗಳು) 09 ಜಿಲ್ಲೆಗಳಾದ ಬೀದರ್, ಕಲಬುರ್ಗಿ, ರಾಯಚೂರು, ಕೊಪ್ಪಳ, ಯಾದಗಿರಿ, ಬಳ್ಳಾರಿ, ವಿಜಯನಗರ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳ ಕುರಿತಾಗಿ **ದಿನಾಂಕ: 08.03.2023ರಂದು ಪ್ರಕಟಿತ 1:1 ಮುಖ್ಯ ಆಯ್ಕೆ ಪಟ್ಟಿಯಲ್ಲಿನ ಕೌನ್ಸಿಲಿಂಗ್‌ಗೆ ಅರ್ಹ ಅಭ್ಯರ್ಥಿಗಳ ವಿವರಗಳನ್ನು ದಿನಾಂಕ: 02.11.2023ರಂದು ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್ https://schooleducation.karnataka.gov.in** ನಲ್ಲಿ ಪ್ರಕಟಿಸಲಾಗುವುದು.

ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಕ್ರಮವಾಗಿ ಗಣಿತ ಮತ್ತು ವಿಜ್ಞಾನ, ಸಮಾಜ ವಿಜ್ಞಾನ, ಜೀವ ವಿಜ್ಞಾನ ಮತ್ತು ಆಂಗ್ಲ ಭಾಷಾ ಹುದ್ದೆಗಳಿಗೆ ಸ್ಥಳ ನಿಯುಕ್ತಿ ಕೌನ್ಸಿಲಿಂಗ್‌ನ್ನು **ದಿನಾಂಕ: 04.11.2023 ರಿಂದ ಬೆಳಿಗ್ಗೆ 10.30** ಗಂಟೆಯಿಂದ ಆಯಾ ಜಿಲ್ಲಾ **ನೇಮಕಾತಿ ಪ್ರಾಧಿಕಾರಿಯವರಾದ ಜಿಲ್ಲಾ ಉಪನಿರ್ದೇಶಕರು (ಆಡಳಿತ)** ರವರ ಕಛೇರಿಯಲ್ಲಿ ನಡೆಸಲಾಗುವುದು. ಅದ್ದರಿಂದ ಅಭ್ಯರ್ಥಿಗಳು ಇಲಾಖಾ ವೆಬ್‌ಸೈಟ್‌ನಲ್ಲಿರುವಂತೆ ಎಲ್ಲಾ ಅಗತ್ಯ ವಿವರಗಳನ್ನು ಪಡೆದುಕೊಂಡು ಸಕಾಲದಲ್ಲಿ ಕೌನ್ಸಿಲಿಂಗ್ ಸ್ಥಳದಲ್ಲಿ ಭಾವ ಚಿತ್ರವಿರುವ ಗುರುತಿನ ಚೀಟಿ ಮತ್ತು ನೇಮಕಾತಿಗೆ ಸಂಬಂಧಪಟ್ಟಂತೆ ಅಗತ್ಯ ದಾಖಲೆಗಳೊಂದಿಗೆ ಕಡ್ಡಾಯವಾಗಿ ಹಾಜರಾಗುವುದು.

ಹೆಚ್ಚಿನ ವಿವರಗಳಿಗೆ **ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆಯ ಕಛೇರಿಯನ್ನು ಸಂಪರ್ಕಿಸುವುದು.**

ಸಹಿ/–

DIPR/CP/YC/2023-24 ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ



ನಾಲ್ಕು ದಿನಗಳ ಸತತ ಕಾರ್ಯಾಚರಣೆ ನಡೆಸಿದ್ದ ಅರಣ್ಯ ಇಲಾಖೆ ಸಿಬ್ಬಂದಿ

ಜೀವಂತವಾಗಿ ಸೆರೆಯಾಗದ ಚಿರತೆ...!

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಹೊಸೂರು ರಸ್ತೆ ಕೂಡ್ಲುಗೇಟ್ ಬಳಿ ಕಾಣಿಸಿಕೊಂಡಿದ್ದ ಚಿರತೆಯನ್ನು ಜೀವಂತವಾಗಿ ಹಿಡಿಯುವ ಕಾರ್ಯಾಚರಣೆ ವಿಫಲವಾಗಿದ್ದು, ಅರಣ್ಯ ಸಿಬ್ಬಂದಿಯ ಬ್ಯಾರಲ್ ಗನ್ ಶೂಟ್‌ಗೆ ಚಿರತೆ ಬಲಿಯಾಗಿದೆ.

ಚಿರತೆ ಪತ್ತೆಗಾಗಿ ನಾಲ್ಕು ದಿನಗಳಿಂದಲೂ ನಾಲ್ಕು ತಂಡಗಳು ಕಾರ್ಯಾಚರಣೆ ನಡೆಸಿದ್ದವು. ಬೊಮ್ಮನಹಳ್ಳಿಯ ಕೈಗಾರಿಕಾ ಪ್ರದೇಶವಾದ ಕೂಡ್ಲುಗೇಟ್‌ನ ಕೃಷ್ಣಾರೆಡ್ಡಿಪಾಳ್ಯದ ಪಾಳುಬಿದ್ದ ಕಟ್ಟಡದಲ್ಲಿ ಇರುವುದು ಬುಧವಾರ ಖಚಿತವಾಗಿತ್ತು. ಕಾರ್ಯಾಚರಣೆಯನ್ನು ನಿರ್ದಿಷ್ಟಗೊಳಿಸಿದ್ದ ಸಿಬ್ಬಂದಿ, ಪಟಾಕಿ ಸಿಡಿಸಿ ಚಿರತೆ ಹೊರ ಬರುವಂತೆ ಮಾಡಿದರು.

ಚಿರತೆಯನ್ನು ಹೊರತರಲು ಮೊದಲು ನಡೆಸಿದ ಪ್ರಯತ್ನ ಫಲನೀಡಲಿಲ್ಲ. ಎರಡನೇ ಪ್ರಯತ್ನದಲ್ಲಿ ಗಿಡಗಂಟೆಗಳ ನಡುವೆ ಅವಿತು ಕುಳಿತಿದ್ದ ಚಿರತೆಯನ್ನು ಬಲೆ ಹಾಕಿ ಸೆರೆ ಹಿಡಿಯಲು ಪ್ರಯತ್ನಿಸಲಾಯಿತು. ಇದಕ್ಕಾಗಿ ಜೆಸಿಬಿ ಮೂಲಕ ಪೊದೆ, ಗಿಡ ಗಂಟೆಗಳನ್ನು ತೆರವುಗೊಳಿಸಲಾಯಿತು. ಆದರೆ ಹಿಡಿಯಲು ಸಾಧ್ಯವಾಗಲಿಲ್ಲ. ನಂತರ ಪಟಾಕಿ ಸಿಡಿಸಿ ಚಿರತೆಯನ್ನು ಹೊರತರಲಾಯಿತು.

ಚಿರತೆ ಸೆರೆ ಹಿಡಿಯಲು ಅರಣ್ಯ ಇಲಾಖೆ ಸಿಬ್ಬಂದಿ ನಡೆಸಿದ ಕಾರ್ಯಾಚರಣೆ (ಎಡಚಿತ್ರ) ಕಾರ್ಯಾಚರಣೆಯ ಅಂತಿಮಘಟ್ಟ –ಪ್ರಜಾವಾಣಿ ಚಿತ್ರಗಳು/ ಬಿ.ಕೆ.ಜನಾರ್ದನ

ಚಿರತೆ ಹೊರಬರುತ್ತಿದ್ದಂತೆ ಅರವಳಿಕೆ ನೀಡುವ ಪ್ರಕ್ರಿಯೆಯಿಂದ ತಪ್ಪಿಸಿಕೊಂಡು, ಕಾರ್ಯಾಚರಣೆ ಸಿಬ್ಬಂದಿ ಮೇಲೆ ದಾಳಿ ಮಾಡಿತು. ನಂತರ ಪೊದೆಗಳಲ್ಲಿ ಅವಿತುಕೊಂಡಿತು. ಚಿರತೆ ದಾಳಿಯಿಂದ ಶಾರ್ಪ್ ಶೂಟರ್, ಅರವಳಿಕೆ ತಜ್ಞ ವೈದ್ಯ ಕಿರಣ್ ಅವರ ಕುತ್ತಿಗೆಗೆ ಗಾಯವಾಯಿತು. ಟಾಸ್ಕ್ ಫೋರ್ಸ್‌ನ ಧನರಾಜ್‌ಗೆ ಹೊಟ್ಟೆ ಭಾಗದಲ್ಲಿ ಗಾಯಗಳಾದವು. ಬಲೆ ಹಿಡಿದುಕೊಂಡಿದ್ದ ಬಿಬಿಎಂಪಿ ನೌಕರ ಮಹೇಶ್, ಆಯತಪ್ಪಿ ಗುಂಡಿಗೆ ಬಿದ್ದು ಗಾಯಗೊಂಡರು. ಅವರಿಗೆ ಹತ್ತಿರದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.

ಕಟ್ಟಡದಲ್ಲಿ ಅವಿತಿರುವುದನ್ನು ಅರಿತ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಅಲ್ಲಿಂದ ತಪ್ಪಿಸಿಕೊಂಡು ಬಲೆಗೆ ಸಿಗದೆ ಮುನ್ನುಗ್ಗಿ ದಾಳಿ ಮಾಡಲು ಬಂದಾಗ ಸಿಬ್ಬಂದಿ ಗುಂಡು ಹಾರಿಸಿದ್ದಾರೆ.

'ಮಧ್ಯಾಹ್ನ ಕಾರ್ಯಾಚರಣೆ ಮುಂದುವರಿಸಿದಾಗಲೂ ಸಿಬ್ಬಂದಿ ಮೇಲೆ ಚಿರತೆ ದಾಳಿ ಮಾಡಿತು. ಹೀಗಾಗಿ, ಗುಂಡು ಹಾರಿಸಲಾಗಿದೆ. ಬುಧವಾರ ಬೆಳಿಗ್ಗೆಯಿಂದ ಎರಡು ಬಾರಿ ಚಿರತೆ ಸಿಬ್ಬಂದಿ ಮೇಲೆ ದಾಳಿ ಮಾಡಿತ್ತು' ಎಂದು ಸಿಸಿಎಫ್ ಲಿಂಗರಾಜ ತಿಳಿಸಿದರು.

ಬನ್ನೇರುಘಟ್ಟ ಜೈವಿಕ ಉದ್ಯಾನದ ಆಸ್ಪತ್ರೆಯಲ್ಲಿ ಚಿರತೆಯ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ.

ಬುಧವಾರ ಬೆಳಿಗ್ಗೆಯಿಂದಲೇ ಆರಂಭವಾದ ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ದಳ, ಮೈಸೂರಿನಿಂದ ಆಗಮಿಸಿದ ಡಿಎಫ್‌ಸಿ ಸೌರಭ್ ಕುಮಾರ್ ನೇತೃತ್ವದ ಲೆಪರ್ಡ್ ಟಾಸ್ಕ್ ಫೋರ್ಸ್ ಭಾಗಿಯಾಗಿದ್ದವು.

ಸ್ಥಳೀಯರ ಬೇಸರ

ಚಿರತೆ ಅಡ್ಡಾಡುತ್ತಿರುವುದರಿಂದ ಆತಂಕಗೊಂಡಿದ್ದ ಸ್ಥಳೀಯರು, ಅದರ ಸಾವಿಗೆ ಮರುಗಿದ್ದಾರೆ. 'ಜೀವಂತವಾಗಿ ಹಿಡಿದಿದ್ದಲ್ಲಿ ಖುಷಿಯಾಗುತ್ತಿತ್ತು. ಆದರೆ ಚಿರತೆ ಗುಂಡಿಗೆ ಬಲಿಯಾಗಿದ್ದು ಬೇಸರ ತರಿಸಿದೆ' ಎಂದು ಸ್ಥಳೀಯ ನಿವಾಸಿಗಳು ಅಭಿಪ್ರಾಯಪಟ್ಟರು.

ಈ ಕಾರ್ಯಾಚರಣೆಯಲ್ಲಿ ಗಾಯಗೊಂಡವರ ಚಿಕಿತ್ಸೆಗೆ ವೈಯಕ್ತಿಕವಾಗಿ ₹2 ಲಕ್ಷ ನೀಡುವುದಾಗಿ ಶಾಸಕ ಸತೀಶ್ ರೆಡ್ಡಿ ಪ್ರಕಟಿಸಿದರು.

'ಸ್ಥಳೀಯ ನಿವಾಸಿಗಳ ನಿದ್ದೆಗೆಡಿಸಿದ್ದ ಚಿರತೆಯನ್ನು ಸೆರೆ ಹಿಡಿಯಲಾಯಿತಾದರೂ, ಚಿರತೆ ಗುಂಡೇಟಿನಿಂದ ಸಾವನ್ನಪ್ಪಿದ್ದು ನೋವಿನ ಸಂಗತಿ' ಎಂದು ಸತೀಶ್ ರೆಡ್ಡಿ ಬೇಸರ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಕೃಷಿಗೆ 7 ಗಂಟೆ ವಿದ್ಯುತ್: ಶೀಘ್ರ ನಿರ್ಧಾರ–ಜಾರ್ಜ್

ಚಿಕ್ಕಮಗಳೂರು: ಕೃಷಿಗೆ ನಿತ್ಯ 5 ಗಂಟೆ ತ್ರಿಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ನಿತ್ಯ 7 ಗಂಟೆ ವಿದ್ಯುತ್ ಪೂರೈಸುವ ನಿರ್ಧಾರವನ್ನು ಶೀಘ್ರವೇ ಕೈಗೊಳ್ಳಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಮೆಸ್ಕಾಂ ಚಿಕ್ಕಮಗಳೂರು ವೃತ್ತದ ಅಧಿಕಾರಿಗಳ ಸಭೆ ನಡೆಸಿದ ಅವರು, 'ಈಗ ಕೆಲವೆಡೆ ಮಳೆ ಆಗಿದ್ದು, ಬೇಡಿಕೆ ಕಡಿಮೆಯಾಗಿದೆ. ಜಲ ವಿದ್ಯುತ್, ಉಷ್ಣ, ಪವನ ಮತ್ತು ಸೌರ ವಿದ್ಯುತ್ ಉತ್ಪಾದನೆ ಹೆಚ್ಚಾಗಿದೆ. ಪಂಜಾಬ್ ಮತ್ತು ಉತ್ತರ ಪ್ರದೇಶದಿಂದ ವಿದ್ಯುತ್ ಖರೀದಿಸಲಾಗುತ್ತಿದೆ. ಆದ್ದರಿಂದ ಕೃಷಿಗೆ ಕಡಿತ ಮಾಡಿರುವ ವಿದ್ಯುತ್ ಪೂರೈಕೆಯನ್ನು ಮತ್ತೆ ನೀಡಲಾಗುವುದು. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಒಂದೆರಡು ದಿನಗಳಲ್ಲಿ ಪ್ರಗತಿ ಪರಿಶೀ ಲನಾ ಸಭೆ ನಡೆಯಲಿದ್ದು, ಅಲ್ಲಿ ಈ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ' ಎಂದರು.

'ಮಳೆ ಇಲ್ಲದೆ ಜಲವಿದ್ಯುತ್ ಉತ್ಪಾದನೆ, ಮೋಡ ಇದ್ದಿದ್ದರಿಂದ ಸೌರ ವಿದ್ಯುತ್ ಉತ್ಪಾದನೆ ಕಡಿಮೆಯಾಗಿತ್ತು. ನಿರ್ವಹಣೆ ಕಾರ್ಯ ನಡೆಯುತ್ತಿದ್ದರಿಂದ ಉಷ್ಣ ವಿದ್ಯುತ್ ಉತ್ಪಾದನೆಯಲ್ಲೂ ವ್ಯತ್ಯಯವಾಗಿತ್ತು. ಹೊರ ರಾಜ್ಯಗಳಿಂದ ಖರೀದಿಗೆ ಯತ್ನಿಸಿದ್ದರೂ ವಿದ್ಯುತ್ ಸಿಕ್ಕಿರಲಿಲ್ಲ. ಸ್ವಲ್ಪ ದಿನ ತೊಂದರೆ ಎದುರಿಸಬೇಕಾಯಿತು. ಈಗ ಎಲ್ಲವೂ ಸರಿಯಾಗಿದೆ' ಎಂದು ಹೇಳಿದರು.

ಮಹಾತ್ಮ ಗಾಂಧೀಜಿಗೆ ನಿಂದನೆ: ಎಫ್‌ಐಆರ್ ದಾಖಲು

ಬೊಮ್ಮನಹಳ್ಳಿ: ಸಾಮಾಜಿಕ ಮಾಧ್ಯಮದಲ್ಲಿ ಮಹಾತ್ಮ ಗಾಂಧೀಜಿ ಅವರನ್ನು ಅವಮಾನಿಸಿ ಪೋಸ್ಟ್ ಹಾಕಿದ್ದಾರೆ ಎಂಬ ಆರೋಪದಡಿ ಬೆಳಗಾವಿ ಜಿಲ್ಲೆ ಸವದತ್ತಿಯ ರತನ್ ಸನಾತನಿ ಎಂಬುವರ ವಿರುದ್ಧ ಎಚ್‌ಎಸ್‌ಆರ್ ಬಡಾವಣೆ ಸೈಬರ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆರೋಪಿ, ನಾಥೂರಾಂ ಗೋಡ್ಸೆ ಫೋಟೊ ಬಳಸಿ ಗಾಂಧೀಜಿ ಅವಮಾನಿಸಿದ್ದಾರೆ ಎಂದು ಬೊಮ್ಮನಹಳ್ಳಿ ಕಾಂಗ್ರೆಸ್ ಮುಖಂಡ ಅನಿಲ್ ರೆಡ್ಡಿ ದೂರು ನೀಡಿದ್ದರು.

'ಸಮಾಜದಲ್ಲಿ ಸಾಮರಸ್ಯ ಕದಡುವ ಪ್ರಯತ್ನ ನಡೆಸಿದ್ದಾರೆ. ಅವರ ಬರಹ ಕೋಮುಗಲಭೆಗೆ ಪ್ರಚೋದನಕಾರಿ ಆಗಿದೆ. ರತನ್ ಸನಾತನಿ ಅವರನ್ನು ಬಂಧಿಸಬೇಕು' ಎಂದು ಕೋರಿದ್ದಾರೆ.

'ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧೀಜಿ ಅವರನ್ನು ಅಪಮಾನ ಮಾಡುವುದು, ಗೋಡ್ಸೆಯನ್ನು ವೈಭವೀಕರಿಸುವ ಪ್ರಯತ್ನಗಳು ನಡೆಯುತ್ತಿರುವುದು ದುರದೃಷ್ಟಕರ. ಆದ್ದರಿಂದ, ರತನ್ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿದ್ದಾರೆ.

ರೈಲಿಗೆ ಕಲ್ಲು ತೂರಾಟದ ವಿರುದ್ಧ ಜಾಗೃತಿ

ಬೆಂಗಳೂರು: ಚಲಿಸುವ ರೈಲಿಗೆ ಕಲ್ಲು ತೂರಾಟ ನಡೆಸುವುದು, ದಹಿಸುವ ವಸ್ತುಗಳನ್ನು ರೈಲಿನಲ್ಲಿ ಒಯ್ಯುವುದರ ವಿರುದ್ಧ ಜಾಗೃತಿ ಮೂಡಿಸುವ ಮತ್ತು ಕಾರ್ಯಾಚರಣೆ ನಡೆಸುವ ಒಂದು ತಿಂಗಳ ಕಾರ್ಯಕ್ರಮಕ್ಕೆ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದಲ್ಲಿ ಸೋಮವಾರ ಚಾಲನೆ ನೀಡಲಾಯಿತು.

ಬೆಂಗಳೂರು ವಿಭಾಗದ ಅಧಿಕಾರಿಗಳು, ಸಿಬ್ಬಂದಿ, ರೈಲ್ವೆ ಸಂರಕ್ಷಣಾ ಪಡೆ (ಆರ್‌ಪಿಎಫ್) ಅಧಿಕಾರಿಗಳ ತಂಡ ಕಾರ್ಯಾಚರಣೆ ನಡೆಸಲಿದೆ. ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಬೀದಿ ನಾಟಕ ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ನಗರದ 'ಕೃಷ್ಣ ದೇವರಾಯ ಹಾಲ್ಟ್' ರೈಲು ನಿಲ್ದಾಣದಲ್ಲಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಯೋಗೀಶ್ ಮೋಹನ್ ಈ ಅಭಿಯಾನಕ್ಕೆ ಚಾಲನೆ ನೀಡಿದರು.

ರೈಲುಗಳ ಮೇಲೆ ಕಲ್ಲು ತೂರಾಟ ನಡೆಸುವುದು ಕ್ರಿಮಿನಲ್ ಅಪರಾಧವಾಗಿದ್ದು, ದಂಡ, ಐದು ವರ್ಷಗಳವರೆಗೆ ಜೈಲು ಶಿಕ್ಷೆ, ದಹನಕಾರಿ ವಸ್ತುಗಳನ್ನು ರೈಲಿನಲ್ಲಿ ಒಯ್ದರೆ 3 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಅವಕಾಶವಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದರು.

ಅಪಘಾತ: ಪತ್ರಿಕಾ ವಿತರಣೆ ಯುವಕ ಸಾವು

ಪ್ರಜಾವಾಣಿ ವಾರ್ತೆ

ಮನೋಜ್

ಯಲಹಂಕ: ಸಾದಹಳ್ಳಿ ಗೇಟ್ ಸಮೀಪದ ಐಟಿಸಿ ಕಾರ್ಖಾನೆ ಎದುರು ಬುಧವಾರ ಬೆಳಿಗ್ಗೆ ಬಸ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ದಿನಪತ್ರಿಕೆ ವಿತರಣೆಗೆ ತೆರಳುತ್ತಿದ್ದ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಬ್ಬ ಯುವಕ ಗಂಭೀರವಾಗಿ ಗಾಯಗೊಂಡಿದ್ದಾರೆ.

ಸೊಣ್ಣಪ್ಪನಹಳ್ಳಿ ಗ್ರಾಮದ ಮನೋಜ್ (18) ಮೃತಪಟ್ಟವರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮುಖ್ಯರಸ್ತೆಯ ಪಕ್ಕದಲ್ಲಿರುವ ಸೇವಾ ರಸ್ತೆಯಲ್ಲಿ ಬೆಳಿಗ್ಗೆ 6.30ರ ಸುಮಾರಿಗೆ ಮನೋಜ್ ತನ್ನ ಸ್ನೇಹಿತ ಶಿವಶಂಕರ್‌ಗ ಅವರೊಂದಿಗೆ ಪತ್ರಿಕೆ ವಿತರಿಸಲು ಉತ್ತನಹಳ್ಳಿ ಪಾಯಿಂಟ್ ಕಡೆಗೆ ತೆರಳುತ್ತಿದ್ದರು. ಈ ವೇಳೆ ಹಿಂಬದಿಯಿಂದ ಬರುತ್ತಿದ್ದ ಬಸ್ಸೊಂದು, ಸರ್ವೀಸ್ ರಸ್ತೆಯಿಂದ ಎಡಕ್ಕೆ ಕಾರ್ಖಾನೆ ಗೇಟ್ ಮೂಲಕ ಒಳಪ್ರವೇಶಿಸುವ ಸಂದರ್ಭದಲ್ಲಿ ಬೈಕ್ ಹಾಗೂ ಬಸ್ ನಡುವೆ ಅಪಘಾತವಾಗಿದೆ. ಮನೋಜ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿಯಲ್ಲಿ ಕುಳಿತಿದ್ದ ಶಿವಶಂಕರ್ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ.

ಕನ್ನಡ ಹಾಡು ಹಾಕಿದ್ದಕ್ಕೆ ಪಬ್ ವ್ಯವಸ್ಥಾಪಕನಿಗೆ ಥಳಿತ

ಅಪರಾಧ ಸುದ್ದಿ

ಬೆಂಗಳೂರು: ಪಬ್‌ವೊಂದರಲ್ಲಿ ಕನ್ನಡ ಹಾಡು ಹಾಕಿದ್ದಕ್ಕೆ ಸಿಟ್ಟಿಗೆದ್ದ ಗ್ರಾಹಕರು, ವ್ಯವಸ್ಥಾಪಕನಿಗೆ ಹಿಗ್ಗಾಮುಗ್ಗಾ ಥಳಿಸಿದ್ದಾರೆ.

ರಾಜರಾಜೇಶ್ವರಿ ನಗರದ ಕೆಂಚನಹಳ್ಳಿ ಮುಖ್ಯರಸ್ತೆಯ ಐಡಿಯಲ್ ಹೋಮ್ಸ್ ಪಬ್‌ನಲ್ಲಿ ಕನ್ನಡ ಹಾಡುಗಳನ್ನು ಹಾಕಿದಾಗ ಗ್ರಾಹಕರಿಬ್ಬರು ಪಬ್ ವ್ಯವಸ್ಥಾಪಕ ರವಿಕಾಂತ್ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಸಂಬಂಧ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಶ್ರೇಯಸ್ ಹಾಗೂ ಅವರ ಜೊತೆಗೆ ಬಂದಿದ್ದ ಸ್ನೇಹಿತ ಸೇರಿಕೊಂಡು ನನ್ನ ಮೇಲೆ ಹಲ್ಲೆ ನಡೆಸಿದರು. ಅವರ ಜೊತೆಗೆ ಬಂದಿದ್ದ ಮಹಿಳೆಯೊಬ್ಬರೂ ನನ್ನ ಮೇಲೆ ಹಲ್ಲೆ ನಡೆಸುವಾಗ ಆರೋಪಿಗಳಿಗೆ ಸಹಕಾರ ನೀಡಿದರು. ಮೂವರ ವಿರುದ್ಧವೂ ಕ್ರಮ ಕೈಗೊಳ್ಳಿ' ಎಂದು ದೂರಿನಲ್ಲಿ ಕೋರಿದ್ದಾರೆ.

75 ಸುಲಿಗೆ ಪ್ರಕರಣ: ಇಬ್ಬರ ಸೆರೆ

ಬೆಂಗಳೂರು: ಹನ್ನೆರಡು ವರ್ಷಗಳಿಂದ ಕಳ್ಳತನ ಮಾಡುವುದನ್ನೇ ವೃತ್ತಿ ಮಾಡಿಕೊಂಡಿದ್ದ ಇಬ್ಬರು ಆರೋಪಿಗಳನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಜಬಿವುದ್ದೀನ್ ಹಾಗೂ ಮೊಹಮದ್ ಮೆಹ್ತಾಬ್ ಬಂಧಿತರು.

'ಬಂಧಿತರಿಂದ ₹26 ಲಕ್ಷ ಮೌಲ್ಯದ 503 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ. 12 ವರ್ಷಗಳಿಂದ ಒಟ್ಟು 75ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಇಬ್ಬರು ಆರೋಪಿಗಳು ಭಾಗಿಯಾಗಿದ್ದರು' ಎಂದು ಪೊಲೀಸರು ತಿಳಿಸಿದರು.

'ಜಬಿವುದ್ದೀನ್ ಮತ್ತು ಮೆಹ್ತಾಬ್ ಸಂಜೆ ವೇಳೆ ವಾಯುವಿಹಾರ ನಡೆಸುವ ವೃದ್ಧರನ್ನೇ ಗುರಿಯಾಗಿಸಿಕೊಂಡು ಸರ ಕಿತ್ತುಕೊಂಡು ಪರಾರಿ ಆಗುತ್ತಿದ್ದರು. ಮಹಿಳೆಯರನ್ನೂ ಗುರಿಯಾಗಿಸಿ ಮಾಂಗಲ್ಯ ಸರ ಕಳವು ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಈ ಇಬ್ಬರು ಆರೋಪಿಗಳು ಮಲ್ಲೇಶ್ವರ, ಡಿ.ಜೆ. ಹಳ್ಳಿ, ಮಹಾಲಕ್ಷ್ಮಿ ಲೇಔಟ್, ಯಶವಂತಪುರ, ರಾಜಗೋಪಾಲನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳವು ಮಾಡುತ್ತಿದ್ದರು' ಎಂದು ಮಾಹಿತಿ ನೀಡಿದರು.

ಚಿನ್ನ ಅಡಮಾನ ಇಡಲು ಬಂದಾಗ ಸಿಕ್ಕಿಬಿದ್ದ: ಕಳವು ಮಾಡಿದ್ದ ಚಿನ್ನಾಭರಣವನ್ನು ಗಿರವಿ ಇಡಲು ಬಂದಿದ್ದಾಗ ಆರೋಪಿಯನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಜಗದೀಶ್ ಬಂಧಿತ ಆರೋಪಿ. ಆರೋಪಿಯಿಂದ ₹6.5 ಲಕ್ಷ ಮೌಲ್ಯದ 112 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ.

ಮಲ್ಲೇಶ್ವರದ 18ನೇ ಕ್ರಾಸ್‌ನಲ್ಲಿರುವ ಚಿನ್ನಾಭರಣ ಮಳಿಗೆಗೆ ಬಂದಿದ್ದ ಆರೋಪಿಯನ್ನು ಗಮನಿಸಿದ್ದ ಮಾಲೀಕ ಅನುಮಾನಗೊಂಡು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ಮನೆಗಳ ಬೀಗ ಒಡೆದು ಚಿನ್ನಾಭರಣ ಹಾಗೂ ನಗದು ಕಳವು ಮಾಡುತ್ತಿರುವುದು ಗೊತ್ತಾಗಿದೆ. ಆರೋಪಿ 2014ರಿಂದಲೂ ಸಂಜಯನಗರ, ಆರ್‌.ಟಿ.ನಗರ, ವಿದ್ಯಾರಣ್ಯಪುರ ಸೇರಿದಂತೆ ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 20ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಪ್ರಕರಣವೊಂದರಲ್ಲಿ ಬಂಧನಕ್ಕೆ ಒಳಗಾಗಿ ಜೈಲಿಗೂ ಹೋಗಿದ್ದ' ಎಂದು ಪೊಲೀಸರು ಹೇಳಿದರು.

ಜಾತಿ ನಿಂದನೆ: ಪುನೀತ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಜಾತಿ ನಿಂದನೆ ಆರೋಪದಡಿ ರಾಷ್ಟ್ರ ರಕ್ಷಣಾ ಪಡೆ ಸಂಘಟನೆ ಮುಖಂಡ ಪುನೀತ್ ಕುಮಾರ್ ಅಲಿಯಾಸ್ ಪುನೀತ್ ಕೆರೆಹಳ್ಳಿ ವಿರುದ್ಧ ಸಂಪಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ರಣಧೀರ ಪಡೆಯ ಮುಖಂಡ ಬೈರಪ್ಪ ಹರೀಶ್‌ಕುಮಾರ್ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು. ಫೇಸ್‌ಬುಕ್‌ನಲ್ಲಿ ಜಾತಿ ನಿಂದನೆ ಮಾಡಿ ಬೆದರಿಕೆ ಹಾಕಿದ್ದಾರೆ. ಅಲ್ಲದೇ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು ಪುನೀತ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ದೂರು ನೀಡಿದ್ದಾರೆ.

'ಕ್ರಿಮಿನಲ್ ಹಿನ್ನೆಲೆಯ ಪುನೀತ್ ಬಗ್ಗೆ ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಮಾಧ್ಯಮದಲ್ಲಿ ಪ್ರಕಟವಾದ ವರದಿಯನ್ನು ನನ್ನ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿದ್ದೆ. ನಂತರ ಈ ಬೆದರಿಕೆ ಹಾಕಿ, ಜಾತಿ ನಿಂದನೆ ಮಾಡಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಅಸಭ್ಯ ವರ್ತನೆ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರದ ಪ್ರವೇಶದ್ವಾರದ ಬಳಿಯ ಲುಲು ಮಾಲ್‌ನಲ್ಲಿ ಕಳೆದ ವಾರ ಯುವತಿಗೆ ಡಿಕ್ಕಿ ಹೊಡೆದು ಅಸಭ್ಯ ವರ್ತನೆ ತೋರಿದ್ದ ವ್ಯಕ್ತಿಯ ಪತ್ತೆಗೆ ಮಾಗಡಿ ರೋಡ್ ಠಾಣೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಮಾಲ್ ಆಡಳಿತ ಮಂಡಳಿ ವ್ಯಕ್ತಿಯ ವಿರುದ್ಧ ದೂರು ನೀಡಿದ್ದು, ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

'ಆತ ನಿವೃತ್ತ ಶಿಕ್ಷಕ. ಬಸವೇಶ್ವರ ನಗರದಲ್ಲಿ ನೆಲೆಸಿದ್ದಾರೆ' ಎಂಬ ಮಾಹಿತಿ ಬಂದಿತ್ತು. ಮಾಹಿತಿ ಆಧರಿಸಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಗಿದೆ. ಆ ಮನೆಯಲ್ಲಿ ಯಾರೂ ಇರಲಿಲ್ಲ. ಬೀಗ ಹಾಕಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆ ವ್ಯಕ್ತಿ ಮಾಲ್‌ನಲ್ಲಿ ಯಾವುದೇ ವಸ್ತುಗಳನ್ನು ಖರೀದಿಸಿಲ್ಲ. ಯಾವುದಾದರೂ ವಸ್ತು ಖರೀದಿಸಿದ್ದರೆ ಮೊಬೈಲ್ ಸಂಖ್ಯೆ ನೀಡುವ ಸಾಧ್ಯತೆಯಿತ್ತು. ಬೈಕ್‌ನಲ್ಲೂ ಬಂದಿರಲಿಲ್ಲ. ನಡೆದೇ ಬಂದಿದ್ದರು. ಎಲ್ಲ ಸಿಸಿ ಟಿವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗಿದೆ' ಎಂದು ಪೊಲೀಸರು ಹೇಳಿದರು.

ಅ.29ರಂದು ಲುಲು ಮಾಲ್‌ನಲ್ಲಿ ಯುವತಿಗೆ ಡಿಕ್ಕಿ ಹೊಡೆದು ಅಸಭ್ಯವಾಗಿ ವರ್ತನೆ ಮಾಡಿದ್ದ. ಅದೇ ಮಾಲ್‌ಗೆ ಕುಟುಂಬಸ್ಥರ ಜೊತೆಗೆ ಬಂದಿದ್ದ ಯಶವಂತ್ ಎಂಬುವರು ಆ ದೃಶ್ಯವನ್ನು ಸೆರೆ ಹಿಡಿದು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿ ಕ್ರಮಕ್ಕೆ ಆಗ್ರಹಿಸಿದ್ದರು.

ತ್ಯಾಜ್ಯಕ್ಕೆ ಬೆಂಕಿ: ದಟ್ಟೈಸಿದ ಹೊಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಗಂಗಮ್ಮನ ಗುಡಿ ಬಳಿ ಕಾರ್ಖಾನೆಯೊಂದರ ಕೌಂಪೌಂಡ್‌ನಲ್ಲಿದ್ದ ಸ್ಪಾಂಜ್ ತ್ಯಾಜ್ಯಕ್ಕೆ ಬುಧವಾರ ಸಂಜೆ ಬೆಂಕಿ ತಗುಲಿ ಕ್ಷಣಕಾಲ ಆತಂಕ ಸೃಷ್ಟಿಯಾಗಿತ್ತು. ಅಪಾರ ಪ್ರಮಾಣದ ತ್ಯಾಜ್ಯವನ್ನು ಸ್ಥಳದಲ್ಲಿ ಸಂಗ್ರಹಿಸಲಾಗಿತ್ತು.

ಬೆಂಕಿ ಎತ್ತರಕ್ಕೆ ಹೊತ್ತಿ ಉರಿಯಿತು. ದಟ್ಟೈಸಿದ ಹೊಗೆಯೂ ಆತಂಕ ಸೃಷ್ಟಿಸಿತ್ತು. ಮಾಹಿತಿ ತಿಳಿದು ಸ್ಥಳಕ್ಕೆ ಧಾವಿಸಿದ ಮೂರು ಅಗ್ನಿಶಾಮಕ ದಳದ ವಾಹನಗಳು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದವು. ಸ್ಥಳೀಯರೂ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆಗೆ ನೆರವು ನೀಡಿದರು.

'ಬೆಂಕಿ ಘಟನೆ ಹೇಗೆ ಸಂಭವಿಸಿತು ಎಂಬುದು ತಿಳಿದಿಲ್ಲ. ಯಾರಿಗೂ ಅಪಾಯ ಸಂಭವಿಸಿಲ್ಲ' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಗಂಗಮ್ಮನಗುಡಿ ಠಾಣೆಯಲ್ಲಿ ಎಫ್‌ಎಆರ್ (ಫೈರ್ ಆಕ್ಸಿಡೆಂಟಲ್ ರಿಪೋರ್ಟ್) ದಾಖಲಾಗಿದೆ.

ಬೆಂಕಿ ಅವಘಡದಿಂದ ಆವರಿಸಿದ ಹೊಗೆ

ಆ್ಯಡಂ ವಿರುದ್ಧ ಮತ್ತೊಂದು ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ತವ್ಯನಿರತ ಯಲಹಂಕ ನ್ಯೂಟೌನ್ ಪೊಲೀಸ್ ಠಾಣೆಯ ಎಎಸ್‌ಐ ಒಬ್ಬರಿಗೆ ನಿಂದಿಸಿದ ಆರೋಪದಡಿ ವಸ್ತ್ರ ವಿನ್ಯಾಸಕ ಪ್ರಸಾದ್ ಬಿದ್ದಪ್ಪ ಅವರ ಪುತ್ರ ಆ್ಯಡಂ ಸೋಮನ ಬಿದ್ದಪ್ಪ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಧಾರ್ಮಿಕ ಭಾವನೆಗಳಿಗೆ ಧಕ್ಕೆ ಹಾಗೂ ಪೊಲೀಸ್ ಅಧಿಕಾರಿಗೆ ನಿಂದನೆ ಆರೋಪದ ಅಡಿ ಈ ಪ್ರಕರಣ ದಾಖಲಾಗಿದೆ. ಈ ಹಿಂದೆ ಇದೇ ಪೊಲೀಸ್ ಠಾಣೆಯಲ್ಲಿ ಅತೀ ವೇಗದ ಕಾರು ಚಾಲನೆ ಹಾಗೂ ವ್ಯಕ್ತಿಯೊಬ್ಬರಿಗೆ ಜೀವ ಬೆದರಿಕೆ ಹಾಕಿದ ಆರೋಪದಡಿ ಅವರ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ರಸ್ತೆಯಲ್ಲಿ ದಾರಿ ಬಿಡುವಂತೆ ಹಾರ್ನ್ ಮಾಡಿದ್ದರೆಂಬ ಕಾರಣಕ್ಕೆ ಕಾರನ್ನು ಅಡ್ಡಗಟ್ಟಿ ದುರ್ವರ್ತನೆ ತೋರಿದ್ದ ಆರೋಪದಡಿ ಆ್ಯಡಂ ಬಿದ್ದಪ್ಪ ಅವರನ್ನು ಅ.25ರಂದು ಯಲಹಂಕ ನ್ಯೂ ಟೌನ್ ಠಾಣೆ ಪೊಲೀಸರು ಬಂಧಿಸಿದ್ದರು. ರಾಹುಲ್ ಎಂಬಾತ ದೂರು ನೀಡಿದ್ದರು. ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದರು.

ಆ್ಯಡಂ ಮದ್ಯ ಸೇವಿಸಿ ಅಡ್ಡಾದಿಡ್ಡಿ ಕಾರು ಚಲಾಯಿಸಿಕೊಂಡು ಹೊರಟಿದ್ದರು. ಹಿಂದೆಯೇ ಕಾರಿನಲ್ಲಿ ಬರುತ್ತಿದ್ದ ರಾಹುಲ್ ಅವರು ದಾರಿ ಬಿಡುವಂತೆ ಹಾರ್ನ್ ಮಾಡಿದ್ದರು. ಆದರೂ, ದಾರಿ ಬಿಟ್ಟಿರಲಿಲ್ಲ. ಈ ಕುರಿತು ರಾಹುಲ್ ಹಾಗೂ ಆ್ಯಡಂ ನಡುವೆ ವಾಗ್ವಾದ ನಡೆದಿತ್ತು. ಆಗ ಆ್ಯಡಂ ಅವರು ದುರ್ವರ್ತನೆ ತೋರಿದ್ದರು ಎಂಬ ಆರೋಪ ಅಡಿ ಪೊಲೀಸರು ಪ್ರಕರಣ ದಾಖಲಾಗಿತ್ತು. ಸ್ಥಳಕ್ಕೆ ಬಂದಿದ್ದ ಗಸ್ತಿನಲ್ಲಿದ್ದ ಪೊಲೀಸರಿಗೆ ನಿಂದನೆ ಮಾಡಿದ್ದ ಆರೋಪ ಸಂಬಂಧ ಅ.28ರಂದು ಮತ್ತೊಂದು ಪ್ರಕರಣ ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ.

ಶ್ರೀರಾಮ, ಆಂಜನೇಯ, ಸಿ.ಎಂ ಯೋಗಿ ಭಾವಚಿತ್ರಕ್ಕೆ ಸಗಣಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜೇವರ್ಗಿ ತಾಲ್ಲೂಕಿನ ಆಂದೋಲಾ ಗ್ರಾಮದಲ್ಲಿ ಶ್ರೀರಾಮ ಸೇನೆ ಅಳವಡಿಸಿದ್ದ ಫ್ಲೆಕ್ಸ್‌ನಲ್ಲಿದ್ದ ಶ್ರೀರಾಮ, ಆಂಜನೇಯ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೇರಿ ಇತರರ ಭಾವಚಿತ್ರಗಳಿಗೆ ಬುಧವಾರ ಸಗಣಿ ಹಚ್ಚಲಾಗಿದೆ. ಈ ಸಂಬಂಧ ಐವರ ವಿರುದ್ಧ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀರಾಮ ಸೇನೆಯ ಜಿಲ್ಲಾ ಅಧ್ಯಕ್ಷ ರಮೇಶ ಮಕಾಶಿ ಅವರು ನೀಡಿದ ದೂರಿನ ಅನ್ವಯ ಸಂಶಯಾಸ್ಪದವಾಗಿ ಐವರ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಫ್ಲೆಕ್ಸ್ ಅಳವಡಿಕೆ ಸಂಬಂಧ ಎರಡು ಗುಂಪಿನ ನಡುವೆ ಸಂಘರ್ಷ ಉದ್ಭವಿಸಿದ್ದರಿಂದ ಈ ಕೃತ್ಯ ಎಸಗಿರಬಹುದು. ಸದ್ಯ ತನಿಖೆ ನಡೆಸಲಾಗುತ್ತಿದ್ದು, ಆಂದೋಲಾ ಮಠಕ್ಕೆ ಭದ್ರತೆ ಕಲ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಆಂದೋಲಾ ಗ್ರಾಮದಲ್ಲಿ ಅಳವಡಿಸಿದ್ದ ಶ್ರೀರಾಮ ಸೇನೆಯ ಫ್ಲೆಕ್ಸ್‌ನಲ್ಲಿದ್ದ ಭಾವಚಿತ್ರಗಳಿಗೆ ಕಿಡಿಗೇಡಿಗಳು ಸಗಣಿ ಹಚ್ಚಿರುವುದು

'ಆನೆ ಸಾವಿಗೆ ಹೃದಯಸ್ತಂಭನ, ಯಕೃತ್ ಹಾನಿ ಕಾರಣ'

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): 'ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ರಾಮಾಪುರ ಕ್ಯಾಂಪಿನಲ್ಲಿದ್ದ ಆನೆ ಸಾವಿಗೆ ಹೃದಯಸ್ತಂಭನ ಹಾಗೂ ಯಕೃತ್ ಹಾನಿ ಕಾರಣ' ಎಂದು ಅರಣ್ಯಾಧಿಕಾರಿಗಳು ದೃಢಪಡಿಸಿದ್ದಾರೆ.

'ಕಳೆದ ಜೂನ್ 7ರಂದು ಈ ಆನೆಯನ್ನು ಕುಂದಕೆರೆ ವಲಯದಲ್ಲಿ ಸೆರೆ ಹಿಡಿದು ರಾಂಪುರ ಆನೆ ಶಿಬಿರಕ್ಕೆ ರವಾನೆ ಮಾಡಲಾಗಿತ್ತು. ಆನೆಯನ್ನು ದಸರಾಗೆ ಪಳಗಿಸಲಾಗುತ್ತಿತ್ತು. ಆನೆ ಸೆರೆ ಹಿಡಿದು ಕ್ರಾಲ್‌ನಲ್ಲಿ ಇಡಲಾಗಿತ್ತು. ಬಳಿಕ, ಅ.21ರಂದು ಹೊರಕ್ಕೆ ಕರೆತಂದು ಉಳಿದ ಸಾಕಾನೆಗಳ ಜೊತೆಗೆ ತರಬೇತಿ ನೀಡಲಾಗುತ್ತಿತ್ತು' ಎಂದು ಅರಣ್ಯ ಇಲಾಖೆ ತಿಳಿಸಿದೆ.

ಅ.31ರಂದು ಮಧ್ಯಾಹ್ನ ಆನೆ ದಿಢೀರ್ ಸಾವಿಗೀಡಾಗಿತ್ತು.

ರಾಜ್ಯದ 455 ಎಕರೆ ಕಾಡಲ್ಲಿ ಗೋವಾ ವಿದ್ಯುತ್ ಮಾರ್ಗ

ಪ್ರಜಾವಾಣಿ ವಾರ್ತೆ

ನವದೆಹಲಿ: ವನ್ಯಜೀವಿಧಾಮಕ್ಕೆ ಹಾನಿಯಾಗುತ್ತದೆ ಎಂಬ ನೆಪವೊಡ್ಡಿ ಮಹದಾಯಿ ಯೋಜನೆಗೆ ವಿರೋಧ ವ್ಯಕ್ತಪಡಿಸಿರುವ ಗೋವಾ ಸರ್ಕಾರವು ಕರ್ನಾಟಕದ ಕಾಡಿನೊಳಗೇ ಹೆಚ್ಚುವರಿ ವಿದ್ಯುತ್ ಮಾರ್ಗ ನಿರ್ಮಾಣಕ್ಕೆ ಮುಂದಾಗಿದೆ.

ರಾಜ್ಯಕ್ಕೆ ಹೆಚ್ಚುವರಿ ವಿದ್ಯುತ್ ಒದಗಿಸಲು ಕರ್ನಾಟಕದ ಪಶ್ಚಿಮಘಟ್ಟಗಳ ಮೂಲಕ ವಿದ್ಯುತ್ ಮಾರ್ಗ ನಿರ್ಮಿಸುವ ಯೋಜನೆಗೆ 455 ಎಕರೆ ಅರಣ್ಯ ಬಳಸಲು ಒಪ್ಪಿಗೆ ನೀಡುವಂತೆ ಕೋರಿ ಗೋವಾವು ಮತ್ತೆ ಪ್ರಸ್ತಾವನೆ ಸಲ್ಲಿಸಿದೆ.

ಉದ್ದೇಶಿತ ವಿದ್ಯುತ್ ಮಾರ್ಗವು ದಾಂಡೇಲಿ ಆನೆ ಕಾರಿಡಾರ್, ಭೀಮಗಡ ಅಭಯಾರಣ್ಯದ ಪರಿಸರ ಸೂಕ್ಷ್ಮವಲಯ, ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮವಲಯ ಹಾಗೂ ದಾಂಡೇಲಿ ಅಭಯಾರಣ್ಯಗಳ ಮೂಲಕ ಹಾದುಹೋಗಲಿದೆ. ದೊಡ್ಡ ಪ್ರಮಾಣದಲ್ಲಿ ಕಾಡು ನಾಶವಾಗುವ ಯೋಜನೆಗೆ ಕರ್ನಾಟಕ ಸರ್ಕಾರದಿಂದ ಯಾವುದೇ ವಿರೋಧ ವ್ಯಕ್ತವಾಗಿಲ್ಲ.

ಧಾರವಾಡ ಜಿಲ್ಲೆಯ ನರೇಂದ್ರದಿಂದ ಗೋವಾಕ್ಕೆ ವಿದ್ಯುತ್ ಮಾರ್ಗ ನಿರ್ಮಿಸಲು ಮುಂದಾಗಿರುವ 'ಗೋವಾ ತಮ್ನಾರ್ ಟ್ರಾನ್ಸ್‌ಮಿಷನ್ ಪ್ರಾಜೆಕ್ಟ್ ಲಿಮಿಟೆಡ್' ಸಂಸ್ಥೆಯು ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಅವಕಾಶ ನೀಡುವಂತೆ ಕೋರಿದೆ. ಈ ಯೋಜನೆಗಾಗಿ ಧಾರವಾಡ ವಿಭಾಗದ 7.75 ಹೆಕ್ಟೇರ್, ಬೆಳಗಾವಿ ವಿಭಾಗದ 70 ಹೆಕ್ಟೇರ್, ಹಳಿಯಾಳ ವಿಭಾಗದ 68 ಹೆಕ್ಟೇರ್ ಹಾಗೂ ದಾಂಡೇಲಿ ವಿಭಾಗದ 35 ಹೆಕ್ಟೇರ್ ಅರಣ್ಯ ಬಳಸಲು ಉದ್ದೇಶಿಸಲಾಗಿದೆ.

ಗೋವಾ ರಾಜ್ಯಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಉದ್ದೇಶಿಸಿರುವ 400 ಕೆ.ವಿ ವಿದ್ಯುತ್ ಪ್ರಸರಣ ಮಾರ್ಗಕ್ಕೆ ಅನುಮತಿ ನೀಡುವಂತೆ ಸಂಸ್ಥೆಯು ಕರ್ನಾಟಕದ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಪತ್ರ ಬರೆದಿತ್ತು. ಮೂಲ ಪ್ರಸ್ತಾವನೆಯಲ್ಲಿ 445 ಎಕರೆ ಕಾಡು ಬಳಸಲು ಪ್ರಸ್ತಾಪಿಸಲಾಗಿತ್ತು. ಅಂದಾಜು ₹265.57 ಕೋಟಿ ವೆಚ್ಚದ ಯೋಜನೆ ಇದಾಗಿದೆ.

'ಪಶ್ಚಿಮಘಟ್ಟದ ದಟ್ಟ ಅರಣ್ಯದಲ್ಲಿ ಈ ಮಾರ್ಗ ಹಾದು ಹೋಗಲಿದೆ. ಈ ಯೋಜನೆಯಿಂದ ಹುಲಿ ಆವಾಸಸ್ಥಾನದ ಮೇಲೂ ಪರಿಣಾಮ ಬೀರಲಿದೆ. ಈ ಪ್ರಸ್ತಾವವನ್ನು ತಿರಸ್ಕರಿಸಬೇಕು' ಎಂದು ಕೆನರಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಶಿಫಾರಸು ಮಾಡಿದ್ದರು.

ಇನ್ನೊಂದೆಡೆ, ಈ ಯೋಜನೆಯ ಅನುಷ್ಠಾನಕ್ಕೆ ಅವಕಾಶ ನೀಡಬಾರದು ಎಂದು ಆಗ್ರಹಿಸಿ ಗೋವಾ ಫೌಂಡೇಷನ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ಕುರಿತು ವರದಿ ನೀಡುವಂತೆ ಸಿಇಸಿಗೆ ಸುಪ್ರೀಂ ಕೋರ್ಟ್ ಸೂಚಿಸಿತ್ತು. 'ಈ ಮಾರ್ಗದಲ್ಲಿ ಈಗಾಗಲೇ 220 ಕೆ.ವಿ.ಮಾರ್ಗ ಇದೆ. ಹೊಸಮಾರ್ಗ ನಿರ್ಮಾಣಕ್ಕೆ ಸಾವಿರಾರು ಮರಗಳನ್ನು ಕಡಿಯಬೇಕಾಗುತ್ತದೆ. ಅದರ ಬದಲು ಈಗಿರುವ ಮಾರ್ಗ ಬಳಸುವುದು ಉತ್ತಮ. ಅಲ್ಲದೆ, ಕರ್ನಾಟಕ ಸರ್ಕಾರದ ಅನುಮತಿ ಪಡೆದೇ ಮುಂದುವರಿಯಬೇಕು' ಎಂದು ಸಿಇಸಿ ಶಿಫಾರಸು ಮಾಡಿತ್ತು. ಇದೀಗ ಸಂಸ್ಥೆಯು ಹೊಸ ಪ್ರಸ್ತಾವನೆ ಸಲ್ಲಿಸಿದ್ದು, ಯೋಜನೆ ಅನುಷ್ಠಾನಕ್ಕೆ ಹೆಚ್ಚುವರಿಯಾಗಿ 10 ಎಕರೆಯಷ್ಟು (177 ಹೆಕ್ಟೇರ್ ಬದಲು 181 ಹೆಕ್ಟೇರ್) ಕಾಡು ಬೇಕಾಗುತ್ತದೆ ಎಂದು ಹೇಳಿದೆ.

'ಪರಿಸರದ ನೆಪವೊಡ್ಡಿ ಮಹದಾಯಿ ಯೋಜನೆಗೆ ಗೋವಾ ಅಡ್ಡಗಾಲು ಹಾಕಿದೆ. ಇದೀಗ ತನ್ನದೇ ಯೋಜನೆಗೆ ವಿದ್ಯುತ್ ಒದಗಿಸಲು ಪಶ್ಚಿಮಘಟ್ಟಗಳ ಮೂಲಕ ಯೋಜನೆ ಅನುಷ್ಠಾನಕ್ಕೆ ಇನ್ನಿಲ್ಲದಂತೆ ಪ್ರಯತ್ನ ನಡೆಸಿದೆ. ಇದು ಗೋವಾದ ದ್ವಂದ್ವ ನಿಲುವಿಗೆ ಕೈಗನ್ನಡಿ. ಇಷ್ಟದರೂ ಕರ್ನಾಟಕದ ಯಾವುದೇ ರಾಜಕಾರಣಿ ಧ್ವನಿ ಎತ್ತಿಲ್ಲ' ಎಂದು ಪರಿಸರ ಕಾರ್ಯಕರ್ತ ಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

ನವೆಂಬರ್‌ನಲ್ಲಿ ಕೆಂಪೇಗೌಡ ಜಯಂತಿ ಆಚರಣೆಗೆ ಡಿಸಿಎಂ ಭರವಸೆ • ಬಾಕಿ ಹುದ್ದೆ ಭರ್ತಿಗೆ ಸಮ್ಮತಿ

ಬಿಬಿಎಂಪಿ ನೌಕರರ ಬೇಡಿಕೆಗೆ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ನೌಕರರ ಬೇಡಿಕೆಗಳನ್ನು ಈಡೇರಿಸಲು ಸಮ್ಮತಿಸಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನವೆಂಬರ್‌ನಲ್ಲಿ ಕೆಂಪೇಗೌಡ ಜಯಂತಿ ಆಚರಿಸುವ ಭರವಸೆ ನೀಡಿದ್ದಾರೆ.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಭೆ ನಡೆಸಿ, ಅವರ ಬೇಡಿಕೆಗಳನ್ನು ಆಲಿಸಿದ ಉಪ ಮುಖ್ಯಮಂತ್ರಿಯವರು, ಖಾಲಿ ಹುದ್ದೆಗಳ ಭರ್ತಿ, ಆರೋಗ್ಯ ಯೋಜನೆ, ಮುಂಬಡ್ತಿ ನೀಡಲು ಸಮ್ಮತಿಸಿದ್ದಾರೆ.

ವೃಂದ ಮತ್ತು ನೇಮಕಾತಿ ನಿಯಮಾವಳಿ, ಮುಂಬಡ್ತಿ ವಿಚಾರ, ಎರವಲು ಸೇವೆ ಅಧಿಕಾರಿಗಳ ವರ್ಗಾವಣೆ, ಬಿಬಿಎಂಪಿಯಲ್ಲಿ 6414 ಖಾಲಿ ಹುದ್ದೆಗಳ ಭರ್ತಿ, ಹೊರಗುತ್ತಿಗೆ ನೌಕರರಿಗೆ ಸಮಾನ ಕೆಲಸಕ್ಕೆ, ಸಮಾನ ವೇತನ ಸೇರಿ ವಿವಿಧ ಬೇಡಿಕೆಗಳಿಗೆ ಸ್ಪಂದಿಸಿದ್ದಾರೆ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ತಿಳಿಸಿದರು.



ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಭೆ ನಡೆಸಿದರು

ನಾಲ್ಕು ವರ್ಷಗಳಿಂದ ಬಿಬಿಎಂಪಿ ವತಿಯಿಂದ ಕೆಂಪೇಗೌಡ ಜಯಂತಿ ಆಚರಿಸಿಲ್ಲ. ಜಯಂತಿಯನ್ನು ಆಚರಿಸಿ ಸಾಧಕರಿಗೆ ಗೌರವ ಸಲ್ಲಿಸಬೇಕು ಎಂಬ ಬೇಡಿಕೆಗೂ ಸ್ಪಂದಿಸಿದ್ದಾರೆ. ನವೆಂಬರ್‌ನಲ್ಲೇ ಜಯಂತಿ ಆಚರಿಸಲು ಸಜ್ಜಾಗುವಂತೆ ಸೂಚಿಸಿದರು ಎಂದರು.

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಆಡಳಿತ ವಿಭಾಗದ ವಿಶೇಷ ಆಯುಕ್ತ ಡಾ.ಹರೀಶ್ ಕುಮಾರ್, ಉಪ ಆಯುಕ್ತ ಮಂಜುನಾಥ್ ಸ್ವಾಮಿ ಹಾಗೂ ಸಂಘದ ಪದಾಧಿಕಾರಿಗಳು ಇದ್ದರು.

ಪೂರ್ವಭಾವಿ ಸಭೆ: ಬೇಡಿಕೆಗಳನ್ನು ಈಡೇರಿಸದಿದ್ದರೆ ಕೆಲಸ ಸ್ಥಗಿತಗೊಳಿಸಿ ಮುಷ್ಕರ, ಪ್ರತಿಭಟನೆ ನಡೆಸಲು ಅ.26ರಂದು ನಡೆದಿದ್ದ ಸಂಘದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಆ ಸಭೆಯಲ್ಲಿ ಭಾಗವಹಿಸಿದ್ದ ಬಿಬಿಎಂಪಿ ಸಿಬ್ಬಂದಿಗೆ, ಬೇಡಿಕೆಗಳನ್ನು ಈಡೇರಿಸುವ ಭರವಸೆ ದೊರೆತಿತ್ತು. ಇದರಂತೆ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ ಸಭೆ ನಡೆಸಿದರು.

'ಪಾಲಿಕೆಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ಕೊರತೆ ಮತ್ತು ಸಕಾಲಕ್ಕೆ ನೇಮಕಾತಿ ಆಗುತ್ತಿಲ್ಲ. ಸಿಬ್ಬಂದಿ ಒತ್ತಡದಲ್ಲಿದ್ದಾರೆ. ಕಂದಾಯ ವಿಭಾಗದ ಅಧಿಕಾರಿಗಳಿಗೆ 5 ತಿಂಗಳ ಹಿಂದೆ ವಲಯ ಸಹಾಯಕ ಆಯುಕ್ತರು ವೃಂದಕ್ಕೆ ಹಾಗೂ ಕಂದಾಯ ಅಧಿಕಾರಿ ವೃಂದಕ್ಕೆ ಮುಂಬಡ್ತಿ ನೀಡಿದ್ದರೂ ಸ್ಥಳ ನಿಯುಕ್ತಿಗೊಳಿಸಿಲ್ಲ. ಇದರಿಂದ ಕೆಳಹಂತದ ನೌಕರರು ಮುಂಬಡ್ತಿ ಪಡೆಯಲು ವಂಚಿತರಾಗುತ್ತಿರುತ್ತಾರೆ. ವೃಂದ ಮತ್ತು ನೇಮಕಾತಿ ನಿಯಮಾವಳಿ ವಿರುದ್ಧವಾಗಿ ಕಾನೂನು ಬಾಹಿರವಾಗಿ ಎರವಲು ಸೇವೆ ಮೇಲೆ ನಿಯೋಜಿಸಿರುವ ಅಧಿಕಾರಿ/ನೌಕರರನ್ನು ಕೂಡಲೇ ಮಾತೃ ಇಲಾಖೆಗೆ ಹಿಂದಿರುಗಿಸಬೇಕು' ಎಂದು ನೌಕರರು ಬೇಡಿಕೆ ಇರಿಸಿದ್ದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಹೋರಾಟಕ್ಕೆ ಪೌರ ಕಾರ್ಮಿಕರ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿದ್ದವು.

75 Years of Prestige

AWARDED Superbrands INDIA Consumer Validated 2023



ಪ್ರೆಸ್ಟೀಜ್

ಶುಭ ಉತ್ಸವ

ನಾವೀನ್ಯತೆಯ 75 ವರ್ಷಗಳ ಸಂಭ್ರಮ.

16ನೇ ಸೆಪ್ಟೆಂಬರ್ - 15 ನವೆಂಬರ್, 2023

ಖರೀದಿಸಿ
ಸ್ಟೈನ್‌ಲೆಸ್ ಸ್ಟೀಲ್ ಸ್ವಚ್ಛ್ ಪ್ರೆಷರ್ ಕುಕ್ಕರ್
1 ಯೂನಿಟ್
@15% ರಿಯಾಯಿತಿ*
+
ಪಡೆಯಿರಿ ಉಚಿತ*
ಫ್ರೈ ಪ್ಯಾನ್ 18 ಸೆ.ಮೀ 1 ಯೂನಿಟ್
ಮೌಲ್ಯ ₹710.00*

ಖರೀದಿಸಿ
ಎಂಡ್ಯುರಾ 1000 ವ್ಯಾಟ್ ಮಿಕ್ಸರ್ ಗ್ರೈಂಡರ್ 6 ಜಾರ್ 1 ಯೂನಿಟ್
@25% ರಿಯಾಯಿತಿ*
ಹಿಟ್ಟು ಕಲಸುವುದು, ತರಕಾರಿ ಕತ್ತರಿಸುವುದು, ಜ್ಯೂಸ್ ತಯಾರಿಕೆ, ಚಟ್ನಿ ಮತ್ತು ಮಸಾಲ ಗ್ರೈಂಡ್ ಮಾಡುವುದು ಹಾಗೂ ಸ್ಟೋರ್ ಮಾಡುವುದು
+
ಪಡೆಯಿರಿ ಉಚಿತ*
ಸ್ಟೈನ್‌ಲೆಸ್ ಸ್ಟೀಲ್ ಸ್ವಚ್ಛ್ 3ಲೀ. ಪ್ರೆಷರ್ ಕುಕ್ಕರ್ 1 ಯೂನಿಟ್
ಮೌಲ್ಯ ₹2 420.00*

ಖರೀದಿಸಿ
3 ಯುನಿಟ್‌ಗಳ ಸ್ಟೈನ್‌ಲೆಸ್ ಸ್ಟೀಲ್ ಕುಕ್‌ವೇರ್ 1 ಸೆಟ್*
ಮೌಲ್ಯ ₹3 825.00*
+
ಪಡೆಯಿರಿ ಉಚಿತ*
ಸ್ಟೈನ್‌ಲೆಸ್ ಸ್ಟೀಲ್ ಸ್ವಚ್ಛ್ 3ಲೀ. ಪ್ರೆಷರ್ ಕುಕ್ಕರ್ 1 ಯೂನಿಟ್
ಮೌಲ್ಯ ₹2 420.00*

ಖರೀದಿಸಿ
ಇಂಡಕ್ಷನ್ ಕುಕ್‌ಟಾಪ್ PIC 3.1 V3 1 ಯೂನಿಟ್
@25% ರಿಯಾಯಿತಿ*
ಆಟೊಮ್ಯಾಟಿಕ್ ವಿಸಲ್ ಕೌಂಟರ್‌ನೊಂದಿಗೆ
+
ಪಡೆಯಿರಿ ಉಚಿತ*
ಓಮ್ನಿ ತವಾ 28 ಸೆ.ಮೀ 1 ಯೂನಿಟ್
ಮೌಲ್ಯ ₹1 400.00*

10 YEAR WARRANTY ON GLASS

ಖರೀದಿಸಿ
ರಾಯಲ್ ಪ್ಲಸ್ 3ಬಿ ಗ್ಲಾಸ್ ಟಾಪ್ ಗ್ಯಾಸ್ ಸ್ಟವ್ 1 ಯೂನಿಟ್
@35% ರಿಯಾಯಿತಿ*
+
ಪಡೆಯಿರಿ ಉಚಿತ*
ಸ್ಟೈನ್‌ಲೆಸ್ ಸ್ಟೀಲ್ ಸ್ವಚ್ಛ್ 3ಲೀ. ಪ್ರೆಷರ್ ಕುಕ್ಕರ್ 1 ಯೂನಿಟ್
ಮೌಲ್ಯ ₹2 420.00*

ಖರೀದಿಸಿ
ಪ್ರೊವೊ ಚಿಮಣಿ 1 ಯೂನಿಟ್
@40% ರಿಯಾಯಿತಿ*
+
ಪಡೆಯಿರಿ ಉಚಿತ*
ಸ್ವಚ್ಛ್ ಹಾಬ್ 3ಬಿ 1 ಯೂನಿಟ್
ಮೌಲ್ಯ ₹15 995.00*

ಪರಿಚಯಿಸುತ್ತಿದ್ದೇವೆ JUDGE® By Prestige® ಗುಣಮಟ್ಟ ಕೈಗೆಟುಕುವ ದರದಲ್ಲಿ

ಪ್ರೆಷರ್ ಕುಕ್ಕರ್ 3ಲೀ	ಕುಕ್‌ವೇರ್	ಗ್ಯಾಸ್ ಸ್ಟವ್	ಮಿಕ್ಸರ್ ಗ್ರೈಂಡರ್	ಡಿನ್ನರ್ ಸೆಟ್
1 ಯೂನಿಟ್ ಆರಂಭಿಕ ಬೆಲೆ	1 ಯೂನಿಟ್ ಆರಂಭಿಕ ಬೆಲೆ	1 ಯೂನಿಟ್ ಆರಂಭಿಕ ಬೆಲೆ	1 ಯೂನಿಟ್ ಆರಂಭಿಕ ಬೆಲೆ	1 ಸೆಟ್ ಆರಂಭಿಕ ಬೆಲೆ
₹899.00*	₹449.00*	₹1 899.00*	₹1 999.00*	₹1 499.00*

ಪ್ರೆಸ್ಟೀಜ್ ಜಡ್ಜ್‌ನ ಉತ್ಪನ್ನ ಶ್ರೇಣಿಗಳ ಮೇಲೆ ಹೇಳಲಾದ ಬೆಲೆಗಳು ಉತ್ಪನ್ನದ ಆಫರ್ ಬೆಲೆಯನ್ನು ಪ್ರತಿನಿಧಿಸುತ್ತದೆ (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ)

*ಷರತ್ತುಗಳು ಅನ್ವಯಿಸುತ್ತವೆ. ಮೇಲೆ ಸೂಚಿಸಿದ ಬೆಲೆಗಳು ಉತ್ಪನ್ನದ ಎಂ ಆರ್ ಪಿ (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ). ಎಂ ಆರ್ ಪಿ ಮೇಲೆ ಮಾತ್ರ ರಿಯಾಯಿತಿಗಳನ್ನು ನೀಡಲಾಗುತ್ತದೆ. ಯಾವುದೇ ಎರಡು ಕೊಡುಗೆಗಳನ್ನು ಸೇರಿಸಲಾಗದು. 3 ಯುನಿಟ್‌ಗಳ ಸ್ಟೈನ್‌ಲೆಸ್ ಸ್ಟೀಲ್ ಕುಕ್‌ವೇರ್‌ನಲ್ಲಿ ಫ್ರೈ ಪ್ಯಾನ್ –22 ಸೆ.ಮೀ., ಗ್ಲಾಸ್ ಮುಚ್ಚಳದೊಂದಿಗೆ ಕಡಾಯಿ–22ಸೆ.ಮೀ, ಗ್ಲಾಸ್ ಮುಚ್ಚಳದೊಂದಿಗೆ ಸಾಸ್ ಪ್ಯಾನ್ – 16 ಸೆ.ಮೀ ಒಳಗೊಂಡಿರುತ್ತದೆ. ಕೊಡುಗೆಗಳು ಆಯ್ದ ಮಾದರಿಗಳ ಮೇಲೆ ದಾಸ್ತಾನು ಇರುವವರೆಗೆ ಮಾತ್ರ. ಕೊಡುಗೆಗಳು ಆಯ್ದ ಸ್ಟೋರ್‌ಗಳಲ್ಲಿ ಮಾತ್ರ ಲಭ್ಯವಿರುತ್ತದೆ. ಸ್ಟೈನ್‌ಲೆಸ್ ಸ್ಟೀಲ್ ಪ್ರೆಷರ್‌ಕುಕ್ಕರ್‌ನ ಕೊಡುಗೆಗಳು ಕೇವಲ ಎಸ್‌ಎಸ್ ಡಿಲಕ್ಸ್ ಆಲ್ಫಾ ಸ್ವಚ್ಛ್ ಶ್ರೇಣಿಗೆ ಮಾತ್ರ ಅನ್ವಯಿಸುತ್ತದೆ. ಕೊಡುಗೆಗಳು ತಮಿಳುನಾಡು, ಕರ್ನಾಟಕ, ಗೋವಾ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಅನ್ವಯಿಸುತ್ತದೆ. ಪ್ರೆಸ್ಟೀಜ್® ಲೋಗೋ ಭಾರತದಲ್ಲಿ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್‌ಗೆ ನೋಂದಾಯಿತ ಟ್ರೇಡ್ ಮಾರ್ಕ್ ಆಗಿದೆ. ಜಡ್ಜ್® ಲೋಗೋ ಭಾರತದಲ್ಲಿ ಹಾರ್ವುಡ್ ಹೋಮ್‌ವೇರ್ಸ್ ಲಿಮಿಟೆಡ್‌ನ ನೋಂದಾಯಿತ ಟ್ರೇಡ್‌ಮಾರ್ಕ್ ಆಗಿದೆ. ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಹತ್ತಿರದ ನಿಮ್ಮ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್/ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ.

Prestige®
ತಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?

CUSTOMER CARE NO# 080-6000 4411 #Reach out to us on our new Customer Care No. effective from September - 2023

Follow 'TTK Prestige' on

PRESTIGE XPERT on WhatsApp 97423 34411

Shop Online on shop.ttkprestige.com

Prestige Xclusive

Outer Ring Road: Hennur Coco, Ph: 7204250679; Tumkur Rd. 8th Mile T.Dasarahalli, Ph: 9972541116; Koramangala, Ph: 9742901122; Bull Temple Rd, Ph: 26609012; Malleswaram, Ph: 9448282470; Rt Nagar Main Rd, Ph: 41698761; Ganganagar Cbi Rd, Ph: 43705914; Wheeler Rd, Ph: 25803080; Kattriguppe Circle, Ph: 40900685; Vijayanagar, Ph: 41330034; Hsr Bda Cmplx, Ph: 25726991; Marathahalli, Ph: 42197088; Sanjaynagar, Ph: 41258300; Banaswadi Ring Rd, Ph: 41634115; Jayanagar, Ph: 9845066549; J.P.Nagar, Ph: 41122235; Rajarajeshwaringr, Ph: 28603540, 9008418800; Kengeri Stl Town, Ph: 28485296; Rajajinagar, Ph: 41731224; B.T.M.Layout, Ph: 40939168; Sarjapura Rd, Ph: 42038646; Konankunte Cross, Ph: 26860350; Nagharabhavi Bda Cmplx, Ph: 9739004750; Begur, Ph: 8073408322; Vidyaranayapura, Ph: 9845518824; Wilson Garden, Ph: 9480010720; Brookefield, Ph: 28541555; Ramamurthynagar, Ph: 08042049545; Kr Puram, Ph: 8861494277; Cambridge Layout, Ph: 42074468; Kaggadaspura, Ph: 7306666610; Kammanahalli, Ph: 41606044; Whitefield, Ph: 40907273; Chandapura, Ph: 9036190725; Hoskote, Ph: 27932227; Dommasandra, Ph: 9611423555; Hesarghatta Road, Ph: 28370400; Uttarahalli, Ph: 9986879095; Anjananagr Magadi Rd, Ph: 23281206; Kadugodi, Ph: 8123042234; Hosur Rd Huskur Gate, Ph: 9606406009; Yelahanka Newtown, Ph: 8668034376; Jayamahal Ext, Ph: 41616484; Mahalakshmi Lyt, Ph: 23572233; Jpnagar 7th Phase, Puttenahalli, Ph: 41465855; Kumaraswamy Lyt, Ph: 9739011252; Chandralyt, Ph: 9845146418; Channasandra, Ph: 9986369569; Sheshadripuram, Ph: 8711090976; Kasturinagar, Ph: 08049923166; Tc Palya, Ph: 9740333334; Attibele, Ph: 9341221525; Jigani, Ph: 8762069852; Sarjapura Town, Ph: 9036373175l; Hosa Rd Junction, Ph: 9845597099; Mathikere, Ph: 6366636592; Basaveshwaranagar, Ph: 9739591008; Thalagatapura, Vajarahalli, Ph: 9964116888; Hegganahalli, Ph: 28360289; Gottigere, Ph: 8431241099; Amruthahalli, Ph: 9141169883; Ullal, Ph: 9686646565; Jayanagar 4th Block East Extension, Ph: 9945446335; Nelamangala, Ph: 9632356627; Kolar, Ph: 9738882584; Channapatna, Ph: 9686661294; Madhugiri, Ph: 9611552805; Gauribidanur, Ph: 8317399465; Gubbi: Ph: 9035195120/8095459040; Banshankari Stage 2, Bda Complex, Ph: 49890679, 9740677740; Vijayabank Colony, Bilekahalli, Ph: 8970366139; Whitefield, Ph: 08040907273; Malur, Ph: 9845028859; Kumbalagodu, Ph: 9845014860; Devanahalli, Ph: 9845737576; Thanisandra, Ph: 9686340159; E.City Phase 1, Ph: 7557000060; Hulimavu, Ph: 8904654433; Singanayakanahalli, Ph: 9591059156; Anekal, Ph: 8660070202; Tiptur, Ph: 9164688773; Ramnagar, Ph: 9686661294; Bhyadarahalli, Ph: 9845982089; Hennur Bande, Ph: 9980097982; Tc Palya Road, Ph: 9148775224; Chikkajaala, Ph: 9036202892.

Also Available At: Jayanagar: Sarathy, Ph: 41210047; Vishaals, Ph: 08022447285; Royal Mart, Ph: 8790311104; Anjana Super Stores, Ph: 41301836; Kitchenmart, Ph: 26652885; Aravinda, Ph: 41301989; Sajjan Rao Circle: Vardhaman Intl, Ph: 8073383878; Vv Puram: Kesariya, Ph: 08041531515/41131535; Bankcolony: Vardhaman Ind, Ph: 22428300; Banashankari: Varada Glass & Crky, Ph: 9980949316; Patel Agn, Ph: 26714285; Patel Kitchen Apl, Ph: 9079061706; Chamundi Ind, Ph: 26712633; Bilekhalli: Sree Pooja Ha, Ph: 9036919084; Begur Rd: Hari Om Appl, Ph: 9916107669; Bommanahalli: Sri Durga Ha, Ph: 9900674018; Chamarjpet: Vadirajstores, Ph: 41517646; Hosa Rd: Maharaja Kw, Ph: 9036400829; Isro Layout: Bhumi Kitchen, Ph: 9916830850; Jp Nagar: Santripti, Ph: 9986699193; S.R.Appl, Ph: 8618846934; M.K.Ahmed Sm, Ph: 9900108877; Kanakapura Rd: Royal Mart, Ph: 28425777; Padmanabnagar: Royalmart, Ph: 9886088993; Uttarahalli: Royalmart, Ph: 26394114; Rme Super Market, Ph: 9964228208; Mysore Road: The Karnataka Metal Industry, Ph: 9449342727; Ayyappanagar: Top Mart Sm, Ph: 7204448111; Babusapalya: Karnataka Ha, Ph: 8105754544; Basaveshwarnagar: Bigday Hm, Ph: 9972517344; Mahaveer Ha, Ph: 9845288857; Modern Colln, Ph: 8095758444; Adhinath Kitchen Gal, Ph: 8553583206; Gayathri Ngr: J.K.Steel, Ph: 9110806115; Giri Nagar: Vidya Ent, Ph: 9449988650; Bagalgunte: Royal Mart, Ph: 9538000072; Chandra Layout: Rajguru Kw, Ph: 8792686851; Pavan Kw, Ph: 8618028319; Milan Ha, Ph: 7411738812; Ganganagar: Patel Ind, Ph: 8050899296; Salem Ind, Ph: 9880795414; Bhagavathi Kitchenware, Ph: 8762161579; Hanumanthanagar: Home Studio, Ph: 9945933111; Kamal Appliances, Ph: 9008800881; Hesargatta Main Rd: Royal Mart, Ph: 28398200; Horamavu: Mamtha Ha, Ph: 8880050050; Hbr Layout: Bhavani Ha, Ph: 9845916164; Harlur: Vinayaka Ha, Ph: 7760531454; Katriguppe: Mk Metal Mart, Ph: 9035779199; Kr Puram: Srm Elect, Ph: 9845445748; Pooja Ele And Mob, Ph: 9738850503; Kammanahalli: Ramdev Steel, Ph: 7259575732; Hm Traders, Ph: 9964797616; Konenkunte Cross: Mahalaxmi Elct & Ha, Ph: 8123203588; Kasavanahalli: Mathaji Ha, Ph: 8880796036; Kengeri: Alankar Elec, Ph: 8762805452; Koramangala: Sowbhagya Traders, Ph: 7337733887; Kmr Swy Layout: Bhoomi Kitchen, Ph: 9036850850; Patel Ha, Ph: 8951979665; Laggere: Top Mart, Ph: 9110246047; Lnpura: Arihanth Ent, Ph: 7899633338; Malleshwaram: Deviprasad Ha, Ph: 23564536; Bright Novelty, Ph: 23343505; Mathikere: M.Bhawarlals Inc, Ph: 41724740; Maharaja Agency, Ph: 41278050; Kadugodi: Little Wonder, Ph: 9961224224; Madiwala: Surya Ha, Ph: 9449635332; Malleshpalya: Bajrang Ha, Ph: 9449526463; New Bheru Ha, Ph: 9448680738; Ramdev Ha, Ph: 9035175860; Sri Bhagawathi Ha, Ph: 9590575427; Maa Ambe Ha, Ph: 8884198322; Maruthi Ha, Ph: 9952660769; Magadiroad: Kesariya, Ph: 6361685271; Royal Mart, Ph: 23584498; Annaporneshwari Nagar: Deepak Ha, Ph: 9148912736; Iti Lyaout: Radhakrishna Ent, Ph: 9739198531; M S Palya: Royal Mart, Ph: 8147014079; B Narayanpura: Yellow Mart, Ph: 7676726487; Rajajinagar: Mahalakshmi Metal House, Ph: 23355994; Rathna Sales, Ph: 23375566; Dhanalakshmi Kitchen World, Ph: 41285801; Jayalakshmi Kw, Ph: 9844755146; R S Mart, Ph: 6363602929; Pooja Stl Cent, Ph: 23327014; Vardhaman Intl, Ph: 08040974556; Rajankunte: Rmr Super Market, Ph: 9108636912; Rr Nagar: Milan Ha, Ph: 28605619; Pavan Kg, Ph: 9739207043; Tavarakere: Mytri Mart Sm, Ph: 9036466761; T C Palya: Rhk Super Mkt, Ph: 9731668995; Karnataka Ha, Ph: 6363064024; Tipsandra: Pawar Ha, Ph: 9980517021; Milan Ha, Ph: 9986196375; Ramdev Ha, Ph: 7406901545; Ulsoor: Aishwaryapranam Hn, Ph: 9902788429; Pranam Steel Center, Ph: 9448053781; Udaynagar: Mother India, Ph: 9036189765; Madanayakana Halli: Vardhaman Intl, Ph: 8553170346; Venkatapura: Pooja Kg, Ph: 9900426176; Vijayanagar: Mahendras, Ph: 9986102112; Vijaylaxmi Kw, Ph: 9845022284; Maruthi Ha, Ph: 8904689155; Vidyarnapura: Praksh Kw, Ph: 8050620877; Mahalakshmi Steel House, Ph: 9663375159; All Seasons Hm, Ph: 9946728736; Whitefield: Little Wonder-, Ph: 7975372794; Rolla Hm, Ph: 9148003448; Loyalcity, Ph: 8884046890; Royal Mart, Ph: 7079734574; Yelahanka: Royalmart, Ph: 41705760; Mutha Electricals, Ph: 22971920; Sai Kitchen World, Ph: 9632811797; Sai Ram Ka, Ph: 6362506002; Btm Layout: Patel Agencies, Ph: 9482853401; Indranagar: Kitchen Expert, Ph: 7350436750; Lalbagh Road: Mohankheda Impex, Ph: 9986198760; Nagrathpet: Mahipal Entpr, Ph: 41248070; Mahadev Dist, Ph: 41514943; Shubham Home Appliances, Ph: 9448674150; Bhagawathi Ha, Ph: 9663850009; Marudhar Ha, Ph: 9945444454; Ramdev Metal, Ph: 8618014985; Puckraj & Sons, Ph: 9448771841; B M Agencies, Ph: 9886617028; Bhagavti Spares, Ph: 9513992993; Pramod Steel, Ph: 9844074193; Jainam Marketing, Ph: 9036783828; Usha Home Ind, Ph: 41519106; Karnataka Metal Ind, Ph: 9844515458; Renuka Mktg, Ph: 41224591; Pooja Dist, Ph: 41234022; Bvk Iyengar Rd: Jain Wire Emporium, Ph: 08041249274; Crockery World, Ph: 9845025420; Manglik Mktng, Ph: 9448970501; Shah Gulab Chand & Sons, Ph: 08041222095; Chickpet: Mahesh Dist, Ph: 9916086085; Varhtur: Kitchen Kettles, Ph: 9148994805; Haraluru: Maharaja Kitchen World, Ph: 9036400829; Hsr Layout: Pawan Kitchen World, Ph: 8618220896; Nandi Kitchen Wd, Ph: 9686549035; Muddanapalya: Sri Balaji Innov, Ph: 9611176529; Electronics City: Dream Mart Hm, Ph: 9902734586; Village Hm, Ph: 9663966121. Hegde Nagar: All Market, Ph: 8892959570. Tumkur: N.R Metal Agency, Ph: 08162275003; Kavitha Kitchen Needs, Ph: 9538537166; Surya Metal Store, Ph: 9731351050;Tumkur Trade Centre, Ph: 9901432287; Darshan Ha, Ph: 9632132567; Sudha Ha, Ph: 9964011253; Niketana Trading Co, Ph: 9538826927; Gubbi: Keerthi Gas Stove, Ph: 9686004169; Tiptur: Sri Sai Electronics, Ph: 8861432166; Sri Rama-Ent, Ph: 9880362018; Kumar And Kumar, Ph: 9141609900; Turuvekere: Sri Sai Electronics, Ph: 8861432166; Pavgada: Shivanagere Ha, Ph: 9880768236; Meenakshi Appl, Ph: 9880360326; Sira: Swamy Ent, Ph: 9741561491; Lakshmi Steel, Ph: 9060434807; Mallikarjuna Home Appliances, Ph: 8123206930; Madhugiri: Vinayaka Store, Ph: 9900219291; Kunigal: Karnataka Metal Stores, Ph: 9448550390; New Karnataka Steel Centre, Ph: 08132221548; Karnataka Home Appliances, Ph: 8892197645; Chiknayakakanhalli: Mustafa Elec, Ph: 8861729784; Huliyar: Abhi Electronics, Ph: 944866833. Kgf: Prakash Ha, Ph: 9845113454; Bangarpet: Kumar Stores, Ph: 9845935240; Gauribidanur: Sri Raju Hn, Ph: 9448249527; Dhighvijaya Elec, Ph: 7204757456; Kanakapura: Sri Kabbalamma Ha, Ph: 9880835508; Kolar: Rakesh Ele, Ph: 9880634555; Naveenprakash Ha, Ph: 9844997787; Malur: Srm Elec, Ph: 9845445748; Reddy Ele, Ph: 9844435121; Vijayapura: Rmcity, Ph: 9845164990; Reddy Ele, Ph: 9900336061; Devanahalli: New Sowmya Ele, Ph: 9141335210; Reddy Elec, Ph: 9731001577; Chintamani: Great India Ele, Ph: 9742963551; Lavanya Stores, Ph: 9242498294.

Pai INTERNATIONAL GIRIAS LuLu

EXAM DH ಪ್ರಜಾವಾಣಿ MASTERMIND™
ಮತ್ತಷ್ಟು 'ಪ್ರಚಲಿತ'ಕ್ಕಾಗಿ..
ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳು ಸೇರಿದಂತೆ ನಾಗರಿಕ ಸೇವಾ ಪರೀಕ್ಷೆಗಳಿಗೆ ಪೂರಕವಾದ ಲೇಖನ, ವಿಡಿಯೊಗಳಿಗಾಗಿ ಪ್ರಜಾವಾಣಿ- ಡೆಕ್ಕನ್‌ಹೆರಾಲ್ಡ್ ಎಕ್ಸಾಮ್ 'ಮಾಸ್ಟರ್‌ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ.
ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಕಿಗಾಲಿ ತಿದ್ದುಪಡಿ

ಓಝೋನ್ ಪದರ ನಾಶಪಡಿಸುವಲ್ಲಿ ಸಿಎಫ್‌ಸಿ CFC - Cloro Floro carbon ಬಳಕೆಯ ಪಾತ್ರ ತಿಳಿದ ನಂತರ ಪರಿಸರವಾದಿಗಳು, ವಿಜ್ಞಾನಿಗಳು 1980ರಲ್ಲಿ ಒಗ್ಗೂಡಿದರು. ಸಿಎಫ್‌ಸಿ ಬಳಕೆಯ1ಐಲ್ವಿಚಾರಣೆ ಮಾಡುವ ಸಚಿವರು ತಮ್ಮ 25ನೇ ಸಭೆಯನ್ನು ಇತ್ತೀಚೆಗೆ ಒಮಾನ್‌ನಲ್ಲಿ ನಡೆಸಿ ಈ ಬಗ್ಗೆ ಹಲವು ವಿಚಾರಗಳಲ್ಲಿ ಒಮ್ಮತಕ್ಕೆ ಬಂದಿರುವುದು ಪರಿಸರ ರಕ್ಷಣೆಯತ್ತ ಮಹತ್ವದ ನಡೆಯಾಗಿದೆ.

ಕಿಗಾಲಿ ತಿದ್ದುಪಡಿ

ಕಿಗಾಲಿ ತಿದ್ದುಪಡಿ ಎಂದರೆ ಓಝೋನ್ ಪದರವನ್ನು ಸವೆ ವಸ್ತುಗಳ ಮೇಲಿನ ಮಾಂಟ್ರಿಯಲ್ ಪ್ರೋಟೋಕಾಲ್ ಗೆ ಮಾಡಿದ ತಿದ್ದುಪಡಿಯಾಗಿದೆ.

2016ರಲ್ಲಿ ಅಂಗೀಕರಿಸಲಾದ ಈ ತಿದ್ದುಪಡಿಯು ಹವಾಮಾನ ಬದಲಾವಣೆ ಮತ್ತು ಪರಿಸರ ಅವನತಿ ವಿರುದ್ಧ ನಡೆಯುತ್ತಿರುವ ಹೋರಾಟದಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಮಾಂಟ್ರಿಯಲ್ ಪ್ರೋಟೋಕಾಲ್

1987ರಲ್ಲಿ ಸಹಿ ಮಾಡಲಾದ ಮಾಂಟ್ರಿಯಲ್ ಪ್ರೋಟೋಕಾಲ್, ಓಝೋನ್-ಡಿಪ್ಲೀಟಿಂಗ್(ಕ್ಷಯಿಸುವ) ವಸ್ತುಗಳ (ODS) ಉತ್ಪಾದನೆ ಮತ್ತು ಬಳಕೆಯನ್ನು ಹಂತಹಂತವಾಗಿ ಕಡಿಮೆಮಾಡುವ ಗುರಿಯನ್ನು ಹೊಂದಿರುವ ಅಂತರರಾಷ್ಟ್ರೀಯ ಒಪ್ಪಂದವಾಗಿದೆ.

ODS ಎಂದರೆ ಅದರಲ್ಲಿ ಬಹುಮುಖ್ಯವಾಗಿ ಕ್ಲೋರೋಫ್ಲೋರೋಕಾರ್ಬನ್‌ಗಳು (CFCಗಳು), ಹ್ಯಾಲೋನ್‌ಗಳು ಮತ್ತು ಕಾರ್ಬನ್ ಟೆಟ್ರಾಕ್ಲೋರೈಡ್‌ಗಳು ಸೇರಿದ್ದು ಸಾಮಾನ್ಯವಾಗಿ ಇವುಗಳನ್ನು ರೆಫ್ರಿಜರೇಟರ್, ಹವಾನಿಯಂತ್ರಣ ಮತ್ತು ಏರೋಸಾಲ್ ಪ್ರೊಪೆಲ್ಲಂಟ್‌ಗಳಲ್ಲಿ ಬಳಸಲಾಗುತ್ತದೆ. ವಾತಾವರಣಕ್ಕೆ ಅವುಗಳ ವಿಸರ್ಜನೆಯು ಓಝೋನ್ ಪದರಕ್ಕೆ ತೀವ್ರವಾದ ಹಾನಿಯನ್ನು ಉಂಟುಮಾಡುತ್ತದೆ. ಓಝೋನ್ ಪದರವು ಹಾನಿಕಾರಕ ನೇರಳಾತೀತ (UV) ವಿಕಿರಣದಿಂದ ಭೂಮಿಯ ಮೇಲಿನ ಜೀವಮಂಡಲವನ್ನು

ರಕ್ಷಿಸುವ ವಾತಾವರಣದ ಮೇಲೆ ತೆಳುವಾಗಿ (ಬಾಹ್ಯಾಕಾಶದ ಸಮೋಷ್ಣಮಂಡಲದಲ್ಲಿ) ಹರಡಲ್ಪಟ್ಟಿರುವ ಜೀವರಕ್ಷಕ ಪರದೆಯಾಗಿದೆ. ಭಾರತವು ಜೂನ್ 19, 1992 ರಂದು ಓಝೋನ್ ಪದರವನ್ನು ಸವಕಳಿಗೊಳಿಸುವ ವಸ್ತುಗಳನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ತರಲಾದ ಮಾಂಟ್ರಿಯಲ್ ಪ್ರೋಟೋಕಾಲ್ ಅನ್ನು ಅಂಗೀಕರಿಸಿದ್ದು ನಂತರದಲ್ಲಿ ಕೂಡಾ ಪ್ರೋಟೋಕಾಲ್‌ಗೆ ಸಂಬಂಧಿಸಿದ ತಿದ್ದುಪಡಿಗಳನ್ನು ಅನುಮೋದಿಸುತ್ತಾ ಬಂದಿದೆ.

ಮಾಂಟ್ರಿಯಲ್ ಪ್ರೋಟೋಕಾಲ್ ನಲ್ಲಿ ವಿವರಿಸಿರುವ ಎಲ್ಲಾ ಓಝೋನ್ ಸವಕಳಿ ಮಾಡುವ ವಸ್ತುಗಳಿಗೆ ಸಂಬಂಧಿಸಿ ನಿಗದಿಮಾಡಲ್ಪಟ್ಟ ಗುರಿಗಳನ್ನು ಭಾರತವು ಪರಿಣಾಮಕಾರಿಯಾಗಿ ಸಾಧಿಸುತ್ತಾ ಬಂದಿದೆ.

ಮಾಂಟ್ರಿಯಲ್ ಒಪ್ಪಂದದ ಯಶಸ್ಸು

ಮಾಂಟ್ರಿಯಲ್ ಒಪ್ಪಂದವು ಇದುವರೆಗೂ ನಡೆಸಲಾದ ಅತ್ಯಂತ ಯಶಸ್ವಿ ಪರಿಸರ ಒಪ್ಪಂದಗಳಲ್ಲಿ ಒಂದಾಗಿದೆ. ODS ಗಳನ್ನು ಜಗತ್ತಿನಾದ್ಯಂತ ಹಂತ-ಹಂತವಾಗಿ ಕಡಿಮೆಗೊಳಿಸಲಾಯಿತು. ಇದು ಗಮನಾರ್ಹವಾದ ಓಝೋನ್ ಪದರದ ಸವಕಳಿಯನ್ನು ತಡೆಯುತ್ತಾ ಬಂದಿತಲ್ಲದೆ ಪರಿಣಾಮವಾಗಿ ಹವಾಮಾನ ವೈಪರೀತ್ಯವನ್ನು ತಗ್ಗಿಸಿತು.

ಅನೇಕ ODS ಗಳು ಪ್ರಬಲವಾದ ಹಸಿರುಮನೆ ಅನಿಲಗಳಾಗಿದ್ದು ಅವುಗಳ ನಿರ್ಮೂಲನೆಯು ಜಾಗತಿಕ ತಾಪಮಾನ ಏರಿಕೆಯ ಮೇಲೆ ಮಹತ್ವದ ಪರಿಣಾಮವನ್ನು ಬೀರಿದೆ.

ಜಾಗತಿಕ ಮಹತ್ವ

ಹೈಡ್ರೋಫ್ಲೋರೋಕಾರ್ಬನ್‌ಗಳ (HFCs) ಕಡಿತದ ಉದ್ದೇಶಿತ ಗುರಿಯು ಸರಿಸುಮಾರು 105 ಮಿಲಿಯನ್ ಟನ್‌ಗಳಷ್ಟು ಇಂಗಾಲದ ಡೈಆಕ್ಸೈಡ್‌ಗೆ ಸರಿಸಮಾನವಾದ ಹಸಿರುಮನೆ ಅನಿಲಗಳ ಬಿಡುಗಡೆಯನ್ನು ತಡೆಯುತ್ತದೆ ಎಂದು ಅಂದಾಜಿಸಲಾಗಿದೆ. ಈ ಗುರಿಸಾಧನೆಯಾದರೆ 2100 ರ ವೇಳೆಗೆ 0.5 ಡಿಗ್ರಿ ಸೆಲ್ಸಿಯಸ್ ನಷ್ಟು ಜಾಗತಿಕ ತಾಪಮಾನ ಹೆಚ್ಚಳವನ್ನು ತಪ್ಪಿಸಲು ಸಹಾಯ ಮಾಡುತ್ತದೆ ಮತ್ತು ಓಝೋನ್ ಪದರವನ್ನು ಸಂರಕ್ಷಿಸುತ್ತದೆ.

ಕಿಗಾಲಿ ತಿದ್ದುಪಡಿಯಲ್ಲಿ ಸೂಚಿಸಿದಂತೆ HFC ಬಳಕೆಯು ಕಡಿಮೆಯಾದರೆ ಜಾಗತಿಕ ತಾಪಮಾನದ ಕಡಿತವಾಗುತ್ತದೆಯಲ್ಲದೇ, ಹೆಚ್ಚಿನ ಇಂಧನ ದಕ್ಷತೆಯ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಕಾರಣವಾಗುತ್ತದೆ. ಈ ಪರಿವರ್ತನೆಯು ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಯಲ್ಲಿ ಇಳಿಕೆಗೆ ಕಾರಣವಾಗುತ್ತದೆ. HFC ಕಡಿತಗೊಳಿಸುವ ಪ್ರಾಯೋಗಿಕ ಹೆಜ್ಜೆಗಳು ಭಾರತದಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರಿ ಕಾರ್ಯಕ್ರಮಗಳು ಮತ್ತು ಉಪಕ್ರಮಗಳೊಂದಿಗೆ ಹೊಂದಿಕೆಯಾಗುತ್ತಿದ್ದು ಭಾರತ ಗರಿಷ್ಠ ಗುರಿ ಸಾಧನೆಯ ಗುರಿಯನ್ನು ಹೊಂದಿದೆ. ಕಿಗಾಲಿ ತಿದ್ದುಪಡಿಯು ಪರಿಸರ ಸವಾಲುಗಳನ್ನು ಎದುರಿಸುವಲ್ಲಿ ಅಂತರರಾಷ್ಟ್ರೀಯ ಸಹಯೋಗದ ಅವಶ್ಯಕತೆ ಎಷ್ಟು ಎಂಬುವುದನ್ನು ಸೂಚಿಸುತ್ತದೆ. ಸಂಘಟಿತ ಪ್ರಯತ್ನಗಳು ಮತ್ತು ಜವಾಬ್ದಾರಿಯುತ ನೀತಿಗಳೊಂದಿಗೆ, ಒಂದಾಗಿ ನಡೆದಲ್ಲಿ ಈ ಭೂಮಿಯನ್ನು ಮತ್ತಷ್ಟು ಬದುಕಲು ಯೋಗ್ಯವನ್ನಾಗಿ ಮಾಡಬಹುದು ಎಂಬುವುದನ್ನು ಇದು ನಮಗೆ ನೆನಪಿಸುತ್ತದೆ.

ಕಿಗಾಲಿ ತಿದ್ದುಪಡಿಯ ಅವಶ್ಯಕತೆ

ಮಾಂಟ್ರಿಯಲ್ ಒಪ್ಪಂದದಲ್ಲಿ ಭಾಗಿಯಾಗಿರುವ ದೇಶಗಳು ಅಕ್ಟೋಬರ್ 2016 ರಲ್ಲಿ ರುವಾಂಡಾದ ಕಿಗಾಲಿಯಲ್ಲಿ ನಡೆದ ಸರ್ವಪಕ್ಷಗಳ 28 ನೇ ಸಭೆಯಲ್ಲಿ (MOP) HFC ಗಳ ಹೆಚ್ಚುತ್ತಿರುವ ಬಳಕೆಯನ್ನು ಗುರುತಿಸಿ (ವಿಶೇಷವಾಗಿ ಶೈತ್ಯೀಕರಣ ಮತ್ತು ಹವಾನಿಯಂತ್ರಣ ವಲಯದಲ್ಲಿ) ಒಂದು ಒಪ್ಪಂದಕ್ಕೆ ಬಂದವು.

ತಮ್ಮ ನಿಯಂತ್ರಿತ ಪದಾರ್ಥಗಳ ಪಟ್ಟಿಯಲ್ಲಿ HFC ಗಳನ್ನು ಸೇರಿಸಿದ್ದಲ್ಲದೇ, 2040 ರ ದಶಕದ ಅಂತ್ಯದ ವೇಳೆಗೆ ಶೇ 80-85ರಷ್ಟು ಕಡಿತವನ್ನು ಗುರಿಯಾಗಿಟ್ಟು ಕೊಂಡು ಗುರಿಸಾಧನೆಗಾಗಿ ಒಂದು ಗಡುವನ್ನು ನಿಗದಿಪಡಿಸಿಕೊಂಡವು.

ಈ ರಾಷ್ಟ್ರಗಳು ಹೈಡ್ರೋಫ್ಲೋರೋಕಾರ್ಬನ್‌ಗಳ (HFCs) ಉತ್ಪಾದನೆ ಮತ್ತು ಬಳಕೆಯನ್ನು ಹಂತಹಂತವಾಗಿ ಕಡಿಮೆ ಮಾಡಲು ಬದ್ಧವಾಗಿರುತ್ತವೆ. ಈ HFCಗಳನ್ನು ಓಝೋನ್ ಪದರವನ್ನು ಸವಕಳಿ ಮಾಡುವ ಪದಾರ್ಥಗಳಿಗೆ ಬದಲಿಯಾಗಿ ಪರಿಚಯಿಸಲಾಗಿತ್ತು.

ಕಿಗಾಲಿ ತಿದ್ದುಪಡಿಗಿಂತ ಹಿಂದಿನ ಮಾಂಟ್ರಿಯಲ್ ಒಪ್ಪಂದಕ್ಕೆ ಸಂಬಂಧಿಸಿದ ಎಲ್ಲಾ ತಿದ್ದುಪಡಿಗಳು ಕೂಡ ಜಾಗತಿಕ ಬೆಂಬಲವನ್ನು ಪಡೆದಿವೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಭಾರತವು 2021ರಲ್ಲಿ ಮಾಂಟ್ರಿಯಲ್ ಒಪ್ಪಂದಕ್ಕೆ ತರಲಾದ ಕಿಗಾಲಿ ತಿದ್ದುಪಡಿಯನ್ನು ಅಧಿಕೃತವಾಗಿ ಅನುಮೋದಿಸಿತು. ಭಾರತವು ಇದರ ಗುರಿಸಾಧನೆಗಾಗಿ, ನಾಲ್ಕು ಹಂತಗಳಲ್ಲಿ HFC ಗಳನ್ನು ಕಡಿತಗೊಳಿಸುವ ಟೈಮ್ ಲೈನ್ ಅನ್ನು ಈ ಕೆಳಗಿನಂತೆ ಹಾಕಿಕೊಂಡಿದೆ. 2032ರಲ್ಲಿ ಶೇ 10 , 2037 ರಲ್ಲಿ ಶೇ20 , 2042ರಲ್ಲಿ ಶೇ 30 , ಮತ್ತು ಅಂತಿಮವಾಗಿ 2047ರಲ್ಲಿಶೇ 85ನಷ್ಟು ಕಡಿತಗೊಳಿಸುವ ಗುರಿಯನ್ನು ಹೊಂದಿದೆ.

ಅಂತರರಾಷ್ಟ್ರೀಯ ವಿದ್ಯಮಾನಗಳು

1 ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರಾದ ಎಸ್. ಜೈಶಂಕರ್ ಅವರಿಂದ ಮಹಾತ್ಮ ಗಾಂಧಿಯವರ ಪುತ್ಥಳಿ ಅನಾವರಣ :

- ಇತ್ತೀಚೆಗೆ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವರಾದ ಎಸ್. ಜೈಶಂಕರ್ ಅವರು ವಿಯೆಟ್ನಾಂಗೆ ಅಧಿಕೃತ ಭೇಟಿಯನ್ನು ನೀಡಿದರು. ಈ ಸಂದರ್ಭದಲ್ಲಿ ವಿಯೆಟ್ನಾಮಿನ ಹೋ ಚಿ ಮಿನ್ ನಗರದಲ್ಲಿ ಮಹಾತ್ಮ ಗಾಂಧಿಯವರ ಪುತ್ಥಳಿಯನ್ನು ಅನಾವರಣಗೊಳಿಸಿದರು.
- ಎರಡು ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಈ ಭೇಟಿಯನ್ನು ಆಯೋಜಿಸಲಾಗಿತ್ತು. ಇದೇ ಸಂದರ್ಭದಲ್ಲಿ ಇವರು ವಿವಿಧ ರಾಜತಾಂತ್ರಿಕ ಸಭೆಗಳಲ್ಲಿ ಭಾಗಿಯಾಗಿದ್ದು ವಿಯೆಟ್ನಾಮಿನ ಪ್ರಧಾನ ಮಂತ್ರಿಗಳಾದ ಪಾಮ್ ಮಿನ್ ಚಿನ್ ಅವರೊಂದಿಗೆ ಭೇಟಿ ನೀಡಿ ಪ್ರಮುಖ ವಿಚಾರಗಳ ಬಗ್ಗೆ ಚರ್ಚೆಯನ್ನು ನಡೆಸಿದರು.
- ಮಹಾತ್ಮ ಗಾಂಧಿಯವರ ಪುತ್ಥಳಿಯ ಅನಾವರಣದೊಂದಿಗೆ ಬಾಕ್ ನಿನ್ ಪ್ರಾಂತ್ಯದಲ್ಲಿ ರವೀಂದ್ರನಾಥ್ ಟಾಗೋರ್ ಅವರ ಪುತ್ಥಳಿಯನ್ನು ಕೂಡ ಅನಾವರಣಗೊಳಿಸಿದರು.

2. ಭಾರತ ಮತ್ತು ಇಸ್ರೇಲ್ ನಡುವಿನ ಆರ್ಥಿಕ ಸಂಬಂಧಗಳು :

- ಇತ್ತೀಚೆಗೆ ಹಮಾಸ್ ಉಗ್ರವಾದಿ ಸಂಘಟನೆ ಇಸ್ರೇಲ್ ಮೇಲೆ ದಾಳಿ ನಡೆಸಿದ ಕಾರಣದಿಂದ ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆ ಇದರ ದುಷ್ಪರಿಣಾಮಗಳ ಬಗ್ಗೆ ಚರ್ಚೆಗಳು ಪ್ರಾರಂಭವಾಗಿವೆ. ಭಾರತ ಮತ್ತು ಇಸ್ರೇಲ್ ರಾಷ್ಟ್ರಗಳು ವೈವಿಧ್ಯಮಯ ಸಂಸ್ಕೃತಿಗಳನ್ನು ಹೊಂದಿದ್ದರೂ ಕೂಡ ಕಳೆದ ದಶಕಗಳಿಂದ ಎರಡು ರಾಷ್ಟ್ರಗಳ ನಡುವೆ ರಾಜತಾಂತ್ರಿಕ ಸಂಬಂಧಗಳು ಮತ್ತು ಆರ್ಥಿಕ ಸಂಬಂಧಗಳು ಉನ್ನತ ಮಟ್ಟದಲ್ಲಿವೆ.

ವ್ಯಾಪಾರಿ ಸಂಬಂಧಗಳು :

- ಭಾರತ ಮತ್ತು ಇಸ್ರೇಲ್ ರಾಷ್ಟ್ರಗಳ ನಡುವೆ ವ್ಯಾಪಾರ ಸಂಬಂಧಗಳು ಉನ್ನತ ಮಟ್ಟದಲ್ಲಿದ್ದು ವಿವಿಧ ಪ್ರಮುಖ ಉತ್ಪನ್ನಗಳನ್ನು ಭಾರತ ಇಸ್ರೇಲ್ ಗೆ ರಫ್ತು ಮಾಡುತ್ತಿದ್ದರೆ ಇಸ್ರೇಲ್ ನಿಂದ ಭಾರತಕ್ಕೆ ಕೆಲ ಪ್ರಮುಖ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.
- ಭಾರತದಿಂದ ಇಸ್ರೇಲ್ ಗೆ ರಫ್ತಾಗುತ್ತಿರುವ ಉತ್ಪನ್ನಗಳು - ಮುತ್ತು ಮತ್ತು ಅಮೂಲ್ಯ ರತ್ನಗಳು, ರಾಸಾಯನಿಕ ಮತ್ತು ಖನಿಜ ಉತ್ಪನ್ನಗಳು, ಯಂತ್ರೋಪಕರಣಗಳು ಮತ್ತು ವಿದ್ಯುತ್ ಉಪಕರಣಗಳು, ಜವಳಿ ಮತ್ತು ಸಿದ್ಧ ಉಡುಪುಗಳು, ಪ್ಲಾಸ್ಟಿಕ್ ಉತ್ಪನ್ನಗಳು.
- ಇಸ್ರೇಲ್ ನಿಂದ ಭಾರತಕ್ಕೆ ಆಮದಾಗುತ್ತಿರುವ ಉತ್ಪನ್ನಗಳು - ಯಂತ್ರೋಪಕರಣ ಮತ್ತು ವಿದ್ಯುನ್ಮಾನ ಬಿಡಿಭಾಗಗಳು, ಲೋಹಗಳು, ರಕ್ಷಣಾ ವಲಯದ ಉತ್ಪನ್ನಗಳು, ಸಂಚಾರ ವಲಯದಲ್ಲಿ ಬಳಕೆಯಾಗುವ ಯಂತ್ರೋಪಕರಣ, ರಾಸಾಯನಿಕ ಮತ್ತು ಖನಿಜ ಪದಾರ್ಥಗಳು.
  ಇಸ್ರೇಲ್ ಭಾರತದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಮಾಡುತ್ತಿದ್ದು, ಅವುಗಳಲ್ಲಿ ಪ್ರಮುಖವಾದ ವಲಯಗಳೆಂದರೆ ರಕ್ಷಣಾ ವಲಯ, ಕೃಷಿ ತಂತ್ರಜ್ಞಾನ ವಲಯ, ಆಹಾರ ಸಂಸ್ಕರಣ ವಲಯ ಮತ್ತು ವಿದ್ಯುನ್ಮಾನ ಉತ್ಪನ್ನಗಳ ವಲಯ.

3. ಆರನೇ ಅಂತರರಾಷ್ಟ್ರೀಯ ಸೌರ ಒಕ್ಕೂಟದ ಸಮಾವೇಶವನ್ನು ನವದೆಹಲಿಯಲ್ಲಿ ಆಯೋಜಿಸಲಾಗುತ್ತದೆ :

- ಅಕ್ಟೋಬರ್ 30 ರಿಂದ ನವಂಬರ್ 2 ನೇ ತಾರೀಖಿನವರೆಗೂ ಅಂತರರಾಷ್ಟ್ರೀಯ ಸೌರ ಒಕ್ಕೂಟದ ಆರನೇ ಸಮಾವೇಶವನ್ನು ನವದೆಹಲಿಯಲ್ಲಿ ಆಯೋಜಿಸಲಾಗುತ್ತಿದೆ.
- ಈ ಸಮಾವೇಶದ ಅಧ್ಯಕ್ಷತೆಯನ್ನು ಅಂತರರಾಷ್ಟ್ರೀಯ ಸೌರ ಒಕ್ಕೂಟದ ಅಧ್ಯಕ್ಷರು ಮತ್ತು ಕೇಂದ್ರ ಇಂಧನ, ನೂತನ ಮತ್ತು ನವೀಕರಿಸಬಹುದಾದ ಇಂಧನ ಸಚಿವರು ಆಗಿರುವ ಆರ್. ಕೆ. ಸಿಂಗ್ ಅವರು ವಹಿಸಲಿದ್ದಾರೆ.
- ಸಮಾವೇಶದಲ್ಲಿ 116 ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಲಿದ್ದು ಇದಲ್ಲದೆ ಸೌರ ಇಂಧನ ವಲಯದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಸಂಸ್ಥೆಗಳು ಮತ್ತು ವ್ಯಕ್ತಿಗಳು ಕೂಡ ಭಾಗವಹಿಸಲಿದ್ದಾರೆ.

ಆರನೇ ಸಮಾವೇಶದ ಆದ್ಯತೆಗಳು :

- ಸಾರ್ವತ್ರಿಕವಾಗಿ ಎಲ್ಲಾ ರಾಷ್ಟ್ರಗಳಲ್ಲಿ ಮತ್ತು ಸಮುದಾಯಗಳಲ್ಲಿ ಇಂಧನ ಸೌಲಭ್ಯವನ್ನು ಕಲ್ಪಿಸುವ ವಿಚಾರದಲ್ಲಿ ಚರ್ಚಿಸಲಾಗುತ್ತದೆ. ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ವಿವಿಧ ರಾಷ್ಟ್ರಗಳಲ್ಲಿ ಸ್ಥಾಪಿಸುವ ಮೂಲಕ ಮತ್ತು ಇವುಗಳ ನಡುವೆ ಗ್ರಿಡ್ ಸಂಪರ್ಕವನ್ನು ಕಲ್ಪಿಸುವ ಮೂಲಕ ವಿದ್ಯುತ್ ಶಕ್ತಿ ಸೌಲಭ್ಯ ಇಲ್ಲದ ಪ್ರದೇಶಗಳಿಗೆ ವಿದ್ಯುತ್ ಶಕ್ತಿಯನ್ನು ಪೂರೈಸಲು ಸಮಾವೇಶದಲ್ಲಿ ಚರ್ಚಿಸಲಾಗುತ್ತದೆ.
  ಸೌರ ವಿದ್ಯುತ್ ಉತ್ಪಾದನಾ ಶಕ್ತಿಯನ್ನು ಜಾಗತಿಕ ಮಟ್ಟದಲ್ಲಿ ಹೆಚ್ಚಿಸಲು ಬೇಕಾಗುವ ಹಣಕಾಸು ಸಂಪನ್ಮೂಲಗಳು ಮತ್ತು ಹಣಕಾಸು ಸಂಪನ್ಮೂಲಗಳ ಕ್ರೊಢೀಕರಣಕ್ಕೆ ಸಂಬಂಧಿಸಿದಂತೆ ಚರ್ಚೆಯನ್ನು ಮಾಡಲಾಗುತ್ತದೆ.
- ಸೌರ ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆಗೆ ಬೇಕಾಗುವ ಅವಶ್ಯಕ ಕಚ್ಚಾ ಸಾಮಗ್ರಿಗಳು ಮತ್ತು ಬಿಡಿಭಾಗಗಳ ಪೂರೈಕೆಗೆ ಯಾವುದೇ ರೀತಿಯ ಸಮಸ್ಯೆ ಆಗದ ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲು ಸಮಾವೇಶದಲ್ಲಿ ಆದ್ಯತೆ ನೀಡಲಾಗುತ್ತದೆ. ಈ ಸಮಾವೇಶವನ್ನು ಕೇಂದ್ರ ನೂತನ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ, ಭಾರತ ಸರ್ಕಾರ, ಏಷ್ಯಾ ಅಭಿವೃದ್ಧಿ ಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಸೌರ ಇಂಧನ ಒಕ್ಕೂಟ ಜಂಟಿಯಾಗಿ ಆಯೋಜಿಸುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಎಸ್ಸೆಸ್ಸೆಲ್ಸಿ- ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ENGLISH

Second Language ENGLISH

Unit-2 PROSE

There's a Girl by the Tracks!

Speak well

Task -1: ***Imagine some of Roma's colleagues (Ramani, Tejas and Shalini) visit Roma's house some days later, after the incident. They begin to talk.***

Read the dialogues taking the roles.

Shalini: Hi! Roma, how're you now? We're sorry to hear about the accident.

Roma: Please come in. I'm ok. Still, that accident haunts me.

Tejas: That's really a pity. We can't even imagine how all that happened.

Roma: Yes, it was really horrible. You know, I was in a hurry that day. Foolishly, I tried to board the running train.

Ramani: Really? You shouldn't have done that!

Roma: Well, with great risk I boarded it. The train was full and I got squeezed and a minute or two later, I was pushed out.

Tejas: How dreadful!

Roma: The very next moment, I was on the track. I didn't know how I got there.

Shalini: How terrible!

Roma: It was all God's grace that I didn't die. A young chap risked his life and saved me.

Tejas: Did he? Anyway, take care Roma. For heaven's sake, don't you ever run any more risks.

Roma: Thank you all.

Ramani: Meet you again. Take care. Bye!

Roma: Bye, friends.

Task 2: ***Imagine something bad has happened in your friend's life. You meet him/her. You need to sympathise with and instill confidence in him/her. Write a dialogue.***

Note: The following expressions are used to convey sympathy.

I'm sorry to hear about ....

That's so sad........

I'm awfully/dreadfully sorry about ......

That's a pity/hard luck/I know how it feels ....

How upsetting/ annoying/ oh, how dreadful/ terrible/ awful ......

You must be very upset ....

I'm extremely sorry to hear that/ Im/was deeply sorry to hear/ learn about ....

Bad luck

Can I help you in any way ...?

Don't worry it'll turn out all right...

It may not be as bad as it looks...

Well, these things happen, don't they ...?

Dialogue -

Me: Hi Vinay! How are you?

Vinay: I am sad friend. I lost my cousin brother in a bike accident last week.

Me: I'm sorry to hear about that.

Vinay: He was just 21 years old.

Me: That's so sad.

Vinay: He sustained serious head injuries when his bike hit a half cut electric pole.

Me: I'm dreadfully sorry about that.

Vinay: Instead of removing the pole completely from bottom with its embeddment in concrete, the pole was cut few inches above road level, resulting in accident.

Me: It's a pity that a young chap had to die for someone else's negligence. I know how it feels...

Vinay: And it happened during the night in a poorly lit street.

Me: How awful......the maintenance of roads and street lights by municipality is terrible.

Vinay: True.

Me: You must be very upset...

Vinay: Yes, I am very sad for losing my cousin brother for no fault of his. His mother had to be admitted to hospital when she lost her consciousness after hearing about his death.

Me: I'm extremely sorry to hear that ...

Vinay: She is yet to recover from the shock ...

Me: Bad luck ...

Vinay: It is not bad luck but it is the murder by municipality.

Me: Can I help you in any way ...?

Vinay: No, thanks. I will definitely ask for it, if required.

Me: Don't worry it'll turn out all right...She will recover soon...

Vinay: I am praying God that your words come true.

Me: It may not be as bad as it looks...

Vinay: Hope so...

Me: Well, these things happen, don't they ...?

Vinay: Due to the corruption in municipalities, these things are happening more frequently...

Read and respond

Task 1 : Look at the picture- 1 in column 'A'. Some statements are made in column 'B' about the actions as seen in 'A'. Some of the statements are wrong, and some of them are right. If they are wrong, correct them. If they are right mark (√) **(Contd.....)**

II PUC CHEMISTRY

ELECTROCHEMISTRY

30. Write a brief note on the Electrical protection method of preventing corrosion.

Ans:- Electrical protection (cathodic protection) - This method is used for the protection of submerged structures, ships and underground pipes



Protection of underground pipe or tank by cathodic protection

$$Mg^{2+}(aq) + 2e^- \rightarrow Mg(s); E^\circ = -2.37\,V$$

$$Fe^{2+}(aq) + 2e^- \rightarrow Fe(s); E^\circ = -0.44\,V$$

In this method, the exposed surface of iron is protected by connecting it to some more active metal such as magnesium, zinc or aluminium. The more active metal acts as anode and loses electrons in preference to iron. Thus, in case an underground iron pipe is connected to a block of magnesium, then the latter will be corroded due to its lesser reduction potential than iron. Therefore, it will protect iron against rusting. It is also a case of sacrificial protection.

31. Write a note on Daniell Cell.

Ans:- Daniell cell is a modified electrochemical cell in which Zn-$CuSO_4$ reaction takes place.

The cell contains a porous pot in place of a salt bridge. It helps in separating the two electrolytes present in their respective half cells and also allows the migration of ions from one half cell to the other in order to maintain the neutral character of the electrolytes.



Daniell Cell

In the Daniell cell, a zinc rod immersed in $ZnSO_4$ solution acts as the oxidation half cell. In the reduction half cell, the copper vessel itself acts as the cathode while the saturated solution of copper sulphate acts as the electrolyte. A few crystals of copper sulphate are also added to maintain the concentration of the electrolyte. The chemical reactions involved are the same as in the electrochemical cell.

The electrochemical cell for the above redox reaction may be shown as follows:



Cu—$AgNO_3$ indirect redox reaction in an electrochemical cell.

The redox reaction may be represent as:

$$Cu(s) \rightarrow Cu^{2+} + (aq) + 2e^-$$
(oxidation half reaction)

$$2Ag^+(aq) + 2NO_3^-(aq) + 2e^- \rightarrow 2Ag(S) + 2NO_3^-(aq)$$
(Reduction half reaction)

$$Cu(s) + 2Ag^+(aq) \rightarrow Cu^{2+}(aq) + 2Ag(s)$$

The electrochemical cell may also be represented with the help of cell notation as follows:

$$Cu(s)\ |\ Cu^{2+}(aq)\ ||\ Ag^+(aq)\ |\ Ag(s)$$

32. Distinguish between emf and potential difference.

Ans:-

Emf	*Potential difference*
It is the difference in the electrode potentials when no current flows through the cell.	It is the difference in the electrode potentials when current is flowing through the cell.
It is the maximum voltage which can be obtained from the cell.	It is less than the maximum voltage which can be obtained from the cell.
It is responsible for the flow of steady current.	It is not responsible for the flow of steady current.
It can be measured by a potentiometer.	It can be measured by a voltmeter.

33. Write a note on the function of the Salt Bridge

Ans:- A salt bridge is an inverted U-shaped glass tube which contains in it a suitable salt in the form of a thick paste made in agar-agar.

A salt bridge has the following functions to perform:

(i) A salt bridge completes the inner cell circuit.

(ii) A salt bridge prevents the transference of electrolyte from one half cell to the other.

(iii) A salt bridge maintains the electrical neutrality of the electrolytes in the two half cells. *(Contd..)*

ರಾಜಸ್ಥಾನ: ಕಾನೂನು ಪದವೀಧರ, ಸಿವಿಲ್ ಎಂಜಿನಿಯರ್, ಮಹಿಳೆಯರಿಗೆ ಅವಕಾಶ ನೀಡಿದ ಕಾಂಗ್ರೆಸ್

‘ಕೈ’ ಪಡೆಗೆ ಭರವಸೆ ತಂದ ಹೊಸಬರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 200 ಸ್ಥಾನಗಳ ಪೈಕಿ 156ಕ್ಕೆ ಅಭ್ಯರ್ಥಿಗಳ ಘೋಷಣೆ
- ಕಠೂಮರ್‌ನಲ್ಲಿ ಮೊದಲ ಬಾರಿಗೆ ಮಹಿಳೆಗೆ ಟಿಕೆಟ್
- ಕ್ಷೇತ್ರದ ಕಾರ್ಯಕರ್ತರಿಗೆ ಪ್ರಾಮುಖ್ಯತೆ

ಜೈಪುರ: ರಾಜಸ್ಥಾನ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಮಂಗಳವಾರ ಬಿಡುಗಡೆ ಮಾಡಿದ ಪಟ್ಟಿಯಲ್ಲಿ ಕನಿಷ್ಠ 25 ಮಂದಿ ಹೊಸಬರಿಗೆ ಅವಕಾಶ ನೀಡಿರುವುದು ತಳಮಟ್ಟದ ಕಾರ್ಯಕರ್ತರಲ್ಲಿ ಭರವಸೆ ಮೂಡಿಸಿದೆ ಎಂದು ಚುನಾವಣಾ ವಿಶ್ಲೇಷಕರು ಹೇಳುತ್ತಾರೆ.

ನಾಲ್ಕನೇ ಮತ್ತು ಐದನೇ ಪಟ್ಟಿಯಲ್ಲಿ 61 ಅಭ್ಯರ್ಥಿಗಳ ಹೆಸರು ಪ್ರಕಟಿಸಿದ್ದು, 200 ಸ್ಥಾನಗಳ ಪೈಕಿ 156ಕ್ಕೆ ಅಭ್ಯರ್ಥಿಗಳನ್ನು ಘೋಷಿಸಿದೆ.

ಪಟ್ಟಿಯಲ್ಲಿ ಸ್ಥಾನ ಪಡೆದ ಹೊಸಬರಲ್ಲಿ, ಹೆಚ್ಚಿನವರು ಜಿಲ್ಲಾ ಕಾಂಗ್ರೆಸ್ ಸಮಿತಿಗಳಲ್ಲಿ ಒಂದಲ್ಲ ಒಂದು ಹುದ್ದೆ ಹೊಂದಿದ್ದಾರೆ ಮತ್ತು ತಮ್ಮ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಬಹುತೇಕರ ವಯಸ್ಸು 40ರ ಅಸುಪಾಸು ಇದೆ. ಹೊಸಬರ ಪೈಕಿ ಲೋಕೋಪಯೋಗಿ ಇಲಾಖೆಯ ನಿವೃತ್ತ ಸಹಾಯಕ ಎಂಜಿನಿಯರ್ ಮಂಗಿಲಾಲ್ ಮೀನಾ (63) ಹಿರಿಯರು. ಅವರು ಎಸ್‌ಟಿ ಮೀಸಲು ಕ್ಷೇತ್ರವಾದ ರಾಜಗಢ–ಲಕ್ಷಣಗಢದಿಂದ ಸ್ಪರ್ಧಿಸುತ್ತಿದ್ದಾರೆ.

ಕಠೂಮರ್‌ನ 25 ವರ್ಷದ ಕಾನೂನು ಪದವೀಧರೆ ಸಂಜನಾ ಜಾಟವ್ ಕಿರಿಯ ಅಭ್ಯರ್ಥಿ. ಇವರು ಕಾಂಗ್ರೆಸ್ ಜಿಲ್ಲಾ ಪರಿಷತ್ ಸದಸ್ಯೆ ಮತ್ತು ಈ ಪ್ರದೇಶದಲ್ಲಿ ಸಕ್ರಿಯ ಕಾರ್ಯಕರ್ತೆಯಾಗಿದ್ದಾರೆ. ಕಠೂಮರ್‌ನಲ್ಲಿ ಪಕ್ಷ ಮೊದಲ ಬಾರಿಗೆ ಮಹಿಳೆಗೆ ಟಿಕೆಟ್ ನೀಡಿದೆ. ಅವರು ಕ್ಷೇತ್ರದ ಸಾಂಪ್ರದಾಯಿಕ ಜಾಟವ್ ಸಮುದಾಯದ ಮತಗಳನ್ನು ಗಳಿಸುವ ಸಾಧ್ಯತೆಯಿದೆ.

ನಾಸಿರಾಬಾದ್‌ನ ಶಿವಪ್ರಕಾಶ್ ಮತ್ತು ತಿಜಾರಾದ ಇಮ್ರಾನ್ ಖಾನ್ 26 ವರ್ಷ ವಯಸ್ಸಿನವರು. ಪದವೀಧರರಾದ ಶಿವಪ್ರಕಾಶ್ ಅವರು ಯುವ ಕಾಂಗ್ರೆಸ್‌ನಲ್ಲಿ ಹಲವಾರು ಹುದ್ದೆಗಳನ್ನು ನಿರ್ವಹಿಸಿದ್ದಾರೆ ಮತ್ತು ಸ್ಥಳೀಯ ರಾಜಕೀಯದಲ್ಲಿ ಉತ್ತಮ ಹಿಡಿತ ಹೊಂದಿದ್ದಾರೆ.

ಬಿಎಸ್‌ಪಿ ತೊರೆದು ಬಂದಿರುವ ಸಿವಿಲ್ ಎಂಜಿನಿಯರ್, ತಿಜಾರದ ಇಮ್ರಾನ್ ಖಾನ್ ಅವರು ಬಿಜೆಪಿಯ ಅಲ್ವರ್ ಸಂಸದ, ಬಾಬಾ ಬಾಲಕನಾಥ್ ವಿರುದ್ಧ ಸ್ಪರ್ಧಿಸಿದ್ದಾರೆ. ಈ ಪ್ರದೇಶದಲ್ಲಿ ಮಿಯೊ ಮತಗಳ ಮೇಲೆ ಕೇಂದ್ರೀಕರಿಸಿದ್ದಾರೆ.

ಪಿಂಡ್ವಾರಾ-ಅಬು ರಸ್ತೆಯ ಲೀಲಾರಾಮ್ ಗರಾಸಿಯಾ (40), ಅಜ್ಮೀರ್ ದಕ್ಷಿಣದ ದ್ರೌಪದಿ ಕೋಲಿ (55), ಮನೋಹರಥಾನದ ನೇಮಿಚಂದ್ ಮೀನಾ (32), ಹಿಂಡನ್‌ನ ಅನಿತಾ ಜಾಟವ್ (33), ರಮೀಳಾ ಮೇಘವಾಲ್ (33), ಅಂಕುರ್ ಮಗ್ಲಾನಿ, ಶ್ರೀಗನಾಗನಗರದ 44, ಬದ್ರಿ ಜಾಟ್, ಬಡಿ ಸದ್ರಿಯ 41, ಸಂಗೋಡ್‌ನ ಭಾನುಪರತ್ ಸಿಂಗ್, ಸಂಗೋಡ್‌ನ 41, ಭಾನುಪರತ್ ಸಿಂಗ್ ಸೇರಿದಂತೆ ಇತರರು ಇದ್ದಾರೆ. ಇವರೆಲ್ಲರೂ ಪಕ್ಷದ ಸದಸ್ಯರು, ಯುವ ಕಾಂಗ್ರೆಸ್ ಅಥವಾ ಎನ್‌ಎಸ್‌ಯುಐ ಸದಸ್ಯರಾಗಿದ್ದಾರೆ.

‘ಪಕ್ಷ ಬಿಡುಗಡೆ ಮಾಡಿದ ಈ ಎರಡು ಪಟ್ಟಿಗಳು ಸಮತೋಲನದಿಂದ ಕೂಡಿರುವಂತೆ ತೋರುತ್ತವೆ ಮತ್ತು ರಾಜಕೀಯ ಸೇರಲು ಬಯಸುವ ಯುವಜನರಿಗೆ ಭರವಸೆ ನೀಡುತ್ತವೆ. ಕ್ಷೇತ್ರದ ಕಾರ್ಯಕರ್ತರಿಗೆ ಪ್ರಾಮುಖ್ಯತೆ ನೀಡಲಾಗಿದೆ’ ಎಂದು ಚುನಾವಣಾ ವಿಶ್ಲೇಷಕ ನಾರಾಯಣ್ ಬರೇತ್ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಮುಖ ಅಭ್ಯರ್ಥಿಯೆಂದರೆ ನಗರ ಕ್ಷೇತ್ರ ಉದಯಪುರದ 45 ವರ್ಷದ ಗೌರವ್ ವಲ್ಲಭ್. ಅವರು ಕಾಂಗ್ರೆಸ್ ರಾಷ್ಟ್ರೀಯ ವಕ್ತಾರರೂ ಆಗಿದ್ದಾರೆ.

ಅಜ್ಮೀರ್ ದಕ್ಷಿಣದಿಂದ ದ್ರೌಪದಿ ಕೋಲಿ, ಕಥುಮಾರ್‌ನಿಂದ ರಮೀಳಾ ಮೇಘವಾಲ್ ಜಲೋರ್, ಸಂಜನಾ ಜಾಟವ್, ಭೋಪಾಲ್‌ಗಢದಿಂದ ಗೀತಾ ಬಾರ್ವಾರ್, ಹಿಂಡನ್ ನಿಂದ ಅನಿತಾ ಜಾಟವ್– ಈ ಆರು ಹೊಸ ಮಹಿಳಾ ಅಭ್ಯರ್ಥಿಗಳ ಮೇಲೆ ಕಾಂಗ್ರೆಸ್ ಭರವಸೆ ಇಟ್ಟಿದೆ. ಎಸ್‌ಸಿ ಪ್ರಾಬಲ್ಯದ ಅನುಪಗಢ ಕ್ಷೇತ್ರದಿಂದ ಶಿಮ್ಲಾ ನಾಯಕ್ ಅವರು ಕಾಂಗ್ರೆಸ್ ಮೊದಲ ಬಾರಿಗೆ ಮಹಿಳೆಗೆ ಟಿಕೆಟ್ ನೀಡಿದೆ.

ಈ ಹಿಂದೆ ಸಾರ್ವಜನಿಕ ಜೀವನದಲ್ಲಿ ಇಲ್ಲದ ಧಾರ್ಮಿಕ ಬಾಬಾಗಳು, ಅಧಿಕಾರಿಗಳು, ಉದ್ಯಮಿಗಳಂತಹ ಅನೇಕ ರಾಜಕೀಯೇತರರನ್ನು ಪಟ್ಟಿಗಳಲ್ಲಿ ಸೇರಿಸಲಾಗಿದೆ ಎಂದು ಬರೆತ್ ಎಚ್ಚರಿಸಿದ್ದಾರೆ.

‘ಈ ಪ್ರಕ್ರಿಯೆಯಲ್ಲಿ ಅನೇಕ ರಾಜಕೀಯ ತಳಮಟ್ಟದ ಕಾರ್ಯಕರ್ತರನ್ನು ಬದಿಗಿಡಲಾಗಿದೆ. ಇದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಪ್ರವೃತ್ತಿಯಾಗಿದೆ. ತಳಮಟ್ಟದ ಕಾರ್ಯಕರ್ತರು ಭ್ರಮನಿರಸನಗೊಳ್ಳುತ್ತಾರೆ. ಅವರು ಸೂಕ್ಷ್ಮತೆ, ದೃಷ್ಟಿಕೋನ ಹೊಂದಿದ್ದಾರೆ, ಅವರು ವಿಷಯಾಧಾರಿತ ರಾಜಕೀಯವನ್ನು ಅನುಸರಿಸುತ್ತಾರೆ ಮತ್ತು ಜನರಿಗೆ ಉತ್ತರದಾಯಿಯಾಗಿರುತ್ತಾರೆ’ ಎಂದು ಅವರು ಹೇಳಿದ್ದಾರೆ.

ಬಿಜೆಪಿ ಟಿಕೆಟ್ ವಂಚಿತನಿಗೆ ‘ಕೈ’ ಮಣೆ

ಕಿಶನ್‌ಗಢದಿಂದ ಬಿಜೆಪಿ ಟಿಕೆಟ್ ನಿರಾಕರಿಸಿದ ನಂತರ ಇತ್ತೀಚೆಗೆ ಕಾಂಗ್ರೆಸ್ ಸೇರಿದ 36 ವರ್ಷದ ವಿಕಾಸ್ ಚೌಧರಿ ಸಹ ಪಟ್ಟಿಯಲ್ಲಿದ್ದಾರೆ.

ಡಾಕ್ಟರೇಟ್ ಪದವಿ ಪಡೆದಿರುವ ಚೌಧರಿ ಅವರು ಕಾಂಗ್ರೆಸ್ ಸೇರುವ ಮೊದಲು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಪ್ರತಿಜ್ಞೆ ಮಾಡಿದ್ದರು. ಅವರು ಈಗ ಬಿಜೆಪಿಯ ಭಗೀರಥ ಚೌಧರಿ ವಿರುದ್ಧ ಹೋರಾಡಲಿದ್ದಾರೆ.

ಚುನಾವಣಾ ಕಣದಲ್ಲಿ

- **ಕಾಂಗ್ರೆಸ್‌ಗೆ ಸೇರ್ಪಡೆ:** ತೆಲಂಗಾಣದ ಬಿಜೆಪಿ ಮಾಜಿ ಸಂಸದ, ಬಿಜೆಪಿ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ.ವಿವೇಕ್ ವೆಂಕಟಸ್ವಾಮಿ ಅವರು ಪಕ್ಷಕ್ಕೆ ರಾಜೀನಾಮೆ ನೀಡಿ ರಾಹುಲ್ ಗಾಂಧಿ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಯಾದರು. ವಿವೇಕ್ ಅವರು ತೆಲಂಗಾಣ ಪ್ರತ್ಯೇಕ ರಾಜ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು.



- **ರಾಜನಾಥ ಮನವಿ:** ಜನಾಂಗೀಯ ಹಿಂಸಾಚಾರದಿಂದ ತತ್ತರಿಸಿರುವ ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯದವರು ಒಟ್ಟಿಗೆ ಕುಳಿತು ಮಾತುಕತೆ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಮನವಿ ಮಾಡಿದ್ದಾರೆ. ಮಿಜೋರಾಂನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಯಾವುದೇ ಸಮಸ್ಯೆಗೆ ಹಿಂಸಾಚಾರ ಪರಿಹಾರವಲ್ಲ ಎಂದರು.
- **ಅಂಚೆ ಮತ:** ನವೆಂಬರ್ 7 ರಂದು ನಡೆಯಲಿರುವ ಮಿಜೋರಾಂ ಚುನಾವಣೆಯಲ್ಲಿ ಹಿರಿಯ ನಾಗರಿಕರು, ಅಂಗವಿಕಲರು ಮತ್ತು ಸರ್ಕಾರಿ ಅಧಿಕಾರಿಗಳು ಸೇರಿ ಒಟ್ಟು 5,306 ಮಂದಿ ಮನೆಯಿಂದ ಮತ್ತು ಅಂಚೆ ಮತಪತ್ರಗಳ ಮೂಲಕ ತಮ್ಮ ಹಕ್ಕು ಚಲಾಯಿಸಿದ್ದಾರೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ. 1,100 ಹಿರಿಯ ನಾಗರಿಕರು (80 ವರ್ಷ ಮತ್ತು ಮೇಲ್ಪಟ್ಟವರು) ಮತ್ತು ಅಂಗವಿಕಲರು ಮನೆಯಿಂದಲೇ ತಮ್ಮ ಹಕ್ಕು ಚಲಾಯಿಸಿದ್ದಾರೆ.
- **ಯಾಗ:** ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ತೆಲಂಗಾಣ ಮತ್ತು ಆಂಧ್ರಪ್ರದೇಶದ ಸಮೃದ್ಧಿಗಾಗಿ ಮೂರು ದಿನಗಳ 'ಯಾಗ'ವನ್ನು (ವಿಶೇಷ ಪೂಜೆ) ಬುಧವಾರ ಪ್ರಾರಂಭಿಸಿದರು. ರಾವ್ ಅವರ ತೋಟದ ಮನೆಯಲ್ಲಿ ‘ಯಾಗ’ ಪ್ರಾರಂಭವಾಯಿತು. ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕರ್ನಾಟಕದ ಪುರೋಹಿತರು ಯಾಗವನ್ನು ನಡೆಸಿಕೊಡುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.
- **ಸೋನಿಯಾ ಮನವಿ:** ಶಾಂತಿ ಮತ್ತು ಅಭಿವೃದ್ಧಿಗಾಗಿ ಕಾಂಗ್ರೆಸ್‌ಗೆ ಮತ ಚಲಾಯಿಸಬೇಕು. ಪ್ರಯೋಗಗಳನ್ನು ಮಾಡಲು ಸಮಯವಿಲ್ಲ ಎಂದು ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರು ಮಿಜೋರಾಂ ಜನರಿಗೆ ವಿಡಿಯೊ ಸಂದೇಶದ ಮೂಲಕ ಮನವಿ ಮಾಡಿದ್ದಾರೆ.
- **‘ಹುಚ್ಚು ನೀತಿ’:** ಎಲ್‌ಐಸಿ ಸೇರಿದಂತೆ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳನ್ನು ಮಾರಾಟ ಮಾಡುವ ಅಥವಾ ಖಾಸಗೀಕರಣಗೊಳಿಸುವ ‘ಹುಚ್ಚು’ ನೀತಿಯನ್ನು ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಅಳವಡಿಸಿಕೊಂಡಿದೆ ಎಂದು ಬಿಆರ್‌ಎಸ್ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಆರೋಪಿಸಿದ್ದಾರೆ.
- **‘ನಾನು ಮೋದಿ ಅಲ್ಲ’:** ‘ನಾನು ನರೇಂದ್ರ ಮೋದಿಯಲ್ಲ. ನಾನು ಆಶ್ವಾಸನೆ ನೀಡಿದರೆ ಅದನ್ನು ಈಡೇರಿಸಲಾಗುವುದು. ಮೋದಿ ಅವರು ಪ್ರತಿಯೊಬ್ಬರ ಖಾತೆಯಲ್ಲಿ ₹ 15 ಲಕ್ಷ ಠೇವಣಿ ಇಡುವ ಆಶ್ವಾಸನೆ ನೀಡಿದ್ದರು. ಅದು ಈಡೇರಲಿಲ್ಲ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತೆಲಂಗಾಣದ ನಗರ್‌ಕರ್ನೂಲ್‌ನಲ್ಲಿ ಹೇಳಿದ್ದಾರೆ.
- **‘ಬಂಧನಕ್ಕೆ ಸಂಚು’:** 2024ರ ಲೋಕಸಭೆ ಚುನಾವಣೆ ಒಳಗೆ ಎಲ್ಲಾ ವಿರೋಧ ಪಕ್ಷಗಳ ನಾಯಕರನ್ನು ಬಂಧಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ದೆಹಲಿ ಅಬಕಾರಿ ನೀತಿ ಹಗರಣ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯದ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಇ.ಡಿ ಸಮನ್ಸ್ ನೀಡಿರುವ ಹಿನ್ನೆಲೆಯಲ್ಲಿ ಹೀಗೆ ಹೇಳಿದ್ದಾರೆ.
- **ಮಂಡಳಿಗಳಲ್ಲಿ ಸ್ಥಾನ:** ಈ ಚುನಾವಣೆಯು ರಾಜಸ್ಥಾನಕ್ಕಷ್ಟೇ ಅಲ್ಲ, ಕಾಂಗ್ರೆಸ್ ದೃಷ್ಟಿಯಿಂದಲೂ ಮಹತ್ವ ಪಡೆದಿದೆ. ಟಿಕೆಟ್ ವಂಚಿತರು ಬೇಸರಿಸಿಕೊಳ್ಳದೇ ಪಕ್ಷ ಗೆಲ್ಲುವಂತೆ ಮಾಡಬೇಕು. ಅಂಥವರಿಗೆ ಚುನಾವಣೆ ಬಳಿಕ ಮಂಡಳಿಗಳಲ್ಲಿ ಸ್ಥಾನ ನೀಡಲಾಗುವುದು ಎಂದು ಸಿ.ಎಂ ಅಶೋಕ್ ಗೆಹಲೋತ್ ತಿಳಿಸಿದ್ದಾರೆ.

ನುಡಿ–ಕಿಡಿ

ಬಿಜೆಪಿ ಮತ್ತು ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಕರ್ಫ್ಯೂ, ಇಂಟರ್‌ನೆಟ್ ಸೇವೆ ಸ್ಥಗಿತ ಸಾಮಾನ್ಯವಾಗಿದ್ದು ನೀವು ಕೆಲಸಕ್ಕೆ ಹೊರಗೆ ಹೋಗುವಂತೆಯೂ ಇಲ್ಲ, ಮನೆಯಿಂದಲೂ ಕೆಲಸ ಮಾಡುವಂತಿಲ್ಲ. ಬಿಜೆಪಿ, ಕಾಂಗ್ರೆಸ್‌ಗೆ ಮತ ಹಾಕಿದರೆ ಅವ್ಯವಸ್ಥೆಗೆ ಮತ ಹಾಕಿದಂತಾಗುತ್ತದೆ

ಅಸಾದುದ್ದೀನ್ ಓವೈಸಿ, ಎಐಎಂಐಎಂ ಮುಖ್ಯಸ್ಥ

ಛತ್ತೀಸಗಢದಲ್ಲಿ ಬಿಜೆಪಿಗೆ ಧ್ರುವೀಕರಣ ಹೊರತುಪಡಿಸಿ ಬೇರೆ ಯಾವುದೇ ವಿಷಯಗಳಿಲ್ಲ. ಗೃಹಸಚಿವರು ಮತ್ತು ಅಸ್ಸಾಂ ಮುಖ್ಯಮಂತ್ರಿ ಮಾಡಿದ ಭಾಷಣಗಳಲ್ಲಿ ಧ್ರುವೀಕರಣ ವಿಷಯ ಮಾತ್ರ ಇತ್ತು.

ಜೈರಾಮ್ ರಮೇಶ್, ಕಾಂಗ್ರೆಸ್ ನಾಯಕ

‘ನೀತಿ ಸಂಹಿತೆ ಉಲ್ಲಂಘನೆ’

ನವದೆಹಲಿ (ಪಿಟಿಐ): ಇಂಡಿಗೋ ಸಂಸ್ಥೆಯ ಎರಡು ವಿಮಾನಗಳ ಚಾಲನಾ ಸಿಬ್ಬಂದಿ ತಮ್ಮ ಘೋಷಣೆಯಲ್ಲಿ ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಕಾಂಗ್ರೆಸ್ ನಾಯಕ ಜೈರಾಂ ರಮೇಶ್ ಆರೋಪಿಸಿದ್ದಾರೆ.

ಕಳೆದ ವಾರ ದೆಹಲಿಯಿಂದ ಐಜ್ವಾಲ್‌ಗೆ ವಿಮಾನದಲ್ಲಿ ಪಯಣಿಸಿದಾಗ ಚಾಲನಾ ಸಿಬ್ಬಂದಿ ಮೋದಿ ಅವರನ್ನು ಹೊಗಳುತ್ತಾ, ವಿಧಾನಸಭೆ ಚುನಾವಣೆಗಳಲ್ಲಿ ಮತ ನೀಡುವಂತೆ ಕೋರಿದ್ದಾರೆ ಎಂದು ದೂರಿದ್ದಾರೆ.

ಸಚಿವಾಲಯ ಮತ್ತು ಚುನಾವಣಾ ಆಯೋಗದಿಂದ ಜಾಗೃತಿ ಕಾರ್ಯಕ್ರಮ ನಡೆಯುತ್ತಿದ್ದು ಮತ ಚಲಾಯಿಸುವಂತೆ ಜನರಿಗೆ ಅರಿವು ಮೂಡಿಸಲಾಗುತ್ತಿದೆ ಎಂದು ಸಚಿವ ಜ್ಯೋತಿರಾದಿತ್ಯ ಸಿಂದಿಯಾ ಸ್ಪಷ್ಟಪಡಿಸಿದ್ದಾರೆ.

ಇಬ್ಬರು ಶಾಸಕರು ಸೇರಿ ಐವರಿಗೆ ಟಿಕೆಟ್ ಪ್ರಕಟ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಸ್ಥಾನ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಐದನೇ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಇಬ್ಬರು ಶಾಸಕರು ಸೇರಿದಂತೆ ಐದು ಮಂದಿಗೆ ಟಿಕೆಟ್ ನೀಡಿದೆ.

ಉಳಿದ 44 ಸ್ಥಾನಗಳಿಗೆ ಶೀಘ್ರದಲ್ಲೇ ಹೆಸರು ಪ್ರಕಟಿಸಲಿದೆ. ನಾಮಪತ್ರ ಸಲ್ಲಿಸಲು ನ.6 ಕೊನೆ ದಿನ. ಜೈಸಲ್ಮೇರ್‌ನಿಂದ ರೂಪರಾಮ್ ಮೇಘವಾಲ ಮತ್ತು ಪೋಖರಣ್‌ನಿಂದ ಸಲೇಹ್ ಮೊಹಮ್ಮದ್ ಅವರನ್ನು ಮತ್ತೆ ಕಣಕ್ಕಿಳಿಸಿದೆ.

ಫುಲೇರಾದಲ್ಲಿ ವಿದ್ಯಾಧರ್ ಚೌಧರಿ, ಅಸಿಂದ್‌ನಲ್ಲಿ ಹಗಾಮಿ ಲಾಲ್ ಮೇವಾಢ, ಜಹಾಪುರದಲ್ಲಿ ಧೀರಜ್ ಗುರ್ಜ್ ಅವರನ್ನು ಬಿಜೆಪಿ ಶಾಸಕರ ವಿರುದ್ಧ ಕಣಕ್ಕಿಳಿಸಿದೆ. ಇದರೊಂದಿಗೆ 200 ಸ್ಥಾನಗಳ ಪೈಕಿ 156 ಸ್ಥಾನಕ್ಕೆ ಅಭ್ಯರ್ಥಿಗಳ ಹೆಸರು ಪ್ರಕಟಿಸಿದಂತಾಗಿದೆ. 21 ಮಹಿಳೆಯರಿಗೆ ಅವಕಾಶ ನೀಡಿದೆ.

‘ಸ್ತ್ರೀಯರ ರಾಜಕೀಯ ಪ್ರವೇಶ ಸುಲಭವಲ್ಲ’

• ಸುಮಿರ್ ಕರ್ಮಾಕರ್

ಗುವಾಹಟಿ: ಮಿಜೋರಾಂನಲ್ಲಿ ಪುರುಷ ಮತದಾರರಿಗಿಂತ 21 ಸಾವಿರದಷ್ಟು ಹೆಚ್ಚು ಮಹಿಳಾ ಮತದಾರರಿದ್ದಾರೆ. ಆದರೂ ರಾಜ್ಯ ವಿಧಾನಸಭೆಯಲ್ಲಿ ಒಬ್ಬ ಶಾಸಕಿಯೂ ಇಲ್ಲ. 1987ರಲ್ಲಿ ಮಿಜೋರಾಂ ರಾಜ್ಯ ರಚನೆಯಾದಾಗಿನಿಂದ ಇಲ್ಲಿಯವರೆಗೆ ಕೇವಲ ನಾಲ್ವರು ಮಹಿಳೆಯರು ವಿಧಾನಸಭೆಗೆ ಆಯ್ಕೆ ಆಗಿದ್ದಾರೆ.

ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ 174 ಅಭ್ಯರ್ಥಿಗಳಲ್ಲಿ ಮಹಿಳೆಯರ ಸಂಖ್ಯೆ ಕೇವಲ 18. ಅವರಲ್ಲಿ ಮೂವರು ಬಿಜೆಪಿಯಿಂದ, ತಲಾ ಇಬ್ಬರು ಆಡಳಿತಾರೂಢ ಎಂಎನ್‌ಎಫ್ ಮತ್ತು ವಿರೋಧ ಪಕ್ಷಗಳಾದ ಝೆಡ್‌ಪಿಎಂ ಮತ್ತು ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದಾರೆ. ಬಾಕಿ ಒಂಬತ್ತು ಮಹಿಳಾ ಅಭ್ಯರ್ಥಿಗಳು ಪಕ್ಷೇತರರು.

ಪುರುಷಪ್ರಧಾನ ಮಿಜೋ ಸಮಾಜದಲ್ಲಿ ಮಹಿಳೆಯರು ರಾಜಕೀಯದಲ್ಲಿ ಉನ್ನತಿ ಸಾಧಿಸಲು ಮಹಿಳಾ ಮೀಸಲಾತಿ ಒಂದೇ ಸದ್ಯದ ಭರವಸೆ ಎಂದು ಸೆರ್ಛಿಪ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ. ವನ್ಲಾಲ್‌ರೌತಿ ಅವರು ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ವನ್ಲಾಲ್‌ರೌತಿ

- **ರಾಜ್ಯದಲ್ಲಿ ಶಾಸಕಿಯರೇ ಇಲ್ಲ. ಇದಕ್ಕೆ ಕಾರಣ?**

ನಮ್ಮದು ಪುರುಷ ಪ್ರಧಾನ ಸಮಾಜ. ಇಲ್ಲಿರುವ ಚರ್ಚ್‌ಗಳು, ಸರ್ಕಾರೇತರ ಸಂಸ್ಥೆಗಳಲ್ಲಿ (ಎನ್‌ಜಿಒ) ಮಹಿಳೆಯರಿಗೆ ಉನ್ನತ ಸ್ಥಾನಗಳು ಸಿಗುವುದಿಲ್ಲ. ಹಾಗಾಗಿ ರಾಜಕೀಯ ಕ್ಷೇತ್ರದಲ್ಲಿ ಮುಂದುವರೆಯಲು ಸಾಧ್ಯವಿಲ್ಲ. ಚರ್ಚ್‌ಗಳು ಮತ್ತು ಎನ್‌ಜಿಒಗಳು ಕೂಡಾ ಮಹಿಳೆಯರ ಪ್ರಾತಿನಿಧ್ಯವನ್ನು ಇಷ್ಟಪಡುವುದಿಲ್ಲ.

- **ನಿಮಗೆ ಟಿಕೆಟ್ ಸುಲಭದಲ್ಲಿ ದೊರಕಿತೇ?**

ಬೇರೆ ಪಕ್ಷಗಳಲ್ಲಾಗಿದ್ದರೆ ಕಷ್ಟವಾಗುತ್ತಿತ್ತು. ಆದರೆ, ಬಿಜೆಪಿಯು ಮಹಿಳಾ ರಾಜಕಾರಣಿಗಳ ಕುರಿತು ಒಲವು ಹೊಂದಿದೆ. ಹಾಗಾಗಿ ಕಷ್ಟ ಆಗಲಿಲ್ಲ. ಸಮರ್ಥರಿಗೆ ಬಿಜೆಪಿ ಟಿಕೆಟ್ ನೀಡುತ್ತದೆ.

- **ಬಿಜೆಪಿಯು ಹಿಂದೂ ಪರ ಪಕ್ಷ ಎಂದು ಬಿಂಬಿತವಾಗಿದೆ. ಕ್ರೈಸ್ತರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಮಿಜೋರಾಂ ಜನರನ್ನು ಹೇಗೆ ಮನವೊಲಿಸುತ್ತದೆ?**

ಬಿಜೆಪಿಯು ಹಿಂದೂಗಳ ಪಕ್ಷ ಎಂದು ಕಾಂಗ್ರೆಸ್ ಬಿಂಬಿಸಿದೆ. ಆಡಳಿತಾರೂಢ ಎಂಎನ್‌ಎಫ್ ಮತ್ತು ವಿರೋಧ ಪಕ್ಷ ಝೆಡ್‌ಪಿಎಂ ಎನ್‌ಡಿಎಯ ಸಹಭಾಗಿಗಳು. ದೆಹಲಿ ಮಟ್ಟದಲ್ಲಿ ಬಿಜೆಪಿ ನಾಯಕರ ಜೊತೆ ಸ್ನೇಹ ಸಾಧಿಸುವುದಾಗಿ ಝೆಡ್‌ಪಿಎಂ ಮುಖ್ಯಸ್ಥ ಲಾಲ್ದುಹೋಮಾ ಅವರು ಈ ಹಿಂದೆ ಹೇಳಿದ್ದರು. ಹೀಗಾಗಿ ಕಾಂಗ್ರೆಸ್ ಮಾತಿಗೆ ಕಿವಿಗೊಡಬೇಕಿಲ್ಲ.

- **ಹಾಗಿದ್ದೂ ಝೆಡ್‌ಪಿಎಂನ ಲಾಲ್ದುಹೋಮಾ ವಿರುದ್ಧ ನಿಮ್ಮನ್ನು ಕಣಕ್ಕಿಳಿಸಿರುವುದು ಏಕೆ?**

ಶಾಸಕರಾಗಿ ಅವರು ಹಲವಾರು ಭರವಸೆಗಳನ್ನು ನೀಡಿದ್ದರು. ಆದರೆ, ಅವನ್ನು ಈಡೇರಿಸಿಲ್ಲ. ಕ್ಷೇತ್ರದ ಜನರಿಗೆ ಈ ವಿಷಯ ತಿಳಿದಿದೆ. ಪ್ರತಿ ಗ್ರಾಮಗಳಲ್ಲೂ ಮಹಿಳೆಯರಿಗೆ ರಾಜಕೀಯ ಕುರಿತು ಅರಿವು ಮೂಡಿಸಬೇಕಿದೆ.

ಆ್ಯಪಲ್ ಎಚ್ಚರಿಕೆ: ಐ.ಟಿ ಕುರಿತ ಸ್ಥಾಯಿ ಸಮಿತಿ ಸಭೆಗೆ ಆಗ್ರಹ

ಬಿಜೆಪಿ–ವಿಪಕ್ಷಗಳ ಜಟಾಪಟಿ

ನವದೆಹಲಿ (ಪಿಟಿಐ): ‘ಸರ್ಕಾರಿ ಪ್ರಾಯೋಜಿತ ದಾಳಿಕೋರರು’ ತಮ್ಮ ಐಫೋನ್ ಹ್ಯಾಕ್ ಮಾಡಲು ಪ್ರಯತ್ನಿಸುತ್ತಿರುವ ಕುರಿತು ಆ್ಯಪಲ್ ಕಂಪನಿ ಎಚ್ಚರಿಕೆ ನೀಡಿರುವ ವಿಷಯವನ್ನು ಮುಂದಿಟ್ಟುಕೊಂಡು ಕೇಂದ್ರ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ವಿರೋಧ ಪಕ್ಷಗಳು ಬುಧವಾರ ಸಜ್ಜಾಗಿವೆ.

ಆ್ಯಪಲ್ ಕಂಪನಿಯ ಎಚ್ಚರಿಕೆ ಹಿನ್ನೆಲೆಯಲ್ಲಿ ಸಂಸದರ ಹಕ್ಕುಗಳನ್ನು ಸಂರಕ್ಷಣೆ ಮಾಡುವಂತೆ ಒತ್ತಾಯಿಸಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಈಗಾಗಲೇ ಪತ್ರ ಬರೆದಿದ್ದಾರೆ. ಈ ವಿಷಯ ಕುರಿತು ಸಮಗ್ರ ಪರಿಶೀಲನೆಗಾಗಿ ಮಾಹಿತಿ ತಂತ್ರಜ್ಞಾನ (ಐ.ಟಿ) ಕುರಿತ ಸಂಸದೀಯ ಸ್ಥಾಯಿ ಸಮಿತಿ ಸಭೆಯನ್ನು ಕರೆಯುವಂತೆ ಇತರ ವಿಪಕ್ಷಗಳ ನಾಯಕರು ಆಗ್ರಹಿಸಿದ್ದಾರೆ.

‘ಸಂಸದರು ಹೊಂದಿರುವ ಸಂವಿಧಾನದತ್ತ ಸ್ವಾತಂತ್ರ್ಯ ಹಾಗೂ ಹಕ್ಕುಗಳ ಉಲ್ಲಂಘನೆಯಾಗಿದೆ. ಈ ವಿಚಾರವಾಗಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಉತ್ತರದಾಯಿತ್ವ ನಿಗದಿ ಮಾಡಬೇಕು’ ಎಂದು ಮಹುವಾ ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

‘ವಿರೋಧ ಪಕ್ಷಗಳ ಕೆಲ ನಾಯಕರು, ಸರ್ಕಾರದ ನಿಲುವುಗಳನ್ನು ಪ್ರಶ್ನಿಸಿದ್ದ ಪತ್ರಕರ್ತರು ಹಾಗೂ ನಾಗರಿಕ ಸಂಘಟನೆಗಳ ಸದಸ್ಯರ ಕುರಿತು ಬೇಹುಗಾರಿಕೆ ನಡೆಸಲು 2019–21ರ ಅವಧಿಯಲ್ಲಿ ಪೆಗಾಸಸ್ ಕುತಂತ್ರಾಂಶ ಬಳಸಲಾಗಿತ್ತು. ಈಗ, ಅಂಥದೇ ಪ್ರಯತ್ನಗಳು ನಡೆಯುತ್ತಿವೆ ಎಂಬುದು ತಿಳಿದು ಮತ್ತಷ್ಟು ಆಘಾತವಾಗಿದೆ’ ಎಂದು ವಿವರಿಸಿದ್ದಾರೆ.

ಪಿ. ಚಿದಂಬರಂ ನಿಶಿಕಾಂತ್

ಆ್ಯಪಲ್ ಕಂಪನಿ ಎಚ್ಚರಿಕೆ ನೀಡಿರುವ ಕುರಿತು ಚರ್ಚಿಸಲು ಕೂಡಲೇ ಸಭೆ ನಡೆಸುವಂತೆ ಕೋರಿ ಮಾಹಿತಿ ತಂತ್ರಜ್ಞಾನ ಕುರಿತ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರತಾಪ್‌ರಾವ್ ಜಾಧವ್ ಅವರಿಗೆ ಸಂಸದರಾದ ಕಾಂಗ್ರೆಸ್‌ನ ಕಾರ್ತಿ ಚಿದಂಬರಂ ಹಾಗೂ ಸಿಪಿಎಂನ ಜಾನ್ ಬ್ರಿಟ್ಟಾಸ್ ಪತ್ರ ಬರೆದು ಒತ್ತಾಯಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್‌ನ ಹಿರಿಯ ನಾಯಕ ಪಿ.ಚಿದಂಬರಂ ಅವರು ಕೂಡ ಜಾಧವ್ ಅವರಿಗೆ ಪತ್ರ ಬರೆದಿದ್ದು, ‘ಎಚ್ಚರಿಕೆ ಸಂದೇಶಗಳನ್ನು ಸ್ವೀಕರಿಸಿರುವವರು ಹಾಗೂ ಆ್ಯಪಲ್ ಕಂಪನಿ ಪ್ರತಿನಿಧಿಗಳನ್ನು ಸಭೆಗೆ ಆಹ್ವಾನಿಸಬೇಕು’ ಎಂದು ಒತ್ತಾಯಿಸಿದ್ದಾರೆ ಎಂದು ಇವೇ ಮೂಲಗಳು ಹೇಳಿವೆ.

‘ಆ್ಯಪಲ್ ಕಂಪನಿ ಎಚ್ಚರಿಕೆ ನೀಡಿರುವುದು, ಪೆಗಾಸಸ್ ಪ್ರಕರಣದ ನಂತರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳತ್ತ ಮತ್ತೊಮ್ಮೆ ಸಂಶಯದಿಂದ ನೋಡುವಂತಾಗಿದೆ. ಆದರೆ, ವಿರೋಧ ಪಕ್ಷಗಳ ನಾಯಕರನ್ನೇ ಗುರಿಯಾಗಿಸಿದ್ದೇಕೆ? ವಿರೋಧ ಪಕ್ಷಗಳ ನಾಯಕರ ಫೋನ್‌ಗಳಲ್ಲಿನ ಮಾಹಿತಿ ಕಳ್ಳತನ ಮಾಡಲು ಯಾರು ಆಸಕ್ತಿ ಹೊಂದಿದ್ದಾರೆ’ ಎಂದು ಚಿದಂಬರಂ ಪ್ರಶ್ನೆ ಮಾಡಿದ್ದಾರೆ.

ಐ.ಟಿ ಕುರಿತ ಸ್ಥಾಯಿ ಸಮಿತಿ ಸಭೆ ಕರೆಯಬೇಕು ಎಂಬ ವಿಪಕ್ಷಗಳ ಬೇಡಿಕೆ ಕುರಿತು ಬಿಜೆಪಿ ಸಂಸದ ಹಾಗೂ ಸಮಿತಿ ಸದಸ್ಯರಾದ ನಿಶಿಕಾಂತ್ ದುಬೆ ಪ್ರತಿಕ್ರಿಯಿಸಿದ್ದು, ‘ಸ್ಥಾಯಿ ಸಮಿತಿಯು ಈ ವಿಷಯ ಕುರಿತು ಚರ್ಚೆ ನಡೆಸುವುದು ಸಾಧ್ಯವಿಲ್ಲ’ ಎಂದಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ದುಬೆ, ‘ಲೋಕಸಭೆ ನಿಯಮಗಳ ಪ್ರಕಾರ, ಆ್ಯಪಲ್ ಕಂಪನಿಯು ತನ್ನ ಬಳಕೆದಾರರಿಗೆ ನೀಡಿರುವ ಎಚ್ಚರಿಕೆ ಕುರಿತು ತನಿಖೆ ನಡೆಸುವುದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಆದರೆ, ಹ್ಯಾಕ್‌ಗೆ ಸಂಬಂಧಿಸಿದ ಆರೋಪಗಳ ಕುರಿತು ರಾಜ್ಯಗಳ ಪೊಲೀಸರು ಪರಿಶೀಲನೆ ನಡೆಸಬೇಕಾಗುತ್ತದೆ’ ಎಂದಿದ್ದಾರೆ.

‘ಈ ವಿಚಾರವಾಗಿ ನನಗೆ ಯಾವುದೇ ಮಾಹಿತಿ ಇಲ್ಲ. ಯಾರಾದರೂ ದೂರು ಕೊಟ್ಟಲ್ಲಿ ಸಮಿತಿಯು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲಿದೆ’ ಎಂದು ಜಾಧವ್ ಪ್ರತಿಕ್ರಿಯಿಸಿದ್ದಾರೆ.

ಮಹುವಾ ಪತ್ರದಲ್ಲಿನ ಅಂಶಗಳು

- ಬೇಹುಗಾರಿಕೆ ವಿಷಯವನ್ನು ವಿಪಕ್ಷಗಳ ನಾಯಕರು ಸದನದಲ್ಲಿ ಹಲವು ಬಾರಿ ಪ್ರಸ್ತಾಪಿಸಿದ್ದರೂ ಚರ್ಚೆಗೆ ಅವಕಾಶ ನೀಡಲಿಲ್ಲ. ಸರ್ಕಾರದ ಯಾವುದೇ ಸಂಸ್ಥೆಯೂ ಈ ಬಗ್ಗೆ ನಿರ್ಣಾಯಕ ವರದಿ ಸಲ್ಲಿಸಿಲ್ಲ
- ಬೇಹುಗಾರಿಕೆ ತಂತ್ರಾಂಶಗಳಿಗೆ ಸಂಬಂಧಿಸಿ ಬಜೆಟ್ ಹಂಚಿಕೆಯನ್ನು ಕೇಂದ್ರ ಸರ್ಕಾರ ಗಣನೀಯ ಪ್ರಮಾಣದಲ್ಲಿ ಹೆಚ್ಚಳ ಮಾಡುತ್ತಿದೆ ಎಂದು ಫೈನಾನ್ಶಿಯಲ್ ಟೈಮ್ಸ್ ಪತ್ರಿಕೆ ಮಾರ್ಚ್‌ನಲ್ಲಿ ವರದಿ ಮಾಡಿದೆ. ಇಂಟೆಲೆಕ್ಸಾ ಅಲಯನ್ಸ್ ಸೇರಿದಂತೆ ವಿವಿಧ ಕಂಪನಿಗಳಿಗೆ ₹ 999 ಕೋಟಿ ಮೊತ್ತದ ಗುತ್ತಿಗೆ ನೀಡಲಾಗಿದೆ ಎಂದು ಪತ್ರಿಕೆ ವರದಿ ಮಾಡಿದೆ

ವಿಪಕ್ಷಗಳ ಟೀಕೆಗೆ ಬಿಜೆಪಿ ತಿರುಗೇಟು

ವಿರೋಧ ಪಕ್ಷಗಳ ವಾದವನ್ನು ಖಂಡಿಸಿರುವ ಬಿಜೆಪಿ ನಾಯಕರು, ‘ಐಫೋನ್ ಹ್ಯಾಕ್ ಯತ್ನ ಕುರಿತ ಎಚ್ಚರಿಕೆ ಸಂದೇಶಗಳು ಹಾಗೂ ಜಾರ್ಜ್ ಸೊರೋಸ್ ಪ್ರಾಯೋಜಿತ ‘ಆ್ಯಕ್ಸೆಸ್ ನೌ’ ಸಂಸ್ಥೆ ನಡುವೆ ನಂಟಿದೆ. ಇದೇ ಕಾರಣಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಎಲ್ಲ ಕೆಲಸಗಳನ್ನು ಬದಿಗೊತ್ತಿ ಈ ವಿಷಯ ಕುರಿತು ಪತ್ರಿಕಾಗೋಷ್ಠಿ ನಡೆಸಿದ್ದಾರೆ’ ಎಂದು ಕುಟುಕಿದ್ದಾರೆ.

ಚಿದಂಬರಂ ಅವರಿಗೆ ಪೋಸ್ಟ್‌ವೊಂದನ್ನು ಟ್ಯಾಗ್ ಮಾಡಿರುವ ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ, ‘ಪ್ರಣವ್ ಮುಖರ್ಜಿ ಅವರು ಹಣಕಾಸು ಸಚಿವರಾಗಿದ್ದಾಗ ಅವರ ಕಚೇರಿಯಲ್ಲಿನ ಮಾತುಕತೆಯನ್ನು ಕದ್ದಾಲಿಸಲಾಗಿತ್ತು. ಆಗ, ನೀವು ಗೃಹ ಸಚಿವರಾಗಿದ್ದಿರಿ. ಈ ವಿಷಯ ನಿಮಗೆ ನೆನಪಾಗುವುದೇ?’ ಎಂದು ಕುಟುಕಿದ್ದಾರೆ.

‘ಆ್ಯಕ್ಸೆಸ್ ನೌ ಹಾಗೂ ಆ್ಯಪಲ್‌ನ ಎಚ್ಚರಿಕೆ ಸಂದೇಶಗಳನ್ನು ವಿರೋಧ ಪಕ್ಷಗಳ ನಾಯಕರು ಮಾತ್ರ ಸ್ವೀಕರಿಸಿರುವುದು ಕುತೂಹಲಕಾರಿ’ ಎಂಬುದಾಗಿ ನೆಟ್ಟಿಗರೊಬ್ಬರು ಮಾಡಿದ್ದ ಪೋಸ್ಟ್‌ವೊಂದನ್ನು ಮಾಳವೀಯ ಅವರು ತಮ್ಮ ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಮಹುವಾ ಖಾತೆ: ದುಬೈನಲ್ಲಿ 47 ಬಾರಿ ಲಾಗಿನ್- ಆರೋಪ

ನವದೆಹಲಿ(ಪಿಟಿಐ): ಸಂಸತ್‌ನಲ್ಲಿ ಪ್ರಶ್ನೆಗಳನ್ನು ಕೇಳಲು ಹಣ ಪಡೆದಿದ್ದರು ಎನ್ನಲಾದ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರ ಸಂಸದೀಯ ಖಾತೆಗೆ ದುಬೈನಲ್ಲಿ 47 ಬಾರಿ ಲಾಗಿನ್ ಮಾಡಲಾಗಿತ್ತು ಎಂದು ಆರೋಪಿಸಲಾಗಿದೆ.

ಈ ಆರೋಪಗಳಿಗೆ ಸಂಬಂಧಪಟ್ಟ ವಿಷಯ ಕುರಿತು ಮಾಹಿತಿ ಇರುವ ಮೂಲಗಳು ಇದನ್ನು ತಿಳಿಸಿವೆ.

ತಮ್ಮ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ಮಹುವಾ ಮೊಯಿತ್ರಾ ಅವರು ಲೋಕಸಭೆಯ ನೀತಿ–ನಿಯಮಗಳ ಸಮಿತಿ ಎದುರು ನ.2ರಂದು ಹಾಜರಾಗಬೇಕಿದೆ. ಪ್ರಶ್ನೆಗಳನ್ನು ಕೇಳುವುದಕ್ಕಾಗಿ ಮೊಯಿತ್ರಾ ಅವರು ಹಣ ಪಡೆದಿದ್ದರು ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಆರೋಪಿಸಿದ್ದು, ಈ ಕುರಿತು ಸಮಿತಿಯು ವಿಚಾರಣೆ ನಡೆಸಲಿದೆ.

ಮಹುವಾ

‘ಮೊಯಿತ್ರಾ ಅವರ ಖಾತೆಯನ್ನು ದುಬೈನಲ್ಲಿ 47 ಬಾರಿ ಲಾಗಿನ್ ಮಾಡಲಾಗಿತ್ತು ಎಂಬ ವರದಿಗಳು ನಿಜವೇ ಆಗಿದ್ದಲ್ಲಿ, ದೇಶದ ಎಲ್ಲ ಸಂಸದರು ಮೊಯಿತ್ರಾ ಅವರ ಈ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಬೇಕು’ ಎಂದು ದುಬೆ ಪ್ರತಿಕ್ರಿಯಿಸಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಹಿರಾನಂದಾನಿ ಪರವಾಗಿ ಹಿರಾನಂದಾನಿ ಅವರೇ ಲೋಕಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿದ್ದಾರೆ. ಇಂತಹ ಬಂಡವಾಳಶಾಹಿಗಳ ಸ್ವಾರ್ಥದಿಂದ ಕೂಡಿದ ಹಿತಾಸಕ್ತಿಗಳನ್ನು ಉತ್ತೇಜಿಸುವುದಕ್ಕಾಗಿಯೇ ಸಂಸದರು ಇದ್ದೇವೆಯೇ’ ಎಂದು ಅವರು ಪ್ರಶ್ನಿಸಿದ್ದಾರೆ.

ಉದ್ಯಮಿ ದರ್ಶನ್ ಹಿರಾನಂದಾನಿ ಅವರ ಆಣತಿಯಂತೆ, ಮೊಯಿತ್ರಾ ಅವರ ಸಂಸದೀಯ ಇ–ಮೇಲ್ ಖಾತೆ ಮೂಲಕ ಪ್ರಶ್ನೆಗಳನ್ನು ಟೈಪು ಮಾಡಲಾಗುತ್ತಿತ್ತು. ಇದಕ್ಕೆ ಪ್ರತಿಯಾಗಿ ಮೊಯಿತ್ರಾ ಅವರಿಗೆ ಹಣ, ಉಡುಗೊರೆಗಳನ್ನು ನೀಡಲಾಗುತ್ತಿತ್ತು ಎಂದು ದುಬೆ ಆರೋಪಿಸಿದ್ದಾರೆ.

ತನ್ನ ಸಂಸದೀಯ ಖಾತೆ ಲಾಗಿನ್‌ಗೆ ಸಂಬಂಧಿಸಿದ ವಿವರಗಳನ್ನು ಹಿರಾನಂದಾನಿ ಅವರೊಂದಿಗೆ ಹಂಚಿಕೊಂಡಿದ್ದಾಗಿ ಮೊಯಿತ್ರಾ ಒಪ್ಪಿಕೊಂಡಿದ್ದಾರೆ.

ಗೋಯಲ್‌ಗೆ ಸೇರಿದ ₹538 ಕೋಟಿ ಆಸ್ತಿ ಮುಟ್ಟುಗೋಲು

ನವದೆಹಲಿ (ಪಿಟಿಐ): ಜೆಟ್ ಏರ್‌ವೇಸ್ ಸಂಸ್ಥಾಪಕ ನರೇಶ್ ಗೋಯಲ್ ಹಾಗೂ ಅವರ ಕುಟುಂಬದ ಸದಸ್ಯರಿಗೆ ಸೇರಿದ ₹538.05 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಬುಧವಾರ ತಿಳಿಸಿದೆ.

ಇದರಲ್ಲಿ 17 ವಸತಿ ಫ್ಲ್ಯಾಟ್‌ಗಳು, ಬಂಗಲೆಗಳು ಹಾಗೂ ವಾಣಿಜ್ಯ ಕಟ್ಟಡಗಳು ಸೇರಿವೆ. ಲಂಡನ್, ದುಬೈ ಹಾಗೂ ಭಾರತದ ವಿವಿಧ ನಗರಗಳಲ್ಲಿ ಗೋಯಲ್, ಅವರ ಪತ್ನಿ ಅನಿತಾ ಹಾಗೂ ಅವರ ಪುತ್ರ ನಿವಾನ್ ಅವರ ಹೆಸರಿನಲ್ಲಿದ್ದ ಕಂಪನಿಗಳ ಸ್ವತ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ತಿಳಿಸಿದೆ.

ಕೆನರಾ ಬ್ಯಾಂಕ್‌ಗೆ ಕೋಟ್ಯಂತರ ರೂಪಾಯಿ ವಂಚನೆ ಎಸಗಿದ ಆರೋಪ ಗೋಯಲ್ ಅವರ ಮೇಲಿದೆ.

ಈಜಿಪ್ಟ್‌ಗೆ ಬಂದ ವಿದೇಶಿ ಪ್ರಜೆಗಳು

ರಫಾ ಗಡಿ: ಗಾಜಾ ಪಟ್ಟಿ ತೊರೆಯಲು 400ಕ್ಕೂ ಹೆಚ್ಚು ಜನರಿಗೆ ಅವಕಾಶ

ರಫಾ/ಗಾಜಾ/ಜೆರುಸಲೇಂ (ಎಪಿ): ಇಸ್ರೇಲ್–ಹಮಾಸ್ ಯುದ್ಧ ಶುರುವಾದ ನಂತರದಲ್ಲಿ, ಗಾಜಾ ಪಟ್ಟಿಯಲ್ಲಿ ಇರುವ ವಿದೇಶಿ ಪ್ರಜೆಗಳಿಗೆ ಆ ಪ್ರದೇಶವನ್ನು ತೊರೆಯಲು ಇದೇ ಮೊದಲ ಬಾರಿಗೆ ಅವಕಾಶ ಕಲ್ಪಿಸಲಾಗಿದೆ. ಬುಧವಾರ ಹತ್ತಾರು ಮಂದಿ ವಿದೇಶಿ ಪ್ರಜೆಗಳು ರಫಾ ಗಡಿಯ ಮೂಲಕ ಗಾಜಾ ಪಟ್ಟಿ ತೊರೆದು ಈಜಿಪ್ಟ್ ಪ್ರವೇಶಿಸಿದರು.

ವಿದೇಶಿ ಪಾಸ್‌ಪೋರ್ಟ್ ಹೊಂದಿರುವ 400ಕ್ಕೂ ಹೆಚ್ಚು ಜನರಿಗೆ ಗಾಜಾ ಪಟ್ಟಿ ತೊರೆಯಲು ಬುಧವಾರ ಅವಕಾಶ ಮಾಡಿಕೊಡಲಾಗಿದೆ ಎಂದು ಪ್ಯಾಲೆಸ್ಟೀನ್ ಗಡಿ ಪ್ರಾಧಿಕಾರ ಹೇಳಿದೆ.

ವಿದೇಶಿ ಪಾಸ್‌ಪೋರ್ಟ್ ಹೊಂದಿರುವ ನೂರಾರು ಮಂದಿ ಗಾಜಾ ಪಟ್ಟಿ ತೊರೆಯುವ ಉದ್ದೇಶದಿಂದ ರಫಾ ಗಡಿಗೆ ಬರುತ್ತಿದ್ದರು. ಆದರೆ ಹಮಾಸ್, ಇಸ್ರೇಲ್ ಹಾಗೂ ಈಜಿಪ್ಟ್ ನಡುವೆ ಒಮ್ಮತ ಮೂಡದಿದ್ದ ಕಾರಣ ಅವರನ್ನು ಈಜಿಪ್ಟ್‌ಗೆ ಕಳುಹಿಸಲು ಸಾಧ್ಯವಾಗುತ್ತಿರಲಿಲ್ಲ. ಗಾಜಾ ಪಟ್ಟಿಗೆ ಇಸ್ರೇಲ್ ದಿಗ್ಬಂಧನ ವಿಧಿಸಿರುವ ಕಾರಣ, ಆ ಪ್ರದೇಶ ತೊರೆಯಲು ಉಳಿದಿರುವ ಮಾರ್ಗ ಈಜಿಪ್ಟ್ ಗಡಿಗೆ ಹೊಂದಿಕೊಂಡಿರುವ ರಫಾ ಮಾತ್ರ.

ಗಾಯಗೊಂಡಿರುವ 80ಕ್ಕೂ ಹೆಚ್ಚು ಪ್ಯಾಲೆಸ್ಟೀನ್ ನಾಗರಿಕರನ್ನು ಗಾಜಾದಿಂದ ಈಜಿಪ್ಟ್‌ಗೆ ಚಿಕಿತ್ಸೆಗೆ ಕರೆತರಲಾಗುವುದು ಎಂದು ಅಲ್ಲಿನ ಸರ್ಕಾರಿ ಮಾಧ್ಯಮ ವರದಿ ಮಾಡಿದೆ.

ಪ್ಯಾಲೆಸ್ಟೀನ್ ನಿರಾಶ್ರಿತರು ಗಾಜಾ ಪಟ್ಟಿಯಿಂದ ತನ್ನಲ್ಲಿಗೆ ಬರಲು ಅವಕಾಶ ಕೊಡುವುದಿಲ್ಲ ಎಂದು ಈಜಿಪ್ಟ್ ಈಗಾಗಲೇ ಸ್ಪಷ್ಟಪಡಿಸಿದೆ. ನಿರಾಶ್ರಿತರಿಗೆ ಒಮ್ಮೆ ನೆಲೆ ಕಲ್ಪಿಸಿದರೆ, ಅವರಿಗೆ ಯುದ್ಧದ ನಂತರ ಮತ್ತೆ ಗಾಜಾ ಪಟ್ಟಿಗೆ ತೆರಳಲು ಇಸ್ರೇಲ್ ಅವಕಾಶ ಕೊಡುವುದೇ ಇಲ್ಲ ಎಂಬುದು ಈಜಿಪ್ಟ್‌ನ ವಾದ.

ಒತ್ತೆಯಾಳುಗಳಾಗಿ ಇರುವ ಕೆಲವು ವಿದೇಶಿ ಪ್ರಜೆಗಳನ್ನು ಮುಂದಿನ ದಿನಗಳಲ್ಲಿ ಬಿಡುಗಡೆ ಮಾಡುವುದಾಗಿ ಹಮಾಸ್ ಬಂಡುಕೋರರು ಮಧ್ಯಸ್ಥಿಕೆದಾರರಲ್ಲಿ ಹೇಳಿದ್ದಾರೆ. ಈ ನಡುವೆ, ಹೇಗ್‌ನಲ್ಲಿ ಇರುವ ಅಂತರರಾಷ್ಟ್ರೀಯ ನ್ಯಾಯಾಲಯದ ಮೆಟ್ಟಿಲೇರಿರುವ ಕೆಲವು ಇಸ್ರೇಲಿಯರು, ಹಮಾಸ್ ಬಂಡುಕೋರರು ಅಕ್ಟೋಬರ್ 7ರಂದು ನಡೆಸಿದ ಹತ್ಯೆ ಹಾಗೂ ಅಪಹರಣಗಳ ಬಗ್ಗೆ ತನಿಖೆಗೆ ಆದೇಶಿಸಬೇಕು ಎಂದು ಕೋರಿದ್ದಾರೆ. ಆದರೆ, ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಇಸ್ರೇಲ್ ಸದಸ್ಯ ರಾಷ್ಟ್ರವಲ್ಲ.

ಇಸ್ರೇಲ್ ಬಹಿಷ್ಕರಿಸಲು ಇರಾನ್ ಕರೆ: ಗಾಜಾ ಪಟ್ಟಿಯ ಮೇಲೆ ಇಸ್ರೇಲ್‌ನ ದಾಳಿ ನಿಲ್ಲಸಬೇಕು ಎಂದಾದರೆ, ವಿಶ್ವದ ಮುಸ್ಲಿಂ ದೇಶಗಳು ಇಸ್ರೇಲ್‌ಗೆ ತೈಲ ಮತ್ತು ಆಹಾರ ರಫ್ತು ಮಾಡುವುದನ್ನು ನಿಲ್ಲಿಸಬೇಕು ಎಂದು ಇರಾನ್‌ನ ಪರಮೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಅವರು ಕರೆ ನೀಡಿದ್ದಾರೆ.

ಗಾಜಾ ಪಟ್ಟಿ ತೊರೆಯಲು ಅವಕಾಶ ಕಲ್ಪಿಸಿರುವುದರಿಂದ ವಿದೇಶಿ ಪ್ರಜೆಗಳು ಬುಧವಾರ ರಫಾ ಗಡಿಯತ್ತ ತೆರಳಿದರು

–ಎಎಫ್‌ಪಿ ಚಿತ್ರ

ಇಸ್ರೇಲ್–ಹಮಾಸ್ ಸಮರ

ಏಳು ಮಂದಿ ಒತ್ತೆಯಾಳು ಬಲಿ

ಗಾಜಾ ಪಟ್ಟಿ (ಎಎಫ್‌ಪಿ): ಗಾಜಾದಲ್ಲಿನ ನಿರಾಶ್ರಿತರ ಅತಿದೊಡ್ಡ ಶಿಬಿರದ ಮೇಲೆ ನಡೆದ ಇಸ್ರೇಲ್ ಬಾಂಬ್ ದಾಳಿಯಲ್ಲಿ ಏಳು ಮಂದಿ ಒತ್ತೆಯಾಳುಗಳು ಮೃತಪಟ್ಟಿದ್ದಾರೆ ಎಂದು ಹಮಾಸ್ ಬುಧವಾರ ಹೇಳಿದೆ. ಮೃತಪಟ್ಟವರಲ್ಲಿ ಮೂರು ಮಂದಿ ವಿದೇಶಿ ಪ್ರಜೆಗಳು.

ಜಬಾಲಿಯಾ ಶಿಬಿರದಲ್ಲಿ ಈ ಒತ್ತೆಯಾಳುಗಳು ಇದ್ದರು. ಇಲ್ಲಿ ನಡೆದ ದಾಳಿಯಲ್ಲಿ ಹಮಾಸ್ ಮಿಲಿಟರಿಯ ಪ್ರಮುಖ ಇಬ್ರಾಹಿಂ ಬಿಯಾರಿ ಎಂಬುವರನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ಹೇಳಿದೆ. ‘ಇವರು ಬಹಳ ಪ್ರಮುಖ ವ್ಯಕ್ತಿ. ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ನಡೆದ ದಾಳಿಯ ಯೋಜನೆ ರೂಪಿಸಿ, ಅದನ್ನು ಅನುಷ್ಠಾನಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು’ ಎಂದು ಇಸ್ರೇಲ್ ಮಿಲಿಟರಿ ತಿಳಿಸಿದೆ.

ಜಬಾಲಿಯಾ ಶಿಬಿರದ ಮೇಲಿನ ದಾಳಿಯಲ್ಲಿ ಕನಿಷ್ಠ 50 ಮಂದಿ ಪ್ಯಾಲೆಸ್ಟೀನ್ ನಾಗರಿಕರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

10 ಸಾವಿರಕ್ಕೂ ಹೆಚ್ಚು ಸಾವು

ಯುದ್ಧ ಶುರುವಾದ ನಂತರದಲ್ಲಿ ಗಾಜಾ ಪಟ್ಟಿಯಲ್ಲಿ 8,525ಕ್ಕೂ ಹೆಚ್ಚು ಪ್ಯಾಲೆಸ್ಟೀನ್ ನಾಗರಿಕರು ಮೃತಪಟ್ಟಿದ್ದಾರೆ.

ವೆಸ್ಟ್ ಬ್ಯಾಂಕ್ ಪ್ರದೇಶದಲ್ಲಿ 122ಕ್ಕೂ ಹೆಚ್ಚು ಪ್ಯಾಲೆಸ್ಟೀನ್ ನಾಗರಿಕರು ಸತ್ತಿದ್ದಾರೆ.

ಇಸ್ರೇಲ್‌ನಲ್ಲಿ ಒಟ್ಟು 1,400ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಯುನೆಸ್ಕೊ ಸೃಜನಶೀಲ ನಗರ ಪಟ್ಟಿಗೆ ಗ್ವಾಲಿಯರ್, ಕೋಯಿಕ್ಕೋಡ್ ಸೇರ್ಪಡೆ

ನವದೆಹಲಿ (ಪಿಟಿಐ): ಯುನೆಸ್ಕೊ ಸಿದ್ಧಪಡಿಸಿರುವ ವಿಶ್ವದ ಸೃಜನಶೀಲ ನಗರಗಳ ಪಟ್ಟಿಗೆ ಮಧ್ಯಪ್ರದೇಶದ ಗ್ವಾಲಿಯರ್ ಹಾಗೂ ಕೇರಳದ ಕೋಯಿಕ್ಕೋಡ್ ಸೇರ್ಪಡೆಯಾಗಿವೆ.

ವಿಶ್ವ ನಗರಗಳ ದಿನಾಚರಣೆ ಅಂಗವಾಗಿ ಸಿದ್ಧಪಡಿಸಿರುವ ವಿಶ್ವದ ಸೃಜನಶೀಲ 55 ನಗರಗಳ ಪಟ್ಟಿಯಲ್ಲಿ ಭಾರತದ ಈ ಎರಡೂ ಸೇರಿವೆ. ಈ ಬಗ್ಗೆ ತನ್ನ ವೆಬ್‌ಸೈಟ್‌ನಲ್ಲಿ ಯುನೆಸ್ಕೊ ಮಂಗಳವಾರ ಅಧಿಕೃತವಾಗಿ ಪ್ರಕಟಿಸಿದೆ.

ಸಂಗೀತ ವಿಭಾಗದಲ್ಲಿ ಗ್ವಾಲಿಯರ್ ಸೇರ್ಪಡೆಯಾದರೆ, ಸಾಹಿತ್ಯ ಕ್ಷೇತ್ರದಲ್ಲಿ ಕೋಯಿಕ್ಕೋಡ್‌ಗೆ ಈ ಮಾನ್ಯತೆ ಸಿಕ್ಕಿದೆ.

‘ಸಾಹಿತ್ಯ ಹಾಗೂ ಸೃಜನಶೀಲತೆಯು ಈ ನಗರಗಳ ಅಭಿವೃದ್ಧಿಯ ಕಾರ್ಯತಂತ್ರದ ಭಾಗವಾಗಿವೆ. ಮಾನವ ಕೇಂದ್ರಿತ ನಗರಾಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿಯೂ ನಾವೀನ್ಯದ ಹೊಸ ಪರಿಪಾಠಕ್ಕೂ ಮುನ್ನುಡಿ ಬರೆದಿವೆ’ ಎಂದು ಯುನೆಸ್ಕೊ ಪ್ರಕಟಣೆ ತಿಳಿಸಿದೆ.

ಮೋದಿ ಮೆಚ್ಚುಗೆ: ಜಾಗತಿಕ ವೇದಿಕೆಯಲ್ಲಿ ಭಾರತೀಯ ಸಂಸ್ಕೃತಿಯು ಅನುರಣಿಸಿರುವುದು ಹೆಮ್ಮೆಯ ಸಂಗತಿ. ಈ ಸಾಧನೆಗೆ ಕಾರಣರಾದ ಎರಡೂ ನಗರಗಳ ನಾಗರಿಕರು ಅಭಿನಂದನೆಗೆ ಅರ್ಹರಾಗಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಹಸೀನಾ ಪುತ್ರಿ ನಾಮನಿರ್ದೇಶನ

ನವದೆಹಲಿ (ಪಿಟಿಐ): ವಿಶ್ವ ಆರೋಗ್ಯ ಸಂಸ್ಥೆಯ ಆಗ್ನೇಯ ಏಷ್ಯಾ ಪ್ರಾದೇಶಿಕ ನಿರ್ದೇಶಕರ ಸ್ಥಾನಕ್ಕೆ ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರ ಪುತ್ರಿ ಸೈಮಾ ವಾಜೇದ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

ಸೈಮಾ ವಾಜೇದ್ ಅವರು ಮನೋವೈದ್ಯೆಯಾಗಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆಯ ಆಗ್ನೇಯ ಏಷ್ಯಾ ಪ್ರಾದೇಶಿಕ ಸಮಿತಿಯ 76ನೇ ಸಭೆಯಲ್ಲಿ ವಾಜೇದ್ ಅವರ ನಾಮನಿರ್ದೇಶನಕ್ಕೆ ಒಪ್ಪಿಗೆ ನೀಡಲಾಯಿತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಸಾವಿರ ಯುದ್ಧಗಳನ್ನು ಗೆಲ್ಲುವುದಕ್ಕಿಂತ ನಿಮ್ಮನ್ನು ನೀವು ಗೆಲ್ಲುವುದು ಉತ್ತಮ. ಇದೇ ನಿಜವಾದ ವಿಜಯ. ಇದನ್ನು ನಿಮ್ಮಿಂದ ಕಿತ್ತುಕೊಳ್ಳಲು ಯಾರಿಗೂ ಸಾಧ್ಯವಿಲ್ಲ.

–ಗೌತಮ ಬುದ್ಧ

ಕೇರಳ ಬಾಂಬ್ ಸ್ಫೋಟ ಕಳವಳ ಮೂಡಿಸುವ ಕೃತ್ಯ

ಕೇರಳದಲ್ಲಿ ಕ್ರೈಸ್ತರ ಧಾರ್ಮಿಕ ಸಭೆಯ ಮೇಲೆ ಭಾನುವಾರ ನಡೆದ ಬಾಂಬ್ ದಾಳಿಗೂ ಯಾವುದೇ ಭಯೋತ್ಪಾದಕ ಸಂಘಟನೆಗೂ ನೇರವಾಗಿ ಸಂಬಂಧ ಇದ್ದಂತೆ ಮೇಲ್ನೋಟಕ್ಕೆ ಕಾಣುತ್ತಿಲ್ಲ. ಆದರೆ, ಈ ದಾಳಿಯು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಿದೆ. ಬಾಂಬ್ ದಾಳಿಯು ಮೂವರನ್ನು ಬಲಿ ತೆಗೆದುಕೊಂಡಿದೆ. ಇವರಲ್ಲಿ ಒಬ್ಬ ಬಾಲಕಿಯೂ ಸೇರಿದ್ದಾಳೆ. ಹಲವರಿಗೆ ಗಾಯಗಳಾಗಿವೆ. ಗಾಯಗೊಂಡವರಲ್ಲಿ ಕೆಲವರ ಸ್ಥಿತಿ ಚಿಂತಾಜನಕವಾಗಿದೆ. ಕ್ರೈಸ್ತರ ಧಾರ್ಮಿಕ ಪಂಥವಾಗಿರುವ 'ಯಹೋವನ ಸಾಕ್ಷಿಗಳು' ಈ ಪ್ರಾರ್ಥನಾ ಸಭೆಯನ್ನು ಆಯೋಜಿಸಿತ್ತು. ಇದರಲ್ಲಿ ಅಂದಾಜು ಎರಡು ಸಾವಿರ ಮಂದಿ ಪಾಲ್ಗೊಂಡಿದ್ದರು. ಈ ಪಂಥದ ಜೊತೆ ಇದ್ದು, ನಂತರ ಅದರಿಂದ ದೂರವಾಗಿರುವ ಡಾಮಿನಿಕ್ ಮಾರ್ಟಿನ್ ಎಂಬ ವ್ಯಕ್ತಿ ಸ್ಫೋಟದ ಹೊಣೆ ಹೊತ್ತು ಪೊಲೀಸರಿಗೆ ಶರಣಾಗಿದ್ದಾನೆ. ಈತನೇ ಬಾಂಬ್ ಸ್ಫೋಟಿಸಿದ್ದ ಎಂದು ಪೊಲೀಸರು ಹೇಳಿದ್ದಾರೆ. ಈ ಪಂಥವು 'ದೇಶವಿರೋಧಿ' ಬೋಧನೆಗಳನ್ನು ಮಾಡುತ್ತಿತ್ತು, 'ಆ ಕಾರಣಕ್ಕೆ ಬಾಂಬ್ ದಾಳಿ ನಡೆಸಲು ತೀರ್ಮಾನಿಸಲಾಯಿತು' ಎಂದು ಈತ ಹೇಳಿದ್ದಾನೆ. ಈತನ ಹೇಳಿಕೆಯ ಪ್ರಕಾರ, ಈ ವಿಚಾರವನ್ನು ಪಂಥದವರಿಗೆ ಪ್ರಸ್ತಾಪಿಸಲಾಗಿತ್ತು, ಆದರೆ, ತನ್ನ ನಿಲುವನ್ನು ಬದಲಿಸಿಕೊಳ್ಳಲು ಪಂಥವು ಸಿದ್ಧವಿಲ್ಲದ ಕಾರಣ ಬಾಂಬ್ ದಾಳಿ ನಡೆಸಲು ತೀರ್ಮಾನಿಸಲಾಯಿತು ಎಂದು ಮಾರ್ಟಿನ್ ಹೇಳಿಕೊಂಡಿದ್ದಾನೆ.

ಈ ದಾಳಿಯು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಿದೆ

ಸ್ಫೋಟದ ಬಗ್ಗೆ ಕೇರಳ ಪೊಲೀಸರು, ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ಸೇರಿದಂತೆ ಕೆಲವು ಏಜೆನ್ಸಿಗಳು ತನಿಖೆ ನಡೆಸುತ್ತಿವೆ. ಹಲವು ಸಂಗತಿಗಳು ಇನ್ನಷ್ಟೇ ಸ್ಪಷ್ಟವಾಗಬೇಕಿವೆ. ಬಾಂಬ್ ಇರಿಸಿದ್ದು ಮಾರ್ಟಿನ್ ಎಂಬುದಕ್ಕೆ ಸಾಕ್ಷ್ಯಗಳಿವೆ ಎಂದು ಪೊಲೀಸರು ಹೇಳಿದ್ದಾರೆ. ತಾನು ಯಾರ ಜೊತೆಗೂ ಸೇರಿ ಈ ಕೆಲಸ ಮಾಡಿಲ್ಲ, ಒಬ್ಬನೇ ಇದನ್ನು ಮಾಡಿದ್ದೇನೆ ಎಂದು ಮಾರ್ಟಿನ್ ಹೇಳಿದ್ದಾನೆ. ಈತ ಯಾವುದಾದರೂ ಸಂಘಟನೆಯ ಪರವಾಗಿ ಈ ಕೆಲಸ ಮಾಡಿರಬಹುದು ಎಂಬ ಆರೋಪಗಳನ್ನು ಅಲ್ಲಗಳೆಯಲು ಈ ಹಂತದಲ್ಲಿ ಆಗದು. ಹಾಗೆಯೇ, ಪೊಲೀಸರು ಇದುವರೆಗೆ ಹೊಂದಿರುವ ಮಾಹಿತಿ ಅನ್ವಯ, ಈತ ಸಂಘಟನೆಯೊಂದರ ಜೊತೆ ಶಾಮೀಲಾಗಿ ಸ್ಫೋಟ ನಡೆಸಿದ್ದಾನೆ ಎಂದು ಕೂಡ ಖಚಿತವಾಗಿ ಹೇಳಲಾಗದು. ಸ್ಫೋಟ ನಡೆಸಿರುವುದಕ್ಕೆ ಈತ ನೀಡಿರುವ ಕಾರಣಗಳು ತೃಪ್ತಿಕರವಾಗಿಲ್ಲ. ಹೀಗಿದ್ದರೂ, ಈತ ನೀಡಿರುವ ಕಾರಣಗಳು ಆತನ ಮಾನಸಿಕ ಸ್ಥಿತಿಯನ್ನು ಅವಲಂಬಿಸಿವೆ. ಈತ ನೀಡಿದಂತಹ ಕಾರಣಗಳಿಗೆ ಕೆಲವರನ್ನು ಕೊಲ್ಲಲು ಮುಂದಾಗುವ ವ್ಯಕ್ತಿ ಮಾನಸಿಕವಾಗಿ ಸ್ಥಿಮಿತದಲ್ಲಿ ಇದ್ದಾನೆ ಎನ್ನಲು ಆಗುವುದಿಲ್ಲ. ಮಾರ್ಟಿನ್ ಹೊಂದಿರುವಂತಹ ಆಲೋಚನೆಗಳು ಭಯೋತ್ಪಾದಕ ನೆಲೆಯೂ ಇರುತ್ತವೆಯಾದರೂ ಸಾಂಪ್ರದಾಯಿಕ ನೆಲೆಯಲ್ಲಿ ಮಾರ್ಟಿನ್‌ನನ್ನು ಭಯೋತ್ಪಾದಕ ಎಂದು ಕರೆಯಲು ಆಗುವುದಿಲ್ಲ. ಮುಖ್ಯವಾಹಿನಿಯಲ್ಲಿ ಇಲ್ಲದ ಪಂಥಗಳು ಕೆಲವು ಸಂದರ್ಭಗಳಲ್ಲಿ ಬಹಳ ವಿಚಿತ್ರವಾದ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ. ಇಂಟರ್ನೆಟ್‌ನಿಂದ ಮಾಹಿತಿ ಪಡೆದು ಬಾಂಬ್ ಸಿದ್ಧಪಡಿಸುವುದನ್ನು ಕಲಿತಿದ್ದೇನೆ, ಹಲವು ವಾರಗಳ ಅವಧಿಯಲ್ಲಿ ಬಾಂಬ್ ಸಿದ್ಧಪಡಿಸಿದ್ದಾಗಿ ಮಾರ್ಟಿನ್ ಹೇಳಿರುವುದು ಆತಂಕ ಮೂಡಿಸುವಂತಹದ್ದು, ಸಹಸ್ರಾರು ಮಂದಿ ಸೇರುವ ಸಭೆಗಳಲ್ಲಿ ಭದ್ರತಾ ವ್ಯವಸ್ಥೆ ಕಠಿಣಗೊಳಿಸುವ ಅಗತ್ಯವನ್ನು ಎತ್ತಿತೋರಿಸಿದೆ.

ಸ್ಫೋಟದ ಬಗ್ಗೆ ವದಂತಿಗಳು ಬಂದ ತಕ್ಷಣವೇ, ಈ ಘಟನೆಗೆ ಕೋಮು ಬಣ್ಣ ನೀಡಲು ಕೆಲವರು ಪ್ರಯತ್ನಿಸಿದ್ದು ಬಹಳ ಗಂಭೀರವಾದ ಸಂಗತಿ. ಇದು ಭಯೋತ್ಪಾದಕರು ನಡೆಸಿದ ಕೃತ್ಯ, ಇದಕ್ಕೂ ಪಶ್ಚಿಮ ಏಷ್ಯಾದಲ್ಲಿನ ಈಗಿನ ಸ್ಥಿತಿಗೂ ಸಂಬಂಧ ಇದೆ ಎಂದು ಹೇಳುವ ಸಂದೇಶಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದವು. ಇಂತಹ ಊಹಾಪೋಹಗಳಿಗೆ ಬಿಜೆಪಿಯ ಕೆಲವು ಪ್ರಮುಖರು ಪ್ರಚೋದನೆ ನೀಡುವ ಕೆಲಸ ಮಾಡಿದರು. ಇವು ಸಮಾಜದಲ್ಲಿ ದ್ವೇಷ ಹಾಗೂ ವಿಭಜನೆಯನ್ನು ಹುಟ್ಟುಹಾಕುವ ಉದ್ದೇಶ ಹೊಂದಿದ್ದವು. ಇಂತಹ ಹೇಳಿಕೆಗಳು ಜವಾಬ್ದಾರಿಯುತ ಸ್ಥಾನಗಳಲ್ಲಿ ಇರುವ ವ್ಯಕ್ತಿಗಳಿಂದಲೂ ಬಂದಿವೆ. ದ್ವೇಷದ ಸಂದೇಶ ರವಾನಿಸಿದ್ದಕ್ಕಾಗಿ ಒಬ್ಬ ವ್ಯಕ್ತಿಯನ್ನು ಬಂಧಿಸಲಾಗಿದೆ. ಇಂತಹ ಸಂದೇಶಗಳನ್ನು ರವಾನಿಸಲು ಉತ್ತೇಜನ ನೀಡುವ ಮನಃಸ್ಥಿತಿಯು ಬಾಂಬ್ ಇಡಲು ಪ್ರೇರಣೆ ನೀಡಿದ ಮನಃಸ್ಥಿತಿಯಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಅಪಾಯಕಾರಿ.

ದಿನದ ಟ್ವೀಟ್

ಪ್ರಮಾಣ ಮಾಡಬೇಕು

ಕನ್ನಡನಾಡಿನಲ್ಲಿ ಸಾರ್ವಜನಿಕವಾಗಿ ಕನ್ನಡ ಬಿಟ್ಟು ಬೇರೆ ನುಡಿಯಲ್ಲಿ ಮಾತನಾಡುವುದಿಲ್ಲ ಎಂಬ ಪ್ರಮಾಣವನ್ನು ಕನ್ನಡಿಗರು ರಾಜ್ಯೋತ್ಸವದ ದಿನ ಮಾಡಬೇಕು. ಇದನ್ನು ಮಾಡಿದರೆ ಎಲ್ಲ ವಲಸಿಗರೂ ಕನ್ನಡ ಕಲಿಯುತ್ತಾರೆ.

ಗಣೇಶ್ ಚೇತನ್, ಕನ್ನಡಪರ ಕಾರ್ಯಕರ್ತ

ಕಿಡಿನುಡಿ

'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂಬ ಮಾತು ನನಸಾಗಬೇಕಾದರೆ, ಕನ್ನಡ ಶಾಲೆಗಳು ಉಸಿರಾಡಬೇಕು. ಶಾಲಾ ಹಂತದಲ್ಲಾದರೂ ಕನ್ನಡವು ಶಿಕ್ಷಣದ ಮಾಧ್ಯಮ ಆಗಬೇಕು. ಕನ್ನಡ ನನ್ನ ಉಸಿರು ಎನ್ನುತ್ತಲೇ, ಕನ್ನಡ ಶಾಲೆಯ ಪಕ್ಕದಲ್ಲಿಯೇ, ಆಂಗ್ಲಮಾಧ್ಯಮ ಶಾಲೆಗಳಿಗೆ ಅನುಮತಿ ನೀಡುವ ಸರ್ಕಾರ–ರಾಜಕಾರಣಿಗಳ ನಿರಂತರ ಆತ್ಮವಂಚನೆಯ ಕೆಲಸ ನಿಲ್ಲಬೇಕು. ಸರ್ಕಾರಿ ಹಾಗೂ ಅನುದಾನಿತ ಕನ್ನಡ ಶಾಲೆಗಳ ಸಬಲೀಕರಣಕ್ಕೆ 'ಕನ್ನಡ ಮಾಧ್ಯಮ ಶಾಲೆಗಳ ಸಬಲೀಕರಣ ಪ್ರಾಧಿಕಾರ' ರಚನೆಯಾಗಬೇಕು.

ವಿ.ಪಿ.ನಿರಂಜನಾರಾಧ್ಯ, , ಶಿಕ್ಷಣತಜ್ಞ

25 ವರ್ಷಗಳ ಹಿಂದೆ

ಸೋಮವಾರ, 2-11-1998

• ಪಟೇಲ್ ಸರ್ಕಾರಕ್ಕೆ ಬೆಂಬಲ ಇಲ್ಲ: ಅಟಲ್

ಬೆಂಗಳೂರು, ನ. 1– ರಾಜ್ಯದಲ್ಲಿ ಜೆ.ಎಚ್. ಪಟೇಲ್ ಸರ್ಕಾರ ಉರುಳುವ ಸಂದರ್ಭ ಬಂದರೆ ಅದಕ್ಕೆ ಬಿಜೆಪಿ ಬೆಂಬಲ ನೀಡುವ ಪ್ರಶ್ನೆಯೇ ಇಲ್ಲ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಂದು ಇಲ್ಲಿ ಸ್ಪಷ್ಟಪಡಿಸಿದರು.

ರಾಜ್ಯದ ಆಡಳಿತ ಪಕ್ಷವಾದ ಜನತಾದಳದಲ್ಲಿ ಭಿನ್ನಮತೀಯ ಚಟುವಟಿಕೆಗಳು ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ದಳ ಒಡೆದು ಪಟೇಲ್ ಸರ್ಕಾರ ಪತನದ ಅಂಚಿಗೆ ಸರಿದರೆ ತಮ್ಮ ಪಕ್ಷ ಅವರನ್ನು ಬೆಂಬಲಿಸುವುದೇ ಎಂದು ಕೇಳಿದ ಪ್ರಶ್ನೆಗೆ ಅವರು 'ನಾವು ವಿರೋಧ ಪಕ್ಷದಲ್ಲಿದ್ದೇವೆ. ಬೆಂಬಲ ಕೊಡುವ ಪ್ರಶ್ನೆಯೇ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ನಿಮ್ಮ ಸಂಪುಟದ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಅವರು ಪಟೇಲರಿಗೆ ಬೆಂಬಲ ನೀಡುವ ಮಾತನ್ನಾಡಿದ್ದಾರಲ್ಲ' ಎಂಬ ಪ್ರಶ್ನೆಗೆ 'ಅವರನ್ನೇ ಕೇಳಿ' ಎಂದು ಪಕ್ಕದಲ್ಲಿ ಕುಳಿತಿದ್ದ ಹೆಗಡೆ ಅವರತ್ತ ಬೆರಳು ಮಾಡಿದರು.

• ಅಭಿವೃದ್ಧಿಗೆ ಭಿನ್ನಮತ ಮಾರಕವಾಗದು: ಪಟೇಲ್

ಬೆಂಗಳೂರು, ನ. 1– ಭಿನ್ನಮತದ ಕಾರಣಕ್ಕಾಗಿ ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳಲು ಅಥವಾ ಸರ್ಕಾರವನ್ನು ಅಸ್ಥಿರಗೊಳಿಸಲು ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಇಲ್ಲಿ ಹೇಳಿದರು.

ಜಯನಗರದ ಮಹಾನಗರ ಪಾಲಿಕೆ ಕ್ರೀಡಾಂಗಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಏರ್ಪಡಿಸಿದ್ದ 42ನೇ ಕನ್ನಡ ರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅವರು, ರಾಜ್ಯದಲ್ಲಿ ಪ್ರಸ್ತುತ ಉದ್ಭವಿಸಿರುವ ಭಿನ್ನಮತದಿಂದ ರಾಜ್ಯದ ಅಭಿವೃದ್ಧಿಗೆ ಧಕ್ಕೆ ಇಲ್ಲ ಎಂಬುದನ್ನು ಪರೋಕ್ಷವಾಗಿ ಪ್ರಸ್ತಾಪಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 2-11-1973

• 'ಕರ್ನಾಟಕ' ಅಂಕಿತಕ್ಕೆ ಜನಸ್ತೋಮದ ಉಘೇ

ಬೆಂಗಳೂರು, ನ. 1– ಬೆಳಿಗ್ಗೆ 9 ಗಂಟೆ 37 ನಿಮಿಷ, ಕನ್ನಡಿಗರ ಸಾಂಸ್ಕೃತಿಕ ಬದುಕಿನ ರಸ ಗಳಿಗೆ, ಮುಖ್ಯಮಂತ್ರಿಯವರು ಹಳದಿ ರೇಷ್ಮೆಯ ಮುಸುಕನ್ನು ಸರಿಸಿದರು, ಕಂಡಿತು 'ಕರ್ನಾಟಕ' ಶಿಲಾಫಲಕ, ಉಘೇ ಎಂದಿತು ಜನಸ್ತೋಮ.

ಜನಮನದಲ್ಲಿ ಎಂದೋ ಸಿದ್ಧವಾಗಿದ್ದ 'ಕರ್ನಾಟಕ'ಕ್ಕೆ ಬಿದ್ದಿತು ಅಧಿಕೃತ ಮುದ್ರೆ. ಮಂಗಳವಾದ್ಯ ಮೊಳಗಿತು, ಪುಷ್ಪವೃಷ್ಟಿಯಾಯಿತು.

ರಾಷ್ಟ್ರದ ಪ್ರಥಮ ಪ್ರಜೆ ಶ್ರೀ ವಿ.ವಿ. ಗಿರಿ, ರಾಜ್ಯದ ಪ್ರಥಮ ಪ್ರಜೆ ಶ್ರೀ ಮೋಹನ್‌ಲಾಲ್ ಸುಖಾಡಿಯಾ ಅವರಾದಿಯಾಗಿ ಎಲ್ಲರೂ ಹಾರೈಸಿದರು 'ಕರ್ನಾಟಕ ಸಮೃದ್ಧ ಸಂಪತ್ತಿನ ಬೀಡಾಗಲಿ'.

ಪುನರ್‌ನಾಮಕರಣದ ಶಿಲಾಫಲಕ ಅನಾವರಣ ಮಾಡಿ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸುರವರು ಹೇಳಿದಂತೆ ಅದು 'ಅವರ್ಣನೀಯ ಸ್ಫೂರ್ತಿ' ನೀಡಿದ ಸನ್ನಿವೇಶ, 'ಜನ ತಾಳಿದ ತಾಳ್ಮೆ ಸಾರ್ಥಕವಾದ' ತೃಪ್ತಿ.

• ಹೆಸರಿನ ಬದಲಾವಣೆ ಜೊತೆಗೇ ಭಾವೈಕ್ಯ ಆಗಬೇಕು: ಅರಸು

ಬೆಂಗಳೂರು, ನ. 1– ಕನ್ನಡ ನಾಡಿನ ವಿವಿಧ ಭಾಗಗಳಿಂದ ಬಂದಿರತಕ್ಕ ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡಿಕೊಂಡು, ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಸರ್ಕಾರ ಶ್ರಮಿಸುವುದೆಂದು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಇಂದು ಇಲ್ಲಿ ಜನತೆಗೆ ಭರವಸೆ ನೀಡಿದರು.

ಸಾಹಿತ್ಯದ ಆಚೆಗೂ ಇರುವ ಕನ್ನಡದ ಸಾಧ್ಯತೆಯನ್ನು ಕಂಡುಕೊಳ್ಳಬೇಕಿದೆ

ಭಾಷಾ ಬೋಧನೆಯ ದಕ್ಷತೆ ಹೆಚ್ಚಲಿ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಕನ್ನಡ ಮಾಧ್ಯಮ ಶಿಕ್ಷಣದ ಹಿನ್ನಡೆ ಬಗ್ಗೆ ನಿರಂತರವಾಗಿ ಚರ್ಚೆಗಳು ನಡೆಯುತ್ತಿವೆ. ಆದರೆ, ಈ ಬಗೆಯ ಚರ್ಚೆಗಳು ಸೂಕ್ತ ಪರಿಹಾರದ ದಾರಿಗಳನ್ನು ತೆರೆಯದ ಹೊರತು ಚರ್ಚೆಯಿಂದಲೇ ಪರಿಸ್ಥಿತಿ ಸುಧಾರಿಸಲು ಸಾಧ್ಯವಿಲ್ಲ. ಇಂದಿನ ಶೈಕ್ಷಣಿಕ ಸನ್ನಿವೇಶದಲ್ಲಿ ಕನ್ನಡ ಮಾಧ್ಯಮ ಶಿಕ್ಷಣದ ಬಗ್ಗೆ ವಹಿಸುವ ಕಾಳಜಿಗಿಂತಲೂ ಹೆಚ್ಚು ಕಾಳಜಿಯನ್ನು ಕನ್ನಡ ಭಾಷಾ ಬೋಧನೆಯ ಕಡೆಗೆ ವಹಿಸಬೇಕಾಗಿದೆ. ಏಕೆಂದರೆ, ಕಲಿಕಾ ಮಾಧ್ಯಮ ಯಾವುದೇ ಆಗಿದ್ದರೂ ಕನ್ನಡ ಭಾಷಾ ಕಲಿಕೆಯು ಸಾಮಾನ್ಯವಾಗಿ ಹೆಚ್ಚಿನ ವಿದ್ಯಾರ್ಥಿಗಳನ್ನು ಒಳಗೊಳ್ಳುತ್ತದೆ.

ಕನ್ನಡವು ಮಾತೃಭಾಷೆ ಎಂಬ ನೆಲೆಯಲ್ಲಿ ಬೋಧನೆ- ಕಲಿಕೆ ಪ್ರಕ್ರಿಯೆಯ ಸಂದರ್ಭದಲ್ಲಿ ಬಹಳಷ್ಟು ನಿರ್ಲಕ್ಷ್ಯಕ್ಕೆ ಒಳಗಾಗುವ ಪಠ್ಯಗಳಲ್ಲೊಂದಾಗಿದೆ. ಎಲ್ಲರಿಗೂ ಗೊತ್ತಿರುವ ಭಾಷೆ ಎನ್ನುವುದೇನೋ ನಿಜ. ಆದರೆ, ಪರಿಸರದಿಂದ ಬರುವ ಭಾಷಾ ಜ್ಞಾನವು ಔಪಚಾರಿಕ ಅಭ್ಯಾಸದಿಂದ ಲಭ್ಯವಾದ ವ್ಯವಸ್ಥಿತ ಜ್ಞಾನದ ಮಾದರಿಯಲ್ಲಿ ಉಂಟಾದ ಕಲಿಕೆಯಾಗಿರುವುದಿಲ್ಲ. ಆದರೆ, ಯಾವುದೇ ಭಾಷೆಯ ಕಲಿಕೆಗೆ ಆಧಾರವಾಗಿ ಮಾತೃಭಾಷೆಯೇ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಭಾಷಾ ನಿಯಮಗಳು ಮತ್ತು ಭಾಷಾ ಕೌಶಲಗಳು ಸುಲಭವಾಗಿ ಅರ್ಥವಾಗಲು ಮಾತೃಭಾಷೆಯು ಪ್ರಮುಖ ಸಾಧನ. ಮಾತೃಭಾಷೆಯ ಕಲಿಕೆ ಸಮರ್ಪಕವಾಗಿ ನಡೆದರೆ ಇತರ ಭಾಷೆಗಳ ಕಲಿಕೆಗೆ ಸಕಾರಾತ್ಮಕ ಕಲಿಕಾ ವರ್ಗಾವಣೆ ನಡೆದು ಹೊಸ ಭಾಷೆಯನ್ನು ಸುಲಭವಾಗಿ ಮತ್ತು ಗೊಂದಲರಹಿತವಾಗಿ ಕಲಿಯಲು ಸಾಧ್ಯ. ಆದಕಾರಣ, ಇತರೆಲ್ಲ ಕಲಿಕೆಗಳನ್ನು ಸುಲಭಗೊಳಿಸಲು ಕನ್ನಡವನ್ನು ಒಂದು ಭಾಷೆಯಾಗಿ ಸಮರ್ಪಕವಾಗಿ ಕಲಿತುಕೊಳ್ಳಬೇಕಾದ ಅಗತ್ಯವಿದೆ.

ಕನ್ನಡ ಭಾಷೆಯ ಬೋಧನೆಯನ್ನು ಪರಿಣಾಮಕಾರಿಯಾಗಿಸುವ ದಿಸೆಯಲ್ಲಿ ಹೊಸ ಆಲೋಚನೆಗಳ ಅಗತ್ಯವಿದೆ. ಮೊದಲನೆಯದಾಗಿ, ಪಠ್ಯಪುಸ್ತಕವನ್ನು ಆಕರ್ಷಕಗೊಳಿಸಬೇಕು. ಕನ್ನಡ ಭಾಷಾ ಪಠ್ಯಗಳನ್ನು ಅವುಗಳ ಸಾಂಪ್ರದಾಯಿಕ ಕ್ರಮಗಳಿಂದ ಹೊರಕ್ಕೆ ತರಬೇಕು. ಕನ್ನಡ ಸಾಹಿತ್ಯದ ವಿವಿಧ ಕಾಲಗಳ, ವಿವಿಧ ಪ್ರಕಾರಗಳ ಸಾಹಿತ್ಯ ಮತ್ತು ಹೊಸಗನ್ನಡ ಕಾಲದ ಪ್ರಾತಿನಿಧಿಕ ಬರಹಗಳ ಸಂಕಲನದ ರೂಪವಾಗಿ ಪಠ್ಯವನ್ನು ರೂಪಿಸುವುದನ್ನು ಬಿಟ್ಟು, ಸಾಹಿತ್ಯದ ಆಚೆಗೂ ಇರುವ ಕನ್ನಡದ ಸಾಧ್ಯತೆಗಳನ್ನು ಕಂಡುಕೊಳ್ಳಬೇಕು.

ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಸ್ವರೂಪದಲ್ಲಿ ಕನ್ನಡದ ಬಳಕೆ ಇದೆ. ಭಾಷೆಯ ಬಳಕೆಯ ಬಹುರೂಪಗಳನ್ನು ಪಠ್ಯಗಳು ಒಳಗೊಳ್ಳಬೇಕು. ಈ ರೀತಿಯ ಭಾಷಾ ತುಣುಕುಗಳು ಯಾರೋ ಒಬ್ಬ ಲೇಖಕರಿಂದಲೇ ಬರೆಯಲ್ಪಟ್ಟದ್ದಾಗಿರಬೇಕಾಗಿಲ್ಲ. ಜನಜೀವನದ ನಡುವಿನಿಂದಲೇ ಅಂತಹ ತುಣುಕುಗಳನ್ನು ಆರಿಸಬಹುದು. ಅಂತಹ ರಚನೆಗಳು ಕಥೆಯಾಗಿ, ಪದ್ಯವಾಗಿ, ನುಡಿಗಟ್ಟಾಗಿ, ಪರಿಕಲ್ಪನೆಯಾಗಿ ಬಳಕೆಯಲ್ಲಿರುತ್ತವೆ. ಅವೆಲ್ಲವನ್ನೂ ಪಠ್ಯವು ಬಳಸಿಕೊಳ್ಳಲು ಸಾಧ್ಯವಾಗಬೇಕು. ಆಗ ಭಾಷೆಯ ನಿಗದಿತ ನಮೂನೆಯ ಕಲಿಕೆಯ ವ್ಯಾಪ್ತಿ ದೊಡ್ಡದಾಗುತ್ತದೆ. ಕಲಿಕಾಂಶಗಳು ಆಕರ್ಷಕವಾಗುತ್ತವೆ. ಪಠ್ಯಪುಸ್ತಕ ರಚಿಸುವಾಗ ಮಕ್ಕಳ ಮನೋ ಮಟ್ಟಕ್ಕೆ ಸೂಕ್ತವಾಗುವಂತೆ ಕಲಿಕಾಂಶಗಳ ಸಂಯೋಜನೆಗೆ ಆದ್ಯತೆ ನೀಡಬೇಕು. ಕಿರಿಯ ಪ್ರಾಥಮಿಕ ಹಂತದ ಮಕ್ಕಳಿಗೆ ತಾಳಕ್ಕೆ ಹೊಂದಾಣಿಕೆಯಾಗುವ ಹಾಡು, ದೃಶ್ಯರೂಪದಲ್ಲಿ ಭಾಸವಾಗುವಂತಹ ಹಾಡು, ಅಭಿನಯಿಸಲು ಸುಲಭವಾಗುವಂತಹ ಗೀತೆಗಳು ಅವರ ಮನೋ ಮಟ್ಟಕ್ಕೆ ಹೊಂದಿಕೊಳ್ಳುತ್ತವೆ. ಮಕ್ಕಳ ವಿಕಾಸದ ತತ್ವಗಳನ್ನು ಪರಿಗಣಿಸಿ, ಅದಕ್ಕೆ ಅನುಗುಣವಾದ ಕಲಿಕಾಂಶಗಳನ್ನು ಪಠ್ಯದಲ್ಲಿ ತರಬೇಕು.

ಕನ್ನಡ ಬೋಧನೆಯನ್ನು ಆಕರ್ಷಕಗೊಳಿಸಬೇಕಾದರೆ ಬೋಧನೆಯು 'ಪಠ್ಯ ಸ್ವರೂಪ'ಕ್ಕೆ ನಿಷ್ಠವಾಗುವುದರಿಂದ ಹೊರಬರಬೇಕು. ಈ ವಿಚಾರವು ಶಾಲಾ ಸನ್ನಿವೇಶಕ್ಕೆ ಸಂಬಂಧಿಸಿದ್ದಾಗಿದೆ. ಯಾವುದೇ ಪಠ್ಯದ ಬೋಧನೆಯಲ್ಲಿ ಬೋಧನಾ ವಿಧಾನವನ್ನು ಹೇಗೆ ಬೇಕಾದರೂ ಮಾಡಲು ಅವಕಾಶವಿದೆ. ಉದಾಹರಣೆಗೆ ಪಠ್ಯ ವಿಷಯಗಳಲ್ಲೇ ಸ್ಥಳೀಯತೆಯನ್ನು ತರುವುದು ಆಡಳಿತ ವ್ಯವಸ್ಥೆಯೇ ಪಠ್ಯವನ್ನು ಸ್ಥಳೀಕರಣ ಮಾಡುವ ವಿಧಾನವಾಗಿದೆ. ಆದರೆ, ಪಠ್ಯದ ಅಂಶಗಳು ಸ್ಥಳೀಕರಣಗೊಂಡಿಲ್ಲದೇ ಇದ್ದಾಗಲೂ ಅಧ್ಯಾಪಕರು ಬೋಧನೆಯನ್ನು ಸ್ಥಳೀಕರಣಗೊಳಿಸಿ ಮಾಡಬಹುದಾಗಿದೆ. ಬೋಧನಾ ವಿಧಾನವು ಪಠ್ಯದ ಧ್ಯೇಯೋದ್ದೇಶಗಳನ್ನು ಸಾಧಿಸಬೇಕು ಎಂಬುದನ್ನು ಹೊರತುಪಡಿಸಿದರೆ ಬೋಧನಾ ಪದ್ಧತಿಯಲ್ಲಿ ವೈವಿಧ್ಯ, ನಾವೀನ್ಯ ಇರಬಾರದೆಂದು ಇಲ್ಲ. ಆದರೆ, ಇದನ್ನು ಸಾಧಿಸಲು ಅಧ್ಯಾಪಕರು ಸಮರ್ಥರಿರಬೇಕು. ಶಾಲಾ ಆಡಳಿತದಲ್ಲಿ ಅದಕ್ಕೆ ಪೂರಕ ಸಂಗತಿಗಳಿರಬೇಕು. ಅಧ್ಯಾಪಕ- ಪೋಷಕ ಸಂಬಂಧ ಉತ್ತಮವಾಗಿರಬೇಕು.

ಪಠ್ಯ ವಿಷಯಗಳನ್ನು ಸ್ಥಳೀಕರಣಗೊಳಿಸಲು ಹೆಚ್ಚು ಸಹಾಯಕವಾಗಿರುವುದು ಕನ್ನಡ ಪಠ್ಯವೇ ಆಗಿದೆ. ಪಠ್ಯವು ಹೇಳುವ ಕಲಿಕಾಂಶಗಳಿಗೆ ಸ್ಥಳೀಯವಾದ ಆಯಾಮಗಳು ಹಲವು ಬಗೆಯಲ್ಲಿರುತ್ತವೆ. ಅವುಗಳನ್ನು ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಗೆ ಅಳವಡಿಸಿದಂತೆಲ್ಲ ಮಕ್ಕಳಿಗೆ ಕಲಿಕಾಂಶಗಳು ಅವರ ಅನುಭವಕ್ಕೆ ಹತ್ತಿರವಾಗಿ ಆಕರ್ಷಕವಾಗುತ್ತವೆ. ಕಲಿಕಾ ದಕ್ಷತೆ ಹೆಚ್ಚುತ್ತದೆ. ಕನ್ನಡ ಭಾಷಾ ಬೋಧನೆಗೆ ಸ್ಥಳೀಯ ಕಥೆ, ಹಾಡು, ಲಾವಣಿ, ಸ್ಥಳಪುರಾಣ, ಐತಿಹ್ಯ, ನಂಬಿಕೆ, ಕಲೆ, ವೃತ್ತಿಗಳು, ಕೌಶಲುಗಳಂಥ ಪರಿಕರಗಳ ಬಳಕೆಯನ್ನು ಹೆಚ್ಚಿಸಬೇಕು. ಕನ್ನಡ ಭಾಷಾ ಕಲಿಕೆಯು ಮಕ್ಕಳಿಗೆ ಅವರ ಪರಿಸರದ ಅನುಭವಗಳೇ ಪಠ್ಯವಾಗಿ ದೊರೆತ ಹಾಗೆ ಭಾಸವಾಗಬೇಕು.



ಭಾಷಾ ಪಠ್ಯದ ಕಲಿಕೆಯು ಭಾಷಾ ಕೌಶಲಗಳಿಗೆ ಆದ್ಯತೆ ನೀಡಬೇಕು. ಆದರೆ ಈಗ ಹಾಗಿಲ್ಲ. ವ್ಯಾಕರಣ, ಛಂದಸ್ಸಿನ ಭಾಗಗಳನ್ನು ಹೊರತುಪಡಿಸಿದರೆ, ಉಳಿದ ವಿಚಾರಗಳು ಭಾಷೆಯ ಮೂಲಕ ಹೇಳಲಾಗಿರುವ ವಿಚಾರವನ್ನು ಕಲಿಕಾ ವಸ್ತುವಾಗಿ ಪರಿಗಣಿಸಲಾಗುತ್ತಿದೆ. ಉದಾಹರಣೆಗೆ, ಒಂದು ವಚನವನ್ನು ಅಭ್ಯಾಸ ಮಾಡುವಾಗ ವಚನದಲ್ಲಿ ಪ್ರಸ್ತಾಪವಾಗಿರುವ ವಿಷಯವನ್ನು ಮಕ್ಕಳಿಗೆ ಮನದಟ್ಟು ಮಾಡುವುದಕ್ಕೆ ಪ್ರಾಮುಖ್ಯ ನೀಡಲಾಗುತ್ತದೆ. ಆದರೆ, ಇದು ಭಾಷಾ ಬೋಧನೆಯ ಸರಿಯಾದ ವಿಧಾನವಲ್ಲ. ವಿಷಯಕ್ಕೆ ಆದ್ಯತೆಯನ್ನು ನೀಡಿದರೆ, ಅದು ಇತಿಹಾಸ ಬೋಧನೆಯಂತಾಗುತ್ತದೆ. ಬದಲಿಗೆ ವಚನದಲ್ಲಿ ಬಂದಿರುವ ವಸ್ತುವು ವಚನ ಸಾಹಿತ್ಯದ ನೆಲೆಯಲ್ಲಿ ಹೊಂದಿರುವ ಸಾಂಸ್ಕೃತಿಕ ದೃಷ್ಟಿಕೋನ, ವಚನದಲ್ಲಿ ಬಳಕೆಯಾಗಿರುವ ಭಾಷಾ ಕೌಶಲ ಹೇಗಿದೆ ಎಂಬ ನೆಲೆಯಲ್ಲಿ ಬೋಧಿಸಲ್ಪಡಬೇಕು. ಇಂಗ್ಲಿಷ್, ಹಿಂದಿ, ಸಂಸ್ಕೃತದಂತಹ ಭಾಷೆಗಳಾದಾಗ ಭಾಷಾ ಕೌಶಲಗಳು ಪರಿಸರದಲ್ಲೇ ಕಾಣಿಸುವ ಸಂಗತಿಗಳಲ್ಲ. ಆದ್ದರಿಂದ ಭಾಷಾ ಕೌಶಲಗಳನ್ನು ಅಲ್ಲಿ ಮಕ್ಕಳ ಅನುಭವಕ್ಕೆ ತರಲು ಕಷ್ಟವಾಗುತ್ತದೆ. ಕನ್ನಡ ಭಾಷೆಯ ವಿಚಾರ ಹಾಗಲ್ಲ. ಎಲ್ಲವೂ ಮಗುವಿನ ಪರಿಸರದಲ್ಲೇ ಇರುವುದರಿಂದ ಭಾಷಾ ಕೌಶಲವನ್ನು ಕೂಡ ಮಕ್ಕಳ ಅನುಭವಕ್ಕೆ ತರಲು ಸುಲಭವಾಗುತ್ತದೆ. ಭಾಷಾ ಕೌಶಲಗಳ ಅರಿವು ಭಾಷೆಯ ವಿಕಾಸಕ್ಕೆ ಸಹಾಯಕವಾಗಿದೆ.

ನಮ್ಮ ಶೈಕ್ಷಣಿಕ ಸನ್ನಿವೇಶದಲ್ಲಿ ಯಾವುದೇ ಕಲಿಕೆಯು ಪರೀಕ್ಷೆಯ ವಿನ್ಯಾಸಕ್ಕೆ ತಕ್ಕಂತೆ ಹೊಂದಿಕೊಂಡಿರುತ್ತದೆ. ಅಂದರೆ, ಕಲಿಕೆಯ ಉದ್ದೇಶ ಪರೀಕ್ಷೆಯಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡಲು ಸಾಧ್ಯವಾಗುವಂತೆ ಇರಬೇಕು ಎನ್ನುವ ಪರಿಕಲ್ಪನೆಯ ಆಧಾರದಲ್ಲಿರುತ್ತದೆ. ಬೋಧನೆ ಮತ್ತು ಕಲಿಕೆಯಲ್ಲಿ ಭಾಷಾ ಕೌಶಲಗಳು ಮಹತ್ವವನ್ನು ಪಡೆಯಬೇಕಾದರೆ ಭಾಷಾ ಪಠ್ಯಗಳ ಪರೀಕ್ಷೆಯ ವಿನ್ಯಾಸದಲ್ಲಿ ಸುಧಾರಣೆ ತರಬೇಕು. ಪರೀಕ್ಷೆಯಲ್ಲಿ ಕೇಳಲಾಗುವ ಪ್ರಶ್ನೆಗಳು ಪಠ್ಯಪುಸ್ತಕದ ವಿಚಾರಗಳನ್ನು ಉತ್ತರವಾಗಿ ಬಯಸುವಂತಹ ಪ್ರಶ್ನೆಗಳಾಗಿರಬಾರದು. ಬದಲಿಗೆ ಪಠ್ಯ ವಿಚಾರಗಳಲ್ಲಿರುವ ಭಾಷಾ ಕೌಶಲಗಳನ್ನು ಉತ್ತರವಾಗಿ ಬಯಸುವ ಪ್ರಶ್ನೆಗಳಾಗಿರಬೇಕು. ಅಂತಿಮ ಪರೀಕ್ಷೆಯ ಪ್ರಶ್ನೆಪತ್ರಿಕೆಗಳ ವಿನ್ಯಾಸವನ್ನು ಭಾಷಾ ಕೌಶಲ ಆಧಾರಿತವಾಗಿ ಬದಲಿಸಿದಾಗ ಕಾಲಕಾಲಕ್ಕೆ ನಡೆಸುವ ಮೌಲ್ಯಮಾಪನ ಪದ್ಧತಿಯಲ್ಲೂ ಪರೀಕ್ಷಾ ವಿನ್ಯಾಸದ ಪ್ರಭಾವ ಉಂಟಾಗುತ್ತದೆ. ಅವು ಕೂಡ ಭಾಷಾ ಕೌಶಲ ಆಧಾರಿತವಾಗುತ್ತವೆ. ಆಗ ಪಾಠ ಬೋಧನಾ ಕ್ರಮಗಳಲ್ಲೂ ಭಾಷಾ ಕೌಶಲಗಳಿಗೆ ಪ್ರಾಮುಖ್ಯ ಬರುತ್ತದೆ.

ಶಿಕ್ಷಣದ ಉದ್ದೇಶವು ಹೆಚ್ಚು ಔದ್ಯೋಗಿಕ ರೂಪದ್ದಾಗುತ್ತಾ ಹೋದಂತೆ ಯಾವುದೇ ಭಾಷೆಯ ಜ್ಞಾನ ಕಡಿಮೆಯಾಗುತ್ತಾ ಹೋಗುತ್ತದೆ. ಭಾಷಾ ಕೌಶಲಗಳ ಕೊರತೆ ಇಂದಿನ ಶೈಕ್ಷಣಿಕ ಸನ್ನಿವೇಶದ ಸಾಮಾನ್ಯ ಲಕ್ಷಣವಾಗಿದೆ. ಭಾಷಾ ಜ್ಞಾನದ ಕೊರತೆಯು ಹೆಚ್ಚು ಜ್ಞಾನ ಗಳಿಸಲು ಇರುವ ಸಾಧ್ಯತೆಗಳನ್ನು ಕ್ರಮೇಣ ಕಡಿಮೆಗೊಳಿಸುತ್ತದೆ. ಕಲಿಕಾನುಭವಗಳನ್ನು ಕುಗ್ಗಿಸುತ್ತದೆ. ಆದಕಾರಣ, ಭಾಷಾ ವಿಕಾಸದ ಪ್ರಾಥಮಿಕ ನೆಲೆಯಾದ ಮಾತೃಭಾಷೆಯ ಕಲಿಕೆಯ ದಕ್ಷತೆಯನ್ನು ಹೆಚ್ಚಿಸಲು ಆದ್ಯತೆ ನೀಡಲೇಬೇಕಾಗಿದೆ.

ಚುರುಮುರಿ

ಕನ್ನಡದ ಕನಸು!

• ಗುರು ಪಿ.ಎಸ್.

'ಇದೇನೋ, ಬೆಂಗಳೂರಿನ ಚಿತ್ರಣವೇ ಬದಲಾಗಿಬಿಟ್ಟದೆ' ದೆಹಲಿಯಲ್ಲಿ 25 ವರ್ಷ ಇದ್ದು ಬೆಂಗಳೂರಿಗೆ ಬಂದ ಗೆಳೆಯ ಸಂತಸದಲ್ಲಿ ಕೇಳಿದ.

'ಯಾವ ರೀತಿ ಬದಲಾವಣೆಯಪ್ಪ?'

'ಎಲ್ಲೆಲ್ಲೂ ಕನ್ನಡದ ಕಂಪು. ಕನ್ನಡ ಬಾರದೇ ಇದ್ದರೆ ಬೆಂಗಳೂರಿನಲ್ಲಿ ಬದುಕಲು ಸಾಧ್ಯವೇ ಇಲ್ಲವೇನೋ ಎಂಬಂಥ ವಾತಾವರಣ...'

'ಬೆಂಗಳೂರಿನಲ್ಲಷ್ಟೇ ಅಲ್ಲ, ಇಡೀ ಕರ್ನಾಟಕದಲ್ಲಿ ಇಂಥದ್ದೇ ವಾತಾವರಣ ಇದೆ'.

'ಹೌದು, ನಾನು ಬೆಂಗಳೂರಿಗೆ ಬರೋ ಫ್ಲೈಟ್ ಹತ್ತಿದಾಗಿನಿಂದ ಎಲ್ಲ ಸೇವೆ ಮೊದಲು ಕನ್ನಡದಲ್ಲಿ, ನಂತರ ಇಂಗ್ಲಿಷ್‌ನಲ್ಲಿ ಸಿಕ್ತು'.

'ಪರಭಾಷೆಯವರು ಯಾರೇ ಮೂರು ವರ್ಷಗಳಿಗಿಂತ ಹೆಚ್ಚು ಅವಧಿಗೆ ಕರ್ನಾಟಕದಲ್ಲಿದ್ದರೆ ಅವರು ಕನ್ನಡ ಕಲಿಯಲೇಬೇಕು. ಅಂದರೆ ಮಾತ್ರ ಸರ್ಕಾರದ ಸೌಲಭ್ಯ ಅನ್ನೋ ರೂಲ್ಸ್ ಮಾಡಿದಾರೆ ಗೊತ್ತಾ'.

'ವೆರಿಗುಡ್, ವೆರಿಗುಡ್'

'ವೆರಿಗುಡ್ ಅಲ್ಲ, ಚೆನ್ನಾಗಿದೆ ಅನ್ನಬೇಕು. ಯಾವುದೇ ಎಲೆಕ್ಷನ್‌ಗೆ ಯಾರೇ ನಿಲ್ಲಬೇಕು ಅಂದರೂ ಅಷ್ಟೇ, ಅವರು ಕನ್ನಡ ಮಾತನಾಡಬೇಕು, ಓದಬೇಕು, ಬರೆಯಬೇಕು. ಜನಪ್ರತಿನಿಧಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಅವರ ಮಕ್ಕಳನ್ನ ಸರ್ಕಾರಿ ಶಾಲೆಗೇ ಸೇರಿಸಬೇಕು'.

'ಈ ಪ್ಲಾನ್ ಸಕ್ಸಸ್ ಆಯ್ತಾ?'

'ಹೌದು. ಸರ್ಕಾರಿ ಶಾಲೆಗಳಲ್ಲಿ ಈಗ ಫುಲ್ ಸ್ಟ್ರೆಂತ್ ಇದೆ'.

'ಮತ್ತೇನ್ ಬದಲಾವಣೆ?'

'ಕೇಂದ್ರ ಸರ್ಕಾರದ ಯಾವುದೇ ಇಲಾಖೆಯ ಒಟ್ಟು ಹುದ್ದೆಗಳ ಪೈಕಿ, ಕರ್ನಾಟಕದಲ್ಲಿ ಇರೋ ಹುದ್ದೆಗಳನ್ನು ಕನ್ನಡಿಗರಿಗೇ ಮೀಸಲಿಡಲಾಗಿದೆ'.

'ಮಾಲ್‌ಗಳಲ್ಲಿ, ಥಿಯೇಟರ್‌ಗಳಲ್ಲಿ ಕನ್ನಡ ಬಿಟ್ಟು ಬೇರೆ ಸಿನಿಮಾಗಳೇ ಕಾಣಿಸ್ತಿಲ್ಲ'.

'ಹೌದು. ಕನ್ನಡ ಸಿನಿಮಾಗಳು ಹೆಚ್ಚು ಇದ್ದರೆ ಎಲ್ಲ ಸ್ಕ್ರೀನ್‌ಗಳಲ್ಲಿ ಕನ್ನಡ ಸಿನಿಮಾವನ್ನೇ ಪ್ರದರ್ಶಿಸಬೇಕು. ಕನ್ನಡ ಚಿತ್ರಗಳಿರದಿದ್ದರೆ ಮಾತ್ರ ಬೇರೆ ಭಾಷೆಯ ಸಿನಿಮಾಗಳಿಗೆ ಅವಕಾಶ'.

'ಚೆನ್ನಾಗಿದೆ, ಚೆನ್ನಾಗಿದೆ'.

ಮುಖಕ್ಕೆ ನೀರು ಎರಚಿದ ಹೆಂಡ್ತಿ, 'ಎದ್ದೇಳ್ರೀ ಸಾಕು, ಏನ್ ಬಡಬಡಿಸ್ತಿದಿರಾ' ಎಂದಳು.

'ಛೇ, ಈ ಕನಸು ನನಸಾಗಿದ್ದರೆ ಎಷ್ಟು ಚೆನ್ನಾಗಿರೋದು' ಎಂದುಕೊಳ್ಳುತ್ತಾ ನಿದ್ದೆಯಿಂದ ಎದ್ದೆ.

ಸಂಗತ

ವಿದ್ಯಾರ್ಥಿ ಹಿತ ಕಾಯಲೇಕೆ ಹಿಂದೇಟು?

ಉಳಿದಿರುವ ಸೀಟುಗಳನ್ನು ಹಂಚಲು ಮತ್ತು ಆ ಕುರಿತ ವಿವರಗಳನ್ನು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಲಭ್ಯವಾಗಿಸಲು ಕೂಡ ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರಿಯಲ್ಲ

• ಎಚ್.ಕೆ.ಶರತ್

2023-24ನೇ ಸಾಲಿನಲ್ಲಿ ಲ್ಯಾಟರಲ್ ಎಂಟ್ರಿ ಮೂಲಕ ಎಂಜಿನಿಯರಿಂಗ್ ಪದವಿಯ ಮೂರನೇ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ಬಯಸುವ ವಿದ್ಯಾರ್ಥಿಗಳಿಗೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ಹಂಚಲು ಲಭ್ಯವಿರುವ ಸರ್ಕಾರಿ ಕೋಟಾದ ಸೀಟುಗಳ ವಿವರವನ್ನು ಅಕ್ಟೋಬರ್ 13ರಂದು ಕೆಇಎ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯಿಂದ (ಎಐಸಿಟಿಇ) ಅನುಮೋದಿಸಲ್ಪಟ್ಟಿರುವ ಒಟ್ಟಾರೆ ಸೀಟುಗಳ ಶೇಕಡ 10ರಷ್ಟನ್ನು ಹೆಚ್ಚುವರಿಯಾಗಿ ಲ್ಯಾಟರಲ್ ಎಂಟ್ರಿ ಮೂಲಕ ಲಭ್ಯವಾಗಿಸಲು ಅವಕಾಶವಿದೆ. ಉದಾಹರಣೆಗೆ, ಎಂಜಿನಿಯರಿಂಗ್ ಕಾಲೇಜಿನ ವಿಭಾಗವೊಂದರಲ್ಲಿ 60 ಸೀಟುಗಳಿದ್ದರೆ, ಮೊದಲ ಸೆಮಿಸ್ಟರ್‌ಗೆ ಪಿಯು ಮುಗಿಸಿದ 60 ವಿದ್ಯಾರ್ಥಿಗಳನ್ನು ಸೇರಿಸಿಕೊಂಡರೆ, ಆನಂತರ ಮೂರನೇ ಸೆಮಿಸ್ಟರ್‌ಗೆ ಹೆಚ್ಚುವರಿಯಾಗಿ ಡಿಪ್ಲೊಮಾ ಮುಗಿಸಿರುವ 6 ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬಹುದಾಗಿದೆ. ಈ 6 ಸೀಟುಗಳು ಕೂಡ ಸರ್ಕಾರಿ ಕೋಟಾಗೆ ಒಳಪಟ್ಟಿರುತ್ತವೆ. ಹಿಂದಿನ ಶೈಕ್ಷಣಿಕ ವರ್ಷದ ಮೊದಲ ಸೆಮಿಸ್ಟರ್‌ನಲ್ಲಿ ಭರ್ತಿಯಾಗದೆ ಉಳಿದ ಸೀಟುಗಳಿಗೆ ಮಾತ್ರ ಕಾಲೇಜು ಹಂತದಲ್ಲೇ ಶುಲ್ಕ ನಿಗದಿಪಡಿಸಿ, ಮೂರನೇ ಸೆಮಿಸ್ಟರ್‌ಗೆ ಪ್ರವೇಶ ನೀಡಬಹುದಾಗಿದೆ.

ಬೇಡಿಕೆಗಿಂತ ಹೆಚ್ಚು ಎಂಜಿನಿಯರಿಂಗ್ ಸೀಟುಗಳು ಲಭ್ಯವಿರುವುದರಿಂದ ಪಿಯು ಮೂಲಕ ಮೊದಲ ಸೆಮಿಸ್ಟರ್‌ಗೆ ದಾಖಲಿಸಿಕೊಳ್ಳಬೇಕಿರುವ ಸೀಟುಗಳು ಕೂಡ ಗಣನೀಯ ಪ್ರಮಾಣದಲ್ಲಿ ಉಳಿಯುತ್ತಿವೆ. ಹೀಗೆ ವಿದ್ಯಾರ್ಥಿಗಳು ದಾಖಲಾಗಲು ಆಸಕ್ತಿ ತೋರದ ಕಾರಣದಿಂದ ಉಳಿಯುವ ಸಿಟುಗಳನ್ನು ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಮೂರನೇ ಸೆಮಿಸ್ಟರ್‌ಗೆ ಲ್ಯಾಟರಲ್ ಎಂಟ್ರಿ ಮೂಲಕ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ನೀಡಲು ಅವಕಾಶವಿದೆ. ಆದರೆ, ಡಿಪ್ಲೊಮಾ ಪೂರೈಸಿದ ಬಹುತೇಕ ವಿದ್ಯಾರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸೀಟು ಹಂಚಿಕೆ ಪ್ರಕ್ರಿಯೆಯ ಮೂಲಕವೇ ಎಂಜಿನಿಯರಿಂಗ್‌ಗೆ ಪ್ರವೇಶ ಪಡೆಯುವುದರಿಂದ, ಹಿಂದಿನ ಶೈಕ್ಷಣಿಕ ವರ್ಷದ ಮೊದಲ ಸೆಮಿಸ್ಟರ್‌ನಲ್ಲಿ ಉಳಿದಿರುವ ಸೀಟುಗಳನ್ನು ಕಾಲೇಜುಗಳ ಮಟ್ಟದಲ್ಲಿ ಭರ್ತಿ ಮಾಡಿಕೊಳ್ಳುವುದು ಕಷ್ಟಸಾಧ್ಯ. ತೀರಾ ಹೆಸರುವಾಸಿಯಾಗಿರುವ ಹಾಗೂ ತುಂಬಾ ಬೇಡಿಕೆ ಇರುವ ಬೆರಳೆಣಿಕೆಯ ಕಾಲೇಜುಗಳು ಹಾಗೂ ಕೋರ್ಸುಗಳನ್ನು ಹೊರತುಪಡಿಸಿ, ಇತರೆಡೆಗಳಲ್ಲಿ ವಿಚಾರಿಸಲು ಕೂಡ ವಿದ್ಯಾರ್ಥಿಗಳು ಆಸಕ್ತಿ ತೋರಲಾರರು.

ಈ ವಾಸ್ತವ ಮನಗಂಡಿರುವ ಖಾಸಗಿ ಕಾಲೇಜುಗಳು, ಕೆಲವು ವರ್ಷಗಳಿಂದ ತಮ್ಮಲ್ಲಿ ಉಳಿದಿರುವ ಸೀಟುಗಳನ್ನು ಕೆಇಎ ಮೂಲಕವೇ ಹಂಚಿ ಎಂದು ಸ್ವಯಂಪ್ರೇರಿತವಾಗಿ ಸರ್ಕಾರಕ್ಕೆ ಹಿಂದಿರುಗಿಸುತ್ತಿವೆ. ಹೀಗೆ ಹಿಂದಿರುಗಿಸಲ್ಪಟ್ಟ ಸೀಟುಗಳನ್ನು ಕಳೆದ ಬಾರಿ ಎರಡನೇ ಸುತ್ತಿನ ಸೀಟು ಆಯ್ಕೆ ವೇಳೆ ಲಭ್ಯವಾಗಿಸಿದ್ದರೆ, 2021ರಲ್ಲಿ ಮೊದಲ ಸುತ್ತಿನಲ್ಲೇ ಸೇರಿಸಲಾಗಿತ್ತು. 2023-24ನೇ ಸಾಲಿನಲ್ಲಿ ಲ್ಯಾಟರಲ್ ಎಂಟ್ರಿ ಮೂಲಕಪ್ರವೇಶನೀಡಬಹುದಾದ,ಮೊದಲಸೆಮಿಸ್ಟರ್‌ನಲ್ಲಿ ಭರ್ತಿಯಾಗದೆ ಉಳಿದ ಬಹಳಷ್ಟು ಸೀಟುಗಳು ಖಾಸಗಿ, ಅನುದಾನಿತ ಹಾಗೂ ಸರ್ಕಾರಿ ಕಾಲೇಜುಗಳ ಬಳಿ ಇವೆ. ಹಿಂದಿನಂತೆ ಈ ಬಾರಿ ಕೂಡ ಸ್ವಯಂಪ್ರೇರಿತವಾಗಿ ಸೀಟುಗಳನ್ನು ಸರ್ಕಾರಕ್ಕೆ ಹಿಂದಿರುಗಿಸಲು ಗಮನಾರ್ಹ ಸಂಖ್ಯೆಯ ಕಾಲೇಜುಗಳು ತಯಾರಿವೆ. ಆದರೆ, ಸರ್ಕಾರ ಈ ಕುರಿತು ಯಾವ ಧೋರಣೆ ತಳೆಯಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಕೆಇಎ ಈಗಾಗಲೇ ತನ್ನ ಜಾಲತಾಣದಲ್ಲಿ ಪ್ರಕಟಿಸಿರುವ ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಎಐಸಿಟಿಇ ಅನುಮೋದಿಸಿದ ಸೀಟುಗಳ ಶೇಕಡ 10ರಷ್ಟನ್ನು ಮಾತ್ರ ಪರಿಗಣಿಸಲಾಗಿದೆ. ಕಾಲೇಜುಗಳು ಸ್ವಯಂಪ್ರೇರಿತವಾಗಿ ಹಿಂದಿರುಗಿಸುವ ಸೀಟುಗಳು ಯಾವ ಹಂತದ ಸೀಟು ಆಯ್ಕೆಯಲ್ಲಿ ಲಭ್ಯವಾಗಲಿವೆ ಎನ್ನುವ ಪ್ರಶ್ನೆ ಲ್ಯಾಟರಲ್ ಎಂಟ್ರಿ ಮೂಲಕ ಎಂಜಿನಿಯರಿಂಗ್ ಪದವಿಗೆ ಪ್ರವೇಶ ಪಡೆಯಲು ಆಸಕ್ತರಾಗಿರುವ ವಿದ್ಯಾರ್ಥಿಗಳಲ್ಲಿದೆ. ಸಂಬಂಧಪಟ್ಟವರು ಆದಷ್ಟು ಬೇಗ ಈ ಕುರಿತು ಸ್ಪಷ್ಟನೆ ನೀಡಬೇಕಿದೆ. ಕಾಲೇಜುಗಳೇ ಹಿಂದಿರುಗಿಸಲು ಸಿದ್ಧವಿರುವ ಸೀಟುಗಳನ್ನು ಕೆಇಎ ಮೂಲಕ ಮೊದಲ ಸುತ್ತಿನಲ್ಲೇ ಹಂಚಲು ಹಾಗೂ ಈ ಕುರಿತ ವಿವರಗಳನ್ನು ಮೊದಲೇ ಬಹಿರಂಗಪಡಿಸುವ ಮೂಲಕ ವಿದ್ಯಾರ್ಥಿಗಳ ಹಿತ ಕಾಯುವಲ್ಲಿ ಇರುವ ತೊಡಕುಗಳಾದರೂ ಏನು ಎಂಬುದನ್ನು ಸಂಬಂಧಪಟ್ಟವರು ತಿಳಿಸಬೇಕಿದೆ.

ಲ್ಯಾಟರಲ್ ಎಂಟ್ರಿ ಮೂಲಕ ಹಂಚಲು ಕಾಲೇಜುಗಳು ಹಿಂದಿರುಗಿಸಬಹುದಾದ ಸೀಟುಗಳ ವಿವರವನ್ನು ಸರ್ಕಾರ ಸಾಕಷ್ಟು ಮುಂಚಿತವಾಗಿಯೇ ಪಡೆದುಕೊಳ್ಳಬಹುದಾಗಿದೆ. ಕಳೆದ ಶೈಕ್ಷಣಿಕ ಸಾಲಿನಲ್ಲಿ ಉಳಿದಿರುವ ಸೀಟುಗಳನ್ನು ಹಂಚಲು ಮತ್ತು ಆ ಕುರಿತ ವಿವರಗಳನ್ನು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಲಭ್ಯವಾಗಿಸಲು ಕೂಡ ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ.

ವಿದ್ಯಾರ್ಥಿಗಳ ಎದುರು ಹೆಚ್ಚು ಆಯ್ಕೆಗಳಿದ್ದರೆ, ಅದರಿಂದ ನಷ್ಟವಾಗುವುದು ಯಾರಿಗೆ ಎಂಬುದನ್ನು ಅರಿಯಲು ಹೆಚ್ಚು ತಿಣುಕಾಡಬೇಕಿಲ್ಲ. ವಿದ್ಯಾರ್ಥಿಗಳು ದಾಖಲಾಗಲು ಬಯಸದ ಮೂಲಸೌಕರ್ಯ ವಂಚಿತ ಕಾಲೇಜುಗಳ ಹಿತ ಕಾಯುವ ಸಲುವಾಗಿ ಈ ಬಾರಿ ಉಳಿಕೆ ಸೀಟುಗಳನ್ನು ಹಂಚದಿರುವ ತೀರ್ಮಾನಕ್ಕೆ ಸರ್ಕಾರ ಬಂದಿದೆಯೇ ಎನ್ನುವ ಅನುಮಾನ ವಿದ್ಯಾರ್ಥಿಗಳ ವಲಯದಲ್ಲಿ ಮೂಡಿದೆ. ಏಕೆಂದರೆ, ಕಾಲೇಜುಗಳು ಹಿಂದಿರುಗಿಸುವ ಸೀಟುಗಳನ್ನು ಲಭ್ಯವಾಗಿಸದೇ ಹೋದಲ್ಲಿ, ಇರುವ ಸೀಮಿತ ಸಂಖ್ಯೆಯ ಆಯ್ಕೆಗಳಲ್ಲೇ ಒಂದರ ಮೊರೆ ಹೋಗುವ ಅನಿವಾರ್ಯ ಎದುರಾಗಲಿದೆ.

ವಾಚಕರ ವಾಣಿ

ನಾಳಿನ ನೀರಿಗಾಗಿ ಜಾಗೃತರಾಗೋಣ

ರಾಜ್ಯದಲ್ಲಿ ಬರಗಾಲದ ಬವಣೆ ದಿನದಿಂದ ದಿನಕ್ಕೆ ತೀವ್ರವಾಗುತ್ತಿದೆ. ಮುಂದಿನ ಬದುಕು ಹೇಗೆ ಎಂಬ ಚಿಂತೆ ರೈತಾಪಿ ವರ್ಗವನ್ನು ಆವರಿಸಿದೆ. ದನಕರುಗಳಿಗೆ ಮೇವು ಹೊಂಚುವ ಸವಾಲು ಎದುರಾಗಿದೆ. ಕೃಷಿಕರ ಕಷ್ಟ ಈ ರೀತಿ ಇದ್ದರೆ, ಕೃಷಿಕರಲ್ಲದ ಜನಸಾಮಾನ್ಯರ ಆತಂಕ ಇನ್ನೊಂದು ಬಗೆಯದು. ಅಕ್ಕಿ ಬೆಲೆ ಈಗಾಗಲೇ ಗಗನಮುಖಿಯಾಗಿದೆ. ಈರುಳ್ಳಿ ಕೊಳ್ಳುವವರಲ್ಲಿ ಕಣ್ಣೀರು ತರಿಸುತ್ತಿದೆ. ಬರ ಪರಿಣಾಮವಾಗಿ ಉತ್ಪಾದನೆ ಕುಂಠಿತಗೊಂಡರೆ ಮುಂದಿನ ದಿನಗಳಲ್ಲಿ ಆಹಾರ ಪದಾರ್ಥಗಳ ದರ ಇನ್ನಷ್ಟು ಏರುವ ಭಯ ಅವರನ್ನು ಈಗಲೇ ಕಾಡತೊಡಗಿದೆ.

ಬೇಸಿಗೆಗೆ ಮೊದಲೇ ಹಲವೆಡೆ ಕುಡಿಯುವ ನೀರಿಗೂ ಪರದಾಡಬೇಕಾದ ಸ್ಥಿತಿ ತಲೆದೋರಬಹುದು. ಈ ಕಾರಣಕ್ಕಾಗಿ ನೀರನ್ನು ಮಿತವಾಗಿ ಬಳಸುವ ಗುರುತರ ಹೊಣೆ ನಾಗರಿಕರ ಮೇಲಿದೆ. ನೀರನ್ನು ಯಾವುದೇ ಕಾರಣಕ್ಕೂ ಪೋಲು ಮಾಡಬಾರದು. ಅವಶ್ಯಕ್ಕಿಂತ ಒಂದು ಹನಿ ನೀರನ್ನೂ ಹೆಚ್ಚಿಗೆ ಬಳಸುವುದಿಲ್ಲ ಎಂದು ಪಣತೊಡಬೇಕಾದ ಅಗತ್ಯ ನಮ್ಮ ಎದುರಿಗಿದೆ. ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡುವ ಪ್ರವೃತ್ತಿ ನಮ್ಮದು. ಅದರಿಂದ ಹೊರಬರಬೇಕು. ಸಾರ್ವಜನಿಕರು ಹೊಣೆ ಅರಿತು ನಡೆಯಬೇಕು. ಪರಿಸ್ಥಿತಿ ನಿಭಾಯಿಸಲು ಸರ್ಕಾರ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು.

ಜಗದೀಶ ಎಸ್.ಗಿರಡ್ಡಿ, ಗೊರಬಾಳ, ಇಳಕಲ್

ಉಸಿರಾಗಲಿ ಕವಿವಾಣಿ

ಒಂದೆರಡು ದಶಕಗಳ ಹಿಂದೆ ವಿದ್ಯಾರ್ಥಿಗಳಿಗೆ ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ವಿಷಯಗಳು ತರಗತಿ ಮತ್ತು ಪರೀಕ್ಷೆಯಲ್ಲಿ ಕಬ್ಬಿಣದ ಕಡಲೆ ಎನಿಸಿದ್ದವು. ಆದರೆ, ಕನ್ನಡವೇ ಮಾತೃಭಾಷೆಯಾಗಿರುವ ವಿದ್ಯಾರ್ಥಿಗಳಿಗೆ ಈಗ ಕನ್ನಡ ವಿಷಯವೇ ಕಬ್ಬಿಣದ ಕಡಲೆಯಾಗಿದೆ. ಇದು, ದುರಂತದ ಸಂಗತಿ. ಮೈಸೂರು ರಾಜ್ಯವನ್ನು 'ಕರ್ನಾಟಕ' ಎಂದು ಕರೆದ ಚಾರಿತ್ರಿಕ ವಿದ್ಯಮಾನದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿದ್ದೇವೆ. 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂಬ ಕವಿವಾಣಿ ಉಸಿರಾಗುತ್ತಿಲ್ಲವಲ್ಲ ಎಂಬ ಕಳವಳ ಮೂಡಿದೆ.

ನಾವು, ನಮ್ಮ ಶಿಕ್ಷಣ ವ್ಯವಸ್ಥೆ ಮತ್ತು ಮನೆಯ ವಾತಾವರಣವು ಕನ್ನಡ ಕಲಿಕೆಗೆ ಪೂರಕವಾಗಿವೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ. ಬರೀ ಭಾಷಣಗಳಿಂದ ಯಾವ ಪ್ರಯೋಜನವೂ ಇಲ್ಲ. ಕನ್ನಡ ನಮ್ಮ ಬದುಕಿನ ಭಾಗವಾಗಬೇಕಿದೆ. ಮನೆಯಲ್ಲಿ ತಾಯ್ನುಡಿಗೆ ಮೊದಲ ಮನ್ನಣೆ ಸಿಗಬೇಕು. ನಮ್ಮ ನುಡಿಯನ್ನು ಬಳಸಬೇಕು, ಮಕ್ಕಳಿಗೆ ಕಲಿಸಬೇಕು. ಆ ಮೂಲಕ ಅವರು ಕನ್ನಡದಲ್ಲಿ ಓದುವಂತಹ, ಬರೆಯುವಂತಹ ವಾತಾವರಣ ರೂಪಿಸಬೇಕು.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಸವಾಲು ಎದುರುಗೊಳ್ಳುವ ಬಗೆ ಹೇಗೆ?

'ಸವಾಲು ಸಾವಿರ, ಪರಿಹಾರದ ದಾರಿ ದೂರ...' ಎಂಬ ಲೇಖನದಲ್ಲಿ (ಪ್ರ.ವಾ., ನ. 1) ಕರ್ನಾಟಕದ ಭವಿಷ್ಯದ ಸವಾಲು ಹಾಗೂ ಅದನ್ನು ಎದುರುಗೊಳ್ಳಲು ಬೇಕಾದ ಉಪಕ್ರಮಗಳ ಹೊಳಹಿನ ರೇಖೆಗಳನ್ನು ಚಿರಂಜೀವಿ ಸಿಂಘ್ ಪರಿಣಾಮಕಾರಿಯಾಗಿ ಗುರುತಿಸಿದ್ದಾರೆ. ಇಡೀ ಜಗತ್ತು ಮುಖಾಮುಖಿಯಾಗುವ ಸಮಸ್ಯೆಗಳ ಪ್ರಸ್ತಾಪವೂ ಲೇಖನದಲ್ಲಿ ಇದೆ. ಅವರು ಪ್ರಸ್ತಾಪಿಸಿರುವ ಒಂದೊಂದು ಸಂಗತಿಯ ಒಳಹೊಕ್ಕರೆ ಅಲ್ಲಿನ ಸಮಸ್ಯೆಯ ವಿಸ್ತಾರ, ತೀವ್ರತೆ ಮನವರಿಕೆ ಆಗುತ್ತದೆ.

ರಾಜ್ಯದಲ್ಲಿನ ಕೆಲವು ಅಣೆಕಟ್ಟುಗಳ ಆಯಸ್ಸು ಈಗಾಗಲೇ ಮುಗಿದಿರುವುದು, ಮತ್ತೆ ಕೆಲವು ಅಣೆಕಟ್ಟುಗಳ ಆಯಸ್ಸು ಮುಗಿಯುತ್ತಾ ಬಂದಿರುವುದನ್ನು ಪ್ರಸ್ತಾಪಿಸಿರುವ ಅವರು, ಇವುಗಳಿಂದ ಮುಂದೆ ಒದಗುವ ಸಮಸ್ಯೆಗಳತ್ತ ಗಮನ ಸೆಳೆದಿರುವುದು ಸಂದರ್ಭೋಚಿತ. ಹೂಳು ತುಂಬಿದ ಅಣೆಕಟ್ಟುಗಳು, ಹೂಳನ್ನು ವಿಲೇವಾರಿ ಮಾಡುವಲ್ಲಿ ಉಂಟಾಗುವ ಸಮಸ್ಯೆ, ಕೃಷಿ ಕ್ಷೇತ್ರದಲ್ಲಿ ಆಗಬೇಕಾದ ಸುಧಾರಣೆಗಳಿಗೆ ರೈತರ ಮನವೊಲಿಸುವುದು, ಜಾಗತಿಕ ತಾಪಮಾನ ಏರಿಕೆಯಿಂದಾಗುವ ತೊಡಕುಗಳು, ಕೃತಕ ಬುದ್ಧಿಮತ್ತೆ ಮತ್ತು ರೊಬೋಟಿಕ್ ತಂತ್ರಜ್ಞಾನದ ಪರಿಣಾಮಗಳು ಹಾಗೂ ನಿರುದ್ಯೋಗ ಸಮಸ್ಯೆಯಂಥ ವಿಷಯಗಳ ಬಗ್ಗೆ ನಮ್ಮನ್ನು ಅವರು ಎಚ್ಚರಿಸಿದ್ದಾರೆ.

ಆದರೆ, ನಮ್ಮ ರಾಜಕೀಯ ಪಕ್ಷಗಳಿಗಾಗಲೀ, ಅಧಿಕಾರಿಗಳಿಗಾಗಲೀ ಈ ಸಮಸ್ಯೆಗಳ ತೀವ್ರತೆಯ ಬಗ್ಗೆ ಅರಿವು ಇದ್ದಂತಿಲ್ಲ. ರಾಜಕೀಯ ಪಕ್ಷಗಳ ಆಸಕ್ತಿ ಮತ್ತು ದಾಹ ಅಧಿಕಾರ ಕಬಳಿಸುವುದು ಹೇಗೆ ಎನ್ನುವಷ್ಟಕ್ಕೇ ಸೀಮಿತ. ನೌಕರಶಾಹಿಯು ರಾಜಕೀಯ ನಾಯಕರ ಅನುವರ್ತಿಯಾಗಿ ಉಳಿಯುವುದರಲ್ಲೇ ಹಿತ ಕಂಡಿದೆ. ಇದೇ ನಮ್ಮ ದೌರ್ಭಾಗ್ಯ.

ಸಾಮಗ ದತ್ತಾತ್ರಿ, ಬೆಂಗಳೂರು

ಅಹಿಂಸೆಯು ಎಲ್ಲ ಕಾಲಕ್ಕೂ ಸಲ್ಲುವ 'ಅಸ್ತ್ರ'

'ಗಾಜಾ ಪ್ರದೇಶದಲ್ಲಿ ಆತ್ಮಹೀನ ಕೃತ್ಯ' (ಪ್ರ.ವಾ., ನ.1) ಲೇಖನ ಅರ್ಥಪೂರ್ಣವಾಗಿದೆ. ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅವರು ಯುದ್ಧವನ್ನು ಮಾನವೀಯ ನೆಲೆಯಲ್ಲಿ ನೋಡುವ ಅಗತ್ಯವನ್ನು ವಾಸ್ತವ ಅಂಶಗಳ ಆಧಾರದ ಮೇಲೆ ಬರೆದಿದ್ದಾರೆ. ಗಾಂಧಿ ತತ್ವಗಳ ಅಗತ್ಯವನ್ನು ಸ್ಮರಿಸುವ ಇಸ್ರೇಲಿನ ಲೇಖಕ ಎತ್ಗರ್ ಕೆರೆಟ್ '...ನಮಗೆ, ಇಸ್ರೇಲ್ ಹಾಗೂ ಪ್ಯಾಲೆಸ್ಟೀನ್‌ನಲ್ಲಿ ಅರ್ಧ ಡಜನ್‌ನಷ್ಟು ಮಹಾತ್ಮ ಗಾಂಧೀಜಿ ಬೇಕಿದೆ' ಎಂದು ಹೇಳಿರುವುದು, ಜಗತ್ತಿಗೆ ಭಾರತದ ಅಹಿಂಸಾತ್ಮಕ ಹೋರಾಟ ಪದೇ ಪದೇ ನೆನಪಾಗುತ್ತಿದೆ ಎಂಬುದರ ದ್ಯೋತಕ. ಈ ಅಂಶವು ಭಾರತೀಯರಾದ ನಮಗೆಲ್ಲರಿಗೂ ಹೆಮ್ಮೆಯ ವಿಷಯ.

ಹುಸೇನ್ ಡಾಂಗೆ, ವಿಜಯಪುರ

'ಗೃಹಲಕ್ಷ್ಮಿ': ತಾಂತ್ರಿಕ ಸಮಸ್ಯೆ ನಿವಾರಿಸಿ

ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಲ್ಲಿ ಒಂದಾದ 'ಗೃಹಲಕ್ಷ್ಮಿ' ಯೋಜನೆಗೆ ರಾಜ್ಯದಾದ್ಯಂತ ಉತ್ತಮ ಸ್ಪಂದನ ದೊರೆತಿದೆ. ಆದರೆ, ಅಂದಾಜು ಹತ್ತು ಲಕ್ಷ ಮಹಿಳೆಯರಿಗೆ ತಾಂತ್ರಿಕ ಕಾರಣದಿಂದ ಹಣವೇ ಬಂದಿಲ್ಲ ಎನ್ನುವ ವರದಿಗಳಿವೆ. ಈ ಯೋಜನೆಯ ಫಲಾನುಭವಿಗಳಲ್ಲಿ ಹೆಚ್ಚಿನವರು ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಸೇರಿದವರು. ನ್ಯೂನತೆ ಸರಿಪಡಿಸಲು ಎರಡು ತಿಂಗಳಿನಿಂದಲೂ ಗ್ರಾಮ ಒನ್ ಮತ್ತು ಬ್ಯಾಂಕುಗಳಿಗೆ ಅಲೆದರೂ ಈವರೆಗೂ ತಾಂತ್ರಿಕ ಸಮಸ್ಯೆಯಿಂದ ಮುಕ್ತಿ ದೊರೆತಿಲ್ಲ. ಸರ್ಕಾರದ ಯಾವುದೇ ಯೋಜನೆಯು ಸಕಾಲದಲ್ಲಿ ಫಲಾನುಭವಿಗಳಿಗೆ ತಲುಪಿದರೆ ಮಾತ್ರ ಯೋಜನೆಯ ಉದ್ದೇಶ ಈಡೇರುತ್ತದೆ. ತಾಂತ್ರಿಕ ಸಮಸ್ಯೆಯನ್ನು ಕೂಡಲೇ ನಿವಾರಿಸಬೇಕು.

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಆ್ಯಪಲ್‌ನಿಂದ 'ಸ್ಟೇಟ್ ಸ್ಪಾನ್ಸರ್ಡ್ ಅಟ್ಯಾಕ್' ಎಚ್ಚರಿಕೆ

ಕದ್ದಾಲಿಕೆಯ ಹೊಸರೂಪ

ಸರ್ಕಾರ ನಮ್ಮ ವಿರುದ್ಧ ಗೂಢಚರ್ಯೆ ನಡೆಸುತ್ತಿದೆ ಎಂದು ವಿರೋಧ ಪಕ್ಷಗಳ ನಾಯಕರು ಆರೋಪಿಸುತ್ತಿದ್ದಾರೆ. ನಿರ್ದಿಷ್ಟ ಪ್ರಕರಣವೊಂದರಲ್ಲಿ, ಯಾವುದೋ ಒಬ್ಬ ವ್ಯಕ್ತಿಯ ಮೇಲೆ, ನಿಗದಿತ ಅವಧಿಯವರೆಗೆ ಕಣ್ಗಾವಲು/ಕದ್ದಾಲಿಕೆ ನಡೆಸುವ ಅಧಿಕಾರವನ್ನು ಮಾಹಿತಿ ತಂತ್ರಜ್ಞಾನ ಕಾಯ್ದೆ ಮತ್ತು ಟೆಲಿಗ್ರಾಫ್ ಕಾಯ್ದೆ ಸರ್ಕಾರಕ್ಕೆ ನೀಡುತ್ತದೆ. ಆದರೆ ಅದಕ್ಕೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳನ್ನು ಸರ್ಕಾರ ದಾಖಲಿಸಬೇಕು. ಸರ್ಕಾರವು ಹಾಗೆ ಮಾಡದಿದ್ದರೆ ಅದು ಕಾನೂನುಬಾಹಿರ

ಪ್ರಜಾವಾಣಿ ವಾರ್ತೆ

ಪೆಗಾಸಸ್ ಎಂಬ ತಂತ್ರಾಂಶವನ್ನು ಬಳಸಿಕೊಂಡು ಭಾರತದ 160ಕ್ಕೂ ಹೆಚ್ಚು ವಿರೋಧ ಪಕ್ಷದ ನಾಯಕರು, ಪತ್ರಕರ್ತರ ಫೋನ್‌ಗಳಿಗೆ ಕನ್ನಹಾಕಲು ಯತ್ನಿಸಲಾಗಿತ್ತು ಎಂದು 2019ರಲ್ಲಿ ಹಲವು ತನಿಖಾ ವರದಿಗಳು ಹೇಳಿದ್ದವು.

ಈಗ, ಆ್ಯಪಲ್ ಕಂಪನಿಯು ಭಾರತವು ಸೇರಿದಂತೆ 150 ದೇಶಗಳಲ್ಲಿ ಇರುವ ತನ್ನ ಕೆಲವು ಬಳಕೆದಾರರಿಗೆ 'ಸರ್ಕಾರಿ ಪ್ರಾಯೋಜಿತ ದಾಳಿಕೋರರು' ನಿಮ್ಮ ಮೊಬೈಲ್ ಒಳಗೆ ನುಸುಳಲು ಯತ್ನಿಸಿದ್ದಾರೆ ಎಂದು ಎಚ್ಚರಿಕೆ ನೀಡಿದೆ.

– ವ್ಯಕ್ತಿಯೊಬ್ಬರ ಖಾಸಗಿತನಕ್ಕೆ ಧಕ್ಕೆ ತರುವ, ಸುಪ್ರೀಂ ಕೋರ್ಟ್ ಪ್ರತಿಪಾದಿಸಿದ ಖಾಸಗಿತನದ ಹಕ್ಕನ್ನು ಉಲ್ಲಂಘಿಸುವ ಈ ಎರಡೂ ಕೃತ್ಯಗಳು ಸದ್ಯ ಭಾರತದ ರಾಜಕಾರಣದಲ್ಲಿ ಗಂಭೀರ ಚರ್ಚೆಗೆ ಕಾರಣವಾಗಿದೆ.

'ಲೋಕಸಭಾ ಚುನಾವಣೆಗೆ ಕೆಲವೇ ತಿಂಗಳುಗಳು ಇವೆ ಎನ್ನುವ ಹೊತ್ತಿಗೇ ಇಂಥ ಕನ್ನ ಯತ್ನಗಳು ನಡೆಯುತ್ತವೆ' ಎಂದು ಆಮ್ ಆದ್ಮಿ ಪಕ್ಷದ ಸಂಸದ ರಾಘವ್ ಛಡ್ಡಾ ಅವರು ಮಂಗಳವಾರ ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದರು. ದೇಶದಲ್ಲಿನ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಛಡ್ಡಾ ಅವರ ಅಭಿಪ್ರಾಯಕ್ಕೆ ಪೂರಕ ಸಾಕ್ಷ್ಯಗಳೂ ದೊರೆಯುತ್ತವೆ.

ಪೆಗಾಸಸ್ ಕುತಂತ್ರಾಂಶದ ಕುರಿತು ದೇಶದ ಜನರ ಅರಿವಿಗೆ ಬಂದಿದ್ದು 2019ರ ಹೊತ್ತಿಗೆ. 'ದಿ ವೈರ್' ಪತ್ರಿಕೆಯು ಈ ಬಗ್ಗೆ ಹಲವು ಸರಣಿ ವರದಿಗಳನ್ನು ಬರೆಯಿತು. ಭಾರತದಲ್ಲಿ ಯಾರು ಯಾರ ಮೊಬೈಲ್‌ಗಳಲ್ಲಿ ಈ ಕುತಂತ್ರಾಂಶವನ್ನು ಅಳವಡಿಸಲಾಗಿದೆ ಎಂಬುದರ ಕುರಿತೂ ವರದಿಗಳನ್ನು ಪ್ರಕಟಿಸಿತು. ಜೊತೆಗೆ, ವಿದೇಶದಲ್ಲಿರುವ ವಿಧಿ ವಿಜ್ಞಾನ ಸಂಸ್ಥೆಗಳಿಂದ ಮೊಬೈಲ್‌ಗಳನ್ನು ಪರೀಕ್ಷೆ ಮಾಡಿಸಿತು. ಇಂಥ ಪರೀಕ್ಷೆಗಳಲ್ಲಿ ತಿಳಿದುಬಂದ ವರದಿಗಳಲ್ಲಿ ಹೇಳಲಾಗಿರುವಂತೆ, ಕೆಲವು ಬಳಕೆದಾರರ ವಾಟ್ಸ್‌ಆ್ಯಪ್‌ಗಳಲ್ಲಿ ಈ ಕುತಂತ್ರಾಂಶವು 2017–18ರಿಂದಲೂ ಇತ್ತು. ಮತ್ತು 2019ರಲ್ಲಿ ಲೋಕಸಭೆ ಚುನಾವಣೆ ನಡೆದಿದೆ.

2024ರಲ್ಲಿ ಮತ್ತೆ ಲೋಕಸಭೆ ಚುನಾವಣೆ ಇದೆ. ಇದಕ್ಕೂ ಕೆಲವು ತಿಂಗಳ ಮೊದಲೇ ಆ್ಯಪಲ್‌ನ ಎಚ್ಚರಿಕೆ ಸಂದೇಶ ಬಂದಿದೆ. ಇದು ಕಾಕತಾಳೀಯ ಇರಲಾರದು ಎನ್ನುವುದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿರುವ ಸಂಗತಿ. ಅದು ಪೆಗಾಸಸ್ ಕುರಿತಾಗಲಿ, ಆ್ಯಪಲ್‌ನ ಎಚ್ಚರಿಕೆ ಸಂದೇಶಕ್ಕೆ ಸಂಬಂಧಿಸಿದ್ದಾಗಲಿ ವಿರೋಧ ಪಕ್ಷಗಳ ಎಲ್ಲಾ ಆರೋಪಗಳನ್ನು ಕೇಂದ್ರ ಸರ್ಕಾರವು ನಿರಾಕರಿಸುತ್ತಲೇ ಬಂದಿದೆ.

ವಿರೋಧ ಪಕ್ಷದವರೇ ಗುರಿ: 'ವಿರೋಧ ಪಕ್ಷದ ನೂರಾರು ನಾಯಕರಿಗೆ ಆ್ಯಪಲ್‌ನಿಂದ ಎಚ್ಚರಿಕೆ ಸಂದೇಶ ಬಂದಿದೆ ಎನ್ನುವುದಂತೂ ಸತ್ಯ. ಯಾಕಾಗಿ ವಿರೋಧ ಪಕ್ಷದ ನಾಯಕರು ಮಾತ್ರವೇ ಗುರಿ? ವಿರೋಧ ಪಕ್ಷಗಳ ನಾಯಕರ ಮೊಬೈಲ್‌ಗಳಲ್ಲಿ ಏನಿದೆ ಎಂದು ಇಣುಕಿ ನೋಡುವುದಕ್ಕೆ ಯಾರಿಗೆ ತಾನೇ ಆಸಕ್ತಿ ಇದ್ದೀತು?' ಎನ್ನುವುದು ಕಾಂಗ್ರೆಸ್ ನಾಯಕ ಪಿ.ಚಿದಂಬರಂ ತರ್ಕ.

ಭಾರತದ ಸುಮಾರು 300 ಜನರ ವಾಟ್ಸ್‌ಆ್ಯಪ್‌ಗಳಲ್ಲಿ ಪೆಗಾಸಸ್ ಕುತಂತ್ರಾಂಶವನ್ನು ಅಳವಡಿಸಲಾಗಿತ್ತು. ಈ ಸಂಖ್ಯೆಯು ಇನ್ನಷ್ಟೂ ಇರಬಹುದು ಎಂದು 'ದಿ ವೈರ್' ಪತ್ರಿಕೆ ಶಂಕಿಸಿತ್ತು. ಸಾಂವಿಧಾನಿಕ ಸಂಸ್ಥೆಗಳ ಅಧಿಕಾರಿಗಳ ಮೊಬೈಲ್ ಸಂಖ್ಯೆ, ಕೆಲವು ಪತ್ರಕರ್ತರು, ವ್ಯಾಪಾರಸ್ಥರು, ಸಾಮಾಜಿಕ ಕಾರ್ಯಕರ್ತರು, ಕೇಂದ್ರ ಸರ್ಕಾರದ ಇಬ್ಬರು ಸಚಿವರು, ವಿರೋಧ ಪಕ್ಷಗಳ ಮೂವರು ನಾಯಕರು ಮೊಬೈಲ್‌ಗಳಲ್ಲಿ ಈ ಕುತಂತ್ರಾಂಶಗಳನ್ನು ಅವಳಡಿಸಲಾಗಿತ್ತು ಎಂದು ಅದು ವರದಿ ಪ್ರಕಟಿಸಿತ್ತು.

ಈ ಬಾರಿ, 'ಇಂಡಿಯಾ' ಮೈತ್ರಿಕೂಟದ ಹಲವು ನಾಯಕರು, ಕೆಲವು ಪತ್ರಕರ್ತರಿಗೆ ಆ್ಯಪಲ್ ಕಂಪನಿಯು ಎಚ್ಚರಿಕೆ ಸಂದೇಶಗಳನ್ನು ಕಳುಹಿಸಿದೆ. ನಿರಂತರವಾಗಿ ವಿರೋಧ ಪಕ್ಷಗಳ ನಾಯಕರ, ಕೇಂದ್ರ ಸರ್ಕಾರದ ವಿರುದ್ಧ ಮಾತನಾಡುವವರ ಖಾಸಗಿತನದ ಹಕ್ಕನ್ನು ಕಸಿದುಕೊಳ್ಳುವ ಯತ್ನ ನಡೆಯುತ್ತಿರುವುದನ್ನು ವಿರೋಧಿಸಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ.

ಗಂಭೀರವಾಗಿ ತೆಗೆದುಕೊಳ್ಳಿ

ಈ ಎಚ್ಚರಿಕೆಯನ್ನು ನೀವು ಗಂಭೀರವಾಗೇ ತೆಗೆದುಕೊಳ್ಳಬೇಕು. ಮತ್ತು ನಿಮ್ಮ ಸಾಧನಗಳ ಸುರಕ್ಷತಾ ಸವಲತ್ತುಗಳನ್ನು ಚಾಲೂ ಮಾಡಿ. ಅಗತ್ಯವಿದ್ದಲ್ಲಿ ಲಾಕ್‌ಡೌನ್ ಆಯ್ಕೆಯನ್ನೂ ಚಾಲೂ ಮಾಡಿ (ಆ್ಯಪಲ್ ಸಾಧನಗಳಲ್ಲಿ ಇರುವ ಅತ್ಯಂತ ಪ್ರಬಲ ಸುರಕ್ಷತಾ ಫೀಚರ್)

–ಅಕ್ಟೋಬರ್ 31ರಂದು ಆ್ಯಪಲ್ ಕಳುಹಿಸಿದ ಸಂದೇಶದ ಭಾಗ

'ಸರ್ಕಾರವೇ ಮಾಡಿಸುವ ಹ್ಯಾಕ್'

ಎಲೆಕ್ಟ್ರಾನಿಕ್ ಸಂಪರ್ಕ ಸಾಧನಗಳಿಗೆ ಕನ್ನ ಹಾಕಿ, ಅವುಗಳನ್ನು ಅನಧಿಕೃತವಾಗಿ ನಿಯಂತ್ರಿಸುವ, ಅವುಗಳಲ್ಲಿನ ದತ್ತಾಂಶಗಳನ್ನು ಕಳವು ಮಾಡುವ, ಅವುಗಳನ್ನು ಕದ್ದಾಲಿಕೆಗೆ ಮತ್ತು ಕದ್ದುನೋಡುವುದಕ್ಕೆ ಬಳಸಿಕೊಳ್ಳುವ ಕೃತ್ಯವೇ ಹ್ಯಾಕಿಂಗ್. (ಸೈಬರ್ ಅಪರಾಧ ಪರಿಭಾಷೆಯಲ್ಲಿ ಕನ್ನ ಎಂಬ ಪದವನ್ನು ವಿಶಾಲಾರ್ಥದಲ್ಲಿ ಹ್ಯಾಕ್‌ಗೆ ಸಂವಾದಿಯಾಗಿ ಬಳಸಲಾಗುತ್ತಿದೆ). ಇಂತಹ ಕೃತ್ಯಗಳನ್ನು ಸರ್ಕಾರವೇ ಪ್ರಾಯೋಜಿಸಿದರೆ ಅದನ್ನು 'ಸರ್ಕಾರಿ ಪ್ರಾಯೋಜಿತ ಹ್ಯಾಕ್' ಎಂದು ಕರೆಯಲಾಗುತ್ತದೆ ಎಂಬ ವಿವರಣೆಯನ್ನು ಆ್ಯಪಲ್ 2021ರಲ್ಲೇ ನೀಡಿತ್ತು. ಭಾರತದ 160 ರಾಜಕಾರಣಿಗಳು, ಪತ್ರಕರ್ತರು ಮತ್ತು ಸಾಮಾಜಿಕ ಕಾರ್ಯಕರ್ತರು ಸೇರಿ ವಿಶ್ವದ 400 ಜನರ ಫೋನ್‌ಗಳಿಗೆ ಕನ್ನಹಾಕಲು ಇಸ್ರೇಲ್‌ನ ಪೆಗಾಸಸ್ ಕನ್ನತಂತ್ರಾಂಶವನ್ನು ಬಳಸಿಕೊಳ್ಳಲಾಗಿತ್ತು ಎಂಬ ಆರೋಪ ಬಂದ ಹೊತ್ತಿನಲ್ಲಿ ಆ್ಯಪಲ್ ಈ ವಿವರಣೆ ನೀಡಿತ್ತು.

ಸರ್ಕಾರಗಳು ತಮ್ಮ ವಿರೋಧಿಗಳು, ವಿರೋಧ ಪಕ್ಷಗಳ ನಾಯಕರು, ಸಾಮಾಜಿಕ ಕಾರ್ಯಕರ್ತರು ಮತ್ತು ಪತ್ರಕರ್ತರ ಮೇಲೆ ನಿಗಾ ಇರಿಸಲು ಈ ಕುತಂತ್ರದ ಮೊರೆ ಹೋಗುತ್ತವೆ. ಪೆಗಾಸಸ್ ಕನ್ನತಂತ್ರಾಂಶವನ್ನು ಬಳಸಿಕೊಂಡು ಜೋರ್ಡನ್, ಹಲವು ಪತ್ರಕರ್ತರ ಫೋನ್‌ಗಳಿಗೆ ಕನ್ನಹಾಕಿತ್ತು ಎಂದು ಆ್ಯಪಲ್ ಹೇಳಿತ್ತು. ಪೆಗಾಸಸ್ ವಿರುದ್ಧ ಪ್ರಕರಣವನ್ನೂ ದಾಖಲಿಸಿತ್ತು. ಆನಂತರವೇ 'ಸರ್ಕಾರಿ ಪ್ರಾಯೋಜಿತ ದಾಳಿ/ಹ್ಯಾಕಿಂಗ್ ಎಚ್ಚರಿಕೆ ವ್ಯವಸ್ಥೆ'ಯನ್ನು ಆ್ಯಪಲ್ ಅಭಿವೃದ್ಧಿಪಡಿಸಿದ್ದು. ಈಗ ಭಾರತದ ವಿರೋಧ ಪಕ್ಷಗಳ ನಾಯಕರು, ಕೆಲವು ಪತ್ರಕರ್ತರಿಗೆ ಎಚ್ಚರಿಕೆ ಸಂದೇಶ ಬಂದಿರುವುದೂ ಇದೇ ವ್ಯವಸ್ಥೆಯಿಂದ.

ಸಾಮಾನ್ಯ ಹ್ಯಾಕರ್‌ಗಳಿಂದ ಈ ಮಟ್ಟದ ಕನ್ನ ಹಾಕಲು ಸಾಧ್ಯವಿಲ್ಲ. ಐಫೋನ್‌ಗಳಿಗಂತೂ ಅಂತಹ ಕನ್ನ ಸಾಧ್ಯವೇ ಇಲ್ಲ. ಆದರೆ, ಸರ್ಕಾರವೇ ಕೋಟ್ಯಂತರ ರೂಗಳನ್ನು ನೀಡಿ, ಕನ್ನತಂತ್ರಾಂಶವನ್ನು ಅಭಿವೃದ್ಧಿಪಡಿಸಿದರೆ ಅವು ಅತ್ಯಂತ ಪ್ರಬಲವಾಗಿರುತ್ತವೆ ಮತ್ತು ಅಭೇದ್ಯವಾಗಿರುತ್ತವೆ ಎಂದು 2021ರಲ್ಲಿ ಬಿಡುಗಡೆ ಮಾಡಿದ್ದ ತನಿಖಾ ವರದಿಯಲ್ಲಿ ಆ್ಯಪಲ್ ಹೇಳಿತ್ತು. ಈಗ ಭಾರತದ ವಿರೋಧ ಪಕ್ಷಗಳ ನಾಯಕರಿಗೆ ಕಳುಹಿಸಿರುವ ಎಚ್ಚರಿಕೆ ಸಂದೇಶದಲ್ಲೂ ಆ್ಯಪಲ್ ಇದನ್ನೇ ಹೇಳಿದೆ.

'ಸರ್ಕಾರಿ ಪ್ರಾಯೋಜಿತ ಕನ್ನ ಯತ್ನಗಳನ್ನು ಪತ್ತೆ ಮಾಡಲು ಕೆಲವು ಮಾನದಂಡಗಳನ್ನು ರೂಪಿಸಿಕೊಂಡಿದ್ದೇವೆ. ಅವಕ್ಕೆ ಪೂರಕವಾದ ಕನ್ನ ಯತ್ನಗಳು ನಡೆದ ಕೂಡಲೇ, ಅದನ್ನು ಈ ವ್ಯವಸ್ಥೆ ಪತ್ತೆ ಮಾಡುತ್ತದೆ. ಅಂತಹ ಕನ್ನಕ್ಕೆ ಗುರಿಯಾದವರಿಗೆ ಸಂದೇಶ ಕಳುಹಿಸಲಾಗುತ್ತದೆ' ಎಂದು ಆ್ಯಪಲ್ ಹೇಳಿದೆ.

'ನೀವು ಯಾರು ಮತ್ತು ನೀವು ಏನು ಮಾಡುತ್ತಿದ್ದೀರಿ ಎಂಬುದೇ ನೀವು ಸರ್ಕಾರಿ ಪ್ರಾಯೋಜಿತ ಕನ್ನದ ಗುರಿಯಾಗಲು ಏಕೈಕ ಕಾರಣ. ಕೆಲವೇ ಮಂದಿಯನ್ನು ಗುರಿಯಾಗಿಸಿಕೊಂಡು ಇಂತಹ ಕನ್ನವನ್ನು ಯೋಜಿಸಲಾಗುತ್ತದೆ. ಮತ್ತು ಸರ್ಕಾರವೇ ಅದರ ವೆಚ್ಚವನ್ನು ಭರಿಸುವುದರಿಂದ ಇಂತಹ ಕನ್ನತಂತ್ರಾಂಶಗಳನ್ನು ಅತ್ಯಂತ ಸಂಕೀರ್ಣವಾಗಿ ಮತ್ತು ಪ್ರಬಲವಾಗಿ ರೂಪಿಸಲು ಸಾಧ್ಯವಾಗುತ್ತದೆ. ಈ ಕಾರಣದಿಂದಲೇ, ಅದನ್ನು ಪತ್ತೆ ಮಾಡುವುದು ಮತ್ತು ತಡೆಯುವುದೂ ಕಡುಕಷ್ಟಸಾಧ್ಯ' ಎಂದು ಆ್ಯಪಲ್ ತನ್ನ ಎಚ್ಚರಿಕೆ ಸಂದೇಶದಲ್ಲಿ ವಿವರಿಸಿದೆ.

'ಸರ್ಕಾರಿ ಪ್ರಾಯೋಜಿತ ಕನ್ನ ಯತ್ನಗಳನ್ನು ಪತ್ತೆ ಮಾಡಲು ದಾಳಿ ಯತ್ನ ಸೂಚನೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಲಾಗಿದೆ. ಮಿತಿಯೇ ಇಲ್ಲದಷ್ಟು ಪ್ರಾಯೋಜಕತ್ವ ಇರುವ ಕಾರಣ ಸರ್ಕಾರಿ ಪ್ರಾಯೋಜಿತ ಕನ್ನ/ದಾಳಿ ತಂತ್ರಾಂಶಗಳನ್ನು ಸದಾ ಅಭಿವೃದ್ಧಿಪಡಿಸಲಾಗುತ್ತಿರುತ್ತದೆ. ಹೀಗಾಗಿ ಹೊಸದಾಗಿ ಅಭಿವೃದ್ಧಿಪಡಿಸಲಾದ ಅಂತಹ ಕನ್ನತಂತ್ರಾಶಗಳ ಎದುರು 'ದಾಳಿ ಯತ್ನ ಸೂಚನೆಗಳು' ಅಪರಿಪೂರ್ಣ ಎನಿಸಿಬಿಡುತ್ತವೆ. ಹೀಗಾಗಿ ಕೆಲವೊಮ್ಮೆ ಹುಸಿ ಎಚ್ಚರಿಕೆಗಳೂ ಬರಬಹುದು ಅಥವಾ ದಾಳಿ ಯತ್ನವನ್ನು ಪತ್ತೆ ಮಾಡಲು ಸಾಧ್ಯವಾಗದೇ ಹೋಗಬಹುದು' ಎಂದು ಆ್ಯಪಲ್ ತನ್ನ ಎಚ್ಚರಿಕೆ ಸಂದೇಶದಲ್ಲಿ ಹೇಳಿದೆ.

ಸರ್ಕಾರಗಳಷ್ಟೇ ಬಳಸಬಹುದಿತ್ತು

ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಅಭಿವೃದ್ಧಿಪಡಿಸಿ, ಮಾರಾಟ ಮಾಡುತ್ತಿದ್ದ ಪೆಗಾಸಸ್ ಕನ್ನತಂತ್ರಾಂಶವನ್ನು ಬಳಸಲು ಸಾಧ್ಯವಿದ್ದದ್ದು ಸರ್ಕಾರಿ ಸಂಸ್ಥೆಗಳಿಗೆ ಮಾತ್ರ. 'ನಾವು ಸರ್ಕಾರಗಳಿಗಷ್ಟೇ ಪೆಗಾಸಸ್ ಅನ್ನು ಮಾರಾಟ ಮಾಡುತ್ತೇವೆ' ಎಂದು ಎನ್‌ಎಸ್‌ಒ ಗ್ರೂಪ್ 2019ರಲ್ಲಿ ಹೇಳಿತ್ತು. ಭಾರತದ 160ಕ್ಕೂ ಹೆಚ್ಚು ಜನರ ಫೋನ್‌ಗಳಿಗೆ ಪೆಗಾಸಸ್ ಬಳಸಿಕೊಂಡು ಕನ್ನ ಹಾಕಲು ಯತ್ನಿಸಲಾಗಿದೆ ಎಂಬ ವರದಿ 2019ರಲ್ಲಿ ಬಂದಿತ್ತು. ಈ ವರದಿಯ ಬೆನ್ನಲ್ಲೇ ಎನ್‌ಎಸ್‌ಒ ಗ್ರೂಪ್ ಮೇಲಿನ ವಿವರಣೆ ನೀಡಿತ್ತು.

ಆ ವರದಿಯ ಆಧಾರದಲ್ಲಿ ಹಲವು ಜನರು ಮತ್ತು ಹಲವು ವಿರೋಧ ಪಕ್ಷಗಳು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದವು. ಅರ್ಜಿಗಳ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಈ ಬಗ್ಗೆ ತನಿಖೆ ನಡೆಸಲು ತಾಂತ್ರಿಕ ಸಮಿತಿಯನ್ನೂ ರಚಿಸಿತ್ತು. ಸಮಿತಿಯು, 'ಪರಿಶೀಲನೆಗೆ ಒಳಪಡಿಸಿದ 29 ಫೋನ್‌ಗಳಲ್ಲಿ 5ರಲ್ಲಿ ಕನ್ನತಂತ್ರಾಶಗಳು ಪತ್ತೆಯಾಗಿವೆ. ತನಿಖೆಗೆ ಸರ್ಕಾರದ ಅಧಿಕಾರಿಗಳು ಸಹಕರಿಸಲಿಲ್ಲ' ಎಂದು ತನ್ನ ವರದಿಯಲ್ಲಿ ಹೇಳಿತ್ತು. ಈ ವಿಚಾರಣೆ ಅಲ್ಲಿಗೇ ನಿಂತಿದೆ. ಈ ಬಗ್ಗೆ ಅರ್ಜಿದಾರರು ಇದೇ ಆಗಸ್ಟ್‌ನಲ್ಲಿ ಪೂರಕ ಅರ್ಜಿಯೊಂದನ್ನು ಸಲ್ಲಿಸಿದ್ದರು. ವಿಚಾರಣೆಯನ್ನು ಮತ್ತೆ ಆರಂಭಿಸುವುದಾಗಿ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರಿದ್ದ ಪೀಠವು ಹೇಳಿತ್ತು.

ಭಾರತದ ರಾಜನ ವಿರುದ್ಧ ಜನರು ಸಿಡಿದೆದ್ದಿದ್ದರು. ಆದರೆ, ಜನರ ಆಕ್ರೋಶವು ರಾಜನಲ್ಲಿಯವರೆಗೆ ತಲುಪುತ್ತಿರಲಿಲ್ಲ. ಯಾಕೆಂದರೆ ರಾಜನು ಕೋಟೆಯೊಳಗೆ ಇದ್ದನು. ನಂತರ, ರಾಜನ ಆತ್ಮವು ಆತನ ಬಳಿ ಇಲ್ಲ. ಚಿಕ್ಕ ಪಂಜರದಲ್ಲಿ ಸೆರೆ ಇರುವ ಗಿಣಿಯ ಬಳಿ ಇದೆ ಎಂದು ಆಕ್ರೋಶಗೊಂಡಿದ್ದ ಜನರಿಗೆ ಋಷಿಯೊಬ್ಬರು ತಿಳಿಸಿದರು. ನರೇಂದ್ರ ಮೋದಿ ಅವರ ಆತ್ಮ ಅದಾನಿ ಅವರ ಬಳಿ ಇದೆ. ಇಲ್ಲಿ ಗಿಣಿಯ ಕುತ್ತಿಗೆ ಹಿಚುಕಿದರೆ ಕ್ರೂರ ರಾಜ ಒದ್ದಾಡುತ್ತಾನೆ. ಅದಾನಿಯನ್ನು ಮುಟ್ಟಿದೊಡನೆ, ಗುಪ್ತಚರ ಸಂಸ್ಥೆಗಳು ಮತ್ತು ಕನ್ನ ಹಾಕುವ ತಂತ್ರಾಂಶಗಳನ್ನು ಛೂಬಿಡಲಾಗುತ್ತದೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ, ಸಂಸದ

ಮುಚ್ಚಿಡಲು ನನ್ನ ಬಳಿ ಏನೂ ಇಲ್ಲ. ನನ್ನ ಬಗ್ಗೆ ಎಲ್ಲರಿಗೂ ತಿಳಿದಿದೆ. ನನ್ನ ಇ-ಮೇಲ್‌ಗೆ ಕನ್ನ ಹಾಕಿ ಅವರಿಗೆ ಏನು ದೊರೆಯಲಿದೆ. ಬಹುಶಃ ಭಾರತೀಯ ಇತಿಹಾಸವನ್ನು ಅರ್ಥೈಸಿಕೊಳ್ಳಬಹುದು ಅಥವಾ ಉತ್ತಮ ಇಂಗ್ಲಿಷ್ ಅನ್ನು ಕಲಿಯಬಹುದು

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

ಸಂಸದರು, ರಾಜಕೀಯ ನಾಯಕರನ್ನೂ ಸೇರಿ ಹಲವರಿಗೆ ಆ್ಯಪಲ್‌ನಿಂದ 'ಎಚ್ಚರಿಕೆ ಸಂದೇಶ' ಬಂದಿದೆ. ಒಂದು ವೇಳೆ ಅವರ ಮೊಬೈಲ್‌ಗಳು ಅಷ್ಟೊಂದು ಸುರಕ್ಷಿತವಾಗಿದ್ದರೆ, ಯಾಕಾಗಿ 'ಎಚ್ಚರಿಕೆ ಸಂದೇಶ'ಗಳು ಬರುತ್ತಿವೆ

ರಾಜೀವ್ ಚಂದ್ರಶೇಖರ್, ಕೇಂದ್ರ ಐಟಿ ಖಾತೆ ರಾಜ್ಯ ಸಚಿವ

ಆಧಾರ: ಆ್ಯಪಲ್ ನೀಡಿದ ಎಚ್ಚರಿಕೆ ಸಂದೇಶ, 2021ರಲ್ಲಿ ಆ್ಯಪಲ್ ಬಿಡುಗಡೆ ಮಾಡಿದ್ದ ತನಿಖಾ ವರದಿ, ಸುಪ್ರೀಂ ಕೋರ್ಟ್ ಆದೇಶಗಳು, ಪಿಟಿಐ, ವಿರೋಧ ಪಕ್ಷಗಳ ನಾಯಕರ ಎಕ್ಸ್‌ಪೋಸ್ಟ್‌ಗಳು

KD ಪ್ರಪಂಚಕ್ಕೆ ರಮೇಶ್ ಅರವಿಂದ್!

ಆ್ಯಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ 'KD' ಭರ್ಜರಿಯಾಗಿಯೇ ತೆರೆ ಮೇಲೆ ಬರಲು ಸಜ್ಜಾಗುತ್ತಿದೆ. ಚಿತ್ರದಲ್ಲಿ ಬಹುದೊಡ್ಡ ತಾರಾಗಣವೇ ಇದ್ದು, ಇದೀಗ 'KD' ಲೋಕಕ್ಕೆ ನಟ ರಮೇಶ್ ಅರವಿಂದ್ ವಿಭಿನ್ನ ಲುಕ್‌ನಲ್ಲಿ ಪ್ರವೇಶ ನೀಡಿದ್ದಾರೆ.

ಚಿತ್ರದಲ್ಲಿ ಅವರು 'ಧರ್ಮ'ನಾಗಿ ಕಾಣಿಸಿಕೊಳ್ಳಲಿದ್ದು, ಅವರ ಪಾತ್ರದ ಫಸ್ಟ್‌ಲುಕ್ ರಾಜ್ಯೋತ್ಸವದಂದು ಬಿಡುಗಡೆಯಾಗಿದೆ. ರಗಡ್ ಲುಕ್‌ನಲ್ಲಿ ಅವರಿಲ್ಲಿ ಕಾಣಿಸಿಕೊಂಡಿದ್ದಾರೆ. 'ಕೆ.ವಿ.ಎನ್. ಪ್ರೊಡಕ್ಷನ್ಸ್ ಮತ್ತು ಪ್ರೇಮ್ ಅವರ 'K.D' ಚಿತ್ರದಲ್ಲಿ 'ಧರ್ಮ' ಪಾತ್ರದಲ್ಲಿ, ಅನೇಕ ಅದ್ಭುತ ಪ್ರತಿಭೆಗಳೊಂದಿಗೆ ಬೆಳ್ಳಿತೆರೆಯನ್ನು ಹಂಚಿಕೊಳ್ಳಲು ಉತ್ಸುಕನಾಗಿದ್ದೇನೆ' ಎಂದಿದ್ದಾರೆ ರಮೇಶ್. ಚಿತ್ರದಲ್ಲಿ ಬಾಲಿವುಡ್ ನಟ ಸಂಜಯ್ ದತ್, ನಟಿ ಶಿಲ್ಪಾ ಶೆಟ್ಟಿ, ರವಿಚಂದ್ರನ್ ಬಣ್ಣಹಚ್ಚಿದ್ದು, ಮಲಯಾಳಂನ ಖ್ಯಾತ ನಟರಿಬ್ಬರು ಚಿತ್ರದಲ್ಲಿ ನಟಿಸುವ ಸಾಧ್ಯತೆ ಇದೆ.

'ಚಿತ್ರದ ಶೇ 45ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಧ್ರುವ ಸರ್ಜಾ ಅವರು ಮತ್ತೆ 'ಮಾರ್ಟಿನ್' ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದು, ಅದರ ಶೂಟಿಂಗ್ ಈ ಮಾಸಾಂತ್ಯಕ್ಕೆ ಪೂರ್ಣಗೊಳ್ಳಲಿದೆ. ತೂಕ ಇಳಿಸಿಕೊಂಡು ಜನವರಿಯಲ್ಲಿ ಧ್ರುವ ಅವರು 'KD' ಸೆಟ್‌ಗೆ ಮರಳಿದ್ದಾರೆ. ಅಲ್ಲಿಯವರೆಗೂ ಬೇರೆ ಪಾತ್ರಗಳ ಶೂಟಿಂಗ್ ನಡೆಯಲಿದೆ' ಎಂದಿದೆ ಚಿತ್ರತಂಡ. 'ಏಕ್ ಲವ್ ಯಾ' ಸಿನಿಮಾ ಬಳಿಕ ನಿರ್ದೇಶಕ 'ಜೋಗಿ' ಪ್ರೇಮ್ ಕೈಗೆತ್ತಿಕೊಂಡಿರುವ ಹೊಸ ಪ್ರಾಜೆಕ್ಟ್ ಇದಾಗಿದ್ದು, ಇದು ಧ್ರುವ ಅವರ ಆರನೇ ಸಿನಿಮಾ.

ಕೋಳಿ ಎಸ್ರು ಚಿತ್ರದ ದೃಶ್ಯ

ನಾಳೆಯಿಂದ ರೋಟರಿ ಚಲನಚಿತ್ರೋತ್ಸವ

ರೋಟರಿ ಕ್ಲಬ್ ಆಫ್ ಬೆಂಗಳೂರು ಆಯೋಜಿಸುತ್ತಿರುವ 'ಅಂತರರಾಷ್ಟ್ರೀಯ ಚಲನಚಿತ್ರೋತ್ಸವ' ನ.3ರಿಂದ ಬೆಂಗಳೂರಿನ ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ(ಬಿಐಸಿ)ದಲ್ಲಿ ನಡೆಯಲಿದೆ.

ನಟಿ ತಾರಾ ಅನುರಾಧ ಅವರು ಚಲನಚಿತ್ರೋತ್ಸವವನ್ನು ಉದ್ಘಾಟಿಸಲಿದ್ದು, ನಿರ್ದೇಶಕ ಗಿರೀಶ ಕಾಸರವಳ್ಳಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಕಲಾ ನಿರ್ದೇಶಕರಾಗಿದ್ದ ವಿದ್ಯಾಶಂಕರ್, ನಿರ್ದೇಶಕಿ ಚಂಪಾ ಶೆಟ್ಟಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ. ಚಿತ್ರೋದ್ಯಮದಲ್ಲಿ ಮಹಿಳೆಯರಿಗೆ ಇರುವ ಅವಕಾಶಗಳ ಕುರಿತು ಈ ಚಿತ್ರೋತ್ಸವ ಕೇಂದ್ರೀಕೃತವಾಗಿದೆ ಎಂದಿದ್ದಾರೆ ರೋಟರಿ ಕ್ಲಬ್ ಆಫ್ ಬೆಂಗಳೂರು ಅಧ್ಯಕ್ಷರಾದ ನಳಿನಿ ನಂಜುಂಡಯ್ಯ. ನ.3 ಮತ್ತು 4ರಂದು ನಡೆಯಲಿರುವ ಈ ಚಿತ್ರೋತ್ಸವದಲ್ಲಿ ಚಂಪಾ ಪಿ. ಶೆಟ್ಟಿ ಅವರ 'ಕೋಳಿ ಎಸ್ರು', ನಿರ್ದೇಶಕ ಬಿ.ಎಸ್.ಲಿಂಗದೇವರು ನಿರ್ದೇಶನದ 'ನಾನು ಅವನಲ್ಲ... ಅವಳು' ಕನ್ನಡ ಸಿನಿಮಾಗಳು ಸೇರಿದಂತೆ ಒಟ್ಟು ಎಂಟು ಸಿನಿಮಾಗಳ ಪ್ರದರ್ಶನವಿರಲಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ನಿಮ್ಮ ಫೋನ್‌ನೊಳಗೆ ನುಸುಳಲು ಸರ್ಕಾರಿ ಪ್ರಾಯೋಜಿತ ದಾಳಿಕೋರರು ಯತ್ನಿಸುತ್ತಿರಬಹುದು' ಎಂದು ಆ್ಯಪಲ್ ಎಚ್ಚರಿಕೆ ನೀಡಿದ ಬೆನ್ನಲ್ಲೇ ಸಾಮಾಜಿಕ ಜಾಲತಾಣಗಳಲ್ಲಿ ಆ ಬಗ್ಗೆ ಚರ್ಚೆಯಾಗುತ್ತಿದೆ. 'ನಾವು ನೀಡುವ ಎಚ್ಚರಿಕೆ ಸೂಚನೆ ಹುಸಿಯಾಗಿರಬಹುದು' ಮತ್ತು 'ನಮ್ಮ ದಾಳಿ ಯತ್ನ ಸಿಗ್ನಲ್‌ಗಳು ಪರಿಪೂರ್ಣವಲ್ಲ' ಎಂದು ಆ್ಯಪಲ್ ಹೇಳಿದೆ. ಹೀಗಾಗಿ ವಿರೋಧ ಪಕ್ಷಗಳ ನಾಯಕರ ಆರೋಪದಲ್ಲಿ ಹುರುಳಿಲ್ಲ ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ ಇದು ಆ್ಯಪಲ್ ನೀಡಿದ ಸಂದೇಶದಲ್ಲಿದ್ದ ವಾಕ್ಯಗಳ ಅರ್ಧವಾಕ್ಯಗಳಷ್ಟೆ.

✓ ಆ್ಯಪಲ್ ನೀಡಿದ ಎಚ್ಚರಿಕೆ ಸಂದೇಶದಲ್ಲಿ, 'ಸರ್ಕಾರಿ ಪ್ರಾಯೋಜಿತ ಕನ್ನತಂತ್ರಾಂಶಗಳನ್ನು ಸದಾ ಅಭಿವೃದ್ಧಿಪಡಿಸಲಾಗುತ್ತಿರುತ್ತದೆ. ಅವುಗಳ ಎದುರು, ನಮ್ಮ ದಾಳಿ ಯತ್ನ ಸಿಗ್ನಲ್‌ಗಳು ಪರಿಪೂರ್ಣವಲ್ಲ. ಹೀಗಾಗಿ ಈ ಎಚ್ಚರಿಕೆ ಸೂಚನೆಗಳು ಹುಸಿಯಾಗಿರಬಹುದು ಅಥವಾ ಅವು ಸರ್ಕಾರಿ ಪ್ರಾಯೋಜಿತ ದಾಳಿಗಳನ್ನು ಗುರುತಿಸುವಲ್ಲಿ ವಿಫಲವಾಗಿರಬಹುದು. ಇದು ಹುಸಿಯಾಗಿರುವ ಸಾಧ್ಯತೆ ಇದೆಯಾದರೂ, ನೀವು ಇದನ್ನು ಗಂಭೀರವಾಗಿಯೇ ಪರಿಗಣಿಸಬೇಕು' ಎಂದು ಹೇಳಿತ್ತು. ಜತೆಗೆ ಆ್ಯಪಲ್ ಕೆಲವರಿಗೆ ಕಳುಹಿಸಿದ ಸಂದೇಶದಲ್ಲಿ, 'ಈ ಸಂದೇಶ ನಿಮಗೆ ಪದೇ ಪದೇ ಬರುತ್ತಿದೆ ಎಂದಾದರೆ, ನಿಮ್ಮ ಸಾಧನದ ಮೇಲೆ ದಾಳಿ ನಡೆಸಲು ಪದೇ-ಪದೇ ಯತ್ನಿಸಲಾಗುತ್ತಿದೆ ಎಂದೇ ಅರ್ಥ' ಎಂದೂ ಹೇಳಿತ್ತು. ಆದರೆ, ಈ ವಾಕ್ಯಗಳನ್ನು ತುಂಡರಿಸಿ ಆ್ಯಪಲ್‌ನ ಎಚ್ಚರಿಕೆಯೇ ಹುಸಿ ಎಂದು ಅರ್ಥ ಬರುವ ರೀತಿಯಲ್ಲಿ ಹಂಚಿಕೊಳ್ಳಲಾಗುತ್ತಿದೆ. ಹೀಗಾಗಿ, ವಿರೋಧ ಪಕ್ಷಗಳ ನಾಯಕರ ಆರೋಪದಲ್ಲಿ ಹುರುಳಿಲ್ಲ ಎಂಬುದು ಸತ್ಯಕ್ಕೆ ದೂರವಾದ ಮಾತು. ಏಕೆಂದರೆ, ಕೇಂದ್ರ ಸರ್ಕಾರವೇ ಈ ಬಗ್ಗೆ ತನಿಖೆಗೆ ಆದೇಶಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ನವೆಂಬರ್ 2, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಪಂಚಮಿ ಗಂ.21-53 ನಕ್ಷತ್ರ: ಆರ್ದ್ರಾ ಗಂ.29-57 ಯೋಗ: ಶಿವ ಗಂ 13-13 ಕರಣ: ಕೌಲವ ಗಂ.09-31, ತುಲಾ ಮಾಸದ 16 ನೇ ದಿನ, ಮಳೆನಕ್ಷತ್ರ: ಸ್ವಾತಿ 3.
ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-28 ಸೂರ್ಯಾಸ್ತ : 06-00
ಮುಸ್ಲಿಂ ದಿನಾಂಕ : 17 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 7, 4

ಮೇಷ: ಗಂಭೀರ ಅಧ್ಯಯನ ಹಾಗೂ ಅನ್ವೇಷಣೆ ಮಾಡುವವರಿಗೆ ಶುಭವಾಗುವುದು. ದಿನದ ಮೊದಲಾರ್ಧ ನಿಮಗೆ ಸ್ವಲ್ಪ ಮಟ್ಟಿಗಿನ ಬೇಸರವನ್ನು ತರಬಹುದು. ಆದರೆ ದಿನದ ಕೊನೆಯನ್ನು ಸಂತೋಷದಲ್ಲಿ ಕಳೆಯುತ್ತೀರಿ.

ವೃಷಭ: ಹಣ ಮಾಡುವ ಪ್ರಯತ್ನಕ್ಕಿಂತ ಹೆಸರು ಮಾಡುವ ಬಗ್ಗೆ ಗಮನವಿರಲಿ. ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ಮುಂದೊಂದು ದಿನ ಅವರ ಸಹಾಯ ಪಡೆಯಬೇಕಾಗಬಹುದು. ಆರೋಗ್ಯದಲ್ಲಿ ಜಾಗ್ರತೆವಹಿಸಿ.

ಮಿಥುನ: ನಿಮ್ಮ ಮೌನದ ಉತ್ತರದಿಂದ ಭಿನ್ನಾಭಿಪ್ರಾಯದ ಸಮಸ್ಯೆಗೆ ಈ ದಿನ ಅಂತ್ಯವನ್ನು ನೋಡಬಹುದು. ನಿಮ್ಮ ಪ್ರಯತ್ನಕ್ಕೆ ಕುಟುಂಬದ ಸದಸ್ಯರ ಸಹಕಾರ ದೊರೆತು ಮನಸ್ಸಿಗೆ ಸಂತಸ ದೊರೆಯುತ್ತದೆ. ತಾಳ್ಮೆ ನಿಮಗೆ ಅತ್ಯವಶ್ಯ.

ಕರ್ಕಾಟಕ: ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಇನ್ನಷ್ಟು ಹೆಚ್ಚಿನ ಅನುಕೂಲಗಳಾಗುವ ಸಾಧ್ಯತೆ ಇದೆ. ಸ್ವಂತವಾಗಿ ಶುರು ಮಾಡಿದಂತಹಾ ವ್ಯವಹಾರದಲ್ಲಿ ಲಾಭಗಳಿಸುವ ವಿಚಾರದಲ್ಲಿ ಸ್ವಲ್ಪ ದಿನಗಳು ಕಾಯಬೇಕಾಗುವುದು.

ಸಿಂಹ: ನಿಮ್ಮ ಪ್ರತಿಭೆ ಮತ್ತು ಕೌಶಲ್ಯಗಳು ಬೆಳಕಿಗೆ ಬಂದು ಇತರರಿಗೆ ವಿಶೇಷ ವ್ಯಕ್ತಿ ಎನಿಸುವಿರಿ. ನಿಮ್ಮ ಈ ದಿನದ ಸಾಧನೆಗೆ ತಾಯಿಯ ಬೆಂಬಲ, ಪ್ರೋತ್ಸಾಹ ಸಿಗುವುದು. ಆರಕ್ಷಕರಿಗೆ ವರ್ಗದವರಿಗೆ ಕೆಲಸದ ಒತ್ತಡ ಇರುತ್ತದೆ.

ಕನ್ಯಾ: ರಾಜಕೀಯ ಜೀವನದಲ್ಲಿ ನಿಮ್ಮ ಪರಿಸ್ಥಿತಿ ಸುಧಾರಿಸಿಕೊಳ್ಳಲು ಅವಕಾಶಗಳು ದೊರೆಯಲಿದೆ. ನಿಮ್ಮ ಸ್ವಯಂ ಶಕ್ತಿಯು ನಿಮ್ಮ ಹಿತೈಷಿಗಳ ಕಣ್ಣನ್ನು ಕೆಂಪಾಗಿಸುತ್ತದೆ. ತಲೆ ನೋವಿನಂತ ಸಮಸ್ಯೆ ಎದುರಾಗಬಹುದು.

ತುಲಾ: ಚರ್ಮದ ವಸ್ತುಗಳ ಮಾರಾಟಗಾರರಿಗೆ ಲಾಭದಾಯಕವಾದ ದಿನವಾಗಿದೆ. ಮಗನಿಗಾಗಿ ವೈದ್ಯಕೀಯ ಖರ್ಚು ಸಂಭವಿಸಬಹುದು. ಗುರಿ ಸಾಧನೆಯತ್ತ ಲಕ್ಷ್ಯವಿರಿಸಲು ಮಕ್ಕಳಿಗೆ ತಿಳಿ ಹೇಳುವುದು ಒಳ್ಳೆಯದು.

ವೃಶ್ಚಿಕ: ಎಲೆಕ್ಟ್ರಿಕಲ್ ವಸ್ತುಗಳ ರಿಪೇರಿಯು ಹಣವ್ಯಯಕ್ಕೆ ಕಾರಣವಾಗುತ್ತದೆ. ಲೇವಾದೇವಿ ವ್ಯವಹಾರಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿ. ವಾಹನ ಬಿಡಿ ಭಾಗಗಳ ಮಾರಾಟಗಾರರಿಗೆ ಹೆಚ್ಚು ಲಾಭ ಸಿಗುವುದು.

ಧನು: ಮೋಜು ಮಸ್ತಿಯ ಆಲೋಚನೆಯಿಂದ ದೂರವಿರುವ ಪ್ರಯತ್ನ ಒಳ್ಳೆಯದು. ರಾಜಕೀಯ ವ್ಯಕ್ತಿಗಳಿಗೆ ಅನಿವಾರ್ಯವಾಗಿ ಓಡಾಟ ಹೆಚ್ಚಲಿದೆ. ವೃತ್ತಿ ನಿಮಿತ್ತದಲ್ಲಿ ಜೀವನ ಮುನ್ನಡೆಸುವ ಚಿಂತೆ, ಆತಂಕ ದೂರವಾಗುವುದು.

ಮಕರ: ಪ್ರತಿಷ್ಠಿತ ಮತ್ತು ಪ್ರಭಾವಿ ವ್ಯಕ್ತಿಗಳ ಪರಿಚಯವು ನಿಮ್ಮ ಭವಿಷ್ಯದ ಆಲೋಚನೆಗಳನ್ನು ಉತ್ತಮಗೊಳಿಸಲು ಕಾರಣವಾಗುವುದು. ನಿಮ್ಮ ಮಾನಸಿಕ ಕಲ್ಪನೆಗಳನ್ನು ಎಲ್ಲರೊಂದಿಗೆ ಹಂಚಿಕೊಳ್ಳುವಿರಿ.

ಕುಂಭ: ಸಾಂಸ್ಕೃತಿಕವಾಗಿ ಅದರಲ್ಲೂ ಮುಖ್ಯವಾಗಿ ನಟನಾ ವೃತ್ತಿಯವರಿಗೆ ಖ್ಯಾತಿ ಮತ್ತು ಸಂಪತ್ತು ಹರಿದು ಬರಲಿದೆ. ವ್ಯಾಪಾರದಲ್ಲಿ ಆಗುತ್ತಿರುವ ನಷ್ಟಗಳ ಬಗ್ಗೆ ಗಮನಿಸಿ. ನವ ದಂಪತಿಗಳಿಗೆ ಸಂತಾನ ಭಾಗ್ಯ ಉಂಟಾಗುವುದು.

ಮೀನ: ಆಪ್ತ ಸ್ನೇಹಿತರು ಮತ್ತು ನೆರೆಯವರೊಂದಿಗೆ ಬಾಂಧವ್ಯ ಉತ್ತಮಗೊಳ್ಳುವುದು. ಕುಲದೇವತೆಯ ಪ್ರಾರ್ಥನೆಯಿಂದ ಆರೋಗ್ಯ ಉತ್ತಮವಾಗುವುದು. ಮನೆಯಲ್ಲಿ ಧಾರ್ಮಿಕ ಸಮಾರಂಭಗಳ ಸಿದ್ಧತೆ ನೆಡೆಯಲಿದೆ.

ನುಡಿ ಬೆಳಗು

ಸಹಾಯಕ್ಕೆ ಜತೆಯಾಗಲಿ ಘನತೆ

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ರಜತ ಎಂಟು ವರ್ಷದ ಬಾಲಕ. ಅವನ ತಾಯಿ ಆಗಾಗ್ಗೆ ಪುಟ್ಟ ಬಟ್ಟಲೊಂದನ್ನು ಕೊಟ್ಟು ಪಕ್ಕದ ಮನೆಯಿಂದ ಉಪ್ಪನ್ನೋ ಸಕ್ಕರೆಯನ್ನೋ ತರಲು ಹೇಳುತ್ತಿದ್ದರು. ಹೀಗೆಯೇ ಒಂದು ದಿನ ಸ್ವಲ್ಪ ಸಕ್ಕರೆಯನ್ನು ತೆಗೆದುಕೊಂಡು ಬಂದಾಗ ರಜತ ಕೇಳಿದ. 'ಅಮ್ಮಾ, ನಮ್ಮ ಮನೆಯಲ್ಲಿ ಉಪ್ಪು, ಸಕ್ಕರೆ ಎಲ್ಲ ಇದ್ದರೂ ನೀನೇಕೆ ಪಕ್ಕದ ಮನೆಯವರ ಹತ್ತಿರ ಕೇಳಿ ತರಲು ಹೇಳುತ್ತೀಯಾ?' ಆಗ ತಾಯಿ ಮುಗುಳ್ನಕ್ಕು ಹೇಳುತ್ತಾರೆ, 'ನೋಡು ಪಕ್ಕದ ಮನೆಯವರ ಹಣಕಾಸು ಪರಿಸ್ಥಿತಿ ಅಷ್ಟು ಸರಿಯಿಲ್ಲ, ಹಾಗಾಗಿ ಅವರು ಆಗಾಗ್ಗೆ ನಮ್ಮ ಹತ್ತಿರ ಏನಾದರೂ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುತ್ತಿರುತ್ತಾರೆ, ಕೆಲವೊಮ್ಮೆ ಅವರಿಗೆ ಅವಶ್ಯಕತೆ ಇದ್ದರೂ ಸಂಕೋಚದಿಂದ ಕೇಳದೇ ಇರಬಹುದು. ಹಾಗಾಗಿ ಅವರಿಗೆ ತಾವೂ ಕೊಡುತ್ತಿದ್ದೇವೆ. ಇವರೂ ತಮ್ಮ ಹತ್ತಿರ ತೆಗೆದುಕೊಳ್ಳುತ್ತಿದ್ದಾರೆ ಎಂಬ ಭಾವನೆ ಬಂದರೆ ನಮ್ಮ ಹತ್ತಿರ ತೆಗೆದುಕೊಳ್ಳಲು ಸಂಕೋಚ ಎನಿಸುವುದಿಲ್ಲ. ಆ ಕಾರಣಕ್ಕಾಗಿ ನಾನು ವಾರಕ್ಕೊಮ್ಮೆ ಕಡಿಮೆ ಬೆಲೆಯ ಏನಾದರೂ ವಸ್ತುವನ್ನು ತೆಗೆದುಕೊಳ್ಳುವುದು'

ಎಂತಹ ಉದಾತ್ತ ಯೋಚನೆ! ಕೊಡುವುದು ದೊಡ್ಡಸ್ತಿಕೆಯಾಗಿರುವ, ಪಡೆಯುವವರು ಮೈಹಿಡಿಯಾಗಿಸಿಕೊಳ್ಳುವ ಪರಿಸ್ಥಿತಿ ಇರುವಾಗ ಬೇರೆಯವರ ಘನತೆಯನ್ನು ಕಾಪಾಡುವ ಈ ಹೆಜ್ಜೆ ಅನುಕರಣೀಯವಾದದ್ದು. ಪರಿಚಿತ ಕಾಲೇಜಿನ ಉಪನ್ಯಾಸಕಿಯೊಬ್ಬರು ಬಡ ಹುಡುಗನೊಬ್ಬನ ಶುಲ್ಕ ಕಟ್ಟಿದ್ದರು. ಅವನೋ ಕೊಂಚ ತುಂಟ. ಅವನು ಕಡಿಮೆ ಅಂಕ ತೆಗೆದಾಗ, ತಪ್ಪು ಮಾಡಿದಾಗ ಆ ಮೇಡಂ ಸ್ಟಾಫ್ ರೂಂ, ತರಗತಿ ಎನ್ನುವ ಭೇದವಿಲ್ಲದೇ 'ಸುಮ್ಮನೆ ನಿನಗೆ ಫೀಸ್ ಕಟ್ಟಿ ದಂಡ ಮಾಡಿದೆ, ನಿಮ್ಮಂಥವರಿಗೆ ಎಷ್ಟು ಮಾಡಿದರೂ ಅಷ್ಟೇ' ಎಂದು ಬೈದುಬಿಡುತ್ತಿದ್ದರು. ಮೇಡಂ ಒಳ್ಳೆಯವರೇ, ಆದರೆ ಎಲ್ಲರೆದುರೂ ಹೀಗೆ ಹೇಳಿದಾಗ ಆ ಹುಡುಗ ಅವಮಾನದಿಂದ ಕುಗ್ಗಿ ಹೋಗುತ್ತಿದ್ದ. ಕೊನೆಗೊಮ್ಮೆ ಕಾಲೇಜಿಗೆ ಬರುವುದನ್ನೇ ಬಿಟ್ಟುಬಿಟ್ಟ! ಹೀಗಾಗಿ ಯಾರಿಗಾದರೂ ಸಹಾಯ ಮಾಡುವುದು ಎಷ್ಟು ಮುಖ್ಯವೋ ಅವರು ಮುಜುಗರಕ್ಕೀಡಾಗದಂತೆ ನೋಡಿಕೊಳ್ಳುವುದೂ ಮುಖ್ಯ. ಗೌರವ ಪಡೆದಾಗ ನಮ್ಮ ಆತ್ಮವಿಶ್ವಾಸ ಹೆಚ್ಚುತ್ತದೆ. ನಾನೂ ಮುಖ್ಯ ಎಂಬ ಭಾವನೆ ಸಂತಸ ನೀಡುತ್ತದೆ. ಅದೇ ಅವಮಾನಕ್ಕೊಳಗಾದಾಗ ಹತಾಶೆ ಆವರಿಸುತ್ತದೆ. ಬಡವರಾಗಲೀ ಶ್ರೀಮಂತರಾಗಲೀ ಪ್ರತಿಯೊಬ್ಬರಿಗೂ ಆತ್ಮಗೌರವವೆನ್ನುವುದು ಅಮೂಲ್ಯ. ಮನೆಯಲ್ಲಿ ಗಂಜಿ ಉಂಡರೂ ಸೈ, ಬೇರೆಯವರ ಮನೆಯ ಹಂಗಿನ ಮೃಷ್ಟಾನ್ನ ಬೇಡ ಎಂದು ಜನರು ತೀರ್ಮಾನಿಸುವುದಕ್ಕೂ ಕಾರಣ ಇದೇ. ಆದ್ದರಿಂದ ಪರಿಸ್ಥಿತಿ ಯಾವುದೇ ಇರಲಿ, ಮತ್ತೊಬ್ಬ ಮನುಷ್ಯನ ಘನತೆಯನ್ನು ರಕ್ಷಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಅಂದಾಗ ಮಾತ್ರ ನಾವೂ ಮನುಷ್ಯರೆನಿಸಿಕೊಳ್ಳಲು ಅರ್ಹರಾಗುತ್ತೇವೆ.

ಪದಬಂಧ 5488 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಗಂಡ ಕೊನೆಗಿದ್ದು ನಡೆಸಿದ ಸಲ್ಲದ ವ್ಯವಹಾರ! (4)
5.ಮಾನವುಳ್ಳ ಹುಟ್ಟು ಗುಣ (4)
6.ಕಣ್ಣಿನ ಕೊನೆಯ ನೋಟ (4)
8.ಮಡಿ ಮಡಿ ಎನ್ನುತ್ತಿರುವ ಅಗಸ (4)
12.ಮನಸನು ಸೆಳೆದ ಕಾಡು ಹೂ (4)
14.ಯಾವುದೇ ಆಯುಧವಿಲ್ಲದಿರುವಿಕೆ (4)
15.ಅಂತರಾತ್ಮನ ಧ್ವನಿಯಿದು (4)
16.ನರಕಾಧಿಪತಿ ಹೆಗಲೇರಿದ ಅಧಿಕ ಒಜ್ಜೆ (4)

ಮೇಲಿಂದ ಕೆಳಕ್ಕೆ
1.ಶತ್ರುವೇ ಹುಟ್ಟಿಲ್ಲದವನು (5)
2.ಮಗ ಕೊನೆಗೆ ತಿರುಗಿದಾಗಲೇ ಸೇರುವಿಕೆ (4)
3.ಒತ್ತು ಕಳೆದುಕೊಂಡ ಕುಳ್ಳ ಕೊನೆಗಿದ್ದು ಕೊಟ್ಟ ತೊಂದರೆ (4)
4.ಆಟದಲ್ಲಿ ಮುಕ್ತಾಯಗೊಂಡ ಘರ್ಷಣೆ (3)
7.ನಲಿವಿನ ವಿರುದ್ಧದ ಬೇನೆ (2)
9.ಮನದ ಕೊನೆಯಲ್ಲಿ ಕುಳ್ಳನಿದ್ದಾನೆ! (3)
10.ಲಗ್ನವಾಗುತ್ತಿರುವ ಗಂಡು (5)
11.ನೀರಾವರಿ ಜಾಗದಲ್ಲಿನ ಮಾದಕ ಪಾನೀಯ (2)
12.ಅಪರಾಧಿಗಳನ್ನು ಕೊಲ್ಲಲು ನಿಯುಕ್ತನಾದವನು (4)
13.ಮನದೊಳಗಿರುವ ಕುಲ (4)
14.ನಿರ್ಣಯವನ್ನು ಹೀಗೆ ಹೇಳಿ (3)

5487ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಗಮಿಕ 3.ಶಾಖಾಚರ 5.ಸಿಕತ 7.ವರಮಾನ 9.ಸ್ವರ 10.ವರ್ಣ 11.ವನಚರ 13.ಸಂತತಿ 16.ಅನುಗ್ರಹ 17.ಅತಿಸಾರ

ಮೇಲಿಂದ ಕೆಳಕ್ಕೆ:
1.ಆಲಸಿ 2.ಮಿಡಿತ 3.ಶಾಕಾಹಾರ 4.ರಸ್ತೆ 6.ಕಲರವ 7.ವಕ್ತಾರ 8.ನವಜಾತ 12.ಚಕ್ರವ್ಯೂಹ 13.ಸಂಗಾತಿ 14.ತಿಮಿರ 15.ತೈಲ

ಸುಡೊಕು 5874

1		3	5		6		4	7
	9			4				
7		4	9			5		3
9	1							8
		7		9			1	
5	2							4
8		1					6	
	5		1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5873 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಮರಾಠ ಸಮುದಾಯಕ್ಕೆ ಮೀಸಲಾತಿ: ಸಮಯಾವಕಾಶ ಬೇಕು– ಶಿಂದೆ, ಹೋರಾಟ ನಿಲ್ಲದು–ಮನೋಜ್

ಪೂರ್ಣಪ್ರಮಾಣದ ಮೀಸಲಾತಿಗೆ ಪಟ್ಟು

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಮರಾಠ ಸಮುದಾಯಕ್ಕೆ ಪೂರ್ಣ ಪ್ರಮಾಣದ ಮೀಸಲಾತಿಯನ್ನು ಒದಗಿಸಬೇಕು ಎಂಬ ಪಟ್ಟು ಸಡಿಲಿಸುವುದಿಲ್ಲ ಎಂದಿರುವ ಹೋರಾಟಗಾರ ಮನೋಜ್ ಜರಾಂಗೆ-ಪಾಟೀಲ, ಈ ಬೇಡಿಕೆ ಈಡೇರುವವರೆಗೆ ಆಮರಣಾಂತ ಉಪವಾಸ ಸತ್ಯಾಗ್ರಹ ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದು ಬುಧವಾರ ಹೇಳಿದ್ದಾರೆ.

ಇದರ ಬೆನ್ನಲ್ಲೇ, ಮೀಸಲಾತಿ ವಿಚಾರವಾಗಿ ಮಹಾರಾಷ್ಟ್ರದಲ್ಲಿ ನಡೆಯುತ್ತಿರುವ ಹೋರಾಟ ಮತ್ತಷ್ಟು ತೀವ್ರತೆ ಪಡೆದುಕೊಂಡಿದೆ. ಪ್ರತಿಭಟನಕಾರರು ರಾಜ್ಯದ ವಿವಿಧೆಡೆ ರಸ್ತೆ ತಡೆ ನಡೆಸಿದ್ದರಿಂದ ಸಂಚಾರಕ್ಕೆ ವ್ಯತ್ಯಯವಾಗಿತ್ತು. ಕೆಲವೆಡೆ ಟೈರುಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವದಂತಿಗಳು ಹರಡದಂತೆ ತಡೆಯುವ ಸಲುವಾಗಿ ಛತ್ರಪತಿ ಸಂಭಾಜಿ ನಗರ ಜಿಲ್ಲೆಯಲ್ಲಿ ಬುಧವಾರದಿಂದ ಶುಕ್ರವಾರ ಸಂಜೆ 6ರ ವರೆಗೆ ಮೊಬೈಲ್ ಹಾಗೂ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ.

ಇನ್ನೊಂದೆಡೆ, ಮರಾಠ ಸಮುದಾಯಕ್ಕೆ ಮೀಸಲಾತಿ ಒದಗಿಸುವ ವಿಷಯ ಕುರಿತು ಚರ್ಚಿಸಲು ಮುಖ್ಯಮಂತ್ರಿ ಏಕನಾಥ ಶಿಂದೆ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಭೆ ನಡೆಯಿತು. ಉಪವಾಸ ಸತ್ಯಾಗ್ರಹವನ್ನು ಹಿಂಪಡೆಯುವಂತೆ ಸಭೆಯು ಜರಾಂಗೆ-ಪಾಟೀಲ ಅವರಿಗೆ ಮನವಿ ಮಾಡಿದೆ.

ಮರಾಠ ಸಮುದಾಯಕ್ಕೆ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿ ಮರಾಠ ಕ್ರಾಂತಿ ಮೋರ್ಚಾದ ಕಾರ್ಯಕರ್ತರು ಪುಣೆ–ಸೊಲ್ಲಾಪುರ ಹೆದ್ದಾರಿಯಲ್ಲಿ ಟೈರ್‌ಗಳನ್ನು ಸುಟ್ಟು ಬುಧವಾರ ಪ್ರತಿಭಟಿಸಿದರು –ಪಿಟಿಐ ಚಿತ್ರ

> ನೀರನ್ನೂ ಕುಡಿಯುವುದಿಲ್ಲ. ಯಾವಾಗ ಮೀಸಲಾತಿ ನೀಡಲಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ನೀವು ಪರಿಣಾಮ ಎದುರಿಸಬೇಕಾಗುತ್ತದೆ
> **ಮನೋಜ್ ಜರಾಂಗೆ-ಪಾಟೀಲ**
> ಮರಾಠ ಮೀಸಲಾತಿ ಹೋರಾಟಗಾರ

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಶಿಂದೆ, 'ಮರಾಠ ಸಮುದಾಯಕ್ಕೆ ಮೀಸಲಾತಿ ನೀಡುವ ವಿಷಯವು ಸಂಕೀರ್ಣವಾದ ಕಾನೂನು ಮತ್ತು ಸಾಂವಿಧಾನಿಕ ಅಂಶಗಳನ್ನು ಒಳಗೊಂಡಿದೆ. ಹೀಗಾಗಿ ಈ ಕುರಿತು ನಿರ್ಧಾರ ಕೈಗೊಳ್ಳಲು ಸಮಯಾವಕಾಶದ ಅಗತ್ಯವಿದೆ' ಎಂದರು.

'ಇತರ ವರ್ಗಗಳಿಗೆ ಇರುವ ಮೀಸಲಾತಿಗೆ ಧಕ್ಕೆ ಆಗದಂತೆ ಮರಾಠ ಸಮುದಾಯಕ್ಕೆ ಮೀಸಲಾತಿ ಒದಗಿಸಲು ಸರ್ಕಾರ ಬದ್ಧವಾಗಿದೆ. ಮರಾಠ ಸಮುದಾಯಕ್ಕೆ ಮೀಸಲಾತಿ ನೀಡಬೇಕು ಎಂಬುದಕ್ಕೆ ಸರ್ವಪಕ್ಷ ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರತಿಯೊಬ್ಬ ನಾಯಕ ಸಹಮತ ವ್ಯಕ್ತಪಡಿಸಿದ್ದಾರೆ. ಇತರ ಸಮುದಾಯಗಳಿಗೆ ಅನ್ಯಾಯವಾಗದ ರೀತಿಯಲ್ಲಿ ಕಾನೂನು ಚೌಕಟ್ಟಿನ ಒಳಗೇ ಮೀಸಲಾತಿ ಕಲ್ಪಿಸಬೇಕು ಎಂಬುದಾಗಿ ನಿರ್ಧರಿಸಲಾಯಿತು' ಎಂದು ಅವರು ಹೇಳಿದರು.

'ಯಾವುದೇ ನಿರ್ಧಾರ ಕೈಗೊಂಡರೂ, ಅದು ಕಾನೂನು ಪ್ರಕ್ರಿಯೆ ಪ್ರಕಾರವೇ ಆಗಬೇಕು. ಈ ನಿಟ್ಟಿನಲ್ಲಿ ಸರ್ಕಾರ ಮಾಡುತ್ತಿರುವ ಪ್ರಾಮಾಣಿಕ ಪ್ರಯತ್ನಗಳ ಮೇಲೆ ವಿಶ್ವಾಸ ಇಡಬೇಕು' ಎಂದ ಶಿಂದೆ, 'ಈ ವಿಚಾರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಪರಿಹಾರಾತ್ಮಕ ಮೇಲ್ಮನವಿಗೆ ಸಂಬಂಧಿಸಿ ಸರ್ಕಾರ ತನ್ನ ಪ್ರಯತ್ನಗಳನ್ನು ಮುಂದುವರಿಸಲಿದೆ' ಎಂದು ಹೇಳಿದರು.

ಜಲ್ನಾ ಜಿಲ್ಲೆಯ ಅಂಬಡ ತಾಲ್ಲೂಕಿನ ಅಂತರವಾಲಿ-ಸರಾಟಿ ಗ್ರಾಮದಲ್ಲಿ ಆಮರಣ ಉಪವಾಸ ಸತ್ಯಾಗ್ರಹ ಕೈಗೊಂಡಿರುವ ಮನೋಜ್ ಜರಾಂಗೆ-ಪಾಟೀಲ ಸುದ್ದಿಗಾರರೊಂದಿಗೆ ಮಾತನಾಡಿ, 'ಯಾವ ಕಾರಣಕ್ಕೆ ಸರ್ಕಾರ ಸಮಯಾವಕಾಶ ಕೇಳುತ್ತಿದೆ' ಎಂದು ಪ್ರಶ್ನಿಸಿದರು.

'ಮೀಸಲಾತಿ ಬೇಡಿಕೆಯನ್ನು ಮುಂದಿಟ್ಟುಕೊಂಡು ಉಪವಾಸ ಸತ್ಯಾಗ್ರಹ ಆರಂಭಿಸಿ ಎಂಟು ದಿನಗಳು ಕಳೆದಿವೆ. ಈ ಕುರಿತು ನಿರ್ಣಯ ಕೈಗೊಳ್ಳಲು ಸಮಯ ಬೇಕು ಎಂದು ಸರ್ಕಾರ ಈಗ ಹೇಳುತ್ತಿದೆ. ಯಾಕೆ ಮತ್ತು ಯಾವುದಕ್ಕಾಗಿ ಸಮಯ ಬೇಕು ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು' ಎಂದು ಹೇಳಿದರು.

'ಮರಾಠ ಸಮುದಾಯಕ್ಕೆ ಅರ್ಧಂಬರ್ಧ ಮೀಸಲಾತಿ ಬೇಕಿಲ್ಲ. ಕೊಡುವುದಾದರೆ ಪೂರ್ಣ ಪ್ರಮಾಣದ ಮೀಸಲಾತಿ ನೀಡಿ' ಎಂದೂ ಅವರು ಪುನರುಚ್ಚರಿಸಿದರು.

ಹೋರಾಟ: ಮುಖ್ಯಾಂಶಗಳು

- ಮರಾಠ ಸಮುದಾಯಕ್ಕೆ ಮೀಸಲಾತಿ ನೀಡುವಂತೆ ಒತ್ತಾಯಿಸಿ ನಡೆಯುತ್ತಿರುವ ಹೋರಾಟದ ಹಿನ್ನೆಲೆಯಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿ 141 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಡಿಜಿಪಿ ರಜನೀಶ್ ಸೇಠ್ ಹೇಳಿದ್ದಾರೆ.
- ಮರಾಠ ಕ್ರಾಂತಿ ಮೋರ್ಚಾ ಹಾಗೂ ಸಕಾಳ ಮರಾಠ ಮೋರ್ಚಾ ಸಂಘಟನೆಗಳ 400ಕ್ಕೂ ಹೆಚ್ಚು ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.
- ದುಷ್ಕರ್ಮಿಗಳು ₹ 12 ಕೋಟಿ ಮೌಲ್ಯದ ಸಾರ್ವಜನಿಕ ಸ್ವತ್ತುಗಳಿಗೆ ಹಾನಿ ಉಂಟು ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.
- ಠಾಣೆಯಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವವರನ್ನು ಭೇಟಿಯಾಗಲು ತೆರಳಿದ್ದ ಎನ್‌ಸಿಪಿ ನಾಯಕ ಜಿತೇಂದ್ರ ಅವ್ಹಾಡ್ ಅವರಿಗೆ ವೇದಿಕೆಯಿಂದ ಕೆಳಗಿಳಿಯುವಂತೆ ಪ್ರತಿಭಟನಕಾರರು ಹೇಳಿದ ಘಟನೆ ನಡೆದಿದೆ. ಪ್ರತಿಭಟನಕಾರರ ಆಕ್ರೋಶಕ್ಕೆ ಮಣಿದು, ಅವ್ಹಾದ ಅವರು ವೇದಿಕೆಯಿಂದ ನಿರ್ಗಮಿಸಿದ್ದಾರೆ
- ನಾಗ್ಪುರದಲ್ಲಿರುವ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ನಿವಾಸಕ್ಕೆ ಭದ್ರತೆಯನ್ನು ಹೆಚ್ಚಿಸಲಾಗಿದೆ
- ಮರಾಠ ಮೀಸಲಾತಿ ವಿಷಯ ಕುರಿತು ಚರ್ಚಿಸುವುದಕ್ಕಾಗಿ ಸಂಸತ್‌ನ ವಿಶೇಷ ಅಧಿವೇಶನ ಕರೆಯುವಂತೆ ಶಿವಸೇನಾ (ಯುಬಿಟಿ) ಸಂಸದ ವಿನಾಯಕ ರಾವುತ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದ್ದಾರೆ

ಸುದ್ದಿ 2 ನಿಮಿಷ

ಯುಪಿಎಸ್‌ಸಿಯಿಂದ 89 ಹೆಚ್ಚುವರಿ ಅಭ್ಯರ್ಥಿಗಳ ಶಿಫಾರಸು

ನವದೆಹಲಿ(ಪಿಟಿಐ): ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ವಿವಿಧ ನಾಗರಿಕ ಸೇವೆಗಳಿಗೆ ಇನ್ನೂ 89 ಅಭ್ಯರ್ಥಿಗಳ ಪಟ್ಟಿಯನ್ನು ಬುಧವಾರ ಶಿಫಾರಸು ಮಾಡಿದೆ.

ಯುಪಿಎಸ್‌ಸಿ 2022ರ ಪರೀಕ್ಷಾ ಫಲಿತಾಂಶದ ಆಧಾರದ ಮೇಲೆ ಈ ಅಭ್ಯರ್ಥಿಗಳನ್ನು ಶಿಫಾರಸು ಮಾಡಲಾಗಿದೆ. ಇವರೆಲ್ಲರೂ ಆಯೋಗವು ಕಾಯ್ದಿರಿಸಿದ ಪಟ್ಟಿಯಲ್ಲಿದ್ದರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಈ ವರ್ಷದ ಮೇ ತಿಂಗಳಲ್ಲಿ 2022ನೇ ಸಾಲಿನ ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿತ್ತು. ಆಗ ನಾಗರಿಕ ಸೇವೆಗಳಿಗೆ 933 ಅಭ್ಯರ್ಥಿಗಳ ಪಟ್ಟಿಯನ್ನು ಶಿಫಾರಸು ಮಾಡಲಾಗಿತ್ತು.

ಮೊದಲ ಶಿಫಾರಸು ಪಟ್ಟಿಯನ್ನು ಹೊರತುಪಡಿಸಿ, ಮೆರಿಟ್ ಆಧಾರದಲ್ಲಿ ಆಯೋಗವು ಮೀಸಲಾತಿವಾರು ಪ್ರತ್ಯೇಕ ಪಟ್ಟಿಯೊಂದನ್ನು ಹೊಂದಿರುತ್ತದೆ.

'ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಕೋರಿಕೆಯ ಮೇರೆಗೆ ಆಯೋಗವು ಹೆಚ್ಚುವರಿಯಾಗಿ 89 ಅಭ್ಯರ್ಥಿಗಳನ್ನು ವಿವಿಧ ಸೇವೆಗಳಿಗೆ ಶಿಫಾರಸು ಮಾಡಿದೆ. ಇದರಲ್ಲಿ 65 ಮಂದಿ ಸಾಮಾನ್ಯ ವರ್ಗದ ಅಭ್ಯರ್ಥಿಗಳಿದ್ದರೆ, ಆರ್ಥಿಕವಾಗಿ ಹಿಂದುಳಿದ (ಇಡಬ್ಲ್ಯುಎಸ್) 7, ಹಿಂದುಳಿದ ವರ್ಗಗಳ (ಒಬಿಸಿ) 15, ಪರಿಶಿಷ್ಟ ಜಾತಿ–ಪಂಗಡದ (ಎಸ್‌ಸಿ-ಎಸ್‌ಟಿ) ತಲಾ ಒಬ್ಬ ಅಭ್ಯರ್ಥಿಗಳಿದ್ದಾರೆ' ಎಂದು ಯುಪಿಎಸ್‌ಸಿ ತಿಳಿಸಿದೆ.

ಶಿಫಾರಸುಗೊಂಡಿರುವ 89 ಅಭ್ಯರ್ಥಿಗಳ ಪಟ್ಟಿಯು http//www.upsc.gov.in ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ತೈವಾನ್ ಮೇಲೆ ಚೀನಾ ಮಿಲಿಟರಿ ಸವಾರಿ ಅಬಾಧಿತ

ತೈಪೆ (ತೈವಾನ್) (ಎ.ಪಿ): ತನ್ನ ಸ್ವಯಂ ಆಡಳಿತಕ್ಕೆ ಒಳಪಟ್ಟ ದ್ವೀಪದ ಸಮೀಪಕ್ಕೆ 43 ಯುದ್ಧ ವಿಮಾನಗಳು ಹಾಗೂ ಏಳು ಹಡಗುಗಳನ್ನು ರವಾನಿಸುವ ಮೂಲಕ ತೈವಾನ್ ದೇಶದ ಮೇಲೆ ಮಿಲಿಟರಿ ಒತ್ತಡವನ್ನು ಚೀನಾ ಮುಂದುವರಿಸಿದೆ.

ತೈವಾನ್ ರಕ್ಷಣಾ ಸಚಿವಾಲಯವು ಬುಧವಾರ ಚೀನಾದ ಈ ನಡೆಯ ಬಗ್ಗೆ ಅಧಿಕೃತವಾಗಿ ಹೇಳಿಕೆ ನೀಡಿದೆ. 'ತೈವಾನ್ ಜಲಸಂಧಿಯ ಮಧ್ಯದ ರೇಖೆಯನ್ನು ಯುದ್ಧ ವಿಮಾನಗಳು ದಾಟಿವೆ. ಇದು ಕಿರುಕುಳ ಹಾಗೂ ಬೆದರಿಕೆಯ ಭಾಗವಾಗಿದೆ' ಎಂದು ಹೇಳಿದೆ. ಈ ಚಟುವಟಿಕೆಗಳ ಮೇಲೆ ತೈವಾನ್ ನಿಗಾವಹಿಸಿದೆ.

2022ರ ಆಗಸ್ಟ್‌ನಲ್ಲಿ ಅಮೆರಿಕದ ಸಂಸತ್ತಿನ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರು ತೈವಾನ್‌ಗೆ ನೀಡಿದ್ದ ಭೇಟಿಯಿಂದಾಗಿ ಚೀನಾ ಕೆರಳಿತ್ತು. ಅಲ್ಲದೇ, ಅಮೆರಿಕದ ಜತೆಗಿನ ತನ್ನ ರಕ್ಷಣಾ ಸಂವಹನವನ್ನೂ ಸ್ಥಗಿತಗೊಳಿಸಿತ್ತು. ತೈವಾನ್ ದ್ವೀಪದ ಸುತ್ತಲೂ ಸಮರಾಭ್ಯಾಸ ನಡೆಸಿ ಆಕ್ರೋಶ ಹೊರಹಾಕಿತ್ತು. ಆ ಮೂಲಕ ಮಿಲಿಟರಿ ಬಲ ಬಳಸಿಕೊಂಡು ತೈವಾನ್ ಅನ್ನು ವಶಪಡಿಸಿಕೊಳ್ಳಲು ತಾನು ಸಿದ್ಧ ಎಂಬ ಸಂದೇಶ ರವಾನಿಸಿತ್ತು.

ಭಾರತ–ಬಾಂಗ್ಲಾ ನಡುವೆ ರೈಲು

ಮೂರು ಜಂಟಿ ಯೋಜನೆಗಳಿಗೆ ಚಾಲನೆ ನೀಡಿದ ಪ್ರಧಾನಿ ಮೋದಿ, ಹಸೀನಾ

ಅಗರ್ತಲಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರು ತ್ರಿಪುರಾದ ನಿಶ್ಚಿಂತಪುರ ಮತ್ತು ನೆರೆಯ ದೇಶದ ಗಂಗಾಸಾಗರ್ ನಡುವಿನ ಪ್ರಮುಖ ರೈಲು ಸಂಪರ್ಕವೂ ಸೇರಿ ಮೂರು ಯೋಜನೆಗಳನ್ನು ಬುಧವಾರ ವರ್ಚುವಲ್ ಮೂಲಕ ಜಂಟಿಯಾಗಿ ಉದ್ಘಾಟಿಸಿದರು.

65-ಕಿ.ಮೀ. ಅಂತರದ ಖುಲ್ನಾ-ಮೊಂಗ್ಲಾ ಬಂದರು ರೈಲು ಮಾರ್ಗ ಮತ್ತು ಬಾಂಗ್ಲಾದೇಶದ ರಾಂಪಾಲ್‌ನಲ್ಲಿರುವ ಮೈತ್ರಿ ಸೂಪರ್ ಥರ್ಮಲ್ ಪವರ್ ಪ್ಲಾಂಟ್‌ನ 2ನೇ ಘಟಕ ಉದ್ಘಾಟನೆಯಾದ ಉಳಿದೆರಡು ಯೋಜನೆಗಳು.

ನಂತರ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, 'ಇದು ಐತಿಹಾಸಿಕ ಕ್ಷಣ. ಈಶಾನ್ಯ ರಾಜ್ಯ ಮತ್ತು ಬಾಂಗ್ಲಾದೇಶದ ನಡುವಿನ ಮೊದಲ ರೈಲು ಸಂಪರ್ಕವೂ ಆಗಿದೆ' ಎಂದರು.

'ಉಭಯ ದೇಶಗಳ ಸಹಕಾರದ ಯಶಸ್ಸನ್ನು ಸಂಭ್ರಮಿಸಲು ನಾವು ಮತ್ತೊಮ್ಮೆ ಸೇರಿರುವುದು ಸಂತಸದ ಸಂಗತಿ. ಕಳೆದ ಒಂಬತ್ತು ವರ್ಷಗಳಲ್ಲಿ ನಾವು ಒಟ್ಟಿಗೆ ಕೈಗೊಂಡ ಕೆಲಸಗಳು ದಶಕಗಳಲ್ಲಿ ನಡೆದಿರಲಿಲ್ಲ' ಎಂದು ಮೋದಿ ಅವರು ಹಸೀನಾ ಅವರೊಂದಿಗೆ ನಡೆಸಿದ ವರ್ಚುವಲ್ ಸಂವಾದದಲ್ಲಿ ಅಭಿಪ್ರಾಯಪಟ್ಟರು.

'ಈ ಮೂರು ಯೋಜನೆಗಳೂ ಉಭಯ ದೇಶಗಳ ನಡುವೆ ಮೂಲಸೌಕರ್ಯ ಅಭಿವೃದ್ಧಿಯ ಸಹಯೋಗಕ್ಕೆ ಮತ್ತಷ್ಟು ಬಲ ತುಂಬಲಿದೆ. ನಾವು ಸ್ನೇಹ ಮತ್ತು ಸಹಯೋಗದ ಗಟ್ಟಿಯಾದ ಸಂಬಂಧ ಹೊಂದಿರುವುದನ್ನು ಜಂಟಿಯಾಗಿ ಚಾಲನೆ ನೀಡಿರುವುದು ತೋರಿಸುತ್ತದೆ. ಜಿ20 ಶೃಂಗಸಭೆಯ ಭೇಟಿ ವೇಳೆ ಮೋದಿಯವರು ನೀಡಿದ ಆತಿಥ್ಯಕ್ಕೆ ಧನ್ಯವಾದ ಸಲ್ಲಿಸುತ್ತೇನೆ' ಎಂದು ಶೇಖ್ ಹಸೀನಾ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಮತ್ತು ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರು ಬುಧವಾರ ವರ್ಚುವಲ್ ಮೂಲಕ ತ್ರಿಪುರಾದ ನಿಶ್ಚಿಂತಪುರ ಮತ್ತು ಬಾಂಗ್ಲಾದೇಶದ ಗಂಗಾಸಾಗರ್ ನಡುವಿನ ಪ್ರಮುಖ ರೈಲು ಸಂಪರ್ಕವೂ ಸೇರಿ ಮೂರು ಯೋಜನೆಗಳನ್ನು ಉದ್ಘಾಟಿಸಿದರು – ಪಿಟಿಐ ಚಿತ್ರ

ಭಾರತದ ನೆರವಿನ ಯೋಜನೆಗಳು

ಈ ಎಲ್ಲ ಮೂರು ಯೋಜನೆಗಳು ಭಾರತದ ನೆರವಿನಲ್ಲಿ ಕೈಗೊಂಡಿರುವ ಅಭಿವೃದ್ಧಿಯ ಉಪಕ್ರಮಗಳಾಗಿವೆ. ಅಗರ್ತಲಾ-ಅಖೌರಾ ಗಡಿಯಾಚೆಗಿನ ರೈಲು ಸಂಪರ್ಕಕ್ಕಾಗಿ ಭಾರತವು ₹392.52 ಕೋಟಿ ಅನುದಾನವನ್ನು ಬಾಂಗ್ಲಾದೇಶಕ್ಕೆ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಶ್ಚಿಂತಪುರ ಮತ್ತು ಗಂಗಾಸಾಗರ್ ನಡುವಿನ 12.24 ಕಿ.ಮೀ. ರೈಲು ಯೋಜನೆ (ತ್ರಿಪುರಾದಲ್ಲಿ 5.46 ಕಿ.ಮೀ. ಮತ್ತು ಬಾಂಗ್ಲಾದೇಶದಲ್ಲಿ 6.78 ಕಿ.ಮೀ. ಜೋಡಿ ಮಾರ್ಗ) ಢಾಕಾ ಮೂಲಕ ಅಗರ್ತಲಾ ಮತ್ತು ಕೋಲ್ಕತ್ತ ನಡುವಿನ ಪ್ರಯಾಣದ ಸಮಯವನ್ನು ಗಣನೀಯವಾಗಿ ತಗ್ಗಿಸಲಿದೆ. ಅಲ್ಲದೆ, ಗಡಿಯಾಚೆಗಿನ ವ್ಯಾಪಾರ ಕೂಡ ಉತ್ತೇಜಿಸುವ ನಿರೀಕ್ಷೆ ಇದೆ.

ಇನ್ನು ಖುಲ್ನಾ-ಮೊಂಗ್ಲಾ ಬಂದರು ರೈಲು ಮಾರ್ಗದ ಭಾಗವಾಗಿ, ಬಾಂಗ್ಲಾದೇಶದ ಮೊಂಗ್ಲಾ ಬಂದರು ಮತ್ತು ಖುಲ್ನಾದಲ್ಲಿ ಅಸ್ತಿತ್ವದಲ್ಲಿರುವ ರೈಲು ಜಾಲದ ನಡುವೆ 65 ಕಿ.ಮೀ. ಬ್ರಾಡ್ ಗೇಜ್ ಮಾರ್ಗ ನಿರ್ಮಿಸಲಾಗಿದೆ. 1,320 ಮೆಗಾವಾಟ್ ವಿದ್ಯುತ್ ಉತ್ಪಾದನೆ ಸಾಮರ್ಥ್ಯದ ಮೈತ್ರಿ ಸೂಪರ್ ಥರ್ಮಲ್ ಪವರ್ ಪ್ರಾಜೆಕ್ಟ್ ಅನ್ನು ಬಾಂಗ್ಲಾದೇಶ- ಇಂಡಿಯಾ ಫ್ರೆಂಡ್‌ಶಿಪ್ ಪವರ್ ಕಂಪನಿ ಲಿಮಿಟೆಡ್, ಭಾರತದ ಎನ್‌ಟಿಪಿಸಿ ಮತ್ತು ಬಾಂಗ್ಲಾದೇಶ ವಿದ್ಯುತ್ ಅಭಿವೃದ್ಧಿ ಮಂಡಳಿಯು 50:50 ಪಾಲುದಾರಿಕೆಯ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲಾಗಿದೆ.

ನಂದಿನಿ ದಾಸ್‌ಗೆ 'ಬ್ರಿಟಿಷ್ ಅಕಾಡೆಮಿ ಬುಕ್' ಪ್ರಶಸ್ತಿ



ನಂದಿನಿ ದಾಸ್

ಲಂಡನ್(ಪಿಟಿಐ): ಭಾರತ ಸಂಜಾತೆ, ಲೇಖಕಿ ನಂದಿನಿ ದಾಸ್ ಅವರು ಪ್ರಸಕ್ತ ಸಾಲಿನ ಪ್ರತಿಷ್ಠಿತ 'ಬ್ರಿಟಿಷ್ ಅಕಾಡೆಮಿ ಬುಕ್ ಫಾರ್ ಗ್ಲೋಬಲ್ ಕಲ್ಚರಲ್ ಅಂಡರ್‌ಸ್ಟ್ಯಾಂಡಿಂಗ್' ಪ್ರಶಸ್ತಿಗೆ ಭಾಜನರಾಗಿದ್ದಾರೆ.

'ಕೋರ್ಟಿಂಗ್ ಇಂಡಿಯಾ: ಇಂಗ್ಲೆಂಡ್, ಮೊಘಲ್ ಇಂಡಿಯಾ ಅಂಡ್ ದಿ ಒರಿಜಿನ್ಸ್ ಆಫ್ ಎಂಪೈರ್' ಎಂಬ ಅವರ ಕೃತಿಗೆ ಈ ಪ್ರಶಸ್ತಿ ಲಭಿಸಿದೆ. ಪ್ರಶಸ್ತಿಯು ₹ 25 ಲಕ್ಷ ನಗದು ಒಳಗೊಂಡಿದೆ.

ಬ್ರಿಟನ್ ಮೂಲದ ನಂದಿನಿ ದಾಸ್ ಅವರ ಮೊದಲ ಕೃತಿ ಹಲವಾರು ವಿಶಿಷ್ಟ ಒಳನೋಟಗಳನ್ನು ಹೊಂದಿದೆ. 'ಮೊಘಲರ ಕಾಲದಲ್ಲಿ ಸ್ಥಾಪಿತವಾದ ಬ್ರಿಟನ್ನಿನ ಮೊದಲ ರಾಜತಾಂತ್ರಿಕ ಸಂಬಂಧಗಳ ಮೂಲಕ ಬ್ರಿಟನ್ ಹಾಗೂ ಭಾರತ ನಡುವಿನ ಸಂಬಂಧವನ್ನು ವಿವರಿಸುವ ಪ್ರಯತ್ನವನ್ನು ಈ ಕೃತಿ ಮೂಲಕ ಲೇಖಕಿ ಮಾಡಿದ್ದಾರೆ' ಎಂದು ಬ್ರಿಟಿಷ್ ಅಕಾಡೆಮಿ ತಿಳಿಸಿದೆ. 49 ವರ್ಷದ ನಂದಿನಿ ದಾಸ್ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕಿಯಾಗಿದ್ದಾರೆ.

17ನೇ ಶತಮಾನದಲ್ಲಿ ಮೊದಲ ರಾಯಭಾರಿಯಾಗಿ ಸರ್ ಥಾಮಸ್ ರೋ ಅವರು ಭಾರತಕ್ಕೆ ಬಂದಿಳಿದ ನಂತರ ಆರಂಭವಾಗುವ ಬ್ರಿಟಿಷ್ ಆಳ್ವಿಕೆಯನ್ನು ಹೊಸ ದೃಷ್ಟಿಕೋನದಿಂದ ಪ್ರಸ್ತುತ ಪಡಿಸುವ ಪ್ರಯತ್ನವನ್ನು ನಂದಿನಿ ದಾಸ್ ಮಾಡಿದ್ದಾರೆ.

ತನಿಖೆಗೆ ಸಹಕರಿಸಲು ತೀಸ್ತಾ ದಂಪತಿಗೆ 'ಸುಪ್ರೀಂ' ನಿರ್ದೇಶನ

ನವದೆಹಲಿ(ಪಿಟಿಐ): ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್ವಾಡ್ ಮತ್ತು ಅವರ ಪತಿ ಜಾವೇದ್ ಆನಂದ್ ಅವರು ತಮ್ಮ ವಿರುದ್ಧ ದಾಖಲಾಗಿರುವ ಹಣ ದುರುಪಯೋಗ ಪ್ರಕರಣದ ವಿಚಾರಣೆ ನಡೆಸುತ್ತಿರುವ ಗುಜರಾತ್ ಪೊಲೀಸರಿಗೆ ಸಂಪೂರ್ಣ ಸಹಕಾರ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿ ಎಸ್.ಕೆ. ಕೌಲ್ ನೇತೃತ್ವದ ಮೂವರು ನ್ಯಾಯಮೂರ್ತಿಗಳಿದ್ದ ಪೀಠವು, ತೀಸ್ತಾ ಅವರ ನಿರೀಕ್ಷಣಾ ಜಾಮೀನು ಸಂಬಂಧ ಮಧ್ಯಪ್ರವೇಶಿಸಲು ನಿರಾಕರಿಸಿತು.

ದಂಪತಿಯು ತನಿಖೆಗೆ ಸಹಕರಿಸುತ್ತಿಲ್ಲವೆಂದು ಗುಜರಾತ್ ಪೊಲೀಸರು ನ್ಯಾಯಪೀಠಕ್ಕೆ ಮನವಿ ಸಲ್ಲಿಸಿದ್ದರು. ತಮ್ಮ ಎನ್‌ಜಿಒ ಸಬ್ರಂಗ್ ಟ್ರಸ್ಟ್ ಮೂಲಕ ಕೇಂದ್ರದಿಂದ ₹1.4 ಕೋಟಿ ಅನುದಾನವನ್ನು ದಂಪತಿ ಪಡೆದುಕೊಂಡು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಿ ಅಹಮದಾಬಾದ್ ಪೊಲೀಸ್ ಅಪರಾಧ ವಿಭಾಗವು ಪ್ರಕರಣ ದಾಖಲಿಸಿ, ತನಿಖೆ ನಡೆಸುತ್ತಿದೆ.

ಅಮೆರಿಕ: ಜಿಮ್‌ನಲ್ಲಿ ತೆಲಂಗಾಣದ ವಿದ್ಯಾರ್ಥಿಗೆ ಚೂರಿ ಇರಿತ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಇಂಡಿಯಾನ ರಾಜ್ಯದ ವಾಲ್ಪಾರೈಸೊ ನಗರದ ಜಿಮ್‌ನಲ್ಲಿ ತೆಲಂಗಾಣದ ವಿದ್ಯಾರ್ಥಿಯೊಬ್ಬರು ಚೂರಿ ಇರಿತಕ್ಕೊಳಗಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ ಎಂದು ಮೂಲಗಳು ತಿಳಿಸಿವೆ.

24 ವರ್ಷದ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿ ಪಿ.ವರುಣ್ ರಾಜ್ ಗಾಯಗೊಂಡವರು. ಇವರು ತೆಲಂಗಾಣದ ಖಮ್ಮಂ ನಿವಾಸಿ.

ಜೋರ್ಡಾನ್ ಆಂಡ್ರೇಡ್ ಎಂಬಾತ ಭಾನುವಾರ ಬೆಳಿಗ್ಗೆ ಜಿಮ್‌ನಲ್ಲಿ ವರುಣ್‌ಗೆ ಚೂರಿಯಿಂದ ಇರಿದಿದ್ದು, ಆತನನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಎನ್‌ಡಬ್ಲ್ಯುಐ ಟೈಮ್ಸ್ ವರದಿ ಮಾಡಿದೆ.

ಜಿಮ್‌ನ ಮಸಾಜ್ ಕೋಣೆಯಲ್ಲಿ ವರುಣ್ ಮತ್ತು ಜೋರ್ಡಾನ್ ನಡುವೆ ವಾಗ್ವಾದ ನಡೆದು ಅದು ಚೂರಿ ಇರಿತಕ್ಕೆ ಕಾರಣವಾಗಿರಬಹುದು ಎಂದು ಮೂಲಗಳು ತಿಳಿಸಿವೆ.

ಮಗ ಇರಿತಕ್ಕೊಳಗಾಗಿರುವ ಬಗ್ಗೆ ಆತನ ಗೆಳೆಯ ಮಾಹಿತಿ ನೀಡಿರುವುದಾಗಿ ಖಮ್ಮಂನಲ್ಲಿ ಶಿಕ್ಷಕರಾಗಿರುವ ವರುಣ್ ತಂದೆ ಪಿ. ರಾಮಮೂರ್ತಿ ತಿಳಿಸಿದ್ದಾರೆ.

ಕಲ್ಲಿದ್ದಲು ಗಣಿಗಳ ಖಾಸಗೀಕರಣಕ್ಕೆ ರಾಹುಲ್ ಗಾಂಧಿ ವಿರೋಧ

ನವದೆಹಲಿ (ಪಿಟಿಐ): ತೆಲಂಗಾಣದ ಸಿಂಗರೇಣಿ ಕಲ್ಲಿದ್ದಲು ಗಣಿ ಪ್ರದೇಶಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ಅಲ್ಲಿನ ಕಾರ್ಮಿಕರ ಜತೆ ನಡೆಸಿದ ಸಂವಾದದ ವಿಡಿಯೊವನ್ನು ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಬುಧವಾರ ಹಂಚಿಕೊಂಡಿದ್ದಾರೆ.

ಕಲ್ಲಿದ್ದಲು ಗಣಿಗಳ ಖಾಸಗೀಕರಣದ ವಿರುದ್ಧ ಅವರು ಧ್ವನಿ ಎತ್ತಿದ್ದಾರೆ. ಕೇಂದ್ರ ಸರ್ಕಾರದ ಈ ನೀತಿಯು ಕಾರ್ಮಿಕ ಕಾನೂನುಗಳ ಸ್ಪಷ್ಟ ಉಲ್ಲಂಘನೆಯಾಗಲಿದೆ. ಅಲ್ಲದೇ, ಅವರನ್ನು ಜೀತದಾಳು ಪದ್ಧತಿಗೆ ದೂಡುವ ಹುನ್ನಾರವೂ ಆಗಿದೆ ಎಂದಿದ್ದಾರೆ.

ದೇಶದ ಆರ್ಥಿಕತೆಗೆ ಕೊಡುಗೆ ನೀಡುವ ವಲಯಗಳ ಖಾಸಗೀಕರಣಕ್ಕೆ ಕಾಂಗ್ರೆಸ್ ಮುಂದಾಗುವುದಿಲ್ಲ ಎಂದು ರಾಹುಲ್ ಸ್ಪಷ್ಟಪಡಿಸಿದ್ದಾರೆ.

'ಕೆಲವು ದಿನಗಳ ಹಿಂದೆ ಸಿಂಗರೇಣಿ ಗಣಿಗೆ ಭೇಟಿ ನೀಡುವ ಅವಕಾಶ ನನಗೆ ಲಭಿಸಿತ್ತು. ಅಲ್ಲಿನ ನೌಕರರು ಮತ್ತು ಅಧಿಕಾರಿಗಳೊಟ್ಟಿಗೆ ಮಾತುಕತೆ ನಡೆಸಿ ಅವರ ಸಮಸ್ಯೆಗಳನ್ನು ಆಲಿಸಿದೆ. ಖಾಸಗೀಕರಣವೇ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣವೆಂಬ ಸತ್ಯದ ಅರಿವಾಯಿತು' ಎಂದು ಹೇಳಿದ್ದಾರೆ.



ರಾಹುಲ್ ಗಾಂಧಿ

ಶೋಷಣೆಯ ಪಿತೂರಿ: 'ಕಾರ್ಮಿಕರ ಜೊತೆಗಿನ ಸಂವಾದದ ಬಳಿಕ ಅವರ ಶೋಷಣೆಯ ಹಿಂದೆ ದೊಡ್ಡ ಪಿತೂರಿಯೇ ಅಡಗಿರುವುದು ನನಗೆ ಅರ್ಥವಾಗುತ್ತಿದೆ' ಎಂದು ರಾಹುಲ್ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ದೇಶೀಯ ಗಣಿಗಳ ಖಾಸಗೀಕರಣದಿಂದ ಕಲ್ಲಿದ್ದಲು ಆಮದು ಮಾಡಿಕೊಳ್ಳುವುದು ದುಬಾರಿಯಾಗಲಿದೆ. ಬಳಿಕ ವಿದ್ಯುತ್ ದರ ಹೆಚ್ಚಿಸಿ ಜನರ ಜೇಬಿನಿಂದ ಹಣ ದೋಚಲಾಗುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ಗುಪ್ತ ತೆರಿಗೆ ವಿಧಿಸಲಿದ್ದಾರೆ. ಅದು ಅದಾನಿ ತೆರಿಗೆ ಹೊರತು ಬೇರೇನೂ ಅಲ್ಲ. ಇದು ಗೆದ್ದಲು ಒಣಮರದ ಕಾಂಡವನ್ನು ಟೊಳ್ಳಾಗಿಸಿದಂತೆ, ಜನರ ಹಣವನ್ನು ಬರಿದಾಗಿಸುವ ತಂತ್ರ ಎಂದು ಟೀಕಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ



ಶ್ರೀ ಕೆ. ಕೃಷ್ಣಮೂರ್ತಿ
ನಿಧನ: 24.10.2023
(ಕೀರ್ತಿ ಶೇಷ ಜಿ. ಎನ್. ಕೃಷ್ಣಮೂರ್ತಿ (ಮೂರ್ತಪ್ಪ) ನವರು ಗವಿಪುರ, ಬೆಂಗಳೂರು, ಇವರ ಕಿರಿಯ ಪುತ್ರ)
ಇವರು ದಿನಾಂಕ: 24.10.2023 ನೇ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ವೈಕುಂಠ ಸಮಾರಾಧನೆ ಕಾರ್ಯಗಳನ್ನು ದಿನಾಂಕ: 3.11.2023 ನೇ ಶುಕ್ರವಾರ ಬೆಳಿಗ್ಗೆ 8.30 ಕ್ಕೆ ಮೃತರ ಸ್ವಗೃಹದಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ಬಯಸುತ್ತೇವೆ. ಮೊಬೈಲ್: 98457 82203.
ಇಂತಿ ದುಃಖತಪ್ತರು: ಪತ್ನಿ ಶ್ರೀಮತಿ ಮಂಗಳ ಕೃಷ್ಣಮೂರ್ತಿ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು

ಚಿರಸ್ಮರಣೆ

ಎಸ್.ಎನ್.ಶಿವಣ್ಣನವರು
ಪೊಲೀಸ್ ಇಲಾಖೆ, ತುಮಕೂರು
ಜನನ: 20-04-1950 ಮರಣ: 2-11-2002
ಸದಾ ನಿಮ್ಮನ್ನು ಸ್ಮರಿಸುವ ಪತ್ನಿ: ಗಂಗಮ್ಮ
ಎಸ್.ಉಮೇಶ್, ಎಸ್.ದಿನೇಶ್, ಶೀಲ, ಶೋಭ
ವನಿತ, ಹರ್ಷಿಣಿ, ಕೀರ್ತನ. ಫೋ:78298 93303

NAME CHANGE ANNOUNCEMENT
Log on to :
dhclassifieds.com

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ ರೂ.15,000/- ರಿಂದ 20,000/- EST, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 7899235388, 9148525233

✓ ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ,ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

Multiple Vacancy

REQUIRED EXPERIENCED Telecaller& Field Executive For BankLoan collection. Direct Recruitment to Company Contact:- 7899040499, 9620206756.

Part-Time Jobs

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಭವಿಷ್ಯ

Astrology

★★ಒಂದೇ ಕರೆಯಲ್ಲಿ★★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

ಪ್ರವಾಸ

Travel

22.11.2023 ನವಗ್ರಹಗಳು ಕನ್ಯಾಕುಮಾರಿ ರಾಮೇಶ್ವರ,ಮಧುರೈ 15.12.2023 ಗುಜರಾತ್ ಅಷ್ಟಜ್ಯೋತಿರ್ಲಿಂಗಗಳು 15.02.2024 ನೇಪಾಳ,ಮುಕ್ತಿನಾಥ ಕಾಶಿ,ಅಯೋಧ್ಯ. 10.03.2024 12 ದಿನಗಳ ರಾಜಸ್ಥಾನ್ ಸಂಪರ್ಕಿಸಿ: ವಿಷ್ಣು ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು.70. 9342287551 8050629305

★ಶ್ರೇಯಸ್ ಟೂರ್ಸ್★ ವಿ.ವಿ.ಪುರಂ 20.11.2023 8ದಿನಗಳು ಅಹೋಬಲಂ, ಮಹಾನಂದಿ,ಶ್ರೀಶೈಲಂ, ಹೈದರಾಬಾದ್,ಮಂತ್ರಾಲಯ. 27.11.2023 12ದಿನಗಳು ಗುಜರಾತ್ ಮಧ್ಯಪ್ರದೇಶ ರಾಜ್ಯ ಪ್ರವಾಸ. 01.12.2023 14/20ದಿನ ಈಶಾನ್ಯ ಭಾರತದ ರಾಜ್ಯಗಳ(ಸೆವೆನ್‌ಸಿಸ್ಟರ್ಸ್) ಅಸ್ಸಾಂ.ಅರುಣಾಚಲ. ಮೇಘಾಲಯ.ಮಣಿಪುರ.ತ್ರಿಪುರ. ಮಿಝೋರಾಂ,ನಾಗಲ್ಯಾಂಡ್ (ಹಾರ್ನ್‌ಬಿಲ್). 08.12.2023 14ದಿನಗಳು ಅಖಂಡ ಮಹಾರಾಷ್ಟ್ರ ರಾಜ್ಯ ಪ್ರವಾಸ ಚತುರ್ಥಜ್ಯೋತಿರ್ಲಿಂಗ, ಅಷ್ಟವಿನಾಯಕ,ಮುಂಬಯಿ, ಶಿರಡಿ,ಇತರೆ. 9743351212/ 9206979202/ 6366322639

7/11 ದಿನಗಳ ಸಿಂಗಪುರ, ಮಲೇಷ್ಯಾ, ಥೈಲ್ಯಾಂಡ್, 10 ದಿನಗಳ ಕಾಂಬೋಡಿಯಾ ವಿಯಟ್ನಾಂ, 7 ದಿನಗಳ ಶ್ರೀಲಂಕಾ, 7 ದಿನಗಳ ಜಪಾನ್, 6 ದಿನಗಳ ದುಬೈ. ಭಟ್ ಟ್ರಾವೆಲ್ಸ್ :9844037295

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 16/11 ಹೈದರಬಾದ್ 20/11 ಪುರಿ ಜಗನ್ನಾಥ್. 23/11 ಶಿರಡಿ, ಪಂಢರಪುರ. 21/12ಗುಜರಾತ್, ಮಧ್ಯಪ್ರದೇಶ 4ಜ್ಯೋತಿರ್ಲಿಂಗ 9591017782, 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಾಷ್ಟ್ರೀಯ ಕ್ರೀಡಾಕೂಟದ ಈಜು: ರಿಲೇ ತಂಡಗಳಿಂದ ಕೂಟ ದಾಖಲೆ

ಮುಂದುವರಿದ ಪದಕ ಬೇಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜುಪಟುಗಳು ಗೋವಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪದಕ ಬೇಟೆ ಮುಂದುವರಿಸಿದ್ದಾರೆ. ಪುರುಷರ ಮತ್ತು ಮಹಿಳೆಯರ 4X200 ಮೀ. ಫ್ರೀಸ್ಟೈಲ್ ರಿಲೇ ತಂಡಗಳು ಬುಧವಾರ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದುಕೊಂಡವು.

ಅನೀಶ್ ಎಸ್.ಗೌಡ, ಶಿವಾಂಕ್ ವಿಶ್ವನಾಥ್, ಶಾನ್ ಗಂಗೂಲಿ ಮತ್ತು ಶ್ರೀಹರಿ ನಟರಾಜ್ ಅವರನ್ನೊಳಗೊಂಡ ಪುರುಷರ ತಂಡ 7 ನಿ. 37.47 ಸೆ.ಗಳಲ್ಲಿ ಗುರಿ ತಲುಪಿತು. ದೆಹಲಿ ಮತ್ತು ಸರ್ವಿಸಸ್ ತಂಡಗಳು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಜಯಿಸಿದವು.

ಮಹಿಳೆಯರ ವಿಭಾಗದಲ್ಲಿ ಹಷಿಕಾ ರಾಮಚಂದ್ರ, ಶ್ರೀಚಾರಣಿ ತುಮು, ಶಿರಿನ್ ಮತ್ತು ಧೀನಿಧಿ ದೇಸಿಂಗು ಅವರಿದ್ದ ತಂಡ 8 ನಿ. 49.74 ಸೆ.ಗಳೊಂದಿಗೆ ಕೂಟ ದಾಖಲೆ ಸ್ಥಾಪಿಸಿ ಚಿನ್ನ ಗೆದ್ದಿತು.

ಹಷಿಕಾ, ಲಿನೇಶಾಗೆ ಬೆಳ್ಳಿ: ಮಹಿಳೆಯರ 200 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಹಷಿಕಾ ರಾಮಚಂದ್ರ (2 ನಿ. 22.20 ಸೆ.) ಬೆಳ್ಳಿ ತಂದುಕೊಟ್ಟರು. ಈ ವಿಭಾಗದ ಚಿನ್ನ ಅಸ್ಸಾಂನ ಆಶಾ ಚೌಧರಿ (2 ನಿ. 19.29 ಸೆ.) ಪಾಲಾಯಿತು.

ಮಹಿಳೆಯರ 50 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಲಿನೇಶಾ (34.11 ಸೆ.) ಎರಡನೇ ಸ್ಥಾನ ಪಡೆದರು. ಚಿನ್ನ ಗೆದ್ದ ಪಂಜಾಬ್‌ನ ಚಾಹತ್ ಅರೋರಾಗೆ (34.09 ಸೆ.) ಅವರು ಪ್ರಬಲ ಪೈಪೋಟಿ ಒಡ್ಡಿದರು.

ಪುರುಷರ 50 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ವಿದಿತ್ ಎಸ್.ಶಂಕರ್ (29.07 ಸೆ.) ಕಂಚು ಜಯಿಸಿದರು. 200 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕೇರಳದ ಸಜನ್ ಪ್ರಕಾಶ್ (1 ನಿ. 59.38 ಸೆ.) ಕೂಟ ದಾಖಲೆ ಸ್ಥಾಪಿಸಿದರು.

ನಾಲ್ಕನೇ ದಿನದ ಸ್ಪರ್ಧೆಗಳ ಅಂತ್ಯಕ್ಕೆ ಕರ್ನಾಟಕ ತಂಡ 20 ಪದಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ರಾಜ್ಯದ ಸ್ಪರ್ಧಿಗಳು 10 ಚಿನ್ನ ಹಾಗೂ ತಲಾ ಐದು ಬೆಳ್ಳಿ ಹಾಗೂ ಕಂಚು ಜಯಿಸಿದ್ದಾರೆ. 9 ಪದಕಗಳನ್ನು ಗೆದ್ದಿರುವ ಮಹಾರಾಷ್ಟ್ರ ಎರಡನೇ ಸ್ಥಾನದಲ್ಲಿದೆ.

ಫುಟ್‌ಬಾಲ್ ತಂಡಕ್ಕೆ ಗೆಲುವು: ರಾಷ್ಟ್ರೀಯ ಕ್ರೀಡಾಕೂಟದ ಫುಟ್‌ಬಾಲ್ ಟೂರ್ನಿಯಲ್ಲಿ ಕರ್ನಾಟಕದ ಪುರುಷರ ತಂಡ 1–0 ಗೋಲಿನಿಂದ ಗೋವಾ ತಂಡವನ್ನು ಮಣಿಸಿತು. ಆರ್.ವಿಶಾಲ್ ಅವರು (35ನೇ ನಿ.) ಗೆಲುವಿನ ಗೋಲು ತಂದಿತ್ತರು.

ಟೆನಿಸ್: ಕರ್ನಾಟಕ ಪುರುಷರ ತಂಡಕ್ಕೆ ಚಿನ್ನದ ಪದಕ

ಬೆಂಗಳೂರು: ಕರ್ನಾಟಕ ಪುರುಷರ ತಂಡದವರು ಗೋವಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಟೆನಿಸ್ ಟೂರ್ನಿಯಲ್ಲಿ ಚಿನ್ನ ಜಯಿಸಿದರು.

ಬುಧವಾರ ನಡೆದ ಫೈನಲ್‌ನಲ್ಲಿ ಪ್ರಜ್ವಲ್ ದೇವ್ ಅವರ ಸೊಗಸಾದ ಆಟದ ನೆರವಿನಿಂದ ರಾಜ್ಯ ತಂಡ 2–1 ರಿಂದ ತಮಿಳುನಾಡು ತಂಡವನ್ನು ಮಣಿಸಿತು.

ಮೊದಲ ಸಿಂಗಲ್ಸ್‌ನಲ್ಲಿ ಸೂರಜ್ ಪ್ರಬೋಧ್ ಅವರು 3–6, 2–6 ರಿಂದ ತಮಿಳುನಾಡಿನ ಮನೀಷ್ ಕುಮಾರ್ ಅವರಿಗೆ ಮಣಿದರು. ಎರಡನೇ ಸಿಂಗಲ್ಸ್‌ನಲ್ಲಿ ಪ್ರಜ್ವಲ್ 6–1, 6–3 ರಿಂದ ಏಷ್ಯನ್ ಗೇಮ್ಸ್ ಪದಕ ವಿಜೇತ ಹಾಗೂ ಈಚೆಗೆ ನಡೆದಿದ್ದ ಐಟಿಎಫ್ ಧಾರವಾಡ ಓಪನ್‌ನಲ್ಲಿ ಚಾಂಪಿಯನ್ ಆಗಿದ್ದ ರಾಮಕುಮಾರ್ ರಾಮನಾಥನ್‌ಗೆ ಆಘಾತ ನೀಡಿದರು.

ನಿರ್ಣಾಯಕ ಡಬಲ್ಸ್‌ನಲ್ಲಿ ಪ್ರಜ್ವಲ್– ಆದಿಲ್ ಕಲ್ಯಾಣಪುರ್ ಜೋಡಿ 7–6, 6–3 ರಿಂದ ಜೀವನ್ ಎನ್. ಮತ್ತು ಓಜಸ್ ಜಯಪ್ರಕಾಶ್ ಅವರನ್ನು ಪರಾಭವಗೊಳಿಸಿ, ಚಿನ್ನದ ಪದಕ ತಂದುಕೊಟ್ಟಿತು. ಜಿದ್ದಾಜಿದ್ದಿನ ಸೆಣಸಾಟ ನಡೆದ ಮೊದಲ ಸೆಟ್‌ಅನ್ನು ಟೈಬ್ರೇಕರ್‌ನಲ್ಲಿ (9–7) ಗೆದ್ದ ಕರ್ನಾಟಕದ ಜೋಡಿ, ಎರಡನೇ ಸೆಟ್‌ನಲ್ಲಿ ಅಧಿಕಾರಯುತ ಪ್ರದರ್ಶನ ನೀಡಿತು.

ಚಿನ್ನ ಗೆದ್ದ ಕರ್ನಾಟಕ ತಂಡದ ಆಟಗಾರರ ಸಂಭ್ರಮ

'ನಮ್ಮ ತಂಡದ ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಮನೋಭಾವಕ್ಕೆ ಈ ಗೆಲುವು ಸಾಕ್ಷಿಯಾಗಿದೆ. ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ, ಚಿನ್ನ ಗೆದ್ದಿರುವುದು ಹೆಮ್ಮೆಯ ವಿಚಾರ' ಎಂದು ತಂಡದ ನಾಯಕ ಪಿ.ಗೋಪಿನಾಥ್ ಪ್ರತಿಕ್ರಿಯಿಸಿದ್ದಾರೆ.

ವಿದಿತ್, ಅರ್ಜುನ್‌ಗೆ ಸವಾಲಿನ ಹಾದಿ

ಐಲ್ ಆಫ್ ಮ್ಯಾನ್ (ಪಿಟಿಐ): ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿ ಅರ್ಧ ಹಾದಿ ಕ್ರಮಿಸಿದ್ದು, ನಾಲ್ಕೂ ವರೆ ಅಂಕಗಳೊಂದಿಗೆ ಅಗ್ರಸ್ಥಾನ ಹಂಚಿಕೊಂಡಿರುವ 8 ಮಂದಿಯಲ್ಲಿ ಭಾರತದ ಇಬ್ಬರು ಆಟಗಾರರು– ಅರ್ಜುನ್ ಇರಿಗೇಶಿ ಮತ್ತು ವಿದಿತ್ ಗುಜರಾತಿ ಇದ್ದಾರೆ. ಆರು ಸುತ್ತುಗಳು ಕಳೆದಿದ್ದು, ಉಳಿದಿರುವ ಐದು ಸುತ್ತುಗಳಲ್ಲಿ ಉತ್ತಮ ಆಟ ಮುಂದುವರಿಸಬೇಕಾದ ಸವಾಲು ಅವರ ಎದುರಿಗಿದೆ.

ಮಂಗಳವಾರ ಪಂದ್ಯಕ್ಕೆ ಟೂರ್ನಿಯ ಏಕೈಕ ವಿರಾಮದ ದಿನವಾಗಿತ್ತು. ಓಪನ್ ಮತ್ತು ಮಹಿಳಾ ವಿಭಾಗ ಸೇರಿ ಭಾರತದ 20 ಮಂದಿ ಕಣದಲ್ಲಿದ್ದರೂ ಕೇವಲ ಮೂವರಷ್ಟೇ ಸ್ಥಿರ ಪ್ರದರ್ಶನದಿಂದ ಗಮನ ಸೆಳೆದಿದ್ದಾರೆ. ಮಹಿಳಾ ವಿಭಾಗದಲ್ಲಿ ಆರ್. ವೈಶಾಲಿ ಎರಡನೇ ಸ್ಥಾನದಲ್ಲಿದ್ದಾರೆ.

ಭಾರತದ ಪರ ಅತ್ಯಧಿಕ ರೇಟಿಂಗ್ ಹೊಂದಿರುವ ಡಿ.ಗುಕೇಶ್ ಅವರು ಟೂರ್ನಿಯು ಅರ್ಧಹಾದಿ ಸಾಗುವ ಮೊದಲೇ ಪ್ರಶಸ್ತಿ ಅವಕಾಶ ಕಳೆದುಕೊಂಡಿದ್ದಾರೆ. ಆರ್.ಪ್ರಜ್ಞಾನಂದ ಅವರಿಗೂ ಗೆಲುವು ಕೈಗೆಟಕಿಲ್ಲ. ಆದರೆ ಅವರು ಪಂದ್ಯಗಳನ್ನು ಡ್ರಾ ಮಾಡಿಕೊಂಡಿದ್ದಾರೆ. ಈ ಟೂರ್ನಿಯಲ್ಲಿ ಅಗ್ರ ಎರಡು ಸ್ಥಾನ ಪಡೆಯುವ ಆಟಗಾರರು 2024 ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅವಕಾಶ ಪಡೆಯುತ್ತಾರೆ.

ವಿದಿತ್ ಏಳನೇ ಸುತ್ತಿನಲ್ಲಿ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ ಅವರನ್ನು ಎದುರಿಸಲಿದ್ದಾರೆ. ಅರ್ಜುನ್‌ಗೆ ರಷ್ಯಾದ ಆ್ಯಂಡ್ರಿ ಇಸಿಪೆಂಕೊ ಸವಾಲು ಎದುರಾಗಿದೆ.

ರ‍್ಯಾಂಕಿಂಗ್: ಹ್ಯಾಜಲ್‌ವುಡ್ ಹಿಂದಿಕ್ಕಿದ ಪಾಕ್ ಬೌಲರ್

ಬೌಲರ್‌ಗಳ ಪಟ್ಟಿ: ಅಗ್ರಸ್ಥಾನಕ್ಕೆ ಅಫ್ರಿದಿ

ಕೋಲ್ಕತ್ತ (ಪಿಟಿಐ): ಪಾಕಿಸ್ತಾನದ ಮುಂಚೂಣಿ ವೇಗದ ಬೌಲರ್ ಶಹೀನ್ ಶಾ ಅಫ್ರಿದಿ ಅವರು ಐಸಿಸಿ ರ‍್ಯಾಂಕಿಂಗ್ ಪಟ್ಟಿಯ ಬೌಲರ್‌ಗಳ ವಿಭಾಗದಲ್ಲಿ ಮೊದಲ ಬಾರಿ ಅಗ್ರಸ್ಥಾನಕ್ಕೆ ಏರಿದ್ದಾರೆ. ಏಳು ಸ್ಥಾನಗಳಷ್ಟು ಮೇಲೆ ನೆಗೆದ ಅವರು ಆಸ್ಟ್ರೇಲಿಯಾದ ಜೋಶ್ ಹ್ಯಾಜಲ್‌ವುಡ್ ಅವರನ್ನು ಪದಚ್ಯುತಗೊಳಿಸಿದ್ದಾರೆ.



ಶಹೀನ್ ಶಾ ಅಫ್ರಿದಿ

ಬಾಂಗ್ಲಾದೇಶ ವಿರುದ್ಧ ಪಾಕ್ ತಂಡ ಜಯಗಳಿಸಿದ ಮರುದಿನವೇ ಈ ಪಟ್ಟಿ ಬಿಡುಗಡೆಯಾಗಿದೆ. ಮಂಗಳವಾರ ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ನಡೆದ ಆ ಪಂದ್ಯದ ಸಂದರ್ಭದಲ್ಲಿ ಅವರು ಏಕದಿನ ಕ್ರಿಕೆಟ್‌ನಲ್ಲಿ 100 ವಿಕೆಟ್‌ಗಳ ಮೈಲಿಗಲ್ಲು ದಾಟಿದ್ದರು. ತಮ್ಮ 51ನೇ ಏಕದಿನ ಪಂದ್ಯದಲ್ಲಿ 23 ರನ್ನಿಗೆ 3 ವಿಕೆಟ್ ಪಡೆದಿದ್ದರು.

ಈ ವಿಶ್ವಕಪ್‌ನಲ್ಲಿ ಹೆಚ್ಚು ವಿಕೆಟ್ ಪಡೆದ ಬೌಲರ್‌ಗಳ ಪಟ್ಟಿಯಲ್ಲಿ ಅವರು ಈಗ ಆಸ್ಟ್ರೇಲಿಯಾದ ಆ್ಯಡಂ ಜಂಪಾ ಜೊತೆ ಜಂಟಿಯಾಗಿ ಅಗ್ರಸ್ಥಾನದಲ್ಲಿದ್ದಾರೆ. ತಲಾ 16 ವಿಕೆಟ್‌ಗಳನ್ನು ಪಡೆದಿದ್ದಾರೆ.

ಮೊಹಮ್ಮದ್ ಸಿರಾಜ್ ಮತ್ತು ಎಡಗೈ ರಿಸ್ಟ್ ಸ್ಪಿನ್ನರ್ ಕುಲದೀಪ್ ಯಾದವ್ ಅವರು ಕ್ರಮವಾಗಿ ಮೂರು ಮತ್ತು ಏಳನೇ ಸ್ಥಾನದಲ್ಲಿದ್ದಾರೆ.

ಬ್ಯಾಟರ್‌ಗಳ ಪಟ್ಟಿಯಲ್ಲಿ ಪಾಕ್ ನಾಯಕ ಬಾಬರ್ ಆಜಂ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಶುಭಮನ್ ಗಿಲ್, ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಕ್ರಮವಾಗಿ ಎರಡು, ಐದು ಮತ್ತು ಏಳನೇ ಸ್ಥಾನದಲ್ಲಿದ್ದಾರೆ.

ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಶಕಿಬ್ ಅಲ್ ಹಸನ್ ಅಗ್ರಸ್ಥಾನದಲ್ಲಿದ್ದಾರೆ. ಹಾರ್ದಿಕ್ ಪಾಂಡ್ಯ 11ನೇ ಸ್ಥಾನಕ್ಕೆ ಸರಿದಿದ್ದಾರೆ. ರವೀಂದ್ರ ಜಡೇಜಾ 13ನೇ ಮತ್ತು ಶದಾಬ್ ಖಾನ್ 20ನೇ ಸ್ಥಾನದಲ್ಲಿ ನೆಲೆಸಿದ್ದಾರೆ.

ಗಾಲ್ಫ್ ಕಾರ್ಟ್‌ನಿಂದ ಬಿದ್ದು ಮ್ಯಾಕ್ಸ್‌ವೆಲ್‌ಗೆ ಗಾಯ

ಅಹಮದಾಬಾದ್ (ಪಿಟಿಐ): ಆಸ್ಟ್ರೇಲಿಯಾ ತಂಡದ ಬ್ಯಾಟಿಂಗ್ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಗಾಲ್ಫ್ ಕಾರ್ಟ್‌ನಿಂದ (ಗಾಲ್ಫ್ ಕೋರ್ಸ್‌ನಲ್ಲಿ ಬಳಸುವ ಬ್ಯಾಟರಿ ಚಾಲಿತ ವಾಹನ) ಬಿದ್ದು ತಲೆಗೆ ಪೆಟ್ಟಾಗಿದ್ದು, ನ.4 ರಂದು ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.

ಬುಧವಾರ ಗಾಲ್ಫ್ ಆಡಿದ ಬಳಿಕ ಕ್ಲಬ್‌ಹೌಸ್‌ನಿಂದ ತಂಡದ ಬಸ್‌ನತ್ತ ಗಾಲ್ಫ್ ಕಾರ್ಟ್‌ನ ಹಿಂಬದಿಯಲ್ಲಿ ಸವಾರಿ ಮಾಡುತ್ತಿದ್ದಾಗ ಆಯತಪ್ಪಿ ಬಿದ್ದಿದ್ದಾರೆ. ತಲೆ ಹಾಗೂ ಮುಖಕ್ಕೆ ಗಾಯವಾಗಿದೆ.

ತಲೆಗೆ ಪೆಟ್ಟಾಗಿರುವ ಕಾರಣ ಕಂಕಷನ್ ನಿಯಮದ ಪ್ರಕಾರ ಅವರು ಕೆಲದಿನಗಳ ಕಾಲ ವಿಶ್ರಾಂತಿ ಪಡೆಯಬೇಕಾಗುತ್ತದೆ. 'ಕಂಕಷನ್ ಶಿಷ್ಟಾಚಾರ ಪಾಲಿಸಬೇಕಾಗಿರುವುದರಿಂದ ಇಂಗ್ಲೆಂಡ್ ವಿರುದ್ಧದ ಪಂದ್ಯಕ್ಕೆ ಅವರು ಲಭ್ಯರಿಲ್ಲ' ಎಂದು ಆಸ್ಟ್ರೇಲಿಯಾ ತಂಡದ ಕೋಚ್ ಆ್ಯಂಡ್ರ್ಯೂ ಮೆಕ್‌ಡೊನಾಲ್ಡ್ ಹೇಳಿದ್ದಾರೆ.

ಮ್ಯಾಕ್ಸ್‌ವೆಲ್ ಅವರು ಒಂದು ವರ್ಷದ ಅವಧಿಯಲ್ಲಿ ಎರಡನೇ ಬಾರಿ ಈ ರೀತಿ ವಿಲಕ್ಷಣ ಘಟನೆಯಲ್ಲಿ ಗಾಯಗೊಂಡಿದ್ದಾರೆ. ಕಳೆದ ವರ್ಷ ನವೆಂಬರ್‌ನಲ್ಲಿ ಗೆಳೆಯನ ಹುಟ್ಟುಹಬ್ಬ ಆಚರಣೆ ವೇಳೆ ಬಿದ್ದು ಕಾಲಿನ ಮೂಳೆ ಮುರಿದಿತ್ತು.

ವಿಶ್ವಕಪ್: ಟಿಕೆಟ್ ಮಾರಾಟ ಇಂದಿನಿಂದ

ಬೆಂಗಳೂರು: ನ.4ರಂದು ನಡೆಯುವ ನ್ಯೂಜಿಲೆಂಡ್– ಪಾಕಿಸ್ತಾನ ಮತ್ತು ನ.9ರಂದು ನಡೆಯುವ ನ್ಯೂಜಿಲೆಂಡ್ ಶ್ರೀಲಂಕಾ ನಡುವಿನ ಪಂದ್ಯಗಳ ಟಿಕೆಟ್‌ಗಳನ್ನು ಕೌಂಟರ್‌ನಲ್ಲಿ ಗುರುವಾರದಿಂದ (ನ.2) ಮಾರಾಟ ಮಾಡಲಾಗುತ್ತದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಗೇಟ್ ನಂಬರ್ 2 ಮತ್ತು 4 (ಕಬ್ಬನ್ ರಸ್ತೆ) ಹಾಗೂ ಗೇಟ್ ನಂಬರ್ 16 ಮತ್ತು 18 (ಕ್ವೀನ್ಸ್ ರಸ್ತೆ) ರಲ್ಲಿರುವ ಟಿಕೆಟ್ ಕೌಂಟರ್ ಬೆಳಿಗ್ಗೆ 10ರಿಂದ ಸಂಜೆ 5ರ ತನಕ ತೆರೆದಿರುತ್ತದೆ. ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಅಥವಾ ಯುಪಿಐ ಮೂಲಕ ವ್ಯವಹರಿಸಬೇಕು. ನಗದು ಸ್ವೀಕರಿಸುವುದಿಲ್ಲ ಎಂದು ಕೆಎಸ್‌ಸಿಎ ಪ್ರಕಟಣೆ ತಿಳಿಸಿದೆ.

ಎಚ್‌ಎಎಲ್ ತಂಡಕ್ಕೆ ಜಯ

ಬೆಂಗಳೂರು: ಎ.ದಿವಾಕರ್ ಅವರ ಆಟದ ನೆರವಿನಿಂದ ಎಚ್‌ಎಎಲ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–1ರಿಂದ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ವಿರುದ್ಧ ಜಯ ಸಾಧಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ದಿವಾಕರ್ ಎರಡು ಗೋಲು ಗಳಿಸಿದರು. ಎಎಸ್‌ಸಿ ತಂಡದ ಟಿ. ಕೃಷ್ಣಕಾಂತ ಸಿಂಗ್ ಒಂದು ಗೋಲು ತಂದಿತ್ತರು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ ತಂಡವು 2–1ರಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ವಿರುದ್ಧ ಗೆಲುವು ಪಡೆಯಿತು. ಅಗ್ನಿಪುತ್ರ ತಂಡದ ಲಾಲ್ಲುಂಜಮಾ, ಪ್ರಶಾಂತ್ ಚೆಟ್ರಿ ತಲಾ ಒಂದು ಗೋಲು ದಾಖಲಿಸಿದರು. ಎಂಇಜಿ ಪರ ತೊಂಗ್ಲಾಲ್ ಲಾಮ್ ಬಾರ್ಜಾನ್ ಜೌಟ್ (78ನೇ) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಇಂದಿನ ಪಂದ್ಯಗಳು

ಬಿಯು ಎಫ್‌ಸಿ– ಬಿಡಿಯು ಎಫ್‌ಸಿ (ಮಧ್ಯಾಹ್ನ 1.30)

ರೂಟ್ಸ್ ಎಫ್‌ಸಿ– ರಿಯಲ್ ಚಿಕ್ಕಮಗಳೂರು ಎಫ್‌ಸಿ (ಮಧ್ಯಾಹ್ನ 3.30)

ಅನುಚಿತ ಹೇಳಿಕೆ: ಮಲ್ಹೋತ್ರಾ ಕ್ಷಮೆ

ಮೊಹಾಲಿ (ಪಿಟಿಐ): ತಮ್ಮ ಕಾಲದ ಅಸ್ಸಾಂ ಆಟಗಾರರು 'ಎರಡನೆ ದರ್ಜೆಯ ನಾಗರಿಕರು' ಎಂದು ನೀಡಿದ್ದ ಹೇಳಿಕೆಗೆ ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಅಶೋಕ್ ಮಲ್ಹೋತ್ರಾ ಬುಧವಾರ ಕ್ಷಮೆ ಯಾಚಿಸಿದ್ದಾರೆ.

ಅಶೋಕ್ ಮಲ್ಹೋತ್ರಾ

ಬಂಗಾಳ ತಂಡ ಮಂಗಳವಾರ ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಅಸ್ಸಾಂ ತಂಡದೆದುರು ಆಘಾತಕಾರಿ ಸೋಲು ಅನುಭವಿಸಿದ ನಂತರ ಈ ಹೇಳಿಕೆ ನೀಡಿದ್ದರು.

'ನಾವು ಆಡುತ್ತಿದ್ದ ಕಾಲದಲ್ಲಿ ಅಸ್ಸಾಂ ತಂಡವನ್ನು ಎರಡನೆ ದರ್ಜೆ ನಾಗರಿಕರು ಎಂದು ಕರೆಯಲಾಗುತಿತ್ತು' ಎಂದು ಅವರು ಹೇಳಿದ್ದರು. ಮಲ್ಹೋತ್ರಾ ಅವರು ತಮ್ಮ ಕ್ರಿಕೆಟ್ ಜೀವನದ ನಂತರ ಬಂಗಾಳ ತಂಡಕ್ಕೆ ತರಬೇತುದಾರರಾಗಿದ್ದರು.

ಅವರು ಏಳು ಟೆಸ್ಟ್, 20 ಏಕದಿನ ಪಂದ್ಯಗಳನ್ನು ಭಾರತ ತಂಡದ ಪರ ಆಡಿದ್ದಾರೆ.

ತಮ್ಮ ಹೇಳಿಕೆಗೆ ವಿರೋಧ ತೀವ್ರವಾಗುತ್ತಿದ್ದಂತೆ ಅವರು 'ಎಕ್ಸ್'ನಲ್ಲಿ (ಹಿಂದಿನ ಟ್ವಿಟರ್) ಬೇಷರತ್ ಕ್ಷಮೆಯಾಚಿಸಿದ್ದಾರೆ.

'ಕಳೆದ ಸಂಜೆ ಪಂದ್ಯದ ನಂತರ ನನ್ನ ಹೇಳಿಕೆಯಿಂದ ಅಸ್ಸಾಂ ಜನತೆಯ ಭಾವನೆಗಳಿಗೆ ನೋವಾದಲ್ಲಿ ಕ್ಷಮೆ ಕೇಳುತ್ತೇನೆ' ಎಂದು ಪೋಸ್ಟ್ ಹಾಕಿದ್ದಾರೆ.

'ನನ್ನಿಂದ ತಪ್ಪಾಗಿದೆ. ಅದು ಉದ್ದೇಶಪೂರ್ವಕವಾಗಿರಲಿಲ್ಲ. ಅವರ ಪ್ರಗತಿಯ ಕುರಿತಾಗಿ ಮಾತನಾಡುವಾಗ ಹೀಗೆ ಹೇಳಿಹೋಯಿತು. ಇದಕ್ಕೆ ವಿಷಾದಿಸುವೆ ಮತ್ತು ಕ್ಷಮೆ ಕೇಳುವೆ' ಎಂದು ಬರೆದಿದ್ದಾರೆ.

ಚೀನಾದ ಹಾಂಗ್‌ಝೌನಲ್ಲಿ ನಡೆದ ಪ್ಯಾರಾ ಏಷ್ಯನ್ ಕ್ರೀಡಾಕೂಟದಲ್ಲಿ ದಾಖಲೆಯ 111 ಪದಕಗಳನ್ನು ಗೆದ್ದ ಭಾರತದ ಕ್ರೀಡಾಪಟುಗಳನ್ನು ಪ್ರಧಾನಿ ನರೇಂದ್ರ ಮೋದಿ ನವದೆಹಲಿಯಲ್ಲಿ ಬುಧವಾರ ಅಭಿನಂದಿಸಿದರು –ಪಿಟಿಐ ಚಿತ್ರ

ಕೆವಿಎಸ್ ಕಬಡ್ಡಿ ಟೂರ್ನಿ ಇಂದಿನಿಂದ

ಬೆಂಗಳೂರು: ಸಿ.ವಿ.ರಾಮನ್ ನಗರದ ಡಿಆರ್‌ಡಿಒ ಕೇಂದ್ರೀಯ ವಿದ್ಯಾಲಯದ ಆಶ್ರಯದಲ್ಲಿ 52ನೇ ಕೇಂದ್ರೀಯ ವಿದ್ಯಾಲಯ ಸಂಘಟನೆ ಕ್ರೀಡಾಕೂಟದ ಭಾಗವಾಗಿ 17 ವರ್ಷದೊಳಗಿನವರ ಕಬಡ್ಡಿ ಟೂರ್ನಿ ನವೆಂಬರ್ 2 ರಿಂದ 6ರವರೆಗೆ ವಿದ್ಯಾಲಯದ ಆವರಣದಲ್ಲಿ ನಡೆಯಲಿದೆ.

24 ಕೆವಿಎಸ್ ವಲಯಗಳ ತಂಡಗಳ ಸುಮಾರು 350 ಆಟಗಾರರು ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ.

ಕೇಂದ್ರೀಯ ವಿದ್ಯಾಲಯ ಸಂಘಟನೆಯ ಪ್ರಾದೇಶಿಕ ಕಚೇರಿ ಉಪ ಆಯುಕ್ತ ಧರ್ಮೇಂದ್ರ ಪಾಟಲೆ ಅವರು ಟೂರ್ನಿಗೆ ಚಾಲನೆ ನೀಡುವರು ಎಂದು ಕೇಂದ್ರೀಯ ವಿದ್ಯಾಲಯ ಪ್ರಾಂಶುಪಾಲ ಆರ್.ವೆಂಕಟೇಶ್ವರ ರಾವ್ ತಿಳಿಸಿದ್ದಾರೆ.

ತಳಮಟ್ಟದಲ್ಲಿ ಫುಟ್‌ಬಾಲ್ ಅಭಿವೃದ್ಧಿ: ಎಐಎಫ್‌ಎಫ್‌ಗೆ ಕಂಚಿನ ಪದಕ

ನವದೆಹಲಿ (ಪಿಟಿಐ): ದೇಶದಲ್ಲಿ ಫುಟ್‌ಬಾಲ್ ಕ್ರೀಡೆಯನ್ನು ತಳಮಟ್ಟದಿಂದ ಅಭಿವೃದ್ಧಿಪಡಿಸಲು ಶ್ರಮಿಸುತ್ತಿರುವ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ಕಾರ್ಯಕ್ಕೆ ಏಷ್ಯನ್ ಫುಟ್‌ಬಾಲ್ ಫೆಡರೇಷನ್‌ನ (ಎಎಫ್‌ಸಿ) ಅಧ್ಯಕ್ಷರ ಮಾನ್ಯತೆಯ ಕಂಚಿನ ಪದಕ ಲಭಿಸಿದೆ.

ಎಐಎಫ್‌ಎಫ್ ಪಡೆಯುತ್ತಿರುವ ಎರಡನೇ ಮಾನ್ಯತಾ ಪದಕ ಇದಾಗಿದೆ. 2014ರಲ್ಲಿಯೂ ಇದೇ ಮನ್ನಣೆಗೆ ಪಾತ್ರವಾಗಿತ್ತು.

'ಎಎಫ್‌ಸಿಯ ಈ ಗೌರವವು ಭಾರತದಲ್ಲಿ ಫುಟ್‌ಬಾಲ್ ಕ್ರೀಡೆಯ ಅಭಿವೃದ್ಧಿಗೆ ಪ್ರೇರಣೆಯಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸ್ಫೂರ್ತಿಯಾಗಿದೆ' ಎಂದು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಅವರು ಮಂಗಳವಾರ ರಾತ್ರಿ ಪದಕ ಸ್ವೀಕರಿಸಿದ ನಂತರ ಪ್ರತಿಕ್ರಿಯಿಸಿದರು.

'ಬ್ಲೂ ಕಬ್ಸ್'ಗಳ ಮೂಲಕ ಫುಟ್‌ಬಾಲ್ ಕ್ರೀಡೆಯ ಬೆಳವಣಿಗೆಗೆ ಪ್ರಯತ್ನ ಮಾಡಲಾಗಿದೆ. ಅದರ ಪ್ರತಿಫಲ ಮುಂದಿನ ದಿನಗಳಲ್ಲಿ ಗೋಚರಿಸಲಿದೆ. ಈ ಕ್ರೀಡೆಯನ್ನು ಇನ್ನಷ್ಟು ಜನಪ್ರಿಯಗೊಳಿಸಿ ಎಎಫ್‌ಸಿಯ ಡೈಮಂಡ್ ವರ್ಗ ಪ್ರಶಸ್ತಿಯನ್ನು ಗೆಲ್ಲುವುದು ನಮ್ಮ ಗುರಿ' ಎಂದು ಎಐಎಫ್‌ಎಫ್ ಪ್ರಧಾನ ಕಾರ್ಯದರ್ಶಿ ಶಾಜಿ ಪ್ರಭಾಕರನ್ ಹೇಳಿದರು.

ಷೇರುಪೇಟೆ ವಹಿವಾಟು

283



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,079
ಇಂದಿನ ಅಂತ್ಯ	18,989
▼	90
ದಿನದ ಕನಿಷ್ಠ	18,973

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1550)
ಸೋಯಾ (ರಿಫೈನ್ಡ್)	₹915 (915)
ಸೂರ್ಯಕಾಂತಿ (ರಿಫೈನ್ಡ್)	₹915 (915)
ಪಾಮೋಲಿನ್	₹813 (814)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹570

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹143
ಗುಡ್ ಲಾಟ್	₹132

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹366-508
ದ್ವಿತಳಿ (ಬಿ.ವಿ)	₹341-611

ಹಬ್ಬದ ಬೇಡಿಕೆ: ಪ್ರಯಾಣಿಕ ವಾಹನ ಮಾರಾಟ ಏರಿಕೆ

ನವದೆಹಲಿ (ಪಿಟಿಐ): ಹಬ್ಬದ ಬೇಡಿಕೆಯಿಂದಾಗಿ ಪ್ರಯಾಣಿಕ ವಾಹನಗಳ ಸಗಟು ಮಾರಾಟವು ಅಕ್ಟೋಬರ್‌ನಲ್ಲಿ ದಾಖಲೆ ಮಟ್ಟಕ್ಕೆ ಏರಿಕೆ ಕಂಡಿದೆ. 2023ರ ಅಕ್ಟೋಬರ್‌ನಲ್ಲಿ 3.91 ಲಕ್ಷ ಪ್ರಯಾಣಿಕ ವಾಹನಗಳು ಮಾರಾಟ ಆಗಿವೆ. 2022ರ ಅಕ್ಟೋಬರ್‌ಗೆ ಹೋಲಿಸಿದರೆ (3.36 ಲಕ್ಷ) ಮಾರಾಟದಲ್ಲಿ ಶೇ 16ರಷ್ಟು ಹೆಚ್ಚಳ ಕಂಡುಬಂದಿದೆ.

ಮಾರುತಿ ಸುಜುಕಿ ಮತ್ತು ಮಹೀಂದ್ರ ಕಂಪನಿಗಳು ಅಕ್ಟೋಬರ್‌ನಲ್ಲಿ ಅತಿ ಹೆಚ್ಚು ವಾಹನಗಳನ್ನು ಮಾರಾಟ ಮಾಡಿರುವುದಾಗಿ ಹೇಳಿವೆ.

ಮಾರುತಿ ಸುಜುಕಿ ಇಂಡಿಯಾ ಕಂಪನಿಯ ದೇಶಿ ವಾಹನ ಮಾರಾಟವು ಶೇ 21ರಷ್ಟು ಹೆಚ್ಚಾಗಿ 1.77 ಲಕ್ಷಕ್ಕೆ ತಲುಪಿದೆ ಎಂದು ಕಂಪನಿ ತಿಳಿಸಿದೆ.

ಕಂಪನಿಯ ಪ್ರಾಣಿಕ ವಾಹನ ಮಾರಾಟ 1.40 ಲಕ್ಷದಿಂದ 1.68 ಲಕ್ಷಕ್ಕೆ ದಾಖಲೆಯ ಏರಿಕೆ ಆಗಿದೆ. ಈ ಹಿಂದೆ 2020ರ ಅಕ್ಟೋಬರ್‌ನಲ್ಲಿ 1.63 ಲಕ್ಷ ವಾಹನ ಮಾರಾಟ ಆಗಿತ್ತು ಎಂದು ಕಂಪನಿಯು ತಿಳಿಸಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಸಗಟು ಮಾರಾಟ ಶೇ 32ರಷ್ಟು ಹೆಚ್ಚಾಗಿ 80,679ಕ್ಕೆ ತಲುಪಿದೆ. 2022ರ ಅಕ್ಟೋಬರ್‌ನಲ್ಲಿ ಕಂಪನಿಯು 61,114 ವಾಹನಗಳನ್ನು ಮಾರಾಟ ಮಾಡಿತ್ತು.

ಹುಂಡೈ ಮೋಟರ್‌ನ ಮಾರಾಟ ಶೇ 15ರಷ್ಟು ಹೆಚ್ಚಾಗಿ 55,128ಕ್ಕೆ ತಲುಪಿದೆ. ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನ ಮಾರಾಟ ಶೇ 7ರಷ್ಟು ಹೆಚ್ಚಾಗಿದ್ದು, ಒಟ್ಟು 48,337 ವಾಹನಗಳು ಮಾರಾಟ ಆಗಿವೆ. ಟೊಯೋಟ ಕಿರ್ಲೋಸ್ಕರ್ ಮೋಟರ್ಸ್ 21,879 ವಾಹನಗಳನ್ನು ಮಾರಾಟ ಮಾಡಿದ್ದು, ಶೇ 66ರಷ್ಟು ಹೆಚ್ಚಳ ಕಂಡುಬಂದಿದೆ.

ಹೊಸ ಯೋಜನೆಗಳು ನಿಧಾನಗತಿಯ ಬೆಳವಣಿಗೆ ಪರಿಣಾಮ: ಎಸ್ ಆ್ಯಂಡ್ ಪಿ

ತಯಾರಿಕಾ ಚಟುವಟಿಕೆ 8 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ತಯಾರಿಕಾ ವಲಯದ ಚಟುವಟಿಕೆಯು ಅಕ್ಟೋಬರ್‌ನಲ್ಲಿ 8 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ತಯಾರಿಕಾ ವಲಯದ ಬೆಳವಣಿಗೆಯನ್ನು ತಿಳಿಸುವ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಸೆಪ್ಟೆಂಬರ್‌ನಲ್ಲಿ 57.5 ರಷ್ಟು ಇದ್ದಿದ್ದು ಅಕ್ಟೋಬರ್‌ನಲ್ಲಿ 55.5ಕ್ಕೆ ಇಳಿಕೆ ಕಂಡಿದೆ. ಫೆಬ್ರುವರಿ ಬಳಿಕ ಅತ್ಯಂತ ನಿಧಾನಗತಿಯ ಬೆಳವಣಿಗೆ ದರ ಇದಾಗಿದೆ ಎಂದು ತಿಳಿಸಿದೆ. ಹೊಸ ಯೋಜನೆಗಳು ನಿಧಾನಗತಿಯ ಬೆಳವಣಿಗೆ ಕಂಡಿರುವುದರಿಂದ ತಯಾರಿಕೆಯೂ ತಗ್ಗಿದೆ. ಇದು ಸೂಚ್ಯಂಕದಲ್ಲಿ ಇಳಿಕೆ ಕಾಣುವಂತೆ ಮಾಡಿದೆ.

ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. 50ಕ್ಕಿಂತಲೂ ಕೆಳಗಿನ ಮಟ್ಟದಲ್ಲಿ ಇದ್ದರೆ ನಕಾರಾತ್ಮಕ ಎಂದು ಪರಿಗಣಿಸಲಾಗುತ್ತದೆ. ಹೀಗಾಗಿ ಸತತ 28ನೇ ತಿಂಗಳಿನಲ್ಲಿಯೂ ಒಟ್ಟಾರೆ ಬೆಳವಣಿಗೆಯು ಸಕಾರಾತ್ಮಕವಾಗಿಯೇ ಮುಂದುವರಿದಿದೆ.

ಉತ್ಪನ್ನಗಳಿಗೆ ಸದ್ಯ ಇರುವ ಬೇಡಿಕೆಯು ನಿರೀಕ್ಷಿತ ಮಟ್ಟದಲ್ಲಿ ಇರದೇ ಇರುವುದು ಕಂಪನಿಗಳನ್ನು ಆತಂಕಕ್ಕೆ ದೂಡಿದೆ. ಹೀಗಾಗಿ ಹೊಸ ಯೋಜನೆಗಳಿಗೆ ಬೇಡಿಕೆಯು ಒಂದು ವರ್ಷದ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ತಿಳಿಸಿದ್ದಾರೆ.

ತಯಾರಿಕೆ, ರಫ್ತು, ಖರೀದಿ ಸಾಮರ್ಥ್ಯ ಮತ್ತು ನೇಮಕ ಪ್ರಕ್ರಿಯೆ ಮತ್ತು ವಹಿವಾಟು ನಡೆಸುವ ವಿಶ್ವಾಸ... ಎಲ್ಲವೂ ಮಂದಗತಿಯಲ್ಲಿ ಇರುವುದೇ ವಲಯದ ಬೆಳವಣಿಗೆ ಕುಗ್ಗಲು ಕಾರಣವಾಗಿದೆ ಎಂದು ಸಮೀಕ್ಷೆಯು ತಿಳಿಸಿದೆ.

ಶೇ 4ರಷ್ಟು ಕಂಪನಿಗಳು ಮಾತ್ರವೇ ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಿಕೊಂಡಿವೆ. ಆದರೆ ಶೇ 95ರಷ್ಟು ಕಂಪನಿಗಳು ತಮ್ಮ ಸಿಬ್ಬಂದಿ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಮಾಡಿಕೊಂಡಿಲ್ಲ. ಉದ್ಯೋಗ ಸೃಷ್ಟಿ ಪ್ರಮಾಣವು ಏಪ್ರಿಲ್ ಬಳಿಕ ಮಂದಗತಿಯಲ್ಲಿ ಸಾಗುತ್ತಿದೆ. ತಯಾರಿಕಾ ವೆಚ್ಚ ತೀವ್ರ ಏರಿಕೆ ಕಂಡಿದೆ ಎಂದು ಹೇಳಿದೆ.

ಮುಖ್ಯಾಂಶಗಳು

- ಸತತ 28ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಬೆಳವಣಿಗೆ
- ಐದು ತಿಂಗಳ ಕನಿಷ್ಠ ಮಟ್ಟಕ್ಕೆ ವಹಿವಾಟು ನಡೆಸುವ ವಿಶ್ವಾಸ

ತಯಾರಿಕಾ ವಲಯದ ಬೆಳವಣಿಗೆ ಸೂಚ್ಯಂಕ

ಜೂನ್	57.8
ಜುಲೈ	57.7
ಆಗಸ್ಟ್	58.6
ಸೆಪ್ಟೆಂಬರ್	57.5
ಅಕ್ಟೋಬರ್	55.5

ಜಿಆರ್‌ಟಿಯಿಂದ ದೀಪಾವಳಿ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಆರ್‌ಟಿ ಜುವೆಲರ್ಸ್ ಕಂಪನಿಯು ದೀಪಾವಳಿ ಪ್ರಯುಕ್ತ 'ಸ್ವರ್ಣ ದೀಪಾವಳಿ' ಕೊಡುಗೆ ಆರಂಭಿಸಿದೆ.

ಗ್ರಾಹಕರು ಖರೀದಿಸುವ ಚಿನ್ನದ ತೂಕಕ್ಕೆ ಸಮನಾದ ಬೆಳ್ಳಿಯನ್ನು ಉಚಿತವಾಗಿ ಪಡೆಯಲಿದ್ದಾರೆ. ಅಲ್ಲದೆ, ಪ್ರತಿ ಕ್ಯಾರಟ್ ವಜ್ರಕ್ಕೆ 25 ಗ್ರಾಂ ಬೆಳ್ಳಿಯನ್ನು ಉಚಿತವಾಗಿ ಪಡೆಯಬಹುದು. ಬೆಳ್ಳಿಯ ಸಾಮಗ್ರಿಗಳ ಮೇಕಿಂಗ್ ಶುಲ್ಕದಲ್ಲಿ ಶೇ 25 ಮತ್ತು ಬೆಳ್ಳಿ ಆಭರಣಗಳಿಗೆ ಎಂಆರ್‌ಪಿ ಮೇಲೆ ಶೇ 10 ರಿಯಾಯಿತಿ ಪಡೆಯಬಹುದು. ಗ್ರಾಹಕರ ಸಂಭ್ರಮದ ಭಾಗವಾಗಲು ವಿಶೇಷ ಕೊಡುಗೆಗಳನ್ನು ನೀಡುತ್ತಿದ್ದೇವೆ' ಎಂದು ಜಿಆರ್‌ಟಿ ಹೇಳಿದೆ.

ಚಿನ್ನ ₹350, ಬೆಳ್ಳಿ ₹1,200 ಇಳಿಕೆ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಬುಧವಾರ ಚಿನ್ನದ ದರ 10 ಗ್ರಾಂಗೆ ₹350ರಷ್ಟು ಇಳಿಕೆ ಕಂಡು ₹61,700 ರಂತೆ ಮಾರಾಟ ಆಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹1,200ರಷ್ಟು ಕಡಿಮೆ ಆಗಿ ₹74,300ಕ್ಕೆ ತಲುಪಿತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿದ್ದು ದೇಶದಲ್ಲಿಯೂ ದರ ಇಳಿಕೆಗೆ ಕಾರಣವಾಯಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಲ್ಯಾಪ್‌ಟಾಪ್ ಆಮದು: 110 ಅರ್ಜಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್ ಸೇರಿದಂತೆ ಐ.ಟಿ. ಹಾರ್ಡ್‌ವೇರ್‌ಗಳನ್ನು ಆಮದು ಮಾಡಿಕೊಳ್ಳಲು ಅನುಮತಿ ಕೋರಿ 111 ಅರ್ಜಿಗಳು ಸಲ್ಲಿಕೆ ಆಗಿದ್ದವು. ಅದರಲ್ಲಿ 110 ಅರ್ಜಿಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆ್ಯಪಲ್, ಡೆಲ್, ಲೆನೊವೊ, ಎಚ್‌ಪಿ ಇಂಡಿಯಾ, ಐಬಿಎಂ ಇಂಡಿಯಾ, ಸ್ಯಾಮ್ಸಂಗ್, ಶಿಯೋಮಿ, ಸಿಸ್ಕೊ, ಮೈಕ್ರೊಸಾಫ್ಟ್ ಸೇರಿದಂತೆ ಪ್ರಮುಖ ಕಂಪನಿಗಳು ಆಮದು ಒಪ್ಪಿಗೆಯನ್ನು ಪಡೆದುಕೊಂಡಿವೆ ಎಂದು ಹೇಳಿದ್ದಾರೆ.

ತಿರಸ್ಕೃತ ಕಂಪನಿಗಳ ಪಟ್ಟಿಯಲ್ಲಿ ಇದ್ದ ಕಾರಣಕ್ಕೆ ಹೈದರಾಬಾದ್ ಮೂಲದ ಒಂದು ಕಂಪನಿಗೆ ಒಪ್ಪಿಗೆ ನೀಡಲಾಗಿಲ್ಲ ಎಂದು ಅವರು ತಿಳಿಸಿದ್ದಾರೆ.

ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್‌ಗಳನ್ನು ಆಮದು ಮಾಡಿಕೊಳ್ಳಲು ಆನ್‌ಲೈನ್ ದೃಢೀಕರಣ ವ್ಯವಸ್ಥೆಯನ್ನು ಅಕ್ಟೋಬರ್ 19ರಿಂದ ಜಾರಿಗೊಳಿಸಲಾಗಿದೆ. ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯದ (ಡಿಜಿಎಫ್‌ಟಿ) ಪ್ರಕಾರ, ಆನ್‌ಲೈನ್ ದೃಢೀಕರಣ ಪಡೆದುಕೊಳ್ಳಲು ಆಮದುದಾರರು ನೋಂದಣಿ ಮಾಡಿಕೊಳ್ಳುವ ಅಗತ್ಯ ಇಲ್ಲ. ಆಮದು ಮಾಡಿಕೊಳ್ಳುವ ವಸ್ತುಗಳ ಪ್ರಮಾಣ, ಮೌಲ್ಯದ ವಿವರ ನೀಡಬೇಕು. ಈ ಹಿಂದೆ ಆಮದು, ರಫ್ತು ವಹಿವಾಟು ನಡೆಸಿರುವ ಮಾಹಿತಿ ಮತ್ತು ಒಟ್ಟು ವಹಿವಾಟಿನ ವಿವರವನ್ನೂ ನೀಡಬೇಕು.

ವಾಣಿಜ್ಯ ಸಿಲಿಂಡರ್ ₹101 ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡ ರ್‌ದರವನ್ನು ₹101.5ರಷ್ಟು ಹೆಚ್ಚಿಸಿವೆ.

ದೆಹಲಿಯಲ್ಲಿ ವಾಣಿಜ್ಯ ಬಳಕೆಯ 19 ಕೆ.ಜಿ. ಸಿಲಿಂಡರ್ ದರವು ₹1,785.50ಕ್ಕೆ ಏರಿಕೆ ಆಗಿದೆ. ಅಕ್ಟೋಬರ್ 1ರಂದು ಪ್ರತಿ ಸಿಲಿಂಡರ್‌ಗೆ ₹209ರಷ್ಟು ಹೆಚ್ಚಿಸಲಾಗಿತ್ತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಏರಿಕೆಗೆ ಅನುಗುಣವಾಗಿ ಈ ಬದಲಾವಣೆ ಮಾಡಲಾಗಿದೆ ಎಂದು ತಿಳಿಸಿವೆ.

ವಿಮಾನ ಇಂಧನ ದರ ಇಳಿಕೆ: ವಿಮಾನ ಇಂಧನ (ಎಟಿಎಫ್) ದರವನ್ನು ಶೇ 6ರವರೆಗೆ ಕಡಿತ ಮಾಡಲಾಗಿದೆ. ತೈಲ ಕಂಪನಿಗಳ ದರ ಸೂಚನೆಯ ಪ್ರಕಾರ, ದೆಹಲಿಯಲ್ಲಿ ವಿಮಾನ ಇಂಧನ ದರವು ಕಿಲೋ ಲೀಟರಿಗೆ ₹6,854ರಷ್ಟು ಕಡಿಮೆ ಆಗಿದ್ದು, ₹1.11 ಲಕ್ಷಕ್ಕೆ ತಲುಪಿದೆ. (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್).

ಸ್ಯಾಮ್ಸಂಗ್‌ಗೆ ಮೊದಲ ಸ್ಥಾನ

ನವದೆಹಲಿ (ಪಿಟಿಐ): ಭಾರತದ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಸ್ಯಾಮ್ಸಂಗ್ ಕಂಪನಿಯು ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಶೇ 17.2ರಷ್ಟು ಷೇರುಪಾಲು ಹೊಂದುವ ಮೂಲಕ ಮೊದಲ ಸ್ಥಾನ ಕಾಯ್ದುಕೊಂಡಿದೆ ಎಂದು ಕೌಂಟರ್‌ಪಾಯಿಂಟ್ ಸಂಸ್ಥೆ ಹೇಳಿದೆ. ಶೇ 16.6ರಷ್ಟು ಪಾಲು ಹೊಂದಿರುವ ಶಿಯೋಮಿ ಎರಡನೇ ಸ್ಥಾನದಲ್ಲಿದೆ.

ಎಂಆರ್‌ಪಿಎಲ್ ₹2,072 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) 2023–24ನೇ ಹಣಕಾಸು ವರ್ಷದ 2ನೇ ತ್ರೈಮಾಸಿಕದಲ್ಲಿ ₹2,072 ಕೋಟಿ ಲಾಭ ಗಳಿಸುವ ಮೂಲಕ ದಾಖಲೆ ಮಾಡಿದೆ.

ಕಾರ್ಯಾಚರಣೆಗಳಿಂದ ₹47,676 ಕೋಟಿ ಆದಾಯ ದೊರೆತಿದ್ದು, ತೆರಿಗೆ ಪೂರ್ವದ ಲಾಭ ₹3,164 ಕೋಟಿ ಆಗಿದೆ. ತೆರಿಗೆಯ ನಂತರದ ಲಾಭ ₹2,072 ಕೋಟಿಯಷ್ಟಾಗಿದೆ ಎಂದು ಕಂಪನಿಯು ತಿಳಿಸಿದೆ.

2022–23ನೇ ಸಾಲಿನಲ್ಲಿ ದ್ವಿತೀಯ ತ್ರೈಮಾಸಿಕದಲ್ಲಿ ತೆರಿಗೆ ಪೂರ್ವದ ಲಾಭ ₹1,577 ಕೋಟಿ ಆಗಿದ್ದರೆ, ತೆರಿಗೆ ನಂತರ ₹918 ಕೋಟಿ ಲಾಭವಾಗಿತ್ತು. ತೆರಿಗೆ ಪೂರ್ವದ ಲಾಭದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ, ಶೇ 162.34ರಷ್ಟು ಹೆಚ್ಚಳವಾಗಿದೆ. ದೀರ್ಘಾವಧಿಯ ಸಾಲಗಳ ಒಟ್ಟು ಬಡ್ಡಿ ಕಡಿತವು 2023ರ ಮಾರ್ಚ್ ಅಂತ್ಯಕ್ಕೆ ₹14,837 ಕೋಟಿ ಇದ್ದರೆ, ಸೆಪ್ಟೆಂಬರ್ ಅಂತ್ಯದಲ್ಲಿ ₹11,625 ಕೋಟಿಗೆ ತಗ್ಗಿದೆ. ಹೀಗಾಗಿ, 2022 ಸೆಪ್ಟೆಂಬರ್ ಅಂತ್ಯಕ್ಕೆ ಇದ್ದ 2.24 ಸಾಲದ ಇಕ್ವಿಟಿ ಅನುಪಾತ 1.17ಕ್ಕೆ ಇಳಿಕೆಯಾಗಿದೆ.

ಜಿಎಸ್‌ಟಿ: ₹1.72 ಲಕ್ಷ ಕೋಟಿ ಸಂಗ್ರಹ

ಒಂದನೇ ಪುಟದಿಂದ

2023–24ನೇ ಹಣಕಾಸು ವರ್ಷಕ್ಕೆ ಜಿಎಸ್‌ಟಿ ಸರಾಸರಿ ಸಂಗ್ರಹವು ₹1.66 ಲಕ್ಷ ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 11ರಷ್ಟು ಹೆಚ್ಚು ಸಂಗ್ರಹ ಆಗಿದೆ. ವರ್ಷದಿಂದ ವರ್ಷಕ್ಕೆ ತೆರಿಗೆ ಸಂಗ್ರಹವು ಅಕ್ಟೋಬರ್‌ನಲ್ಲಿ 10 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿರುವುದು ಉತ್ತೇಜನಕಾರಿ ಬೆಳವಣಿಗೆ. ಸಿಜಿಎಸ್‌ಟಿ ಸಂಗ್ರಹವು 2023–24ರ ಬಜೆಟ್ ಅಂದಾಜನ್ನೂ ಮೀರುವ ಸಾಧ್ಯತೆ ಇದೆ ಎಂದು ಐಸಿಆರ್‌ಎನ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

'ತೆರಿಗೆ ಸಂಗ್ರಹವು ಸ್ಥಿರವಾಗಿದ್ದು, ತೆರಿಗೆ ಹಂತಗಳನ್ನು ಸರಳಗೊಳಿಸುವುದನ್ನು ಸರ್ಕಾರ ಇದೀಗ ಪರಿಗಣಿಸಬಹುದು' ಎಂದು ಇವೈ ತೆರಿಗೆ ಸಲಹೆಗಾರ ಸೌರಭ್ ಅಗರ್ವಾಲ್ ತಿಳಿಸಿದ್ದಾರೆ.



ಮುಂಬೈ ಧಾರಣೆ

ಶೇಂಗಾ

01-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1560)
ಒಂದು ವಾರದ ಡೆಲಿವರಿ	1545 (1555)
ಸೋಯಾ ಕಚ್ಚಾ	860 (860)
ಪಾಮ್ ವಾರದ ಡೆಲಿವರಿ	815 (816)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	60,700 (61,100)
ಬೆಳ್ಳಿ ಕೆ.ಜಿ	70,950 (72,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ರಾಯಚೂರು
ದೂರವಾಣಿ ಸಂಖ್ಯೆ : 08532–225778 & 234747
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1)
THESE WORKS ARE GENARAL SC & ST CONTRACTORS
1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ: ಲೋಇ/ರಾವಿ/ತಾಂಶಾ–4/ಟೆಂಪ್ರ/2023–24/2216 ದಿನಾಂಕಃ 27–10–2023 **2) ಕಾಮಗಾರಿ ಹೆಸರು:** ರಾಯಚೂರು ಜಿಲ್ಲೆಯ ಒಟ್ಟು 34 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ ಲಿಂಗಸುಗೂರು ಮತ್ತು ಸಿಂಧನೂರು ತಾಲೂಕು ವಿವಿಧಡೆ ಕಟ್ಟಡ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. **3) ಕಾಮಗಾರಿಯ ಮೊತ್ತ:** ಕನಿಷ್ಠ ರೂ. 101525.01 ಗರಿಷ್ಠ ರೂ. 1694185.80 **4) ಮುಂಗಡ ಠೇವಣಿ ಮೊತ್ತ:** ಕನಿಷ್ಠ ರೂ. 2600.00 ಗರಿಷ್ಠ ರೂ. 42400.00 **5) ಕಾಲಾವಧಿ (ಮಳೆಗಾಲ ಸೇರಿ):** ಕನಿಷ್ಠ 2 (ಎರಡು) ತಿಂಗಳು ಗರಿಷ್ಠ 4 (ನಾಲ್ಕು) ತಿಂಗಳು **6) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:** 08–11–2023 ಸಂಜೆ 4.00 ಗಂಟೆಯವರೆಗೆ **7) ಟೆಂಡರ್ ತೆರೆಯುವ ದಿನಾಂಕ:** 09–11–2023 ಸಂಜೆ 4.30 ಗಂಟೆಯವರೆಗೆ
ಹೆಚ್ಚಿನ ವಿವರಗಳು ವೆಬ್‌ಸೈಟ್ https://kppp.karnataka.gov.in/ ಮುಖಾಂತರ ನೋಡಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.
DIP/RCR/197/KSMC&A/194/2023-24

ಮುಂಬೈನಲ್ಲಿ ಇಂದು ಹಣಾಹಣಿ • ಗೆಲುವಿನ ಓಟ ಮುಂದುವರಿಸುವ ತವಕದಲ್ಲಿ ರೋಹಿತ್ ಪಡೆ

ಬಲಿಷ್ಠ ಭಾರತಕ್ಕೆ ಲಂಕಾ ಎದುರಾಳಿ

ಮುಂಬೈ (ಪಿಟಿಐ): ಸುಮಾರು 12 ವರ್ಷಗಳ ಹಿಂದೆ ವಿಶ್ವಕಪ್ ಫೈನಲ್‌ನಲ್ಲಿ ಆಗ ಏಷ್ಯಾದ ಎರಡು ಬಲಿಷ್ಠ ತಂಡಗಳು ಎದುರಾಗಿದ್ದವು. ಈಗ ಭಾರತ ವಿಶ್ವಕಪ್‌ನಲ್ಲಿ ಮತ್ತೊಮ್ಮೆ ಶ್ರೀಲಂಕಾ ತಂಡವನ್ನು ಎದುರಿಸಲು ಸಜ್ಜಾಗಿದೆ. ಅಂದಿನ ದಿನಗಳಿಗೆ ಹೋಲಿಸಿದರೆ ಗುರುವಾರ ನಡೆಯುವ ಪಂದ್ಯ ಎರಡು ಅಸಮಬಲ ತಂಡಗಳ ನಡುವಣ ಹಣಾಹಣಿಯಾಗಿ ಕಾಣುತ್ತಿದೆ.

ಒಂದೆಡೆ ಆತಿಥೇಯ ತಂಡ ಇದುವರೆಗೆ ಆಡಿದ ಆರು ಲೀಗ್ ಪಂದ್ಯಗಳಲ್ಲಿ ಎದುರಾಳಿ ತಂಡಗಳ ಮೇಲೆ ಸವಾರಿ ಮಾಡಿದೆ. ಇನ್ನೊಂದೆಡೆ, ಶ್ರೀಲಂಕಾ ಗೆದ್ದಿರುವುದಕ್ಕಿಂತ ಸೋತಿದ್ದೇ ಜಾಸ್ತಿ.

ಏಕೈಕ ಅಜೇಯ ತಂಡವಾಗಿರುವ ಭಾರತಕ್ಕೆ ಗಂಭೀರ ಸವಾಲು ಎದುರಾಗಿಲ್ಲ. ತಂಡದ ಆತ್ಮವಿಶ್ವಾಸ ಈಗ ಎತ್ತರದಲ್ಲಿದೆ. ಅದಕ್ಕಿಂತ ತನ್ನ ಸಾಮರ್ಥ್ಯ ಮತ್ತು ಕೌಶಲದ ಮೇಲಿರುವ ನಂಬಿಕೆಯೂ ಹೆಚ್ಚು ಇದೆ. ಆಸ್ಟ್ರೇಲಿಯಾ ವಿರುದ್ಧ 2 ರನ್ನಿಗೆ ಮೂರು ವಿಕೆಟ್ ಕಳೆದುಕೊಂಡಾಗ ಪುಟಿದೆದ್ದ ರೀತಿ ಅಮೋಘವಾಗಿತ್ತು. ಇಂಗ್ಲೆಂಡ್ ವಿರುದ್ಧ ಲಖನೌದಲ್ಲಿ 229 ರನ್ ಗಳಿಸಿದ್ದಾಗ ಹೋರಾಟ ಎದುರಾಗಬಹುದು ಎನ್ನುವ ಸ್ಥಿತಿಯಲ್ಲಿದ್ದಾಗ ಜಯ ಸಲೀಸಾಗಿಯೇ ದಾಖಲಾಗಿತ್ತು.

ಹೀಗಾಗಿ ರೋಹಿತ್ ಶರ್ಮಾ ಬಳಗವನ್ನು ಎದುರಿಸುವಾಗ ಎದುರಾಳಿ ತಂಡಗಳೂ ತಮ್ಮ ಆಟದ ಮಟ್ಟವನ್ನು ಗಮನಾರ್ಹವಾಗಿ ಎತ್ತರಿಸಬೇಕಾಗಿದೆ. ಹಾರ್ದಿಕ್ ಪಾಂಡ್ಯ ಅನುಪಸ್ಥಿತಿಯಲ್ಲಿ ಅವಕಾಶ ಪಡೆದ ಮೊಹಮ್ಮದ್ ಶಮಿ ಅವರು ತಂಡದ ಗೆಲುವಿನಲ್ಲಿ ಮಿಂಚಿದ್ದು ಗಮನಾರ್ಹ. ಒಮ್ಮೆ ಐದರ ಗೊಂಚಲು ಸೇರಿದಂತೆ ಎರಡು ಪಂದ್ಯಗಳಿಂದ 9 ವಿಕೆಟ್. ಹೀಗಾಗಿ ಅವರ ಸ್ಥಾನ ಗಟ್ಟಿಯಾದಂತಿದೆ. ಪಾಂಡ್ಯ ತಂಡಕ್ಕೆ ಮರಳುವ ಬಗ್ಗೆ ಇದುವರೆಗೆ ಖಚಿತ ಮಾಹಿತಿಯಿಲ್ಲ.

ವಿಶ್ವಕಪ್‌ಗೆ ಮೊದಲು ಯುವ ಆಟಗಾರರಾದ ಶುಭಮನ್ ಗಿಲ್ ಮತ್ತು ಶ್ರೇಯಸ್ ಅಯ್ಯರ್ ಏಕದಿನ ಮಾದರಿಯಲ್ಲಿ ಅಮೋಘ ಪ್ರದರ್ಶನ ನೀಡಿದ್ದರು. ಆದರೆ ನಂತರ ನಿರೀಕ್ಷಿತ ಪ್ರದರ್ಶನ ನೀಡುತ್ತಿಲ್ಲ. ಮೊದಲ ಎರಡು ಪಂದ್ಯಗಳನ್ನು ಜ್ವರದಿಂದ ಕಳೆದುಕೊಂಡಿದ್ದ ಗಿಲ್ ನಂತರ ಒಂದು ಅರ್ಧಶತಕ ಮಾತ್ರ ಹೊಡೆದಿದ್ದಾರೆ. ಅವರು ವಿಕೆಟ್ ಒಪ್ಪಿಸುವ ವೇಳೆ ಹೊಡೆತದ ಆಯ್ಕೆ ನಿರಾಸೆ ಮೂಡಿಸಿತ್ತು. ಈಗ ಅವರ ಮುಂದೆ ದೊಡ್ಡ ಇನಿಂಗ್ಸ್ ಆಡಬೇಕಾದ ಸವಾಲು ಇದೆ.

ಶಾರ್ಟ್‌ಪಿಚ್ ಎಸೆತಗಳ ಎದುರು ಶ್ರೇಯಸ್ ಪರದಾಟ ಎದುರಾಳಿಗಳಿಗೆ ಅಸ್ತ್ರ ಒದಗಿಸಿದೆ. ಆರು ಇನಿಂಗ್ಸ್‌ಗಳಿಂದ ಅವರು ಬರೇ ಒಂದು ಅರ್ಧ ಶತಕ (ಪಾಕ್ ವಿರುದ್ಧ ಅಜೇಯ 53) ಹೊಡೆದಿದ್ದಾರೆ. ದೊಡ್ಡ ಇನಿಂಗ್ಸ್ ಆಡುವ ಅವಕಾಶವಿರುವಾಗ ಎಡವಿದ್ದಾರೆ. ಅವರೂ ಈಗ ಉತ್ತಮ ಇನಿಂಗ್ಸ್ ಒಂದರ ನಿರೀಕ್ಷೆಯಲ್ಲಿದ್ದಾರೆ. ಅದೂ ತವರಿನಲ್ಲಿ. ರೋಹಿತ್, ಸೂರ್ಯಕುಮಾರ್, ಶಾರ್ದೂಲ್ ಠಾಕೂರ್ ಅವರಿಗೂ ಇದು ತವರು ಮೈದಾನ.

ಒಂದು ಶತಕ, ಎರಡು ಅರ್ಧ ಶತಕ ಸೇರಿದಂತೆ 66.33 ಸರಾಸರಿಯಲ್ಲಿ 398 ರನ್ ಗಳಿಸಿರುವ ರೋಹಿತ್ ಅವರು ತವರಿನ ಅಭಿಮಾನಿಗಳೆದುರು ಸ್ಮರಣೀಯ ಇನಿಂಗ್ಸ್ ಆಡುವ ತವಕದಲ್ಲಿದ್ದಾರೆ.

ಶ್ರೀಲಂಕಾ ತಂಡವನ್ನು ಹಗುರುವಾಗಿ ಪರಿಗಣಿಸುವಂತಿಲ್ಲ. ಸಿಂಹಳೀಯರು ಹಾಲಿ ವಿಶ್ವಕಪ್‌ನಲ್ಲಿ ಸ್ಥಿರ ಪ್ರದರ್ಶನ ನೀಡಿಲ್ಲ. ಪ್ರಮುಖ ಆಟಗಾರರು ಗಾಯಾಳಾಗಿರುವುದು ಮತ್ತು ಕೆಲವರು ಅಲಭ್ಯರಾಗಿರುವುದು ತಂಡವನ್ನು ಬಾಧಿಸಿದೆ. ತಂಡದ ಯುವ ಆಟಗಾರರು ಆತಿಥೇಯರ ಗುಣಮಟ್ಟದ ದಾಳಿಯನ್ನು ಹೇಗೆ ಎದುರಿಸುತ್ತಾರೆ ಎಂಬುದು ಕುತೂಹಲಕರ.

ಸದೀರ ಸಮರವಿಕ್ರಮ ಉತ್ತಮ ಲಯದಲ್ಲಿದ್ದು 6 ಪಂದ್ಯಗಳಿಂದ 331 ರನ್ ಕಲೆಹಾಕಿದ್ದಾರೆ. ಈ ವಿಶ್ವಕಪ್‌ನಲ್ಲಿ ಅವರೇ ತಂಡದ ಅತ್ಯಧಿಕ ರನ್ ಗಳಿಕೆದಾರ. ಗಿಲ್ ನಂತರ ಈ ವರ್ಷ ಏಕದಿನ ಕ್ರಿಕೆಟ್‌ನಲ್ಲಿ ಸಹಸ್ರ ರನ್ ಗಳಿಸಿದ ಎರಡನೇ ಆಟಗಾರ ಎನಿಸಿರುವ ಪಥುಮ್ ನಿಸಾಂಕ ಅವರೂ ಉತ್ತಮ ಪ್ರದರ್ಶನ ನೀಡಿದ್ದಾರೆ. ಈ ವರ್ಷ 26 ಪಂದ್ಯಗಳಲ್ಲಿ ಎರಡು ಶತಕ, 9 ಅರ್ಧ ಶತಕಗಳನ್ನು ಬಾರಿಸಿರುವ ಅವರು 48.17 ಸರಾಸರಿಯಲ್ಲಿ 1,108 ರನ್ ಗಳಿಸಿದ್ದಾರೆ. ನಾಯಕ ಕುಸಲ್ ಮೆಂಡಿಸ್ ಅವರೂ ಕಲಾತ್ಮಕ ಹೊಡೆತಗಳ ಬ್ಯಾಟರ್. ಅನುಭವಿ ಆಲ್‌ರೌಂಡರ್ ಏಂಜೆಲೊ ಮ್ಯಾಥ್ಯೂಸ್ ತಂಡಕ್ಕೆ ಮರಳಿದ್ದಾರೆ. ಹೀಗಾಗಿ ತಂಡ ಹೋರಾಟ ತೋರಬಹುದು.

ಶ್ರೀಲಂಕಾ ತಂಡದ ಕುಸಲ್ ಮೆಂಡಿಸ್–ಎಎಫ್‌ಪಿ ಚಿತ್ರ

ಭಾರತ ತಂಡದ ಆಟಗಾರರಾದ ಶುಭಮನ್ ಗಿಲ್ ಮತ್ತು ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಮುಖಾಮುಖಿ

ಒಟ್ಟು ಪಂದ್ಯಗಳು	167
ಭಾರತ ಗೆಲುವು	98
ಶ್ರೀಲಂಕಾ ಗೆಲುವು	57
ಟೈ	1
ಫಲಿತಾಂಶವಿಲ್ಲ	11

ಎರಡು ತಂಡಗಳ ನಡುವೆ ನಡೆದಿರುವ ಕೊನೆಯ 10 ಪಂದ್ಯಗಳಲ್ಲಿ ಭಾರತ 9 ಪಂದ್ಯಗಳಲ್ಲಿ ಜಯಗಳಿಸಿದೆ. ಒಂದರಲ್ಲಿ ಶ್ರೀಲಂಕಾ ಜಯಗಳಿಸಿದೆ.

ಪಂದ್ಯ ಆರಂಭ ಮಧ್ಯಾಹ್ನ 2.00

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಇನ್ನೂ ಎರಡು ಪಂದ್ಯಕ್ಕೆ ಪಾಂಡ್ಯ ಅಲಭ್ಯ?

ಮುಂಬೈ (ಪಿಟಿಐ): ಪಾದದ ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಭಾರತದ ಅಗ್ರಮಾನ್ಯ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ನೆದರ್ಲೆಂಡ್ಸ್ ವಿರುದ್ಧ ನವೆಂಬರ್ 12ರಂದು ನಡೆಯಲಿರುವ ಪಂದ್ಯಕ್ಕೆ ಮುನ್ನ ರಾಷ್ಟ್ರೀಯ ತಂಡಕ್ಕೆ ಹಿಂತಿರುಗುವ ಸಾಧ್ಯತೆ ಕ್ಷೀಣವಾಗಿದೆ. ಪುಣೆಯಲ್ಲಿ ಕಳೆದ ತಿಂಗಳ 19ರಂದು ಬಾಂಗ್ಲಾದೇಶ ವಿರುದ್ಧ ಪಂದ್ಯದ ವೇಳೆ ಅವರು ಗಾಯಗೊಂಡಿದ್ದರು.

ನ್ಯೂಜಿಲೆಂಡ್ ಮತ್ತು ಇಂಗ್ಲೆಂಡ್ ವಿರುದ್ಧದ ಪಂದ್ಯಗಳನ್ನು ಅವರು ಕಳೆದುಕೊಂಡಿದ್ದರು. ಗುರುವಾರ (ನ.2) ಶ್ರೀಲಂಕಾ ವಿರುದ್ಧ ಮತ್ತು ಬರುವ ಭಾನುವಾರ (ನ. 5ರಂದು) ದಕ್ಷಿಣ ಆಫ್ರಿಕಾ ವಿರುದ್ಧ ಪಂದ್ಯಗಳನ್ನು ಅವರು ಕಳೆದುಕೊಳ್ಳುವ ನಿರೀಕ್ಷೆಯಿದೆ.

ಹಾರ್ದಿಕ್ ಪಾಂಡ್ಯ


ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಿರ್ಮಿಸಿರುವ ಸಚಿನ್ ತೆಂಡೂಲ್ಕರ್ ಅವರ ಪ್ರತಿಮೆಯನ್ನು ಬುಧವಾರ ಅನಾವರಣಗೊಳಿಸಲಾಯಿತು –ಎಎಫ್‌ಪಿ ಚಿತ್ರ

ಅಗ್ರಸ್ಥಾನಕ್ಕೇರಿದ ದಕ್ಷಿಣ ಆಫ್ರಿಕಾ

ಡಿ ಕಾಕ್, ವ್ಯಾನ್ ಡರ್ ಡಸೆ ಶತಕ: ಕಿವೀಸ್ ವಿರುದ್ಧ ಗೆಲುವು

ಪುಣೆ (ಪಿಟಿಐ): ಕ್ವಿಂಟನ್ ಡಿ ಕಾಕ್ ಮತ್ತು ರಸೀ ವ್ಯಾನ್ ಡರ್ ಡಸೆ ಶತಕಗಳ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ, ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ನ್ಯೂಜಿಲೆಂಡ್ ತಂಡವನ್ನು 190 ರನ್‌ಗಳಿಂದ ಬಗ್ಗುಬಡಿಯಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ 4 ವಿಕೆಟ್‌ಗಳಿಗೆ 357 ರನ್ ಪೇರಿಸಿತು. ಟೂರ್ನಿಯಲ್ಲಿ ನಾಲ್ಕನೇ ಶತಕ ಗಳಿಸಿದ ಡಿ ಕಾಕ್ (114; 116 ಎ., 4X10, 6X3) ಮತ್ತು ಡಸೆ (133; 118 ಎ., 4X9, 6X5) ಅವರು ಎದುರಾಳಿ ಬೌಲರ್‌ಗಳನ್ನು ದಂಡಿಸಿದರು.

ಸವಾಲಿನ ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್, 35.3 ಓವರ್‌ಗಳಲ್ಲಿ 167 ರನ್‌ಗಳಿಗೆ ಆಲೌಟಾಯಿತು. ಕೇಶವ್ ಮಹಾರಾಜ್ (46ಕ್ಕೆ 4) ಮತ್ತು ಮಾರ್ಕೊ ಜಾನ್ಸೆನ್ (31ಕ್ಕೆ 3) ಅವರು ಕಿವೀಸ್ ತಂಡವನ್ನು ಅಲ್ಪ ಮೊತ್ತಕ್ಕೆ ಕಟ್ಟಿಹಾಕಿದರು.

ಆರನೇ ಗೆಲುವು ಸಾಧಿಸಿದ ತೆಂಬಾ ಬವುಮಾ ಬಳಗ 12 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನಕ್ಕೇರಿದರೆ ಮೂರನೇ ಸ್ಥಾನದಲ್ಲಿದ್ದ ನ್ಯೂಜಿಲೆಂಡ್, ಒಂದು ಸ್ಥಾನ ಕೆಳಕ್ಕೆ ಜಾರಿತು.

ನ್ಯೂಜಿಲೆಂಡ್ ತಂಡ ಆರಂಭದಲ್ಲೇ ಆಘಾತ ಅನುಭವಿಸಿತು. ಉತ್ತಮ ಫಾರ್ಮ್‌ನಲ್ಲಿರುವ ಡೆವೊನ್ ಕಾನ್ವೆ (2) ಮತ್ತು ರಚಿನ್ ರವೀಂದ್ರ (9) ಅವರು ಸ್ಕೋರ್ 45 ಆಗುವಷ್ಟರಲ್ಲಿ ಪೆವಿಲಿಯನ್ ಸೇರಿದರು. ಇಬ್ಬರನ್ನೂ ಮಾರ್ಕೊ ಜಾನ್ಸೆನ್ ಔಟ್ ಮಾಡಿದರು. ವಿಲ್ ಯಂಗ್ ಮತ್ತು ಡೆರಿಲ್ ಮಿಚೆಲ್ ಕೂಡಾ ಹೆಚ್ಚುಹೊತ್ತು ನಿಲ್ಲಲಿಲ್ಲ. ಇದರಿಂದ ತಂಡ ಗೆಲುವಿನ ಆಸೆ ಕೈಬಿಟ್ಟಿತು. ಗ್ಲೆನ್ ಫಿಲಿಪ್ಸ್ (60; 50 ಎ., 4X4, 6X4) ಮಾತ್ರ ಅಲ್ಪ ಪ್ರತಿರೋಧ ಒಡ್ಡಿದರು.

200 ರನ್ ಜತೆಯಾಟ: ಇದಕ್ಕೂ ಮುನ್ನ ಟಾಸ್ ಸೋತರೂ ಮೊದಲು ಬ್ಯಾಟ್ ಮಾಡುವ ಅವಕಾಶ ಪಡೆದ ದಕ್ಷಿಣ ಆಫ್ರಿಕಾ, ಟೂರ್ನಿಯಲ್ಲಿ ನಾಲ್ಕನೇ ಬಾರಿ 350ಕ್ಕೂ ಅಧಿಕ ರನ್ ಪೇರಿಸಿತು. ಡಿ ಕಾಕ್ ಮತ್ತು ಡಸೆ ಅವರು ಎರಡನೇ ವಿಕೆಟ್‌ಗೆ 200 ರನ್‌ಗಳ ಜತೆಯಾಟ ನೀಡಿದರು. ಕೊನೆಯಲ್ಲಿ ಡೇವಿಡ್ ಮಿಲ್ಲರ್ (53; 30 ಎ., 4X2, 6X4) ಬೀಸಾಟ ಆಡಿದರು.

ಡಿ ಕಾಕ್ ಅವರು ಒಂದೇ ವಿಶ್ವಕಪ್‌ನಲ್ಲಿ ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಶತಕ ಗಳಿಸಿದ ಮೂರನೇ ಬ್ಯಾಟರ್ ಎನಿಸಿಕೊಂಡರು. ಶ್ರೀಲಂಕಾದ ಕುಮಾರ ಸಂಗಕ್ಕಾರ (2015 ರಲ್ಲಿ 4 ಶತಕ) ಮತ್ತು ರೋಹಿತ್ ಶರ್ಮಾ (2019 ರಲ್ಲಿ 5 ಶತಕ) ಈ ಸಾಧನೆ ಮಾಡಿದ ಇತರ ಬ್ಯಾಟರ್‌ಗಳು.

ಸಂಕ್ಷಿಪ್ತ ಸ್ಕೋರ್: ದಕ್ಷಿಣ ಆಫ್ರಿಕಾ 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 357 (ಕ್ವಿಂಟನ್ ಡಿ ಕಾಕ್ 114, ತೆಂಬಾ ಬವುಮಾ 24, ರಸೀ ವ್ಯಾನ್ ಡರ್ ಡಸೆ 133, ಡೇವಿಡ್ ಮಿಲ್ಲರ್ ಔಟಾಗದೆ 53, ಟಿಮ್ ಸೌಥಿ 77ಕ್ಕೆ 2, ಟ್ರೆಂಟ್ ಬೌಲ್ಟ್ 49ಕ್ಕೆ 1) **ನ್ಯೂಜಿಲೆಂಡ್:** 35.3 ಓವರ್‌ಗಳಲ್ಲಿ 167 (ವಿಲ್ ಯಂಗ್ 33, ಡೆರಿಲ್ ಮಿಚೆಲ್ 24, ಗ್ಲೆನ್ ಫಿಲಿಪ್ಸ್ 60, ಕೇಶವ್ ಮಹಾರಾಜ್ 46ಕ್ಕೆ 4, ಮಾರ್ಕೊ ಜಾನ್ಸೆನ್ 31ಕ್ಕೆ 3, ಜೆರಾಲ್ಡ್ ಕೊಯೆಟ್ಜಿ 41ಕ್ಕೆ 2) **ಫಲಿತಾಂಶ:** ದಕ್ಷಿಣ ಆಫ್ರಿಕಾಕ್ಕೆ 190 ರನ್ ಗೆಲುವು

ಶತಕ ಪೂರೈಸಿದ ಕ್ವಿಂಟನ್ ಡಿ ಕಾಕ್ (ಬಲ) ಅವರು ಸಹ ಆಟಗಾರ ವ್ಯಾನ್ ಡರ್ ಡಸೆ ಜತೆ ಸಂಭ್ರಮಿಸಿದರು –ಪಿಟಿಐ ಚಿತ್ರ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ದಕ್ಷಿಣ ಆಫ್ರಿಕಾ	7	6	1	0	12	2.290
ಭಾರತ	6	6	0	0	12	1.405
ಆಸ್ಟ್ರೇಲಿಯಾ	6	4	2	0	8	0.970
ನ್ಯೂಜಿಲೆಂಡ್	7	4	3	0	8	0.484
ಪಾಕಿಸ್ತಾನ	7	3	4	0	6	-0.024
ಅಫ್ಗಾನಿಸ್ತಾನ	6	3	3	0	6	-0.718
ಶ್ರೀಲಂಕಾ	6	2	4	0	4	-0.275
ನೆದರ್ಲೆಂಡ್ಸ್	6	2	4	0	4	-1.277
ಬಾಂಗ್ಲಾದೇಶ	7	1	6	0	2	-1.446
ಇಂಗ್ಲೆಂಡ್	6	1	5	0	2	-1.652

82 ಸಿಕ್ಸರ್, 8 ಶತಕ

ದಕ್ಷಿಣ ಆಫ್ರಿಕಾ ತಂಡದ ಬ್ಯಾಟರ್‌ಗಳು ಏಳು ಪಂದ್ಯಗಳಲ್ಲಿ ಒಟ್ಟು 82 ಸಿಕ್ಸರ್ ಹೊಡೆದಿದ್ದು, ಏಕದಿನ ವಿಶ್ವಕಪ್ ಟೂರ್ನಿಯೊಂದರಲ್ಲಿ ಅತ್ಯಧಿಕ ಸಿಕ್ಸರ್ ಹೊಡೆದ ದಾಖಲೆ ಮಾಡಿದರು. ಕಳೆದ ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ತಂಡ 11 ಪಂದ್ಯಗಳಲ್ಲಿ 76 ಸಿಕ್ಸರ್ ಹೊಡೆದದ್ದು ಇದುವರೆಗಿನ ದಾಖಲೆಯಾಗಿತ್ತು. ಅದೇ ರೀತಿ ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳು ಎಂಟು ಶತಕ ಗಳಿಸಿದ್ದು, ಶ್ರೀಲಂಕಾ ತಂಡದ (2015ರ ಟೂರ್ನಿಯಲ್ಲಿ 8 ಶತಕ) ಸಾಧನೆಯನ್ನು ಸರಿಗಟ್ಟಿದರು.